ಶನಿವಾರ, ಜುಲೈ 8, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 188 | ಪುಟ 26
www.prajavani.net
prajavani.net | prajavani | prajavani | prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಭೂಮಿಕಾ
ಟೊಮೆಟೊ ರಹಿತ ರಸಂ ವೈವಿಧ್ಯ

‘ದೇಶದ ವ್ಯವಸ್ಥೆ ಕುಲಗೆಟ್ಟು ಹೋಗಿದೆ’ 5
ಆದಾಯಕ್ಕಾಗಿ ಆಸ್ತಿ ಮಾರಾಟ 12

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,280	19,332	₹60,280 (ಬೆಂಗಳೂರು)	₹71,700 (ಬೆಂಗಳೂರು)	82.73

ರಾಜ್ಯ ಮುಂಗಡಪತ್ರ 2023-24

ಒಟ್ಟು ಬಜೆಟ್ ಗಾತ್ರ (ಕೋಟಿಗಳಲ್ಲಿ) ₹3,27,747

₹3,09,182 ಹಿಂದಿನ ಬಜೆಟ್ ಗಾತ್ರ

ಬಜೆಟ್ ಗಾತ್ರದ ಹೆಚ್ಚಳ ₹18,565 ಕೋಟಿ

ಆದಾಯ (ಕೋಟಿಗಳಲ್ಲಿ)

ಈ ವರ್ಷದ ಸಾಲ	ರಾಜಸ್ವ ವೆಚ್ಚ	ಬಂಡವಾಳ ವೆಚ್ಚ	ಸಾಲದ ಮರುಪಾವತಿ
₹85,818	₹2,50,933	₹54,374	₹22,441

ಬಹುಜನ ಹಿತ: ತೆರಿಗೆ ಹೊಡೆತ

ಗ್ಯಾರಂಟಿಗಳು: ಗೃಹ ಜ್ಯೋತಿ ₹13,910 ಕೋಟಿ | ಗೃಹಲಕ್ಷ್ಮಿ ₹30 ಸಾವಿರ ಕೋಟಿ | ಅನ್ನಭಾಗ್ಯ ₹10 ಸಾವಿರ ಕೋಟಿ | ಶಕ್ತಿ ₹4,000 ಕೋಟಿ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಯಾರನ್ನೂ ಹೊರಗಿಡದಂತೆ ಬಹುಜನರ ಒಳಿತನ್ನು ಕಾಪಾಡಿಕೊಂಡು ರಾಜ್ಯವನ್ನು ಮುನ್ನಡೆಯತ್ತ ಕೊಂಡೊಯ್ಯುವ ಬಜೆಟ್ ಮಂಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅನ್ನು ಕೈಹಿಡಿದು ಗದ್ದುಗೆ ಏರಿಸಿದವರ ಋಣ ತೀರಿಸುವ ಕೆಲಸವನ್ನು ಪ್ರಜ್ಞಾವಂತಿಕೆಯಿಂದ ಮಾಡಿದ್ದಾರೆ.

ದೊಡ್ಡ ಮಟ್ಟದ ವಿತ್ತೀಯ ಹೊರೆಯಿಲ್ಲದಂತೆ ಆರ್ಥಿಕ ಶಿಸ್ತಿನೊಳಗೆ ಬಜೆಟ್ ರೂಪಿಸಿರುವ ಅವರು, ಕಾಂಗ್ರೆಸ್ ಪಕ್ಷ ಚುನಾವಣಾ ಪೂರ್ವ ಪ್ರಣಾಳಿಕೆಯಲ್ಲಿ ಘೋಷಿಸಿದ ಯೋಜನೆಗಳಿಗೆ ಅನುದಾನ, ಸರ್ವರಿಗೂ ಸಮಪಾಲು ಸಮಬಾಳಿನ ಆಶಯವನ್ನು ಸಾಕಾರಗೊಳಿಸುವ ಕನಸುಗಳನ್ನು ಬಿತ್ತಿದ್ದಾರೆ. ಸದಾ ತಮ್ಮನ್ನು ಕೈಹಿಡಿದು ಪೊರೆಯುವ ‘ಅಹಿಂದ’ ವರ್ಗಗಳಿಗೆ, ಮಹಿಳೆಯರಿಗೆ, ಶ್ರಮಿಕರಿಗೆ ಬಜೆಟ್‌ನಲ್ಲಿ ಆದ್ಯತೆ ನೀಡಿದ್ದಾರೆ. ಸಂಪತ್ತನ್ನು ಸಮಾನವಾಗಿ ಹಂಚುವ ಮೂಲಕ ಸಮಾಜದಲ್ಲಿರುವ ಬಡವ–ಧನಿಕರ ಅಂತರವನ್ನು ಕಡಿಮೆ ಮಾಡುವ ಜನಕೇಂದ್ರಿತ ಬಜೆಟ್‌ನ ಹೊಸ ಮಾದರಿಯೊಂದನ್ನು ಕಡೆದು ಕಟ್ಟಿದ್ದಾರೆ.

ಡಾ.ಬಿ.ಆರ್.ಅಂಬೇಡ್ಕರ್, ಕುವೆಂಪು, ಡಿವಿಜಿ, ಗಿರೀಶ ಕಾರ್ನಾಡರಂತಹ ಸಾರ್ವಕಾಲಿಕ ಶ್ರೇಷ್ಠ ಚಿಂತಕರ ಸಾಲುಗಳೇ ಬಜೆಟ್‌ನ ಹೂರಣವಾಗಿವೆ.

‘ನಮ್ಮ ಸರ್ಕಾರವು ಸಂವಿಧಾನ ಹಾಗೂ ಡಾ. ಅಂಬೇಡ್ಕರರ ಆಶಯಗಳಂತೆ ಕೆಲಸ ಮಾಡಲಿದೆ. ರಾಜ್ಯವನ್ನು ‘ಸರ್ವ ಜನಾಂಗದ ಶಾಂತಿಯ ತೋಟ’ ಎಂದು ಪಕ್ಷದ ಪ್ರಣಾಳಿಕೆಯಲ್ಲಿ ಪ್ರಜ್ಞಾಪೂರ್ವಕವಾಗಿ ಉಲ್ಲೇಖಿಸಿದ್ದೇವೆ. ನಮಗೆ ವೈವಿಧ್ಯತೆ, ಎಲ್ಲರನ್ನು ಒಳಗೊಳ್ಳುವಿಕೆಯಲ್ಲಿ ವಿಶ್ವಾಸವಿದೆಯೇ ಹೊರತು ಸರ್ವಾಧಿಕಾರಿ ಮನೋಭಾವದಲ್ಲ. ಕನ್ನಡಿಗರ ಉಜ್ವಲ ಭವಿಷ್ಯವನ್ನು ನಿರ್ಮಿಸಲು, ಅಂಧಕಾರದಲ್ಲಿರುವ ಇಂದಿನ ಭಾರತದಲ್ಲಿ ಲಕ್ಷಾಂತರ ಭಾರತೀಯರ ಕನಸುಗಳಿಗೆ ರೆಕ್ಕೆ ಮೂಡಿಸುವ ನಿಟ್ಟಿನಲ್ಲಿ ನಮ್ಮ ಸರ್ಕಾರ ಕೆಲಸ ಮಾಡಲಿದೆ’ ಎಂದು ಬಜೆಟ್ ಉದ್ದಕ್ಕೂ ಸಾರಿ ಹೇಳಿದ್ದಾರೆ.

9ನೇ ಪುಟ ನೋಡಿ
ವಿಶೇಷ ಪುಟಗಳು 10, 11, 12, 13



₹ 8 ಸಾವಿರ ಕೋಟಿ ಹೊರೆ ಯಾರಿಗೆ?

ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಹೆಚ್ಚುವರಿ ಸಂಪನ್ಮೂಲ ಸಂಗ್ರಹಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮದ್ಯಪಾನಿಗಳು, ಆಸ್ತಿವಂತರ ಮೇಲೆ ತೆರಿಗೆ ಹೊರೆ ವಿಧಿಸಿದ್ದಾರೆ.




ಮದ್ಯದ ಎಲ್ಲ 18 ಘೋಷಿತ ಬೆಲೆ ಸ್ಲ್ಯಾಬ್‌ಗಳ ಮೇಲಿನ ಹೆಚ್ಚುವರಿ ಅಬಕಾರಿ ಸುಂಕವನ್ನು ಶೇಕಡ 20ರಷ್ಟು ಹೆಚ್ಚಿಸಿದ್ದರೆ, ಬಿಯರ್ ಮೇಲಿನ ಹೆಚ್ಚುವರಿ ಸುಂಕವನ್ನು ಶೇ 10ರಷ್ಟು ಹೆಚ್ಚಳ ಮಾಡಲಾಗಿದೆ.ಈ ಮೂಲದಿಂದ ₹1 ಸಾವಿರ ಕೋಟಿ ಹೆಚ್ಚುವರಿ ನಿರೀಕ್ಷಿಸಲಾಗಿದೆ.

ಸ್ಥಿರಾಸ್ತಿ ಮಾರ್ಗಸೂಚಿ ದರಗಳನ್ನು ಪರಿಷ್ಕರಿಸುವ ಘೋಷಣೆ ಬಜೆಟ್‌ನಲ್ಲಿದ್ದು, ಹೆಚ್ಚಳದ ಪ್ರಮಾಣವನ್ನು ತಿಳಿಸಿಲ್ಲ. ಎಂಟು ತಿಂಗಳಲ್ಲಿ ₹6 ಸಾವಿರ ಕೋಟಿ ಹೆಚ್ಚುವರಿ ಆದಾಯ ನಿರೀಕ್ಷಿಸಲಾಗಿದೆ. ಈ ನಿರ್ಧಾರದಿಂದ ಸ್ಥಿರಾಸ್ತಿ ಖರೀದಿದಾರರ ಮೇಲೆ ನೋಂದಣಿ ಮತ್ತು ಮುದ್ರಾಂಕ ಶುಲ್ಕದ ಹೊರೆ ಹೆಚ್ಚುವುದು ಖಚಿತ. ಆಯ್ದ ವಾಹನಗಳ ಮೇಲಿನ ಮೋಟಾರು ವಾಹನಗಳ ತೆರಿಗೆ ಹೆಚ್ಚಳದ ಪ್ರಸ್ತಾವ ಇದೆ.

ರೂಪಾಯಿ ಜಮೆ | (ಪೈಸೆಗಳಲ್ಲಿ) | ರೂಪಾಯಿ ವೆಚ್ಚ

ಆವರಣದಲ್ಲಿ ಇರುವುದು ಹಿಂದಿನ ಬಿಜೆಪಿ ಸರ್ಕಾರ 2023ರ ಫೆಬ್ರುವರಿಯಲ್ಲಿ ಮಂಡಿಸಿದ್ದ ಬಜೆಟ್‌ನ ಲೆಕ್ಕಾಚಾರ





ಬಜೆಟ್‌ನಲ್ಲಿ ಭವಿಷ್ಯದ ಯೋಜನೆಗಳನ್ನು ಪ್ರಸ್ತಾಪಿಸುವ ಬದಲು, ಹಿಂದಿನ ಸರ್ಕಾರ ಹಾಗೂ ಕೇಂದ್ರ ಸರ್ಕಾರವನ್ನು ದ್ವೇಷಿಸುವ ರಾಜಕೀಯ ಪ್ರೇರಿತ ಭಾಷಣ ಮಾಡಿದ್ದಾರೆ. ಇವತ್ತಿನ ಹಣಕಾಸಿನ ಸ್ಥಿತಿ, ವಾಸ್ತವ ಪರಿಸ್ಥಿತಿ ಬಗ್ಗೆ ಮಾತನಾಡುವ ಬದಲು ಅವರು ಭೂತಕಾಲದಲ್ಲಿದ್ದಂತೆ ತೋರುತ್ತದೆ. ಪ್ರತಿಯೊಂದಕ್ಕೂ 2013 ಕ್ಕೆ ಹೋಲಿಕೆ ಮಾಡಿದ್ದಾರೆ. ಇದೊಂದು ರಿವರ್ಸ್ ಗೇರ್ ಇರುವ ಸರ್ಕಾರ ಆಗಿದೆ

ಬಸವರಾಜ ಬೊಮ್ಮಾಯಿ, ಬಿಜೆಪಿ ಶಾಸಕ



ರಾಜ್ಯದ ಬಜೆಟ್ ಪುಸ್ತಕ ಅನ್ನುವುದಕ್ಕಿಂತ ಬಿಜೆಪಿಯ ನಿಂದನಾ ಪುಸ್ತಕ ಎಂದರೆ ಸರಿಯಾದೀತು. ಕೇಂದ್ರ ಸರ್ಕಾರ ಮತ್ತು ಹಿಂದೆ ಬಿಜೆಪಿಯ ಆಡಳಿತ ಬಂದ ನಂತರ ಆರ್ಥಿಕ ಶಿಸ್ತನ್ನ ಉಲ್ಲಂಘಿಸಿದ್ದಾರೆ, ಸ್ವೇಚ್ಛಾಚಾರದಿಂದ ಆರ್ಥಿಕ ಶಿಸ್ತು ಹಾಳು ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ. ತಮ್ಮ ದೂರದೃಷ್ಟಿಯ ಕಾರ್ಯಕ್ರಮಗಳನ್ನು ಹೇಳುವ ಬದಲು ಕೇವಲ ಅನ್ಯರನ್ನು ತೆಗಳಲು ಬಜೆಟ್ ಅನ್ನು ಬಳಕೆ ಮಾಡಿಕೊಳ್ಳಲಾಗಿದೆ

ಎಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಹೊಸ ಯೋಜನೆಗಳು

- ಗಿಗ್ ಕಾರ್ಮಿಕರಿಗೆ ₹4 ಲಕ್ಷದ ವಿಮೆ
- ನಾಲ್ಕು ಸಾವಿರ ಗ್ರಾ.ಪಂಗಳಲ್ಲಿ ಶಿಶು ಆರೈಕೆಗೆ ‘ಕೂಸಿನ ಮನೆ’
- ಮಹಿಳಾ ಸಹಕಾರಿಗಳಿಗೆ ‘ಉದ್ಯಮಶಕ್ತಿ’ ಯೋಜನೆಯಡಿ 100 ಕಡೆ ಪೆಟ್ರೋಲ್ ಬಂಕ್
- ಜೇನುಕುರುಬ, ಬೆಟ್ಟಕುರುಬ, ಇರುಳಿಗ, ಕೊರಗ, ಸೋಲಿಗರಿಗೆ ₹50 ಕೋಟಿ
- 9–10ನೇ ತರಗತಿಗೆ ಮಕ್ಕಳಿಗೂ ಮೊಟ್ಟೆ–ಬಾಳೆಹಣ್ಣು ವಿತರಣೆ. ವಾರಕ್ಕೆರಡು ಬಾರಿ
- ಕೈಮಗ್ಗ ಪ್ರೋತ್ಸಾಹಕ್ಕೆ ಜವಳಿ ಇಲಾಖೆಯಲ್ಲಿ ಮಹಾತ್ಮ ಗಾಂಧಿ ವಸ್ತ್ರೋದ್ಯಮ ಕೋಶ
- ಕ್ರೈಸ್ತ ಅಭಿವೃದ್ಧಿ ನಿಗಮ ರಚನೆ– ₹100 ಕೋಟಿ ಅನುದಾನ

ಸದನದಲ್ಲಿ ‘ನಕಲಿ ಶಾಸಕ’!

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಜೆಟ್ ಮಂಡಿಸುತ್ತಿದ್ದ ಸಂದರ್ಭದಲ್ಲಿ ದೇವದುರ್ಗ ಕ್ಷೇತ್ರದ ಶಾಸಕಿ ಕರೆಮ್ಮ ಜಿ. ನಾಯಕ ಅವರ ಆಸನದಲ್ಲಿ ಕುಳಿತಿದ್ದ ವಕೀಲ ತಿಪ್ಪೇರುದ್ರಪ್ಪ (76) ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.



ತಿಪ್ಪೇರುದ್ರಪ್ಪ

ಚಿತ್ರದುರ್ಗದ ತಿಪ್ಪೇರುದ್ರಪ್ಪ, ಮೊಳಕಾಲ್ಮುರು ಕ್ಷೇತ್ರದ ಶಾಸಕ ಎಂದು ಹೇಳಿಕೊಂಡು ಒಳಗೆ ಪ್ರವೇಶಿಸಿದ್ದರು. ಅವರನ್ನು ಮಾರ್ಷಲ್‌ಗಳು ಹಿಡಿದು, ಠಾಣೆಗೆ ಒಪ್ಪಿಸಿದ್ದಾರೆ.

ವಿಧಾನಸಭೆ ದಂಡನಾಯಕ ಎಚ್. ಎಲ್. ಜಯಕೃಷ್ಣ ನೀಡಿರುವ ದೂರು ಆಧರಿಸಿ ಆರೋಪಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ತಿಪ್ಪೇರುದ್ರಪ್ಪ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ.

5ನೇ ಪುಟ ನೋಡಿ
‘ಅಹಿಂದ’ಕ್ಕೆ ಓಲೈಕೆ ಬಲ 13

ಚಿನಕುರಳಿ

ಪ್ರಕಾಶ್ ಶೆಟ್ಟಿ



ನಮ್ಮ ಕ್ಲಿನಿಕ್; ಕೆಲವೆಡೆ ನಡೆಯದ ನೇಮಕಾತಿ

ಶುಶ್ರೂಷಕರ ಹುದ್ದೆ ಖಾಲಿ!

• ವರುಣ ಹೆಗಡೆ



ನಮ್ಮ ಕ್ಲಿನಿಕ್

35ಕ್ಕೂ ಅಧಿಕ ಕೇಂದ್ರಗಳಲ್ಲಿ ಖಾಲಿ

ನಗರದಲ್ಲಿನ ನಮ್ಮ ಕ್ಲಿನಿಕ್ ಗಳಲ್ಲಿ 35ಕ್ಕೂ ಅಧಿಕ ಕೇಂದ್ರಗಳಲ್ಲಿ ಪ್ರಯೋಗಾಲಯ ತಂತ್ರಜ್ಞರ ಹುದ್ದೆ ಖಾಲಿಯಿದೆ. ಬೆಂಗಳೂರು ದಕ್ಷಿಣ, ಬೊಮ್ಮನಹಳ್ಳಿ ಹಾಗೂ ಪೂರ್ವ ವಲಯದ ಹೆಚ್ಚಿನ ಕ್ಲಿನಿಕ್‌ಗಳಲ್ಲಿ ಈ ಹುದ್ದೆಗೆ ನೇಮಕಾತಿ ನಡೆದಿಲ್ಲ. ಆರ್.ಆರ್. ನಗರದಲ್ಲಿನ ಕೆಲ ಕ್ಲಿನಿಕ್‌ಗಳಲ್ಲಿಯೂ ಈ ಹುದ್ದೆ ಖಾಲಿಯಿದೆ. ಇದರಿಂದಾಗಿ ಶುಶ್ರೂಷಕರೇ ರಕ್ತ ಸೇರಿ ವಿವಿಧ ಪರೀಕ್ಷೆ ಮಾಡುತ್ತಿದ್ದಾರೆ. ಪ್ರಯೋಗಾಲಯ ತಂತ್ರಜ್ಞ ಹುದ್ದೆಗೆ ಮಾಸಿಕ ₹ 14,609 ನಿಗದಿಪಡಿಸಲಾಗಿದೆ. ಈ ಹುದ್ದೆಗೆ ಪ್ರಯೋಗಶಾಲೆ ತಂತ್ರಜ್ಞಾನದಲ್ಲಿ ಡಿಪ್ಲೊಮಾ ಪದವಿ ಪಡೆದಿರಬೇಕು.

ಬೆಂಗಳೂರು: ನಗರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ‘ನಮ್ಮ ಕ್ಲಿನಿಕ್ ಗಳಲ್ಲಿ’ ಕೆಲವೆಡೆ ಶುಶ್ರೂಷಕರು ಹಾಗೂ ಪ್ರಯೋಗಾಲಯದ ತಂತ್ರಜ್ಞರ ಹುದ್ದೆಗಳಿಗೆ ನೇಮಕಾತಿಯೇ ನಡೆದಿಲ್ಲ. ಇದರಿಂದಾಗಿ ಈ ಚಿಕಿತ್ಸಾ ಕೇಂದ್ರಗಳಲ್ಲಿ ವೈದ್ಯಕೀಯ ಸೇವೆ ವ್ಯತ್ಯಯವಾಗುತ್ತಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಸದ್ಯ 225 ನಮ್ಮ ಕ್ಲಿನಿಕ್‌ಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ 108 ಕ್ಲಿನಿಕ್‌ಗಳಿಗೆ ಮೊದಲ ಹಂತದಲ್ಲಿ ಕಳೆದ ಫೆಬ್ರವರಿ ತಿಂಗಳಲ್ಲಿ ಚಾಲನೆ ನೀಡಲಾಗಿತ್ತು. ಇನ್ನುಳಿದ ಕ್ಲಿನಿಕ್‌ಗಳು ನಂತರ ಕಾರ್ಯಾರಂಭಿಸಿದ್ದವು. ಇವುಗಳಲ್ಲಿ ಬಿಬಿಎಂಪಿಯ ಪೂರ್ವ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಹೆಚ್ಚಿನ ಕ್ಲಿನಿಕ್‌ಗಳಲ್ಲಿ ಶುಶ್ರೂಷಕರ ಹುದ್ದೆ ಖಾಲಿಯಿವೆ. ಇದರಿಂದಾಗಿ ಈ ಕೇಂದ್ರಗಳಲ್ಲಿ ವೈದ್ಯರೇ ಶುಶ್ರೂಷಕರ ಕೆಲಸವನ್ನೂ ನಿಭಾಯಿಸಬೇಕಿದೆ. ಬೊಮ್ಮನಹಳ್ಳಿ ವಲಯದಲ್ಲಿನ ಹೆಚ್ಚಿನ ಕ್ಲಿನಿಕ್‌ಗಳಲ್ಲಿ ಪ್ರಯೋಗಾಲಯದ ತಂತ್ರಜ್ಞರ ಹುದ್ದೆಗೆ ನೇಮಕಾತಿ ನಡೆದಿಲ್ಲ. ಹೀಗಾಗಿ, ಶುಶ್ರೂಷಕರೇ ಪ್ರಯೋಗಾಲಯವನ್ನೂ ನಿರ್ವಹಿಸಬೇಕಾದ ಸ್ಥಿತಿ ನಿರ್ಮಾಣವಾಗಿದೆ.

ನಮ್ಮ ಕ್ಲಿನಿಕ್‌ಗಳಲ್ಲಿ ಶುಶ್ರೂಷಕ ಹುದ್ದೆಗೆ ಬಿಎಸ್‌ಸಿ, ನರ್ಸಿಂಗ್‌ನಲ್ಲಿ ಡಿಪ್ಲೊಮಾ ಮಾಡಿದವರನ್ನು ನೇಮಿಸಿಕೊಳ್ಳಲಾಗುತ್ತದೆ. ವೈದ್ಯರ ಗೈರು ಹಾಜರಿಯಲ್ಲಿ ಶುಶ್ರೂಷಕರೇ ಲಕ್ಷಣ ಆಧರಿಸಿ, ಔಷಧ ನೀಡುತ್ತಿದ್ದಾರೆ. ಗರ್ಭಿಣಿಯರಿಗೆ ಸೂಕ್ತ ಆರೈಕೆ ಮಾಡಿ, ಮಾರ್ಗದರ್ಶನವನ್ನೂ ಮಾಡುತ್ತಿದ್ದಾರೆ. ಅವರಿಗೆ ₹ 15,750 ನಿಗದಿಪಡಿಸಲಾಗಿದೆ. ಇದರಿಂದಾಗಿ ಈ ಹುದ್ದೆಗೆ ಅರ್ಹರು ನಿರಾಸಕ್ತಿ ತಾಳಿದ್ದಾರೆ.

30ಕ್ಕೂ ಅಧಿಕ ಕ್ಲಿನಿಕ್‌ಗಳಲ್ಲಿ ಖಾಲಿ: ಬಿಬಿಎಂಪಿ ಮಾಹಿತಿ ಪ್ರಕಾರ 30ಕ್ಕೂ ಅಧಿಕ ನಮ್ಮ ಕ್ಲಿನಿಕ್‌ಗಳಲ್ಲಿ ಶುಶ್ರೂಷಕರ ಹುದ್ದೆ ಖಾಲಿಯಿದೆ. ಬೊಮ್ಮನಹಳ್ಳಿ ವಲಯದಲ್ಲಿ ಜರಗನಹಳ್ಳಿ, ಹೊಂಗಸಂದ್ರ ಹಾಗೂ ಚುಂಚಘಟ್ಟದ ಕ್ಲಿನಿಕ್‌ಗಳಲ್ಲಿ ಶುಶ್ರೂಷಕರಿಲ್ಲ. ಪೂರ್ವ ವಲಯದಲ್ಲಿ ಸಿ.ವಿ. ರಾಮನ್ ನಗರ, ಹೆಬ್ಬಾಳ, ಮುನೇಶ್ವರ ನಗರ, ಕಾಚರಕನಹಳ್ಳಿ, ಮಾರುತಿ ಸೇವಾ ನಗರ, ಜೋಗುಪಾಳ್ಯ ಸೇರಿ ಹಲವೆಡೆ ಹುದ್ದೆ ಖಾಲಿಯಿದೆ. ಮಹದೇವಪುರ ವಲಯದ ಹೂಡಿ, ವೈಟ್‌ಫೀಲ್ಡ್, ದೊಡ್ಡನೆಕ್ಕುಂದಿ ಸೇರಿ ಕೆಲವೆಡೆ ಹಾಗೂ ಬೆಂಗಳೂರು ದಕ್ಷಿಣದ ಶ್ರೀನಿವಾಸ ನಗರ ಸೇರಿ ಕೆಲ ಕ್ಲಿನಿಕ್‌ಗಳಿಗೆ ಶುಶ್ರೂಷಕರು ನೇಮಕಗೊಂಡಿಲ್ಲ.

‘ವೈದ್ಯರು ರಜೆ ಇದ್ದಾಗ ನಾವೇ ಕ್ಲಿನಿಕ್‌ಗಳನ್ನು ನಿರ್ವಹಿಸಬೇಕಾಗುತ್ತದೆ. ಸರ್ಕಾರ ನಿಗದಿ ಪಡಿಸಿರುವ ವೇತನದಲ್ಲಿ ಜೀವನ ನಿರ್ವಹಣೆ ಕಷ್ಟವಾಗಿದೆ. ಅನಿವಾರ್ಯ ಕಾರಣಗಳಿಂದ ಈ ಉದ್ಯೋಗವನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಕೆಲವರು ಉದ್ಯೋಗ ತ್ಯಜಿಸಿ, ಬೇರೆಡೆಗೆ ಕೆಲಸಕ್ಕೆ ಹೋಗುತ್ತಿದ್ದಾರೆ’ ಎಂದು ಬೆಂಗಳೂರು ದಕ್ಷಿಣ ವಲಯದ ನಮ್ಮ ಕ್ಲಿನಿಕ್ ಒಂದರ ಶುಶ್ರೂಷಕರೊಬ್ಬರು ತಿಳಿಸಿದರು.

> **ನಗರದಲ್ಲಿನ ಎಲ್ಲಾ ನಮ್ಮ ಕ್ಲಿನಿಕ್‌ಗಳು ಕಾರ್ಯಾಚರಣೆ ಮಾಡುತ್ತಿವೆ. ಶುಶ್ರೂಷಕ ಹುದ್ದೆ ಖಾಲಿ ಇರುವ ಬಗ್ಗೆ ಪರಿಶೀಲಿಸಲಾಗುವುದು**
> **ಡಾ.ಕೆ.ವಿ. ತ್ರಿಲೋಕಚಂದ್ರ**
> ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ)

ಸೈಕಲ್‌ನಲ್ಲಿ ದೇಶ ಸಂಚಾರ ದೇವರ ಮುಕುಟ ಕದ್ದು ಸಿಕ್ಕಿಬಿದ್ದ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ನಂಜಪ್ಪ ವೃತ್ತದಲ್ಲಿರುವ ಕನ್ನಿಕಾಪರಮೇಶ್ವರಿ ದೇವಸ್ಥಾನದಲ್ಲಿ ದೇವರ ಮೂರ್ತಿಗೆ ಹಾಕಿದ್ದ ಮುಕುಟವನ್ನು ಕಳ್ಳತನ ಮಾಡಿದ್ದ ಆರೋಪದಡಿ ರವಿ ನಾಯ್ಡು (70) ಅವರನ್ನು ವಿ.ವಿ.ಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ನಿವಾಸಿ ರವಿ ನಾಯ್ಡು, ಜೂನ್ 28ರಂದು ರಾತ್ರಿ ದೇವಸ್ಥಾನಕ್ಕೆ ನುಗ್ಗಿ ಕಳ್ಳತನ ಮಾಡಿ ಪರಾರಿಯಾಗಿದ್ದ. ದೇವಸ್ಥಾನ ಹಾಗೂ ಸುತ್ತಮುತ್ತಲಿನ 280 ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಿ ಸುಳಿವು ಪತ್ತೆ ಮಾಡಿ ಆರೋಪಿಯನ್ನು ಬಂಧಿಸಲಾಗಿದೆ. ಸದ್ಯ ಆತ ನ್ಯಾಯಾಂಗ ಬಂಧನದಲ್ಲಿದ್ದಾನೆ’ ಎಂದು ಪೊಲೀಸರು ಹೇಳಿದರು.

‘ಸಾಮಾಜಿಕ ಕಳಕಳಿ ವಿಷಯಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ರವಿ ನಾಯ್ಡು, ದೇಶದ ಹಲವು ರಾಜ್ಯಗಳಲ್ಲಿ ಸೈಕಲ್ ಜಾಥಾ ನಡೆಸಿದ್ದ. ಈತನ ಕೆಲಸಕ್ಕೆ ಹಲವರು ಮೆಚ್ಚುಗೆ ವ್ಯಕ್ತಪಡಿಸಿದ್ದರು. ಆದರೆ, ಕೆಲ ವರ್ಷಗಳಿಂದ ರವಿ ನಾಯ್ಡು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ. ಜೀವನ ಸಾಗಿಸಲು ಚಿಂದಿ ಆಯುವ ಕೆಲಸ ಸಹ ಮಾಡುತ್ತಿದ್ದ.’

‘ಮಾನಸಿಕ ಅಸ್ವಸ್ಥರಂತೆ ವರ್ತಿಸುತ್ತ, ಎಲ್ಲೆಂದರಲ್ಲಿ ಸುತ್ತಾಡುತ್ತಿದ್ದ. ಅದೇ ರೀತಿ ದೇವಸ್ಥಾನದೊಳಗೆ ಹೋಗಿ, ₹ 5 ಲಕ್ಷ ಮೌಲ್ಯದ ಮುಕುಟ ಕದ್ದುಕೊಂಡು ಹೋಗಿದ್ದ. ಆದರೆ, ಮುಕುಟವನ್ನು ಎಲ್ಲಿಯೂ ಮಾರಿರಲಿಲ್ಲ. ತಳ್ಳುಗಾಡಿಯೊಂದರಲ್ಲಿ ಮುಕುಟ ಮುಚ್ಚಿಟ್ಟಿದ್ದ. ಅದನ್ನು ಮಾರುವ ಉದ್ದೇಶ ಆತನಿಗೆ ಇರಲಿಲ್ಲ. ಆರೋಪಿಯನ್ನು ಬಂಧಿಸಿದ ಬಳಿಕ ಮುಕುಟ ಜಪ್ತಿ ಮಾಡಲಾಯಿತು’ ಎಂದು ಪೊಲೀಸರು ತಿಳಿಸಿದರು.

ಬಾರ್ ಬಳಿ ಜಗಳ; ಪಬ್ ಸಪ್ಲೈಯರ್ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂದಿರಾನಗರ ಠಾಣೆ ವ್ಯಾಪ್ತಿಯ ಭಿನ್ನಮಂಗಲ ಸಿಗ್ನಲ್ ಬಳಿ ಇರುವ ಬ್ಲೂಸ್ಟಾರ್ ಬಾರ್ ಬಳಿ ಎರಡು ಗುಂಪಿನ ನಡುವೆ ಜಗಳವಾಗಿದ್ದು, ಟೋಯಿಟ್ ಪಬ್ ಸಪ್ಲೈಯರ್ ತೆರ್ಜುಬಾ ಜೊಮಿರ್ (25) ಮೇಲೆ ಹಲ್ಲೆ ಮಾಡಲಾಗಿದೆ.

‘ಜೂನ್ 28ರಂದು ತಡರಾತ್ರಿ ನಡೆದಿರುವ ಘಟನೆ ಸಂಬಂಧ ತೆರ್ಜುಬಾ ಅವರು ದೂರು ನೀಡಿದ್ದಾರೆ. ಮೂವರು ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಇಂದಿರಾನಗರ 100 ಅಡಿ ರಸ್ತೆಯಲ್ಲಿರುವ ಟೋಯಿಟ್ ಪಬ್‌ನಲ್ಲಿ ತೆರ್ಜುಬಾ ಕೆಲಸ ಮಾಡುತ್ತಿದ್ದಾರೆ. ಕೆಲಸಕ್ಕೆ ರಜೆ ಇದ್ದಿದ್ದರಿಂದ ಸ್ನೇಹಿತರ ಜೊತೆ ಸೇರಿ ಮದ್ಯ ತರಲೆಂದು ಬ್ಲೂಸ್ಟಾರ್ ಬಾರ್ ಬಳಿ ಹೋಗಿದ್ದರು. ಸ್ಥಳದಲ್ಲಿದ್ದ ಆರೋಪಿಗಳು, ತೆರ್ಜುಬಾ ಹಾಗೂ ಸ್ನೇಹಿತರ ಜೊತೆ ಜಗಳ ತೆಗೆದಿದ್ದರು.’

‘ಮಾತಿಗೆ ಮಾತು ಬೆಳೆದು ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ಆರೋಪಿಗಳು, ತೆರ್ಜುಬಾ ಅವರ ತಲೆಗೆ ಕಲ್ಲಿನಿಂದ ಹೊಡೆದಿದ್ದರು. ಇದರಿಂದಾಗಿ ರಕ್ತ ಸೋರಲಾರಂಭಿಸಿತ್ತು. ಕೂಡಲೇ ಅವರನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಗಿದೆ’ ಎಂದೂ ತಿಳಿಸಿದರು.

₹52 ಕೋಟಿ ಮೌಲ್ಯದ ಆಸ್ತಿ ಮುಟ್ಟುಗೋಲು

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣದ ಜೊತೆ ನಂಟು ಹೊಂದಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಎಎಪಿ ಮುಖಂಡ ಮನೀಶ್ ಸಿಸೋಡಿಯಾ, ಪತ್ನಿ ಹಾಗೂ ಇತರ ಆರೋಪಿಗಳಿಗೆ ಸೇರಿದ ₹52 ಕೋಟಿ ಮೌಲ್ಯದ ಆಸ್ತಿಯನ್ನು ಮುಟ್ಟುಗೋಲು ಹಾಕಿರುವುದಾಗಿ ಜಾರಿ ನಿರ್ದೇಶನಾಲಯ (ಇ.ಡಿ) ಶುಕ್ರವಾರ ಹೇಳಿದೆ.

ಸಿಸೋಡಿಯಾ ಮತ್ತು ಅವರ ಪತ್ನಿ ಸೀಮಾ ಸಿಸೋಡಿಯಾ ಅವರಿಗೆ ಸೇರಿದ ಎರಡು ಆಸ್ತಿಗಳು ಹಾಗೂ ಇತರ ಆರೋಪಿಗಳಾದ ರಾಜೇಶ್ ಜೋಶಿ, ಗೌತಮ್ ಮಲ್ಹೋತ್ರಾ ಅವರಿಗೆ ಸೇರಿದ ಆಸ್ತಿಗಳು ಒಳಗೊಂಡಿವೆ ಎಂದಿದೆ. ಇದರಲ್ಲಿ ₹44.29 ಕೋಟಿಯ ಚರಾಸ್ತಿಯೂ ಸೇರಿದೆ.

ಈ ಪ್ರಕರಣಕ್ಕೆ ಸಂಬಂಧಿಸಿ ಸಿಸೋಡಿಯಾ ಅವರನ್ನು ಮಾರ್ಚ್‌ನಲ್ಲಿ ಇ.ಡಿ. ಬಂಧಿಸಿದ್ದು, ಸದ್ಯ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ.

ಪೋಕ್ಸೊ: ಯುವಕನಿಗೆ 20 ವರ್ಷ ಕಠಿಣ ಶಿಕ್ಷೆ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಚಿಕ್ಕಪ್ಪನ ಮಗಳೊಂದಿಗೆ ಬಲವಂತವಾಗಿ ದೈಹಿಕ ಸಂಪರ್ಕ ನಡೆಸಿದ್ದ ತಾಲ್ಲೂಕಿನ ಗ್ರಾಮವೊಂದರ ರಂಗಸ್ವಾಮಿ (21) ಎಂಬ ಯುವಕನಿಗೆ ನಗರದ ಮಕ್ಕಳ ಸ್ನೇಹಿ ಮತ್ತು 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ 20 ವರ್ಷಗಳ ಕಠಿಣ ಶಿಕ್ಷೆ ವಿಧಿಸಿ ಆದೇಶಿಸಿದೆ. 2020ರ ಮಾರ್ಚ್ 11ರಂದು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

15 ವರ್ಷದ ಬಾಲಕಿಯನ್ನು ಬೈಕ್‌ನಲ್ಲಿ ಕರೆದುಕೊಂಡು ಹೋಗುವ ಸಮಯದಲ್ಲಿ ಅಪರಾಧಿಯು ಮೈ ಕೈ ಮುಟ್ಟಿ, ಬಲವಂತ ಸಂಭೋಗಕ್ಕೆ ಯತ್ನಿಸಿದ್ದ. ‘ಅಣ್ಣನಾದವನು ಹೀಗೆ ಮಾಡಬಾರದು ಎಂದು ಬಾಲಕಿ ಹೇಳಿದ್ದರೂ ಹಲವು ಬಾರಿ ದೈಹಿಕ ಸಂಪರ್ಕ ಮಾಡಿದ್ದ’ ಎಂದು ಆರೋಪಿಸಲಾಗಿದೆ.

ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಿಸಿ ತನಿಖೆ ನಡೆಸಿದ್ದ ಆಗಿನ ಇನ್‌ಸ್ಪೆಕ್ಟರ್ ಮಂಜು ಕೆ.ಎಂ ಅವರು ಆರೋಪ ಪಟ್ಟಿ ಸಲ್ಲಿಸಿದ್ದರು.

ಆರೋಪಗಳೆಲ್ಲವೂ ಸಾಬೀತಾಗಿದ್ದರಿಂದ ನ್ಯಾಯಾಧೀಶರಾದ ನಿಶಾರಾಣಿ ಅವರು ಗುರುವಾರ ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದ್ದಾರೆ. ಜೊತೆಗೆ ₹ 40 ಸಾವಿರ ದಂಡ ವಿಧಿಸಿದ್ದಾರೆ.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವು ಪ್ರಕರಣದ ಸಂತ್ರಸ್ತೆಗೆ 30 ದಿನಗಳ ಒಳಗಾಗಿ ₹4 ಲಕ್ಷ ಪರಿಹಾರವನ್ನು ನೀಡಬೇಕು ಎಂದೂ ಆದೇಶದಲ್ಲಿ ತಿಳಿಸಿದ್ದಾರೆ.

ಬಸ್ ಚಕ್ರಕ್ಕೆ ಸಿಲುಕಿ ವಿದ್ಯಾರ್ಥಿ ಸಾವು

ಆನೇಕಲ್: ಶಾಲಾ ಬಸ್ ಹಿಂಬದಿಯ ಚಕ್ರಕ್ಕೆ ಸಿಲುಕಿ ವಿದ್ಯಾರ್ಥಿಯೊಬ್ಬ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಎಂ.ಮೇಡಹಳ್ಳಿ ಸಾಯಿ ಪ್ಯಾರಡೈಸ್ ಬಡಾವಣೆಯಲ್ಲಿ ಗುರುವಾರ ಸಂಜೆ ನಡೆದಿದೆ. ಮೃತ ಬಾಲಕ ದಿವ್ಯಾಂಶೂ (8) ಎಂದು ಗುರುತಿಸಲಾಗಿದೆ. ಬಾಲಕ ಬಿದರಗೆರೆ ಎಸ್.ಎಸ್.ವಿ ಶಾಲೆಯಲ್ಲಿ ಕಲಿಯುತ್ತಿದ್ದ.



ದಾಖಲೆಯ 9 ನೇ ಬಾರಿಗೆ ಭಾರತ ಎಸ್ ಎ ಎಫ್ ಎಫ್ ಚಾಂಪಿಯನ್ ಶಿಪ್ ವಿಜೇತವಾಗಿದೆ!

ವಂದೇ ಭಾರತ್ ರೈಲಿಗೆ ಕಲ್ಲು ತೂರಾಟ

ರಾಮನಗರ: ಮೈಸೂರಿನಿಂದ ಬೆಂಗಳೂರಿಗೆ ಸಂಚರಿಸುತ್ತಿದ್ದ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಕಿಡಿಗೇಡಿಗಳು ಕಲ್ಲು ತೂರಿರುವ ಘಟನೆ ತಾಲ್ಲೂಕಿನ ವಡೇರಹಳ್ಳಿಯಲ್ಲಿ ಶುಕ್ರವಾರ ನಡೆದಿದೆ.

ಮಧ್ಯಾಹ್ನ 2.20ಕ್ಕೆ ಘಟನೆ ನಡೆದಿದ್ದು, ರೈಲಿನ ಕಿಟಕಿ ಗಾಜುಗಳು ಪುಡಿಯಾಗಿವೆ. ಕೃತ್ಯ ನಡೆದ ಸ್ಥಳಕ್ಕೆ ಮಂಡ್ಯ ರೈಲ್ವೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಕಿಡಿಗೇಡಿಗಳ ಪತ್ತೆಗೆ ಬಲೆ ಬೀಸಿದ್ದಾರೆ.




ರಾಜ್ಯ ಬಜೆಟ್ 2023-24



ಬೆಂಗಳೂರು ಅಭಿವೃದ್ಧಿಗೆ ನಮ್ಮ ಯೋಜನೆ ರೂಪಿಸಲಾಗುತ್ತಿದೆ. ಸಂಪನ್ಮೂಲ ಹೇಗೆ ಕ್ರೋಢೀಕರಿಸಬೇಕು ಎಂದು ನಮಗೆ ಗೊತ್ತಿದೆ. ಈ ಬಗ್ಗೆ ಮೊದಲೇ ಚರ್ಚೆ ಮಾಡಿದ್ದೇವೆ. ಬ್ರ್ಯಾಂಡ್ ಬೆಂಗಳೂರು ನಿರ್ಮಾಣ ಮಾಡಲು ಪ್ಲಾನ್ ಮಾಡಿದ್ದೇವೆ

ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ





ಮೆಟ್ರೊ ಸಂಪರ್ಕ ಎರಡೂವರೆ ಪಟ್ಟು ಹೆಚ್ಚಳ • ಪೆರಿಫೆರಲ್ ವರ್ತುಲ ರಸ್ತೆ ಯೋಜನೆಗೆ ಆಸಕ್ತಿ
• ಹಳೆ ತ್ಯಾಜ್ಯದ ಜೈವಿಕ ಗಣಿಗಾರಿಕೆಯಿಂದ 256 ಉದ್ಯಾನ • ರಾಜಕಾಲುವೆ ಒತ್ತುವರಿ ತೆರವಿಗೆ ಆದ್ಯತೆ

‘ಬ್ರ್ಯಾಂಡ್’ ಪರಿಕಲ್ಪನೆಗೆ ಸಂಕಲ್ಪ

• ಆರ್. ಮಂಜುನಾಥ್

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಿಂದೆ ಎಲ್ಲಿ ನಿಲ್ಲಿಸಿದ್ದರೋ ಅಲ್ಲಿಂದಲೇ ನಗರದ ಯೋಜನೆಗಳಿಗೆ ಮರುಜೀವ ನೀಡುವ ಪ್ರಯತ್ನ ಮಾಡಿದ್ದಾರೆ. ರಾಜ್ಯ ಬಜೆಟ್‌ನಲ್ಲಿ ರಾಜಧಾನಿ ಬೆಂಗಳೂರಿಗೆ ಕಣ್ಣಿಗೆ ರಾಚುವಂತಹ ಅಥವಾ ಬಂಪರ್ ಎನ್ನುವಂತಹ ಯೋಜನೆಗಳನ್ನೇನೂ ನೀಡಿದ್ದರೂ, ‘ಬ್ರ್ಯಾಂಡ್ ಬೆಂಗಳೂರು’ ಪರಿಕಲ್ಪನೆಯನ್ನು ಕೇಂದ್ರಬಿಂದುವನ್ನಾಗಿಸಿಕೊಂಡಿದ್ದಾರೆ.

ಹಸಿದವರಿಗೆ ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಆಹಾರದಿಂದ ಹೊಟ್ಟೆ ತುಂಬಿಸುವ ‘ಇಂದಿರಾ ಕ್ಯಾಂಟೀನ್’ಗೆ ಮರುಚಾಲನೆ ನೀಡಿರುವುದು ಬಡವರ ಪಾಲಿಗೆ ಆಶಾಕಿರಣವಾಗಿದೆ. ಈ ಕ್ಯಾಂಟೀನ್‌ಗಳ ನಿರ್ವಹಣೆಗೆ ಇನ್ನಷ್ಟು ಹಣ ಹೊಂದಿಸಿದ್ದರೆ, ಮತ್ತಷ್ಟು ಹೊಟ್ಟೆಗಳನ್ನು ತುಂಬಿಸಬಹುದಿತ್ತು. ಎರಡನೇ ಹಂತದಲ್ಲಿ ಇದನ್ನು ಅನುಷ್ಠಾನಗೊಳಿಸುವುದಾಗಿ ಹೇಳಿರುವುದು ಸಮಾಧಾನಕರ.

ಹಿಂದಿನ ಸರ್ಕಾರವನ್ನು ಇಚ್ಛಾನುಸಾರ ಹೀಯಾಳಿಸಿರುವ ಸಿದ್ದರಾಮಯ್ಯ, ಆರೆಂಟು ವರ್ಷ ಅವರ ಹೊರೆಯನ್ನೇ ತೀರಿಸಬೇಕೆಂದು ನೇರವಾಗಿ ಹೇಳಿದ್ದಾರೆ. ನಗರ ಅಭಿವೃದ್ದಿಯಲ್ಲಿ ಅನುಷ್ಠಾನ ಸಾಧ್ಯವಾಗುವಂತಹ ಹಿಂದಿನ ಸರ್ಕಾರದ ಕಾಮಗಾರಿಗಳಿಗೆ ಹೊಸ ಹೆಸರು, ವಿವರಣೆ ನೀಡಿ ಮುಂದುವರಿಸಿದ್ದಾರೆ.

‘ಬ್ರ್ಯಾಂಡ್ ಬೆಂಗಳೂರು’ ಪರಿಕಲ್ಪನೆಯಲ್ಲಿ ನಗರದ ಮುಂದಿರುವ 9 ಸವಾಲುಗಳನ್ನು ವಿವರಿಸಿ, ಅವುಗಳನ್ನು ಎದುರಿಸಲು ಮುನ್ನುಗ್ಗಬೇಕಾದ ಅಂಶಗಳಲ್ಲೇ ನಗರದ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಒದಗಿಸಲು ಪ್ರಯತ್ನಪಟ್ಟಿದ್ದಾರೆ. ಅಗತ್ಯ ಇಲ್ಲದ ಕಾಮಗಾರಿಗಳಿಗೆ, ಅನುದಾನಗಳಿಗೆ ಮುಲಾಜಿಲ್ಲದೆ ಕೊಕ್ ನೀಡಿದ್ದಾರೆ. ಉಳಿದಿರುವ ಎಂಟು ತಿಂಗಳಲ್ಲಿ ನಗರಕ್ಕೆ ಏನುಬೇಕು ಎಂದು ಪಟ್ಟಿಮಾಡಿಕೊಂಡಿದ್ದು, ಕೆಲವು ಕಾಮಗಾರಿಗಳು ಮುಗಿಯಲು ಗಡುವು ನೀಡಿದ್ದಾರೆ.



ಒಳಚರಂಡಿ ನೀರನ್ನು ಕಡ್ಡಾಯವಾಗಿ ಸಂಸ್ಕರಿಸಿ, ಹರಿಸಬೇಕೆಂಬ ಮಾತನ್ನು ವರ್ಷಗಳಿಂದ ಹೇಳಲಾಗುತ್ತಿದೆ. ಎಸ್‌ಟಿಪಿಗಳು ಹಳೆದಾಗಿದ್ದು, ಅವುಗಳಿಂದ ಈ ಕಾರ್ಯವಾಗುವುದಿಲ್ಲ ಎಂದು ಹೇಳಲಾಗಿತ್ತು. ಆದರೆ ಇನ್ನು 20 ತಿಂಗಳಲ್ಲಿ 20 ಎಸ್‌ಟಿಪಿಗಳನ್ನು ಸ್ವಂತ ಸಂಪನ್ಮೂಲದಿಂದ ಮೇಲ್ದರ್ಜೆಗೇರಿಸಬೇಕು ಎಂದು ಸೂಚಿಸಿರುವುದು ಸುಸ್ಥಿರ ಜಲ ಮತ್ತು ಪರಿಸರ ಸಂರಕ್ಷಣೆಯೆಡೆಗಿನ ಗಟ್ಟಿ ಹೆಜ್ಜೆ.

ಸಂಚಾರ ದಟ್ಟಣೆ ನಿವಾರಿಸಲು ವೈಟ್ ಟಾಪಿಂಗ್‌ಗೆ ಮತ್ತೊಮ್ಮೆ ಆದ್ಯತೆ ನೀಡಲಾಗಿದೆ. ಜೊತೆಗೆ ಹೈಡೆನ್ಸಿಟಿ ಕಾರಿಡಾರ್‌ಗಳ ಯೋಜನೆಯನ್ನು ಹಿಂದಿನ ಸರ್ಕಾರದ ಯೋಜನೆಯಂತೆಯೇ ಮುಂದುವರಿಸಲಾಗಿದೆ. ಇವರೆಡರಿಂದ ಸಂಚಾರ ದಟ್ಟಣೆ ಕಡಿಮೆಯಾಗುವುದಿಲ್ಲ ಎಂಬುದನ್ನು ಅರಿತಿರುವ ಮುಖ್ಯಮಂತ್ರಿಯವರು, ನಮ್ಮ ಮೆಟ್ರೊ ವಿಸ್ತರಣೆಗೆ ಹೆಚ್ಚಿನ ಒಲವು ತೋರಿದ್ದಾರೆ. 176 ಕಿ.ಮೀ ಗೆ ಸಂಪರ್ಕ ಜಾಲವನ್ನು ವಿಸ್ತರಿಸುವ ಯೋಜನೆ ಜನರಿಗೆ ಸಂತಸ ತಂದಿದೆ. ಆದರೆ ಇದಕ್ಕೂ ಸಮಯ ನಿಗದಿ ಮಾಡಿದ್ದರೆ ಸಂತೋಷ ಇಮ್ಮಡಿಯಾಗುತ್ತಿತ್ತು.

ನಗರವನ್ನು ಸದಾ ಕಾಡುತ್ತಿರುವ ದ್ರವ ತ್ಯಾಜ್ಯದ ನಿರ್ವಹಣೆ, ಒಳಚರಂಡಿ ನೀರು ಸಂಸ್ಕರಿಸಲು ₹1,250 ಕೋಟಿ ವೆಚ್ಚ ಮಾಡುವುದಾಗಿ ಹೇಳಿದ್ದಾರೆ. ಪ್ರಮುಖವಾಗಿ ಕೆರೆಗಳಿಗೆ ಇಂತಹ ಮಾಲಿನ್ಯ ಹೋಗದಂತೆ ನಿಯಂತ್ರಿಸುವುದಾಗಿ ಹೇಳಿರುವುದರಲ್ಲಿ, ಜಲಮೂಲಗಳಲ್ಲಿ ಸ್ವಚ್ಛ ಪರಿಸರ ನಿರ್ಮಿಸುವ ಆಶಯ ಕಾಣುತ್ತದೆ. ವೈಜ್ಞಾನಿಕವಾಗಿ ತ್ಯಾಜ್ಯ ವಿಲೇವಾರಿಗೆ ಆದ್ಯತೆ ನೀಡಲಾಗುತ್ತದೆ ಎಂದು ಹೇಳಲಾಗಿದ್ದರೂ, ಹಳೆಯ ತ್ಯಾಜ್ಯವನ್ನು ಜೈವಿಕ ಗಣಿಗಾರಿಕೆ ಮೂಲಕ ಸಂಸ್ಕರಿಸುವುದು, ಅದರಿಂದ ಉದ್ಯಾನಗಳನ್ನು ಸೃಷ್ಟಿಸುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಈಗಾಗಲೇ ಹಗರಣಗಳನ್ನು ಸುತ್ತಿಕೊಂಡಿರುವ, ಎಸ್‌ಐಟಿ ರಚಿಸಲು ಮುಖ್ಯಮಂತ್ರಿಯವರೇ ಆದೇಶಿಸಿರುವ ಘನತ್ಯಾಜ್ಯ ನಿರ್ವಹಣೆ ಸಂಸ್ಥೆಗೆ ₹100 ಕೋಟಿ ನೀಡಿ, ವೈಜ್ಞಾನಿಕ ಹಾಗೂ ಸುಸ್ಥಿರ ರೀತಿಯಲ್ಲಿ ತ್ಯಾಜ್ಯ ವಿಲೇವಾರಿ ಮಾಡಿ ಎಂದು ಹೇಳಲಾಗಿದೆ. ಕೇಂದ್ರ ಸ್ವಚ್ಛ ಭಾರತ ಯೋಜನೆಯಲ್ಲೂ ಇದೇ ರೀತಿಯ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು ಎಂದು ಹೇಳಲಾಗಿದ್ದು, ಅದಕ್ಕೆ ಸಿಗುವ ಅನುದಾನದ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲ.

ಡಬಲ್ ಎಂಜಿನ್ ಸರ್ಕಾರದಿಂದ ಉಪನಗರ ರೈಲು ಯೋಜನೆ ಜಾರಿಯಾಗಿಲ್ಲ, ಹಿಂದಿನ ಸರ್ಕಾರ ವಿಫಲವಾಗಿದೆ ಎಂದು ಹೇಳಿರುವ ಮುಖ್ಯಮಂತ್ರಿ, ಯೋಜನೆಯನ್ನು ವಿವರಿಸಿರುವುದನ್ನು ಬಿಟ್ಟರೆ, ಅನುದಾನವನ್ನು ಹೆಚ್ಚೇನು ಮಾಡಿಲ್ಲ.

ನಗರದ ಅಭಿವೃದ್ಧಿ ಕಾಮಗಾರಿಗಳನ್ನು ಆರ್ಥಿಕ ಶಿಸ್ತಿಲ್ಲದೆ ಹಿಂದಿನ ಸರ್ಕಾರ ರೂಪಿಸಿದೆ ಎಂದು ಹೇಳಿರುವ ಸಿದ್ದರಾಮಯ್ಯ, ಈ ಎಂಟು ತಿಂಗಳಲ್ಲಿ ಅನುಷ್ಠಾನ ಮಾಡಬಹುದಾದ ಕಾಮಗಾರಿಗಳಿಗೆ ಪ್ರಾಮುಖ್ಯ ನೀಡಿದ್ದಾರೆ. ರಸ್ತೆ, ತ್ಯಾಜ್ಯ, ಸಂಚಾರ ದಟ್ಟಣೆ, ಪ್ರವಾಹ, ಪರಿಸರಕ್ಕೆ ಆದ್ಯತೆಯನ್ನೂ ನೀಡಿದ್ದಾರೆ. ‘ಬ್ರ್ಯಾಂಡ್ ಬೆಂಗಳೂರು’ ರೂಪುಗೊಳ್ಳಲು ಅಂತರರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯಲು ಮೊದಲ ಹೆಜ್ಜೆ ಇರಿಸಿದ್ದಾರೆ.

ಅಶಿಸ್ತು, ಅವಿವೇಚನೆ: ಸಿದ್ದರಾಮಯ್ಯ

‘ಹಿಂದಿನ ಅವಧಿಯ ನಗರೋತ್ಥಾನ, ಇಂದಿರಾ ಕ್ಯಾಂಟೀನ್‌ನಂತಹ ಹಲವಾರು ಜನಪರ ಯೋಜನೆಗಳನ್ನು ನಿರ್ಲಕ್ಷಿಸಿದ್ದರಿಂದ ನಗರಗಳ ಅಭಿವೃದ್ಧಿಯು ಕುಂಠಿತಗೊಂಡಿರುತ್ತದೆ. 2022-23ನೇ ಸಾಲಿಗೆ ₹45 ಸಾವಿರ ಕೋಟಿಯ ಅಪೂರ್ಣ ಕಾಮಗಾರಿಗಳ ಮತ್ತು ಬಾಕಿ ಮೊತ್ತದ ಹೊರೆಯನ್ನು ಹಿಂದಿನ ಸರ್ಕಾರ ನಮ್ಮ ಸರ್ಕಾರದ ಮೇಲೆ ಹೊರೆಸಿದೆ. ಪ್ರಸ್ತುತ ಇರುವ ಆಯವ್ಯಯದ ಮಿತಿಯಲ್ಲಿ ಈ ಹೊರೆಯನ್ನು ತೀರಿಸಲು ಕನಿಷ್ಠ 6-8 ವರ್ಷಗಳ ಅಗತ್ಯ ಇರುತ್ತದೆ. ಇದು ಅವರ ಅಶಿಸ್ತು ಮತ್ತು ಅವಿವೇಚನೆಗೆ ಹಿಡಿದ ಕನ್ನಡಿ. ಆದಾಗ್ಯೂ, ನಮ್ಮ ಸರ್ಕಾರ ನಗರಗಳ ಅಭಿವೃದ್ಧಿಗಾಗಿ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಿದೆ’ ಎಂದು ಸಿದ್ದರಾಯ್ಯ ಹೇಳಿದ್ದಾರೆ.

‘ಬೆಂಗಳೂರು ನಗರದ ಮೂಲಸೌಕರ್ಯ ಅಭಿವೃದ್ಧಿಗಾಗಿ ಅಮೃತ ನಗರೋತ್ಥಾನ, ಹೈಡೆನ್ಸಿಟಿ ಕಾರಿಡಾರ್, ವೈಟ್ ಟಾಪಿಂಗ್ ರಸ್ತೆ, ತ್ಯಾಜ್ಯ ನಿರ್ವಹಣೆ, ರಾಜಕಾಲುವೆಗಳ ತೆರವು ಮತ್ತು ದುರಸ್ತಿ, ರಸ್ತೆ ಗುಂಡಿ ಮುಚ್ಚುವುದು ಮತ್ತಿತರ ಹಲವಾರು ಪ್ರಗತಿಯಲ್ಲಿರುವ ಯೋಜನೆಗಳಿಗೆ ಪ್ರಸ್ತುತ ₹12 ಸಾವಿರ ಕೋಟಿಗೂ ಹೆಚ್ಚು ಮೊತ್ತ ವ್ಯಯಿಸಲಾಗುತ್ತಿದೆ. ಇದಲ್ಲದೆ ಸಂಚಾರ ದಟ್ಟಣೆ ನಿವಾರಣೆಗಾಗಿ ₹30 ಸಾವಿರ ಕೋಟಿಗೂ ಹೆಚ್ಚಿನ ಅಂದಾಜು ವೆಚ್ಚದಲ್ಲಿ ನಮ್ಮ ಮೆಟ್ರೊ ಹಾಗೂ ಉಪನಗರ ರೈಲು ಯೋಜನೆ ಜಾರಿಗೊಳಿಸಲಾಗುತ್ತಿದೆ. ಈ ಯೋಜನೆಗಳು ಪೂರ್ಣಗೊಳ್ಳಲು ಐದು ವರ್ಷಗಳ ಕಾಲಾವಕಾಶದ ಅಗತ್ಯವಿದೆ. ಇಷ್ಟು ಬೃಹತ್ ಮೊತ್ತದ ಕಾಮಗಾರಿಗಳು ಅನುಷ್ಠಾನಗೊಳ್ಳುತ್ತಿದ್ದರೂ ಹಿಂದಿನ ಸರ್ಕಾರದ ಮಿತಿ ಮೀರಿದ ಭ್ರಷ್ಟಾಚಾರ ಹಾಗೂ ಅಸಮರ್ಪಕ ನಿರ್ವಹಣೆಯ ಕಾರಣದಿಂದ ನಗರದ ಮೂಲ ಸೌಕರ್ಯಗಳಲ್ಲಿ ಗಮನಾರ್ಹ ಬದಲಾವಣೆ ಕಂಡು ಬಂದಿರುವುದಿಲ್ಲ’ ಎಂದು ಮೂದಲಿಸಿದ್ದಾರೆ

‘ಬಿಎಂಟಿಸಿಗಿಲ್ಲ ಉತ್ತೇಜನ: ದಟ್ಟಣೆಗೆ ಪರಿಹಾರ ಯಾವಾಗ?’



ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ (ಬಿಎಂಟಿಸಿ) ಹೆಚ್ಚಿನ ಒತ್ತು ನೀಡಿ, ನಗರದ ಗಡಿಗಳ ನಡುವೆ ಬಸ್ ಸಂಚಾರ ಆರಂಭಿಸಲು ಹೊಸ ಬಸ್‌ಗಳನ್ನು ರಸ್ತೆಗಿಳಿಸಬೇಕಿತ್ತು. ಇದರಿಂದ ನಗರದ ದಟ್ಟಣೆ ಸಮಸ್ಯೆ ಕಡಿಮೆಯಾಗುತ್ತಿತ್ತು. ಈ ನಿಟ್ಟಿನಲ್ಲಿ ಬಜೆಟ್ ನಿರಾಶೆ ಮೂಡಿಸಿದೆ. ತ್ಯಾಜ್ಯ ಸಂಗ್ರಹಣೆ ಮತ್ತು ಸಂಸ್ಕರಣೆಯನ್ನು ವೈಜ್ಞಾನಿಕವಾಗಿ ಮಾಡಲು ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಸಂಸ್ಥೆಯ ಕಾರ್ಯಾಚರಣೆಗಾಗಿ ₹ 100 ಕೋಟಿ ಒದಗಿಸಲಾಗಿದೆ. 97 ಲಕ್ಷ ಟನ್ ಹಳೇ ತ್ಯಾಜ್ಯವನ್ನು ಜೈವಿಕ ಗಣಿಗಾರಿಕೆ ಹಾಗೂ ಜೈವಿಕ ಪರಿಹಾರದ ಮೂಲಕ ಸಂಸ್ಕರಿಸಲು ಒತ್ತು ನೀಡಲಾಗಿದೆ. ಆದರೆ, ಸ್ಥಳೀಯ ತ್ಯಾಜ್ಯ ಸಂಸ್ಕರಣೆಗೆ ಮತ್ತಷ್ಟು ಒತ್ತು ನೀಡಬೇಕಿತ್ತು. ಜೈವಿಕ ಅನಿಲ ಉತ್ಪಾದನೆ ಘಟಕದಿಂದ ಬರುವ ಅನಿಲವನ್ನು ಸ್ಥಳೀಯರಿಗೆ ಹಂಚಿಕೆ ಮಾಡಬೇಕು. ಇದರಿಂದ, ಸ್ಥಳೀಯರು ಘಟಕದ ಕೆಲಸಕ್ಕೆ ಪ್ರೋತ್ಸಾಹ ನೀಡುತ್ತಾರೆ. ಯೋಜನೆಯೂ ಯಶಸ್ವಿಯಾಗುತ್ತದೆ.

ತ್ಯಾಜ್ಯ ನೀರು ಸಂಸ್ಕರಣೆ ಘಟಕಕ್ಕೆ (ಎಸ್‌ಟಿಪಿ) ಆದ್ಯತೆ ನೀಡಿರುವ ರೀತಿಯಲ್ಲಿ, ಅಂತರ್ಜಲ ವೃದ್ಧಿ ಹಾಗೂ ಮಳೆ ನೀರಿನ ಕೊಯ್ಲಿ ವ್ಯವಸ್ಥೆಗೂ ಒತ್ತು ನೀಡಬೇಕಿತ್ತು. ಸರ್ಕಾರಿ ಶಾಲೆ–ಕಾಲೇಜುಗಳ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಿರುವುದು ಸ್ವಾಗತಾರ್ಹ. ಈ ಬಗ್ಗೆ ಹೈಕೋರ್ಟ್ ಕೆಲ ಪ್ರಕರಣಗಳಲ್ಲಿ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ರಾಜ್ಯದ ಸುಮಾರು 4000 ಶಾಲೆಗಳ ಅಭಿವೃದ್ಧಿಗೂ ಸರ್ಕಾರ ಕ್ರಮ ಕೈಗೊಳ್ಳಬೇಕು.

ಕಾತ್ಯಾಯಿನಿ ಚಾಮರಾಜ್, ಬೆಂಗಳೂರು ಸಿವಿಕ್ ಸಂಸ್ಥೆಯ ಕಾರ್ಯಕಾರಿ ಟ್ರಸ್ಟಿ

ಸಾರ್ವಜನಿಕ ಸಾರಿಗೆ ಮಹತ್ವಕ್ಕೆ ಆದ್ಯತೆ




ಬೆಂಗಳೂರಿನಲ್ಲಿ ಸಾರ್ವಜನಿಕ ಸಾರಿಗೆಯ ಮಹತ್ವವನ್ನು ಆದ್ಯತೆಯಾಗಿ ಪರಿಗಣಿಸಿ ಮೆಟ್ರೊ ಮತ್ತು ಉಪನಗರ ರೈಲುಗಳ ಸೌಕರ್ಯಗಳ ಅಭಿವೃದ್ಧಿಗೆ ಸರ್ಕಾರ ಆದ್ಯತೆ ಕೊಡುತ್ತಿರುವುದು ಸಂತೋಷದಾಯಕ ವಿಷಯ. ಪೆರಿಫೆರಲ್ ರಿಂಗ್ ರೋಡ್ (ಪಿಆರ್‌ಆರ್) ಮತ್ತು ಹೊಸ ಮಹಿಳಾ ಪೊಲೀಸ್ ಠಾಣೆಗಳನ್ನು ಸ್ಥಾಪಿಸುವ ಯೋಜನೆಗಳು ಅತ್ಯಂತ ಸಕಾಲಿಕ ಮತ್ತು ಸ್ವಾಗತಾರ್ಹ. ರಾಜ್ಯ ಹಣಕಾಸು ಆಯೋಗದಿಂದ ನಗರಗಳ ಅಭಿವೃದ್ಧಿಗೆ ನಿಧಿಯ ವಿಕೇಂದ್ರೀಕರಣ ಕಾರ್ಯರೂಪಕ್ಕೆ ಬರಬಹುದು ಎಂಬ ನಿರೀಕ್ಷೆ ಇತ್ತು. ಇಂಥ ಮಹತ್ವದ ವಿಚಾರಕ್ಕೆ ಆದ್ಯತೆ ನೀಡದೇ ಇರುವುದು ನಿರಾಸೆಯನ್ನು ಉಂಟು ಮಾಡಿದೆ.

ಬಜೆಟ್‌ನಲ್ಲಿ ಎಲ್ಲ ಸಾರಿಗೆ ನಿಗಮಗಳಿಗೆ ಒಟ್ಟು ₹4,000 ಕೋಟಿ ನೀಡಿರುವುದೇ ಬಹಳ ದೊಡ್ಡ ಉಪಕ್ರಮ. ಬಿಎಂಟಿಸಿ ಬಸ್ ಬೆಂಗಳೂರಿನ ಜೀವನಾಡಿಯಾಗಿದ್ದು, ಇಂದಿನ ಬಜೆಟ್ ಈ ಜೀವಸೆಲೆಗೆ ಆಮ್ಲಜನಕ ನೀಡಿದೆ. ಬಿಎಂಟಿಸಿ ದೈನಂದಿನ ಪ್ರಯಾಣಿಕರ ಸಂಖ್ಯೆಯು ದಿನಕ್ಕೆ 30 ಲಕ್ಷದಿಂದ 40 ಲಕ್ಷಗಳಿಗೆ ಏರಿದ್ದರಿಂದ ಶಕ್ತಿ ಯೋಜನೆಯು ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದಿತ್ತು. ಈ ಯೋಜನೆ ಯಶಸ್ವಿಗೊಳ್ಳಬೇಕಿದ್ದರೆ ಅದಕ್ಕೆ ಸರಿಯಾಗಿ ಅನುದಾನ ಒದಗಿಸಬೇಕು. ಇಲ್ಲದೇ ಇದ್ದರೆ ಸಾರಿಗೆ ನಿಗಮಗಳನ್ನು ನಷ್ಟದ ಕೂಪಕ್ಕೆ ದೂಡಿದಂತಾಗುತ್ತದೆ. ಈಗ ಅನುದಾನವನ್ನು ಘೋಷಿಸಿರುವುದು ಆ ಅಪಾಯವನ್ನು ತಪ್ಪಿಸಿದೆ. ಎಲ್ಲ ನಿಗಮಗಳು ನಾಗರಿಕರ ಸೇವೆಗಾಗಿ ಹೆಚ್ಚಿನ ಬಸ್‌ಗಳನ್ನು ಸೇರ್ಪಡೆಯನ್ನು ಮತ್ತು ಸೇವೆಯ ಗುಣಮಟ್ಟ ಸುಧಾರಣೆಯನ್ನು ಈ ಕ್ರಮವು ಖಾತರಿಪಡಿಸಿದೆ.

ಶ್ರೀನಿವಾಸ ಅಲವಿಲ್ಲಿ, ನಾಗರಿಕ ಕಾರ್ಯಕರ್ತ

‘ಬ್ರ್ಯಾಂಡ್ ಬೆಂಗಳೂರಿಗಿಲ್ಲ’ ಸ್ಪಷ್ಟ ಚಿತ್ರಣ

ಬೆಂಗಳೂರು ಅಭಿವೃದ್ಧಿಗೆ ಸಂಬಂಧಿಸಿದ ಹೆಚ್ಚಿನ ಘೋಷಣೆಗಳು ಪ್ರಸಕ್ತ ವರ್ಷದಲ್ಲಿ ಅನುಷ್ಠಾನಗೊಳ್ಳದೆ, ಮುಂದಿನ ಐದು ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳ್ಳಲಿವೆ. ವೈಜ್ಞಾನಿಕ ತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ 256 ಎಕರೆ ಭೂಮಿಯನ್ನು ಉದ್ಯಾನಗಳಾಗಿ ಪರಿವರ್ತಿಸುವುದು, ಮೆಟ್ರೊ ಮಾರ್ಗ ನಿರ್ಮಾಣ ಸೇರಿ ವಿವಿಧ ಘೋಷಣೆಗಳು ಪ್ರಸಕ್ತ ವರ್ಷದಲ್ಲಿ ಸಾಕಾರಗೊಳ್ಳುವುದಿಲ್ಲ.



ಮೆಟ್ರೋ 3ನೇ ಹಂತದಡಿ 45 ಕಿ.ಮೀ. ಉದ್ದದ ಮಾರ್ಗ ನಿರ್ಮಾಣಕ್ಕೆ ಅಂದಾಜು ₹ 16,328 ಕೋಟಿ ವೆಚ್ಚದ ವಿಸ್ತೃತ ಯೋಜನಾ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿದೆ ಎನ್ನಲಾಗಿದೆ. ಆದರೆ, ಇದು ಯಾವಾಗ ಪೂರ್ಣಗೊಳ್ಳುತ್ತದೆ ಎನ್ನುವುದನ್ನು ತಿಳಿಸಿಲ್ಲ. ಅದೇ ರೀತಿ, ಮುಂದಿನ ವರ್ಷ ಲೋಕಸಭೆ ಚುನಾವಣೆ ನಡೆಯಲಿದ್ದು, ಇದಕ್ಕೆ ಕೇಂದ್ರ ಸರ್ಕಾರದ ಅನುಮೋದನೆ ದೊರೆಯುವ ಬಗ್ಗೆಯೂ ಖಚಿತತೆ ಇಲ್ಲ.

ಬಜೆಟ್‌ನಲ್ಲಿ ಈ ವರ್ಷ ಪೂರ್ಣಗೊಳ್ಳುವ ಯೋಜನೆಗಳಿಗೆ ಆದ್ಯತೆ ನೀಡಬೇಕಿತ್ತು. ಬಿಬಿಎಂಪಿ ಸೇರಿ 314 ನಗರ ಸ್ಥಳೀಯ ಸಂಸ್ಥೆಗಳಿಗೆ ₹ 4,500 ಕೋಟಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದೆ. ಆದರೆ, ಇದರಲ್ಲಿ ಬಿಬಿಎಂಪಿಗೆ ಎಷ್ಟು ಅನುದಾನ ಹಂಚಿಕೆ ಎನ್ನುವ ಬಗ್ಗೆಯೂ ಸ್ಪಷ್ಟತೆಯಿಲ್ಲ. ಬೆಂಗಳೂರು ಮಹಾನಗರ ಭೂ ಸಾರಿಗೆ ಪ್ರಾಧಿಕಾರ ರಚನೆಗೆ ಹಿಂದಿನ ಸರ್ಕಾರ ಮಸೂದೆ ಮಂಡಿಸಿತ್ತು. ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಸಹಕಾರಿಯಾದ ಈ ಪ್ರಾಧಿಕಾರದ ಸ್ಥಾಪನೆಗೆ ಅನುದಾನ ಒದಗಿಸುವ ಬಗ್ಗೆ ಪ್ರಸ್ತಾಪ ಮಾಡಿದ್ದರೆ ಆಶಾದಾಯಕವಾಗಿರುತ್ತಿತ್ತು.

ಹರೀಶ್ ಎನ್., ರಾಜಕೀಯ ವಿಶ್ಲೇಷಕ ಹಾಗೂ ಬಿ.ಪ್ಯಾಕ್ ಸದಸ್ಯ

ಯಾವ ಯೋಜನೆಗಳಿಗೆ ಎಷ್ಟು?

ಬ್ರ್ಯಾಂಡ್ ಬೆಂಗಳೂರು ಪರಿಕಲ್ಪನೆಗೆ 9 ಸವಾಲು

‘ಬ್ರ್ಯಾಂಡ್ ಬೆಂಗಳೂರು’ ಪರಿಕಲ್ಪನೆಯು ಬೆಂಗಳೂರು ನಗರದ ನಿವಾಸಿಗಳ ಸುರಕ್ಷತೆ ಹಾಗೂ ಅನುಕೂಲವನ್ನು ಕೇಂದ್ರಬಿಂದುವಾಗಿಸಿದೆ. ಈ ಪರಿಕಲ್ಪನೆ ಕಾರ್ಯಗತವಾಗಿ, ಬೆಂಗಳೂರು ಅಂತರರಾಷ್ಟ್ರೀಯ ಮಟ್ಟಕ್ಕೆ ಏರಿಸುವ ಗುರಿ ಸಾಧಿಸಬೇಕಾದರೆ ಒಂಬತ್ತು ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಬೇಕು ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಆ ಸವಾಲುಗಳೆಂದರೆ,
- ನಗರದ ಸಂಚಾರ ವ್ಯವಸ್ಥೆ
- ಪರಿಸರ
- ಘನತ್ಯಾಜ್ಯ ನಿರ್ವಹಣೆ
- ಸಾರ್ವಜನಿಕ ಸ್ಥಳಗಳ ಸದ್ಬಳಕೆ
- ನಾಗರಿಕರ ಆರೋಗ್ಯ
- ಪ್ರಾಣಿಗಳ ಆರೋಗ್ಯ
- ಜನಸ್ನೇಹಿ ಇ-ಆಡಳಿತ
- ನೀರಿನ ಭದ್ರತೆ
- ಪ್ರವಾಹ ನಿರ್ವಹಣೆ

ಉಪನಗರ ರೈಲು

- ಬೆಂಗಳೂರು ಉಪ ನಗರ ರೈಲು ಯೋಜನೆಯ ಒಟ್ಟು ಮೊತ್ತ ₹15,767 ಕೋಟಿ. ಕೇಂದ್ರ ಸರ್ಕಾರದ ಪಾಲು ₹3,242 ಕೋಟಿ, ರಾಜ್ಯ ಸರ್ಕಾರದ ಪಾಲು ₹5,087 ಕೋಟಿ ಮತ್ತು ಸಾಲದ (ಬಾಹ್ಯ ಮೂಲಗಳಿಂದ) ಮೊತ್ತ ₹7,438 ಕೋಟಿ. ಈವರೆಗೂ ಕೇಂದ್ರ ₹ 500 ಕೋಟಿ ಬಿಡುಗಡೆ ಮಾಡಿದ್ದು, ರಾಜ್ಯ ಸರ್ಕಾರದಿಂದ ₹660 ಕೋಟಿ ಬಿಡುಗಡೆ ಮಾಡಿದೆ. ಪ್ರಸ್ತುತ ಸಾಲಿನಲ್ಲಿ ಈ ಯೋಜನೆಗೆ ರಾಜ್ಯ ಸರ್ಕಾರ ₹1,000 ಕೋಟಿ ಒದಗಿಸಲಾಗಿದೆ.

ಬಿಡಿಎ

- ಬೆಂಗಳೂರು ಪೆರಿಫೆರಲ್ ರಿಂಗ್ ರಸ್ತೆ ನಿರ್ಮಾಣ ಪ್ರಕ್ರಿಯೆಯು 15 ವರ್ಷಗಳಿಂದ ನನೆಗುದಿಗೆ ಬಿದ್ದಿದೆ. ಈ ಯೋಜನೆಗೆ ಎದುರಾದ ತಾಂತ್ರಿಕ ಅಡಚಣೆಗಳನ್ನು ನಿವಾರಿಸಲು ಸುಪ್ರೀಂ ಕೋರ್ಟ್ ಅನುಮತಿ 2021ರಲ್ಲಿ ದೊರಕಿದೆ. ಇದೀಗ ಎಲ್ಲ ಕಾನೂನಾತ್ಮಕ ಸಮಸ್ಯೆಗಳನ್ನು ಬಗೆಹರಿಸಿಕೊಂಡು ತ್ವರಿತವಾಗಿ ಯೋಜನೆ ಜಾರಿಗೊಳಿಸಲು ಪ್ರಾಮಾಣಿಕ ಪ್ರಯತ್ನ.

ಬಿಡಬ್ಲ್ಯುಎಸ್‌ಎಸ್‌ಬಿ

- 20 ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳನ್ನು ಮೇಲ್ದರ್ಜೆಗೇರಿಸಲು ₹1,411 ಕೋಟಿ ವೆಚ್ಚ. ಈ ಯೋಜನೆಗಳಿಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಸ್ವಂತ ಸಂಪನ್ಮೂಲದಿಂದ ಅನುಷ್ಠಾನಗೊಳಿಸಲು ಅನುಮೋದನೆ ನೀಡಿದ್ದು, ಮಾರ್ಚ್ 2026ರೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ. ಈ ಯೋಜನೆಗಳ ಮೂಲಕ ಬೆಂಗಳೂರಿನಲ್ಲಿ ಸುಸ್ಥಿರ ಜಲ ಮತ್ತು ಪರಿಸರ ಸಂರಕ್ಷಣೆಯಾಗಲಿದೆ.


ಬಿಬಿಎಂಪಿ

- ನೈಋತ್ಯ ರೈಲ್ವೇ ಬೈಯ್ಯಪ್ಪನಹಳ್ಳಿ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ತಲುಪಲು ₹263 ಕೋಟಿ ವೆಚ್ಚದಲ್ಲಿ ಒಂದು ಮೇಲ್ಸೇತುವೆ.
- ದುರಸ್ತಿಗೆ ಮರುಕಳಿಸುವ ವೆಚ್ಚ ತಪ್ಪಿಸಲು ರಸ್ತೆಗಳ ವೈಟ್ ಟಾಪಿಂಗ್‌ಗೆ ಕ್ರಿಯಾ ಯೋಜನೆ. 2023-24ನೇ ಸಾಲಿನಲ್ಲಿ ₹ 800 ಕೋಟಿ ವೆಚ್ಚದಲ್ಲಿ 100 ಕಿ.ಮೀ. ಉದ್ದದ ಮುಖ್ಯ ರಸ್ತೆಗಳನ್ನು ವೈಟ್ ಟಾಪ್ ರಸ್ತೆಗಳಾಗಿ ಅಭಿವೃದ್ಧಿ.
- ಸಂಚಾರ ದಟ್ಟಣೆ ಹೊಂದಿರುವ 192 ಕಿ.ಮೀ. ಉದ್ದದ ವಿವಿಧ 12 ರಸ್ತೆಗಳನ್ನು ಹೈ ಡೆನ್ಸಿಟಿ ಕಾರಿಡಾರ್‌ಗಳೆಂದು 2016ರಲ್ಲಿ ಗುರುತಿಸಲಾಗಿದೆ. 92 ಕಿ.ಮೀ. ಉದ್ದದ ರಸ್ತೆ ಅಭಿವೃದ್ಧಿಯಾಗಿದೆ. 2023-24ನೇ ಸಾಲಿನಲ್ಲಿ 83 ಕಿ.ಮೀ. ಉದ್ದದ ರಸ್ತೆಗಳನ್ನು ₹273 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ.
- ಮಳೆನೀರು ಸರಾಗವಾಗಿ ಹರಿಯದಿರಲು ರಾಜಕಾಲುವೆಗಳ ಒತ್ತುವರಿ ಪ್ರಮುಖ ಕಾರಣವಾಗಿದ್ದು, ಇದರಿಂದಾಗಿ ಪ್ರವಾಹ ಉಂಟಾಗುತ್ತಿದೆ. ಈ ಸಮಸ್ಯೆಯನ್ನು ನಿವಾರಿಸಲು ಕಂದಾಯ ಇಲಾಖೆ ಗುರುತಿಸಿರುವ ಒತ್ತುವರಿಗಳನ್ನು ಆದ್ಯತೆ ಮೇಲೆ ತೆರವುಗೊಳಿಸಲಾಗುವುದು.
- ವೈಜ್ಞಾನಿಕ ತ್ಯಾಜ್ಯ ವಿಲೇವಾರಿಗೆ ಆದ್ಯತೆ ನೀಡಲಾಗಿದ್ದು, 97 ಲಕ್ಷ ಟನ್‌ನಷ್ಟು ಹಳೆ ತ್ಯಾಜ್ಯವನ್ನು ಜೈವಿಕ ಗಣಿಗಾರಿಕೆ ಮತ್ತು ಜೈವಿಕ ಪರಿಹಾರದ ಮೂಲಕ ಸಂಸ್ಕರಿಸಲಾಗುವುದು. ಮುಂದಿನ ಐದು ವರ್ಷಗಳ ಅವಧಿಯಲ್ಲಿ 256 ಎಕರೆ ಭೂಮಿಯನ್ನು ಉದ್ಯಾನವಾಗಿ ಪರಿವರ್ತನೆ.
- ಕೇಂದ್ರ ಸರ್ಕಾರದ ‘ಸ್ವಚ್ಛ ಭಾರತ 2.0’ ಯೋಜನೆಯಡಿ ಸುಸ್ಥಿರ ಘನತ್ಯಾಜ್ಯ ನಿರ್ವಹಣೆ ಮತ್ತು ಬಳಸಿದ ನೀರಿನ ನಿರ್ವಹಣೆ.
- ಪಾರಂಪರಿಕ ಮತ್ತು ದ್ರವ ತ್ಯಾಜ್ಯದ ಸಮರ್ಪಕ ನಿರ್ವಹಣೆ ಹಾಗೂ ಒಳಚರಂಡಿ ನೀರು ಸಂಸ್ಕರಿಸುವ ಆಧುನಿಕ ಪದ್ಧತಿಗಳನ್ನು ಅಳವಡಿಸುವ ಮೂಲಕ ನದಿಗಳು ಮತ್ತು ಕೆರೆಗಳಿಗೆ ಹರಿಯುವ ಮಾಲಿನ್ಯ ನಿಯಂತ್ರಿಸಲು ₹1,250 ಕೋಟಿ.
- ಇಂದಿರಾ ಕ್ಯಾಂಟೀನ್ ಯೋಜನೆಯ ಮೊದಲನೇ ಹಂತದಲ್ಲಿ ಹೊಸ ಮೆನುವಿನೊಂದಿಗೆ ಪುನರಾರಂಭ. ಎರಡನೇ ಹಂತದಲ್ಲಿ ಹೊಸ ವಾರ್ಡ್‌ಗಳಿಗೆ ವಿಸ್ತರಣೆ. ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿರುವ ಇಂದಿರಾ ಕ್ಯಾಂಟೀನ್‌ಗಳ ದುರಸ್ತಿ, ನವೀಕರಣ ಹಾಗೂ ನಿರ್ವಹಣೆಗೆ ₹100 ಕೋಟಿ.
- ತ್ಯಾಜ್ಯ ಸಂಗ್ರಹಣೆ ಮತ್ತು ಸಂಸ್ಕರಣೆಯನ್ನು ವೈಜ್ಞಾನಿಕ, ಸುಸ್ಥಿರ ರೀತಿಯಲ್ಲಿ ವಿಲೇವಾರಿ ಮಾಡಲು, ಘನತಾಜ್ಯ ನಿರ್ವಹಣಾ ಸಂಸ್ಥೆ ಪರಿಣಾಮಕಾರಿ ಕಾರ್ಯಾಚರಣೆಗಾಗಿ ₹ 100 ಕೋಟಿ.

ನಮ್ಮ ಮೆಟ್ರೊ

- 2024ರ ಅಂತ್ಯದ ವೇಳೆಗೆ ಬೈಯಪ್ಪನಹಳ್ಳಿಯಿಂದ ಕೃಷ್ಣರಾಜಪುರದವರೆಗೆ, ಕೆಂಗೇರಿಯಿಂದ ಚಲ್ಲಘಟ್ಟದವರೆಗೆ, ನಾಗಸಂದ್ರದಿಂದ ಮಾದಾವರದವರೆಗೆ, ಆರ್‌.ವಿ ರಸ್ತೆಯಿಂದ ಬೊಮ್ಮಸಂದ್ರದವರೆಗೆ ಒಟ್ಟು 27 ಕಿ.ಮೀ.ಗಳ ನೂತನ ಮಾರ್ಗ ಪ್ರಾರಂಭ.
- ಮುಂದಿನ ಮೂರು ವರ್ಷಗಳಲ್ಲಿ ಈಗಿರುವ 70 ಕಿ.ಮೀ.ನ ಸಂಪರ್ಕಜಾಲವನ್ನು 176 ಕಿ.ಮೀ.ಗೆ ವಿಸ್ತರಿಸಲಾಗುತ್ತದೆ. ವಿಮಾನ ನಿಲ್ದಾಣಕ್ಕೆ 2026ರಲ್ಲಿ ಸಂಚಾರ ಕಾರ್ಯಾರಂಭ.
- ಮೆಟ್ರೊ 3ನೇ ಹಂತದಡಿ ಅಂದಾಜು ₹16,328 ಕೋಟಿ ವೆಚ್ಚದಲ್ಲಿ ಕೆಂಪಾಪುರದಿಂದ ಜೆ.ಪಿ. ನಗರ 4ನೇ ಹಂತ ಮತ್ತು ಹೊಸಹಳ್ಳಿಯಿಂದ ಕಡಬಗೆರೆವರೆಗೆ 45 ಕಿ.ಮೀ. ಮಾರ್ಗದ ವಿಸ್ತೃತ ಯೋಜನಾ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಇಲ್ಲದೆ, ₹15,000 ಕೋಟಿ ಅಂದಾಜು ವೆಚ್ಚದ, ಹೆಬ್ಬಾಳದಿಂದ ಸರ್ಜಾಪುರದವರೆಗಿನ 37 ಕಿ.ಮೀ. ಉದ್ದದ ಯೋಜನೆಗಾಗಿ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಲಾಗುವುದು.

₹3 ಸಾವಿರ ಕೋಟಿ ಕಾಮಗಾರಿಗೆ ಕೊಕ್!



ಬಸವರಾಜ ಬೊಮ್ಮಾಯಿ

ಬೆಂಗಳೂರು ನಗರದ ಅಭಿವೃದ್ಧಿ ಕಾಮಗಾರಿಗಳಿಗೆ ಹಿಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನೀಡಿದ್ದ ಬಹುತೇಕ ಅನುದಾನಗಳಿಗೆ ಹೊಸ ಹೆಸರು ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಲವು ಯೋಜನೆಗಳನ್ನು ಕೈಬಿಟ್ಟಿದ್ದಾರೆ. ಹೀಗಾಗಿ, ಬೊಮ್ಮಾಯಿ ತೋರಿದ್ದ ₹9,698 ಕೋಟಿ ಅನುದಾನ ಇಲ್ಲಿ ಕಾಣುತ್ತಿಲ್ಲ. ₹5,147 ಕೋಟಿ ಮಾತ್ರ ವಿವರವಾಗಿ ಕಾಣುತ್ತಿದೆ.

ಹೈಡೆನ್ಸಿಟಿ ಕಾರಿಡಾರ್‌ಗೆ ಹಿಂದೆ 108 ಕಿ.ಮೀಗೆ ₹273 ಕೋಟಿಯಾಗಿತ್ತು. ಅಷ್ಟೇ ಮೊತ್ತಕ್ಕೆ ಇದೀಗ 83 ಕಿ.ಮೀ ಮಾತ್ರ ಅಭಿವೃದ್ಧಿಯಾಗಲಿದೆ. ರಾಜಕಾಲುವೆಯ ನಿರ್ಮಾಣಕ್ಕೆ ಹಿಂದೆ ನೀಡಿದ್ದ ₹1,813 ಕೋಟಿ ಈಗಿಲ್ಲ. ಜಂಕ್ಷನ್‌ಗಳ ಅಭಿವೃದ್ಧಿಗೆ ₹150 ಕೋಟಿ, ಟಿನ್‌ಫ್ಯಾಕ್ಟರಿ ಎಲಿವೇಟೆಡ್ ರಸ್ತೆಗೆ ₹350 ಕೋಟಿ, 110 ಹಳ್ಳಿಗಳ ರಸ್ತೆಗೆ ₹300 ಕೋಟಿ, ಕುಡಿಯುವ ನೀರಿಗೆ ₹200 ಕೋಟಿ, ಆಸ್ತಿಗಳಿಗೆ ಜಿಪಿಎಸ್ ಬೇಲಿಗೆ ₹35 ಕೋಟಿ, ಸುರಕ್ಷಿತ ಸಿಟಿ ಯೋಜನೆಗೆ ₹261 ಕೋಟಿ, ಶಿ ಟಾಯ್ಲೆಟ್‌ಗೆ ₹50 ಕೋಟಿ... ಈ ಯೋಜನೆಗಳ ಪ್ರಸ್ತಾಪ ಈಗಿನ ಬಜೆಟ್‌ನಲ್ಲಿ ಇಲ್ಲ. ತ್ಯಾಜ್ಯ ನೀರು ಸಂಸ್ಕರಣೆಗೆ ಹಿಂದೆ ₹1,200 ಕೋಟಿ ನೀಡಲಾಗಿತ್ತು, ಇದೀಗ ₹ 1,411 ಕೋಟಿಯಾಗಿದೆ. 420 ಕಿ.ಮೀ ವೈಟ್‌ಟಾಪಿಂಗ್‌ಗೆ ಹಿಂದೆ ₹1,450 ಕೋಟಿ ನೀಡಲಾಗಿದ್ದು, ಈಗ 100 ಕಿ.ಮೀಗೆ ₹800 ಕೋಟಿ ಒದಗಿಸಲಾಗಿದೆ. ಉಪನಗರ ರೈಲು ಯೋಜನೆಗೆ ಈಗಲೂ ₹1,000 ಕೋಟಿಯನ್ನೇ ಮೀಸಲಿಡಲಾಗಿದೆ.

ಸಾರ್ವಜನಿಕರ ಪ್ರತಿಕ್ರಿಯೆಗಳು



ಬಜೆಟ್‌ನಲ್ಲಿ ಕಾಡುಗೋಡಿಯಲ್ಲಿ ನೂತನ ಟೆಕ್ನಾಲಜಿ ಪಾರ್ಕ್ ಸ್ಥಾಪನೆ ಮಾಡುತ್ತಿರುವುದು ಖುಷಿಯ ಸಂಗತಿ. ನೂತನ ಶಿಕ್ಷಣ ನೀತಿಯನ್ನು ತೆಗೆದು ಹಾಕಿರುವುದು ಸರಿಯಲ್ಲ. ಗ್ಯಾರಂಟಿ ಪೂರೈಕೆಗೆ ರಾಜ್ಯವನ್ನು ಸಾಲದ ಕೂಪಕ್ಕೆ ದೂಡುವ ಭಯ ಎದುರಾಗಿದೆ.

ಗುರುಪ್ರಸಾದ್ ಎಂ.ಆರ್., ಎಂಜಿನಿಯರ್, ಕಾಡುಗೋಡಿ



ಬಜೆಟ್‌ನಲ್ಲಿ ಬ್ರ್ಯಾಂಡ್ ಬೆಂಗಳೂರಿಗೆ ಹೆಚ್ಚು ಅನುದಾನ ನೀಡಲಾಗಿದೆ. ಇದರಲ್ಲಿ ಮಹಿಳೆಯರಿಗೆ ಮೂಲಸೌಕರ್ಯ ಮತ್ತು ಸಾಮಾಜಿಕ ಭದ್ರತೆಯನ್ನು ಕಲ್ಪಿಸಬೇಕು. ಮಹಿಳಾ ಪೊಲೀಸ್ ಠಾಣೆಗಳು ಆರಂಭಿಸಿರುವುದು ಸ್ವಾಗತಾರ್ಹ.

ಯು. ಜಯಶ್ರೀ, ಕೊಬ್ಬರಿ ಕಾರ್ವಿಂಗ್ ಕಲಾವಿದೆ, ಬ್ಯಾಡರಹಳ್ಳಿ



ಬೆಂಗಳೂರಿನ ಟ್ರಾಫಿಕ್ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಮತ್ತು ಮಹಿಳೆಯರ ಸುರಕ್ಷತೆಗೆ ಆದ್ಯತೆ ನೀಡಿರುವುದು ಶ್ಲಾಘನೀಯ. ಆರು ಮಹಿಳಾ ಪೊಲೀಸ್ ಠಾಣೆಗಳನ್ನು ಸ್ಥಾಪಿಸಲು ನಿರ್ಧರಿಸಿರುವುದು ಸಂತಸಕರ.

ಹೇಮಾ ನಾರಾಯಣ ರಾಜು, ವಿದ್ಯಾರ್ಥಿನಿ, ಉತ್ತರಹಳ್ಳಿ



ನಗರದಲ್ಲಿ ವೈಜ್ಞಾನಿಕ ತ್ಯಾಜ್ಯ ವಿಲೇವಾರಿ ಮಾಡಲು ನಗರದಲ್ಲಿರುವ ಹಳೆಯ ತ್ಯಾಜ್ಯವನ್ನು ಜೈವಿಕ ಗಣಿಗಾರಿಕೆ, ಜೈವಿಕ ಪರಿಹಾರದ ಮೂಲಕ ಸಂಸ್ಕರಣೆ ಮಾಡುತ್ತಿರುವುದು ಶ್ಲಾಘನೀಯ. ಬಜೆಟ್‌ನಲ್ಲಿ ಹಸಿರೀಕರಣಕ್ಕೆ ಆದ್ಯತೆ ನೀಡಲಾಗಿದೆ.

ಜ್ಯೋತಿ ಈ, ಉದ್ಯೋಗಿ, ಬೆಂಗಳೂರು



ಅಲ್ಪಸಂಖ್ಯಾತರಿಗೆ ಹೆಚ್ಚಿನ ಅನುದಾನ ನೀಡಲಾಗಿದ್ದು, ಬಹುಸಂಖ್ಯಾತರನ್ನು ಕಡೆಗಣಿಸಲಾಗಿದೆ. ಸರ್ಕಾರ ಎಲ್ಲದನ್ನೂ ಉಚಿತವಾಗಿ ನೀಡುವುದರ ಬದಲಾಗಿ ಎಲ್ಲರಿಗೂ ಉದ್ಯೋಗದ ಖಚಿತತೆ ನೀಡಿದರೆ ರಾಜ್ಯದ ಅಭಿವೃದ್ಧಿ ಸಾಧ್ಯ.

ರಶ್ಮಿ ಅರುಣಕುಮಾರ್, ಭರತನಾಟ್ಯ ಕಲಾವಿದೆ, ಕುಮಾರಸ್ವಾಮಿ ಲೇಔಟ್



ಮಹಿಳಾ ಸಬಲೀಕರಣದ ಛಾಯೆ ದಟ್ಟವಾಗಿ ಗೋಚರಿಸಿದರೂ, ಆದಾಯ ಕ್ರೋಢೀಕರಣಕ್ಕೆ ಹೆಚ್ಚಿನ ಮಹತ್ವ ನೀಡಬೇಕಿತ್ತು. ಬಜೆಟ್‌ನಲ್ಲಿ ಪರಿಗಣಿಸಿರುವ ಸಾಮಾಜಿಕ ನ್ಯಾಯಕ್ಕೆ ನೀಡುವ ಪ್ರಯತ್ನಗಳನ್ನು ಇನ್ನೂ ಸುಸ್ಥಿರವಾಗಿ ನಿಭಾಯಿಸಲು ಸಾಧ್ಯವಾಗುತ್ತಿತ್ತು.

ರೂಪ ಪಟವರ್ಧನ್, ಅರ್ಥಶಾಸ್ತ್ರ ಪ್ರಾಧ್ಯಾಪಕಿ



ಹಿಂದಿನ ಸರ್ಕಾರದ ಬಜೆಟ್‌ನಲ್ಲಿ ಅಂಗವಿಕಲರ ಅಭಿವೃದ್ಧಿಗೆ ₹50 ಕೋಟಿ ಅನುದಾನ ನೀಡಲಾಗಿತ್ತು. ಆದರೆ ಈ ಬಜೆಟ್‌ನಲ್ಲಿ ಅದನ್ನು ₹30 ಕೋಟಿಗೆ ಇಳಿಕೆ ಮಾಡಿರುವುದು ಖಂಡನೀಯ.

ಚಂದ್ರಶೇಖರ ಪುಟ್ಟಪ್ಪ, ಕರ್ನಾಟಕ ರಾಜ್ಯ ವಿಕಲಚೇತನರ ರಕ್ಷಣಾ ಸಮಿತಿ ಕಾರ್ಯಾಧ್ಯಕ್ಷ




ಬಡವರು, ಮಹಿಳೆಯರ ಅಭಿವೃದ್ಧಿಗೆ ಪೂರಕವಾದ ಬಜೆಟ್. ಆದರೆ ಶಿಕ್ಷಣ, ಆರೋಗ್ಯ ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಬೇಕಾಗಿತ್ತು. ಶಾಲಾ–ಕಾಲೇಜುಗಳ ಶುಲ್ಕದ ನಿಯಂತ್ರಣ ಕಾನೂನು ರಚಿಸಬೇಕಿತ್ತು.

ವಿಶ್ವನಾಥ ಬೈಲಮ್ಮನವರ, ವಿನಾಯಕನಗರ



ಬಜೆಟ್‌ನಲ್ಲಿ ಐದು ಗ್ಯಾರಂಟಿಗಳಿಗೆ ಒಟ್ಟು ₹52 ಸಾವಿರ ಕೋಟಿ ಮೀಸಲಿಡಲಾಗಿದೆ. ಭ್ರಷ್ಟಾಚಾರದ ಮೂಲಕ ಅಧಿಕಾರಿಗಳು ಹಾಗೂ ರಾಜಕಾರಣಿಗಳ ತಿಜೋರಿ ಸೇರುತ್ತಿದ್ದ ಹಣವನ್ನು ಮಧ್ಯಮ ಹಾಗೂ ಬಡ ಜನರ ಅಭಿವೃದ್ಧಿಗೆ ಬಳಕೆಯಾಗಲಿದೆ.

ರವಿರಾಜ್, ಉದ್ಯಮಿ, ಜೆ.ಪಿ. ನಗರ



ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ರೈತ ವಿರೋಧಿ ಎಪಿಎಂಸಿ ತಿದ್ದುಪಡಿ ಕಾಯ್ದೆ ವಾಪಸ್ ಪಡೆದಿರುವುದು, ರೈತರಿಗೆ ಶೂನ್ಯ ಬಡ್ಡಿದರದಲ್ಲಿ ನೀಡುತ್ತಿರುವ ಅಲ್ಪಾವಧಿ ಸಾಲದ ಮಿತಿಯನ್ನು ₹5 ಲಕ್ಷಕ್ಕೆ ಹೆಚ್ಚಿಸಿರುವುದು ಸ್ವಾಗತಾರ್ಹ. ಶಿಕ್ಷಣ, ಆರೋಗ್ಯ ಕ್ಷೇತ್ರಕ್ಕೆ ಒದಗಿಸಲಾದ ಮೊತ್ತವು ಸಮರ್ಪಕವಾಗಿಲ್ಲ.

ರಾಘವೇಂದ್ರ, ವಿಮಾನಪುರ

ನಗರದಲ್ಲಿ ಇಂದು

ಬಿ.ಟಿ.ಎಂ. ವಿಧಾನಸಭಾ ಕ್ಷೇತ್ರದ 22 ಸರ್ಕಾರಿ ಪ್ರಾಥಮಿಕ, ಪ್ರೌಢ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ನೋಟ್ ಬುಕ್, ಸ್ಕೂಲ್ ಬ್ಯಾಗ್ ಮತ್ತು ಸ್ವೆಟರ್ ವಿತರಣೆ: ಅಧ್ಯಕ್ಷತೆ: ರಾಮಲಿಂಗಾರೆಡ್ಡಿ, ಅತಿಥಿಗಳು: ಎಸ್. ಮಧು ಬಂಗಾರಪ್ಪ, ಕೆಪಿಎಸ್ ಶಾಲೆಯ ಆವರಣ, ಆಡುಗೋಡಿ, ಬೆಳಿಗ್ಗೆ 9

ರಾಷ್ಟ್ರೀಯ ಅರ್ಚಕ ಪುರೋಹಿತರ ಕಾರ್ಯಾಗಾರ, ಆಗಮಿಕರ ರಾಷ್ಟ್ರೀಯ ಸಾಧಕರ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಎಂ. ಕೃಷ್ಣಪ್ಪ, ಚಾಲನೆ: ಪ್ರಿಯಕೃಷ್ಣ, ಅಧ್ಯಕ್ಷತೆ: ಬಿ.ಎಸ್. ಪುಟ್ಟರಾಜು, ಅತಿಥಿಗಳು: ಕೆ.ಪಿ. ಮಹದೇವ್ ಶಾಸ್ತ್ರಿ, ಪ್ರದೀಪ್ ಕಂಕಣವಾಡಿ, ಶಿವಾನಂದ ತಗಡೂರು, ಆಯೋಜನೆ: ವೈದಿಕ ಚಾರಿಟಬಲ್ ಟ್ರಸ್ಟ್ (ಮಹಾಲಕ್ಷ್ಮಿ ಗುರುಕುಲ), ಸ್ಥಳ: ಸುಜ್ಞಾನ ಬಸವೇಶ್ವರ ಕಲ್ಯಾಣ ಮಂಟಪ, ವಿಜಯನಗರ, ಬೆಳಿಗ್ಗೆ 10ರಿಂದ

ಪ್ರತಿಭಾ ಪುರಸ್ಕಾರ, ಅರಳು ಮಲ್ಲಿಗೆ ಪಾರ್ಥಸಾರಥಿ ಅವರ 'ಭಾಗವತ' ಪುಸ್ತಕ ಬಿಡುಗಡೆ: ಸಾನ್ನಿಧ್ಯ: ಯತಿರಾಜ ಜೀಯರ್ ಸ್ವಾಮೀಜಿ, ಉದ್ಘಾಟನೆ: ಪಿ. ಕೃಷ್ಣಕಾಂತ್, ಅಧ್ಯಕ್ಷತೆ: ಅರವಿಂದ ಕುಮಾರ್, ಆಯೋಜನೆ: ಕೃಷ್ಣ ಸಮೂಹ ವಿದ್ಯಾಸಂಸ್ಥೆ, ಸ್ಥಳ: ಕೃಷ್ಣ ಕಾಲೇಜು ಸಭಾಂಗಣ, ಬನಶಂಕರಿ 3ನೇ ಹಂತ, ಬೆಳಿಗ್ಗೆ 10

ನಾಡಪ್ರಭು ಕೆಂಪೇಗೌಡ ಜಯಂತಿ, ಸಾಧಕರಿಗೆ ಗೌರವ ಅರ್ಪಣೆ, ಮಹಿಳಾ ಘಟಕದ ಉದ್ಘಾಟನೆ, ಪ್ರತಿಭಾ ಪುರಸ್ಕಾರ ಹಾಗೂ ಯೋಗ ತರಬೇತಿಗೆ ಚಾಲನೆ: **ಸಾನ್ನಿಧ್ಯ:** ಸೌಮ್ಯನಾಥ ಸ್ವಾಮೀಜಿ, ಉದ್ಘಾಟನೆ: ಎಚ್.ಡಿ. ಕುಮಾರಸ್ವಾಮಿ, ಅಧ್ಯಕ್ಷತೆ: ಎಂ. ಕೃಷ್ಣಪ್ಪ, ಅತಿಥಿಗಳು: ಸಿ.ಎಚ್. ಹನುಮಂತರಾಯ, ಎಲ್.ಎನ್.ಮುಕುಂದರಾಜ್, ಸನ್ಮಾನಿತರು: ಪ್ರಿಯಕೃಷ್ಣ, ವೇಮಗಲ್ ನಾರಾಯಣಸ್ವಾಮಿ, ಸಪ್ತಗಿರಿಗೌಡ, ಅನುಶ್ರೀ ಸಿ.ಎಂ., ಆಯೋಜನೆ: ನಾಡಪ್ರಭು ಕೆಂಪೇಗೌಡ ವಿಚಾರ ವೇದಿಕೆ ಟ್ರಸ್ಟ್, ಸ್ಥಳ: ಆದಿಚುಂಚನಗಿರಿ ಸಮುದಾಯ ಭವನ, ವಿಜಯನಗರ, ಬೆಳಿಗ್ಗೆ 10.30

ಘಟಿಕೋತ್ಸವ ಸಮಾರಂಭ: ಅತಿಥಿ: ಕೃಷ್ಣ ಎಸ್. ದೀಕ್ಷಿತ್, ಅಧ್ಯಕ್ಷತೆ: ಕೆ.ಪಿ. ನರಸಿಂಹ ಮೂರ್ತಿ, ಉಪಸ್ಥಿತಿ: ವಿಷ್ಣು ಭರತ್ ಎ.ಎಸ್., ಕೆ. ಮೋಹನ್ ದೇವ್ ಆಳ್ವಾ, ಕೆ.ಎಸ್. ಅಖಿಲೇಶ್ ಬಾಬು, ಎ.ಆರ್. ಆಚಾರ್ಯ, ಆಯೋಜನೆ ಮತ್ತು ಸ್ಥಳ: ಆಚಾರ್ಯ ಪಾಠಶಾಲಾ ವಾಣಿಜ್ಯ ಕಾಲೇಜು, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

'ವ್ಯಾಸಜ್ಯೋತಿ' ಪ್ರಶಸ್ತಿ ಪ್ರದಾನ: ಪ್ರಶಸ್ತಿ ಪುರಸ್ಕೃತರು: ಪ್ರಕಾಶ್ ಭಟ್, ಅತಿಥಿ: ಎಂ. ನರಸಿಂಹನ್, 'ಗುರುಪೂರ್ಣಿಮಾ ಮತ್ತು ಗುರುವಿನ ಮಹತ್ವ'ದ ಕುರಿತು ಉಪನ್ಯಾಸ: ಎಂ.ಸಿ. ಪ್ರಕಾಶ್, ಆಯೋಜನೆ: ಭಾರತೀಯ ವಿದ್ಯಾಭವನ, ಜ್ಯೋತಿ ಚಾರಿಟಬಲ್ ಟ್ರಸ್ಟ್, ಸ್ಥಳ: ಕೆ.ಆರ್.ಜಿ. ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10.30



'ವೀರ ಬರ್ಬರೀಕ' ಯಕ್ಷಗಾನ ಪ್ರದರ್ಶನ: ಅತಿಥಿಗಳು: ಅಶೋಕ್ ಎನ್. ಚಲವಾದಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಕೆ.ಎನ್. ಅಡಿಗ, ಸನ್ಮಾನಿತರು: ಭರತ್ ರಾಜ್ ಪರ್ಕಳ, ಹಿಮ್ಮೇಳದಲ್ಲಿ ಭಾಗವತ: ಸುಬ್ರಾಯ ಹೆಬ್ಬಾರ್, ಮದ್ದಳೆ: ಅಕ್ಷಯ ಆಚಾರ್, ಚಂಡೆ: ಶ್ರೀನಿವಾಸ್ ಪ್ರಭು, ಮುಮ್ಮೇಳ: ದೇವರಾಜ ಕರಬ, ಪೂಜಾ ಆಚಾರ್ಯ, ಅದಿತಿ ಉರಾಳ, ನಿತ್ಯಾ ಗೌಡ, ನಿಶ್ಚಿತ, ನಿರ್ವಹಣೆ: ವಿಶ್ವನಾಥ ಉರಾಳ, ಮುರಳೀಧರ ನಾವಡ, ಆಯೋಜನೆ: ಕಲಾ ಕದಂಬ, ಸ್ಥಳ: ಉದಯಭಾನು ಕಲಾ ಸಂಘ, ಚಾಮರಾಜಪೇಟೆ, ಸಂಜೆ 4

'ನಾಗಮಣಿ ಎಸ್. ರಾವ್' ದತ್ತಿ ಪ್ರಶಸ್ತಿ ಪ್ರದಾನ: ಕಮಲಾ ಹಂಪನಾ, ಪ್ರಶಸ್ತಿ ಪುರಸ್ಕೃತರು: ಆರ್.ಪೂರ್ಣಿಮಾ, ಉಪನ್ಯಾಸ: ರವೀಂದ್ರ ಭಟ್ಟ, ಉಪಸ್ಥಿತಿ: ಎಚ್.ಎಲ್. ಪುಷ್ಪ, ಭಾರತಿ ಹೆಗಡೆ, ಆಯೋಜನೆ: ಕರ್ನಾಟಕ ಲೇಖಕಿಯರ ಸಂಘ, ಸ್ಥಳ: ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 11

ಉಕ್ರೇನ್‌ನಲ್ಲಿ ಯುದ್ಧದ ಪರಿಣಾಮಗಳ ಕುರಿತು ಉಪನ್ಯಾಸ: ಎಂ.ಜೆ. ಅಕ್ಬರ್, ಸ್ಥಳ: ಚಾಣಕ್ಯ ಯೂನಿವರ್ಸಿಟಿ, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 11

ಸಮಾಜಸ್ನೇಹಿ 'ಎಂ.ಎ. ಚೆಲ್ಲಯ್ಯ' ಅವರ 80ನೇ ವರ್ಷದ ಜನ್ಮದಿನಾಚರಣೆ: ಅತಿಥಿ: ಯು.ಟಿ. ಖಾದರ್, ಉಪಸ್ಥಿತಿ: ದಿನೇಶ್ ಗುಂಡೂರಾವ್, ಎನ್.ಎಸ್. ಬೋಸರಾಜು, ಅಧ್ಯಕ್ಷತೆ: ಪಿ.ಜಿ.ಆರ್. ಸಿಂಧ್ಯ, ಆಯೋಜನೆ: ಎಂ.ಎ. ಚೆಲ್ಲಯ್ಯ' ಅವರ 80ನೇ ವರ್ಷದ ಜನ್ಮದಿನಾಚರಣೆ ಸಮಿತಿ, ಸ್ಥಳ: ಗಾಂಧಿಭವನ, ಕುಮಾರ ಪಾರ್ಕ್ ಪೂರ್ವ, ಶಿವಾನಂದ ವೃತ್ತ, ಬೆಳಿಗ್ಗೆ 11.30

'ಎಲ್ಲಿ ಹೋಗುವಿರಿ ನಿಲ್ಲಿ ಮೋಡಗಳೆ': **ಉದ್ಘಾಟನೆ:** ರಾಮಲಿಂಗಾರೆಡ್ಡಿ, ಅತಿಥಿಗಳು: ಎಂ. ಮುನಿರಾಜು, ಸಿರಿಗೆರೆ ತಿಪ್ಪೇಶ್, ಕೆ.ಎನ್. ಗಂಗಾಧರ್, ಆನಂದ್ ಮಾದಲಗೆರೆ, ಹಿರಿಯೂರು ರಾಘವೇಂದ್ರ, ಚಂದ್ರಶೇಖರ ಬಿ., ಗಾಯನ: ದಿವಾಕರ್ ಕಶ್ಯಪ್, ಏಣಗಿ ಪ್ರಭಾಕರ್, ಮಾಂಬಳ್ಳಿ ಲಕ್ಷ್ಮೀಕಾಂತ್, ಗಾಯತ್ರಿ ಕೇಶವ್, ಶಿಲ್ಪೆ ಲೋಕೇಶ್, ಅನನ್ಯ ವದನ, ಕೀ–ಬೋರ್ಡ್: ದುಶ್ಯಂತ್, ರಿದಮ್ ಪ್ಯಾಡ್: ಎನ್. ಗುರುರಾಜ್, ತಬಲಾ: ಗುರುರಾಜ್ ಹೊಳೆನರಸೀಪುರ, ಆಯೋಜನೆ: ಪರಂಪರಾ, ಸ್ಥಳ: ನಯನ ರಂಗಮಂದಿರ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4ರಿಂದ

ಎನ್. ಮನು ಚಕ್ರವರ್ತಿ ಮತ್ತು ಚಂದನ್ ಗೌಡ ಅವರ 'ಯು.ಆರ್. ಅನಂತಮೂರ್ತಿ' ಪುಸ್ತಕದ ಕುರಿತು ಚರ್ಚೆ: ಎನ್.ಎಸ್. ಗುಂಡೂರ್, ಅಂಜುಮ್ ಹಸನ್, ಎಚ್.ಎಸ್. ರಾಘವೇಂದ್ರ ರಾವ್, ನಿತ್ಯಾನಂದ ಬಿ. ಶೆಟ್ಟಿ, ಉಪಸ್ಥಿತಿ: ಎನ್. ಮನು ಚಕ್ರವರ್ತಿ ಮತ್ತು ಚಂದನ್ ಗೌಡ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 6.30ರಿಂದ

ಕೆನರಾ ಬ್ಯಾಂಕ್ ನೌಕರರ ರಾಜ್ಯ ಸಮಾವೇಶ: ಸಿ.ಎಚ್. ವೆಂಕಟಾಚಲಂ, ಅತಿಥಿಗಳು: ಕೆ. ಶ್ರೀಕೃಷ್ಣ, ಡಿ.ಎ. ವಿಜಯ ಭಾಸ್ಕರ್, ಪಿ. ಗೋಪಿಕೃಷ್ಣ, ಕೆ.ಜಿ. ಪಣೀಂದ್ರ, ಅನಿರುಧ ಕುಮಾರ್, ಸಿ.ಎಸ್. ವೇಣುಗೋಪಾಲ್, ಪ್ರಶಾಂತ ಕುಮಾರ್ ಎಂ., ಅಧ್ಯಕ್ಷತೆ: ಆರ್.ಪಿ. ಪ್ರದೀಪ್ ಕುಮಾರ್, ಆಯೋಜನೆ: ಕೆನರಾ ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್, ಸ್ಥಳ: ಚಾಮರಾಜು ಕಲ್ಯಾಣ ಮಂಟಪ, ಜಯನಗರ, ಸಂಜೆ 5

ಸನ್ಮಾನ ಕಾರ್ಯಕ್ರಮ: ಅತಿಥಿಗಳು: ಶಂಕರ ಬಿದರಿ, ವೈಷ್ಣವಿ ಎಸ್.ಡಿ., ಆಯೋಜನೆ ಮತ್ತು ಸ್ಥಳ: ಶಂಕರ ಐಎಎಸ್ ಅಕಾಡೆಮಿ, ಬಸವೇಶ್ವರ ಲೇಔಟ್, ಸಂಜೆ 5

ಸಂಗೀತ ಸಂಧ್ಯಾ: ಗಾಯನ: ಶ್ರೇಯಾ ಗೊಣುಗುಂಟ, ತಬಲಾ: ಸಾಗರ ಭರತ ರಾಜ್, ಹಾರ್ಮೋನಿಯಂ: ಸೂರ್ಯ ಉಪಾಧ್ಯಾಯ, ಆಯೋಜನೆ: ಸಪ್ತಕ, ಸ್ಥಳ: ಬ್ಯಾಂಕ್ವೆಟ್ ಹಾಲ್, ಕ್ಲಬ್ ಹೌಸ್, ಮಂತ್ರಿ ಸೆರೆನಿಟಿ, ದೊಡ್ಡಕಲ್ಲಸಂದ್ರ, ಗೋಕುಲಂ ಅಪಾರ್ಟ್‌ಮೆಂಟ್ಸ್, ಸಂಜೆ 6

ಸಾಹಿತ್ಯ ಸಂಜೆ: 'ಗೋಪಾಲಕೃಷ್ಣ ಅಡಿಗರ ಕಾವ್ಯದ ಅನನ್ಯತೆ': ಎಸ್. ದಿವಾಕರ್, ಆಯೋಜನೆ ಮತ್ತು ಸ್ಥಳ: ಭಾನು ನೆನಪಿನ ಅಂಗಳ, ಸುಚಿತ್ರ, ಬನಶಂಕರಿ 2ನೇ ಹಂತ, ಸಂಜೆ 6.30

'ಪ್ರಬುದ್ಧ ಕರ್ನಾಟಕ ಜನಮನ' ಸಮಾವೇಶ: ಸಾಹಿತಿಗಳು, ವಿದ್ಯಾರ್ಥಿ ಗಳೊಂದಿಗೆ ಸಂವಾದ: ಸಿದ್ದರಾಮಯ್ಯ, ಅಧ್ಯಕ್ಷತೆ: ಜಿ. ರಾಮಕೃಷ್ಣ, ವಿಷಯ ನಿರೂಪಣೆ: ಎಚ್. ಜಯಪ್ರಕಾಶ್ ಶೆಟ್ಟಿ, ಪುರುಷೋತ್ತಮ ಬಿಳಿಮಲೆ, ದು. ಸರಸ್ವತಿ, ಟಿ.ಆರ್. ಚಂದ್ರಶೇಖರ್, ವಿ.ಪಿ. ನಿರಂಜನಾರಾಧ್ಯ, ರಾಜೇಂದ್ರ ಪೋದ್ದಾರ್, ಆಯೋಜನೆ: ಜನಮನ ಪ್ರತಿಷ್ಠಾನ, ಸಮತಾ ಅಧ್ಯಯನ ಕೇಂದ್ರ, ಸ್ಥಳ: ಡಿ. ದೇವರಾಜ ಅರಸು ಭವನ, ವಸಂತನಗರ, ಬೆಳಿಗ್ಗೆ 10.30



ಜಿಕೆವಿಕೆ ಆವರಣದಲ್ಲಿರುವ ತೋಟಗಾರಿಕೆ ವಿಜ್ಞಾನಗಳ ವಿ.ವಿಯಲ್ಲಿ ಆಯೋಜಿಸಿದ್ದ ಮೂರು ದಿನಗಳ ಸಸ್ಯಸಂತೆಯನ್ನು ನಟಿ ಅಕ್ಷತಾ ಪಾಂಡವಪುರ ವೀಕ್ಷಿಸಿದರು

ಸಸ್ಯ ಸಂತೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟೆ, ಬೆಂಗಳೂರು ಪ್ರಾದೇಶಿಕ ತೋಟಗಾರಿಕಾ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಹಾಗೂ ತೋಟಗಾರಿಕಾ ಮಹಾವಿದ್ಯಾಲಯದ ಆಶ್ರಯದಲ್ಲಿ ಆಯೋಜಿಸಿದ್ದ ಪರಿಸರ ದಿನಾಚರಣೆ ಹಾಗೂ ಸಸ್ಯ ಸಂತೆಗೆ ಚಿತ್ರನಟಿ ಅಕ್ಷತಾ ಪಾಂಡವಪುರ ಚಾಲನೆ ನೀಡಿದರು.

ಗ್ರಾಮೀಣ ಪ್ರದೇಶಗಳಲ್ಲಿ ಮಾತ್ರ ವಾರದ ಸಂತೆಗಳು ಕಾಣುತ್ತಿದ್ದವು. ಇಲ್ಲಿ ಸಸ್ಯಸಂತೆ ಆಯೋಜಿಸಿರುವುದು ಉತ್ತಮ ಬೆಳವಣಿಗೆ. ಸ್ಥಳೀಯ ರೈತರು ಹಾಗೂ ನಾಗರಿಕರಿಗೆ ಉಪಯೋಗವಾಗಲಿದೆ ಎಂದು ಅಕ್ಷತಾ ತಿಳಿಸಿದರು.

ವಿಸ್ತರಣಾ ನಿರ್ದೇಶಕ ಎಸ್.ಎಲ್. ಜಗದೀಶ್, ತೋಟಗಾರಿಕಾ ಇಲಾಖೆಯ ನಿವೃತ್ತ ಹೆಚ್ಚುವರಿ ನಿರ್ದೇಶಕ ಎಸ್.ವಿ. ಹಿತ್ತಲಮನಿ ಮಾತನಾಡಿದರು. ಬನ್ನೇರುಘಟ್ಟ ಜೈವಿಕ ಉದ್ಯಾನದ ಮೃಗಾಲಯ ಆಸ್ಪತ್ರೆಯ ಸಹಾಯಕಿ ಸಾವಿತ್ರಮ್ಮ ಅವರನ್ನು ಸನ್ಮಾನಿಸಲಾಯಿತು.

'ಹಣದ ಬದಲು ಆಹಾರ ನೀಡಿ'

ಬೆಂಗಳೂರು: 'ರಾಜ್ಯ ಸರ್ಕಾರವು ಅನ್ನ ಭಾಗ್ಯ ಯೋಜನೆಯಡಿ ಹಣ ನೀಡುವ ಬದಲು, ಸಕ್ಕರೆ, ಉಪ್ಪು ಸೇರಿ ವಿವಿಧ ಆಹಾರ ಪದಾರ್ಥ ನೀಡಬೇಕು' ಎಂದು ಬೆಂಗಳೂರು ನಗರ ಸರ್ಕಾರಿ ಪಡಿತರ ವಿತರಕರ ಹಿತರಕ್ಷಣಾ ಸಂಘ ಆಗ್ರಹಿಸಿದೆ.

ಈಚೆಗೆ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಜೆ.ಬಿ. ಕುಮಾರ್, 'ಅಕ್ಕಿಯ ಬದಲು ಹಣ ನೀಡುವ ನಿರ್ಧಾರವನ್ನು ಸರ್ಕಾರ ಮರುಪರಿಶೀಲಿಸಬೇಕು. ನೇರವಾಗಿ ಹಣ ನೀಡುವುದರಿಂದ ನಕಾರಾತ್ಮಕ ಪರಿಣಾಮಗಳಾಗುತ್ತವೆ. ಈ ಹಿಂದೆ ಕೇಂದ್ರ ಸರ್ಕಾರ ಗ್ಯಾಸ್ ಸಬ್ಸಿಡಿ ಹಣವನ್ನು ನೇರವಾಗಿ ಗ್ರಾಹಕರ ಬ್ಯಾಂಕ್ ಖಾತೆಗೆ ಹಾಕುವುದಾಗಿ ಭರವಸೆ ನೀಡಿ, ಒಂದೆರಡು ತಿಂಗಳಿಗೆ ನಿಲ್ಲಿಸಿತ್ತು. ಹಾಗಾಗಿ, ಈ ರೀತಿ ಕಾರ್ಯಕ್ರಮದಲ್ಲಿ ಜನರಿಗೆ ನಂಬಿಕೆ ಇಲ್ಲ' ಎಂದರು.

2 ದಿನದಲ್ಲಿ ₹ 50.71 ಲಕ್ಷ ದಂಡ ಸಂಗ್ರಹ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ದಂಡ ಪಾವತಿ ಮೇಲೆ ಶೇ 50ರಷ್ಟು ರಿಯಾಯಿತಿ ಘೋಷಿಸಿದ್ದರಿಂದ, ಗುರುವಾರ–ಶುಕ್ರವಾರ ₹ 50.71 ಲಕ್ಷ ದಂಡ ಸಂಗ್ರಹವಾಗಿದೆ. 15,980 ಪ್ರಕರಣ ಇತ್ಯರ್ಥಗೊಂಡಿವೆ.

ರಿಯಾಯಿತಿ ಸೌಲಭ್ಯ ಪಡೆಯಲು ಆನ್‌ಲೈನ್ ಹಾಗೂ ಆಫ್‌ಲೈನ್ ಮೂಲಕ ಜನರು ದಂಡ ಪಾವತಿ ಮಾಡುತ್ತಿದ್ದಾರೆ.

'ಗುರುವಾರ ₹ 28.35 ಲಕ್ಷ, ಶುಕ್ರವಾರ ₹ 22.36 ಲಕ್ಷ ಸಂಗ್ರಹವಾಗಿದೆ. ಸಂಚಾರ ನಿರ್ವಹಣೆ ಕೇಂದ್ರ (ಟಿಎಂಸಿ), ಸಂಚಾರ ಪೊಲೀಸ್ ಠಾಣೆಗಳು, ಕರ್ನಾಟಕ ಒನ್ ಹಾಗೂ ಬೆಂಗಳೂರು ಒನ್ ಕೇಂದ್ರಗಳು ಹಾಗೂ ಆನ್‌ಲೈನ್ ಮೂಲಕ ಜನರು ದಂಡ ಕಟ್ಟುತ್ತಿದ್ದಾರೆ' ಎಂದು ಪೊಲೀಸರು ಹೇಳಿದರು.

'2023ರ ಫೆಬ್ರುವರಿ 11ರೊಳಗಿನ ಪ್ರಕರಣಗಳಿಗೆ ರಿಯಾಯಿತಿ ಸೌಲಭ್ಯವಿದ್ದು, ಸೆಪ್ಟೆಂಬರ್ 9ರೊಳಗಾಗಿ ದಂಡ ಪಾವತಿಸಲು ಗಡುವು ವಿಧಿಸಲಾಗಿದೆ' ಎಂದರು.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿ–2 (ಬಿಎಂಐಸಿಪಿ) ಮತ್ತು ಬೆಂಗಳೂರು ಗ್ರಾಮಾಂತರ, ನಂ. 14/3, ಸಿಎಫ್‌ಸಿ ಕಟ್ಟಡ, ಮಹರ್ಷಿ ಅರವಿಂದ ಭವನ, 1ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು–560 001.

ಸಂಖ್ಯೆ : ಕೆಐಎಡಿಬಿ/ಎಲ್‌ಎಕ್ಯೂ/2340/2023–24 ದಿನಾಂಕ: 26.06.2023

ಸಾರ್ವಜನಿಕ ನೋಟಿಸ್

ಈ ಮೂಲಕ ಸಾರ್ವಜನಿಕರಿಗೆ ಹಾಗೂ ಸಂಬಂಧಪಟ್ಟ ಜಮೀನಿನ ಖಾತೆದಾರರು/ಅನುಭವದಾರರು/ಹಿತಾಸಕ್ತದಾರರಿಗೆ ತಿಳಿಸುವುದೇನೆಂದರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ದೊಡ್ಡಬೆಳವಂಗಲ ಹೋಬಳಿ, ಹುಲಿಕುಂಟೆ, ಜೊಯಿಸಅಗ್ರಹಾರ ಮತ್ತು ತರಬನಹಳ್ಳಿ ಗ್ರಾಮಗಳಲ್ಲಿ ಒಟ್ಟು 498–35 ಎಕರೆ ವಿಸ್ತೀರ್ಣದ ಈ ಕೆಳಗೆ ಸೂಚಿಸಿರುವ ಜಮೀನುಗಳ ಸರ್ವೆ ನಂಬರ್‌ಗಳನ್ನು ಕೈಗಾರಿಕಾ ಪ್ರದೇಶದ ಸ್ಥಾಪನೆಗಾಗಿ ಪ್ರಾರಂಭಿಕ ಅಧಿಸೂಚನೆ ಸಂಖ್ಯೆ: ಸಿಐ 36 ಎಸ್‌ಪಿಕ್ಯೂ (ಇ) 2023 ದಿನಾಂಕ 21.03.2023 ರಾಜ್ಯಪತ್ರ ಪ್ರಕಟಿತ ದಿನಾಂಕ 23.03.2023ರಂತೆ ಕರ್ನಾಟಕ ರಾಜ್ಯಪತ್ರದ ವಿಶೇಷ ಪತ್ರಿಕೆ ಭಾಗ–3 ಪುಟ ಸಂಖ್ಯೆ: 3588 ರಿಂದ 3680 ರಲ್ಲಿ ಪ್ರಚುರ ಪಡಿಸಿರುತ್ತದೆ. ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿನಗಳ ಒಳಗಾಗಿ ಈ ಭೂಸ್ವಾಧೀನ ಪ್ರಕ್ರಿಯೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿ–2 (ಬಿಎಂಐಸಿಪಿ) ಮತ್ತು ಬೆಂಗಳೂರು ಗ್ರಾಮಾಂತರ, ನಂ.14/3, ಸಿ.ಎಫ್.ಸಿ. ಕಟ್ಟಡ, ಮಹರ್ಷಿ ಅರವಿಂದ ಭವನ, 1ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು–560001 ಇವರ ಕಛೇರಿಗೆ ಆಕ್ಷೇಪಣೆಯನ್ನು ಲಿಖಿತ ಮೂಲಕ ಖುದ್ದು ಅಥವಾ ಅಧಿಕಾರ ಪಡೆದವರ ಮುಖೇನ ಸಲ್ಲಿಸಬಹುದಾಗಿರುತ್ತದೆ ಎಂದು ತಿಳಿಯಪಡಿಸಲಾಗಿತ್ತು. ಭೂಸ್ವಾಧೀನಕ್ಕೆ ಒಳಪಟ್ಟ ಜಮೀನುಗಳ ವಿವರ ಕೆಳಕಂಡಂತೆ ಇರುತ್ತದೆ.

ಕ್ರ. ಸಂ	ಖಾತೆದಾರರ /ಅನುಭವದಾರರ ಹೆಸರು	ಸರ್ವೆ ನಂ.	ಭೂಸ್ವಾಧೀನಕ್ಕೊಳಪಟ್ಟ ವಿಸ್ತೀರ್ಣ ಐನು ಎ–ಗು	ಖರಾಬು ಎ–ಗು	ಬಾಕಿ ಎ–ಗು
	ಗ್ರಾಮ:– ಹುಲಿಕುಂಟೆ ಹೋಬಳಿ:– ದೊಡ್ಡಬೆಳವಂಗಲ ತಾಲ್ಲೂಕು:– ದೊಡ್ಡಬಳ್ಳಾಪುರ ಜಿಲ್ಲೆ:– ಬೆಂಗಳೂರು ಗ್ರಾಮಾಂತರ				
1	ಮರದಕಗ್ಗರಯ್ಯ ಬಿನ್ ಗಂಗಯ್ಯ	145/1	7–07	–	7–07
2	ಜಿ.ಮಲ್ಲಿಕಾರ್ಜುನಪ್ಪ ಹಾಲಮ್ಮ ಟ್ರಸ್ಟ್ ಇದರ ಪರವಾಗಿ ಟ್ರಸ್ಟೀ ಜಿ.ಎಂ.ಲಿಂಗರಾಜು ಬಿನ್ ಲೇಟ್ ಜಿ.ಮಲ್ಲಿಕಾರ್ಜುನಪ್ಪ	146/1	3–07	0–25	2–22
3	ಹನುಮಂತಯ್ಯ, ಚಿಕ್ಕಹನುಮಂತಯ್ಯ, ಗಂಗಪ್ಪ, ತೊಪಮ್ಮ, ಹನುಮಯ್ಯ – ಲೇ ಗಂಗಯ್ಯ, ನರಸಿಂಹಯ್ಯ ಬಿನ್ ಲೇ ಗಂಗಯ್ಯ, ಪ್ರಮೀಳ ಬಿನ್ ಲೇಟ್ ಚಿಕ್ಕಹನುಮಂತರಾಯಪ್ಪ, ಹೇಮಲತ ಬಿನ್ ಲೇಟ್ ಚಿಕ್ಕಹನುಮಂತರಾಯಪ್ಪ, ನಾಗರತ್ನ ಬಿನ್ ಲೇಟ್ ಚಿಕ್ಕಹನುಮಂತರಾಯಪ್ಪ	146/2	2–28	0–21	2–07
4	ಜಿ.ಮಲ್ಲಿಕಾರ್ಜುನಪ್ಪ ಹಾಲಮ್ಮ ಟ್ರಸ್ಟ್ ಇದರ ಪರವಾಗಿ ಟ್ರಸ್ಟೀ ಜಿ.ಎಂ.ಲಿಂಗರಾಜು ಬಿನ್ ಲೇಟ್ ಜಿ.ಮಲ್ಲಿಕಾರ್ಜುನಪ್ಪ	146/3	4–15	0–04	4–11
5	ಜಿ.ಮಲ್ಲಿಕಾರ್ಜುನಪ್ಪ ಹಾಲಮ್ಮ ಟ್ರಸ್ಟ್ ಇದರ ಪರವಾಗಿ ಟ್ರಸ್ಟೀ ಜಿ.ಎಂ.ಲಿಂಗರಾಜು ಬಿನ್ ಲೇಟ್ ಜಿ.ಮಲ್ಲಿಕಾರ್ಜುನಪ್ಪ	147/1	1–00.08	0–00.08	1–00
6	ಜಿ.ಮಲ್ಲಿಕಾರ್ಜುನಪ್ಪ ಹಾಲಮ್ಮ ಟ್ರಸ್ಟ್ ಇದರ ಪರವಾಗಿ ಟ್ರಸ್ಟೀ ಜಿ.ಎಂ.ಲಿಂಗರಾಜು ಬಿನ್ ಲೇಟ್ ಜಿ.ಮಲ್ಲಿಕಾರ್ಜುನಪ್ಪ	147/2	1–26.04	0–01	1–25.04
7	ಮರಿಬಸಯ್ಯ ಬಿನ್ ಚನ್ನಬಸಯ್ಯ	147/3	0–06	–	0–06
8	ಜಿ.ಮಲ್ಲಿಕಾರ್ಜುನಪ್ಪ ಹಾಲಮ್ಮ ಟ್ರಸ್ಟ್ ಇದರ ಪರವಾಗಿ ಟ್ರಸ್ಟೀ ಜಿ.ಎಂ.ಲಿಂಗರಾಜು ಬಿನ್ ಲೇಟ್ ಜಿ.ಮಲ್ಲಿಕಾರ್ಜುನಪ್ಪ	147/4	1–25.04	–	1–25.04
9	ಜಿ.ಮಲ್ಲಿಕಾರ್ಜುನಪ್ಪ ಹಾಲಮ್ಮ ಟ್ರಸ್ಟ್ ಇದರ ಪರವಾಗಿ ಟ್ರಸ್ಟೀ ಜಿ.ಎಂ.ಲಿಂಗರಾಜು ಬಿನ್ ಲೇಟ್ ಜಿ.ಮಲ್ಲಿಕಾರ್ಜುನಪ್ಪ	147/5	1–30.08	0–05	1–25.08
10	ಮಂಜುನಾಥ.ಸಿ.ಎಂ ಬಿನ್ ಮಲ್ಲೇಶಯ್ಯ	147/6	0–09	–	0–09
11	ಜಿ.ಮಲ್ಲಿಕಾರ್ಜುಪ್ಪ ಹಾಲಮ್ಮ ಟ್ರಸ್ಟ್ ಬಿನ್	147/7	4–18.08	0–08.08	4–10
12	ಜಿ.ಮಲ್ಲಿಕಾರ್ಜುನಪ್ಪ ಹಾಲಮ್ಮ ಟ್ರಸ್ಟ್ ಇದರ ಪರವಾಗಿ ಟ್ರಸ್ಟೀ ಜಿ.ಎಂ.ಲಿಂಗರಾಜು ಬಿನ್ ಲೇಟ್ ಜಿ.ಮಲ್ಲಿಕಾರ್ಜುನಪ್ಪ	148/1	2–04	0–04	2–00
13	ಜಿ.ಮಲ್ಲಿಕಾರ್ಜುನಪ್ಪ ಹಾಲಮ್ಮ ಟ್ರಸ್ಟ್ ಇದರ ಪರವಾಗಿ ಟ್ರಸ್ಟೀ ಜಿ.ಎಂ.ಲಿಂಗರಾಜು ಬಿನ್ ಲೇಟ್ ಜಿ.ಮಲ್ಲಿಕಾರ್ಜುನಪ್ಪ	148/2	5–08	0–06	5–02
14	ಜಿ.ಮಲ್ಲಿಕಾರ್ಜುನಪ್ಪ ಹಾಲಮ್ಮ ಟ್ರಸ್ಟ್ ಇದರ ಪರವಾಗಿ ಟ್ರಸ್ಟೀ ಜಿ.ಎಂ.ಲಿಂಗರಾಜು ಬಿನ್ ಲೇಟ್ ಜಿ.ಮಲ್ಲಿಕಾರ್ಜುನಪ್ಪ	148/3	5–09	0–07	5–02
15	ಜಿ.ಮಲ್ಲಿಕಾರ್ಜುನಪ್ಪ ಹಾಲಮ್ಮ ಟ್ರಸ್ಟ್ ಇದರ ಪರವಾಗಿ ಟ್ರಸ್ಟೀ ಜಿ.ಎಂ.ಲಿಂಗರಾಜು ಬಿನ್ ಲೇಟ್ ಜಿ.ಮಲ್ಲಿಕಾರ್ಜುನಪ್ಪ	149/1	5–07	–	5–07
16	ಜಿ.ಚಂದ್ರಶೇಖರಯ್ಯ	149/2	0–01	–	0–01
17	ಸೂರ್ಯನಾರಾಯಣರಾವ್, ಕುಮಾರಸ್ವಾಮಿ ಬಿನ್ ಲೇಟ್ ಸಿದ್ದಲಿಂಗಯ್ಯ, ಬಿ.ಆರ್.ಅಶ್ವಥನಾರಾಯಣಪ್ಪ, ರಂಗಶಾಮಯ್ಯ, ಬಿ.ಆರ್.ಅಶ್ವಥನಾರಾಯಣಪ್ಪ, ಯೋಗೇಶ್ವರಮ್ಮ ಬಿನ್ ಲೇಟ್ ಬೀಮಯ್ಯ, ಪರಮೇಶ್ವರಯ್ಯ ಬಿನ್ ಲೇಟ್ ಚಿಕ್ಕರುದ್ರಪ್ಪ, ಶಾಂತಮೂರ್ತಿ ಬಿನ್ ಲೇಟ್ ಚಿಕ್ಕರುದ್ರಪ್ಪ, ಜೆ.ಸಿ.ನೀಲಾಂಭಿಕ ಕೋಂ ಲೇಟ್ ಜಿ.ಗಂಗಾಧರಯ್ಯ, ಜಿ.ಪುಟ್ಟಗಂಗಯ್ಯ ಬಿನ್ ಗಂಗಪ್ಪ, ಮಲ್ಲಿಕ ಕೋಂ ಲೇಟ್ ಚಂದ್ರಶೇಖರಯ್ಯ, ಡಿ.ಎ.ಗೋವಿಂದೇಗೌಡ ಬಿನ್ ಅರಸೇಗೌಡ, ಬಶೆಟ್ಟೆಯ್ಯ ವಗೈರೆ, ಗಂಗಯ್ಯ ಬಿನ್ ವೀರದಾಸಯ್ಯ, ನಾಗರತ್ನಮ್ಮ ಬಿನ್ ಲೇಟ್ ವೆಂಕಟರಮಣಯ್ಯ, ದೊಡ್ಡನರಸಪ್ಪ ಬಿನ್ ಕೆಂಚದಾಸಿ, ದಾಸಪ್ಪ ಬಿನ್ ಮೂಡ್ಲಗಿರಿ, ನರಸ ಬಿನ್ ಶಂಭ, ರಂಗ ಬಿನ್ ಅಜ್ಜ, ಎಂ.ಯಲ್ಲಪ್ಪ ಬಿನ್ ಮಾಲೂರಪ್ಪ, ಎಂ.ಸಿದ್ದಪ್ಪ ಬಿನ್ ಮಾಲೂರಪ್ಪ, ಮಲ್ಲಕ್ಕ ಕೋಂ ಲೇಟ್ ಪಾಪಣ್ಣ, ಎಂ.ಯಲ್ಲಪ್ಪ ಬಿನ್ ಲೇಟ್ ಮಾಲೂರಪ್ಪ, ಎಂ.ಸಿದ್ದಪ್ಪ ಬಿನ್ ಲೇಟ್ ಮಾಲೂರಪ್ಪ, ಲಕ್ಷ್ಮಮ್ಮ ಕೋಂ ಲೇಟ್ ಬೀರಪ್ಪ, ಮಲ್ಲಕ್ಕ ಕೋಂ ಲೇಟ್ ಪಾಪಣ್ಣ, ಎಂ.ಯಲ್ಲಪ್ಪ ಬಿನ್ ಲೇಟ್ ಮಾಲೂರಪ್ಪ, ಲಕ್ಷ್ಮಮ್ಮ ಕೋಂ ಲೇಟ್ ಬೀರಪ್ಪ, ನಾಗಣ್ಣ ಬಿನ್ ಕಾಡಯ್ಯ, ಮಲ್ಲಯ್ಯ ಬಿನ್ ಕಾಡಯ್ಯ, ಹೊಟ್ಟಪ್ಪ ಬಿನ್ ಕಾಡಯ್ಯ, ಕೆ.ಲಿಂಗಯ್ಯ ಬಿನ್ ಕಾಡಯ್ಯ, ದೊಡ್ಡಕ್ಕ ಕೋಂ ಮಾಲೂರಯ್ಯ, ಪಿ.ಮಂಗಳ ಕೋಂ ಸಿ.ಜೆ.ಉಮೇಶ್, ಪಿ.ಮೋಹನಕುಮಾರಿ ಕೋಂ ರವೀಂದ್ರ, ಮಲ್ಲಕ್ಕ ಕೋಂ ಲೇಟ್ ಪಾಪಣ್ಣ, ಹನುಮಂತರಾಯಪ್ಪ ಬಿನ್ ಲೇಟ್ ಪಾಪಣ್ಣ, ಪುಟ್ಟಅಂಜಿನಪ್ಪ ಬಿನ್ ಲೇಟ್ ಪಾಪಣ್ಣ, ಬೈಲಪ್ಪ ಬಿನ್ ಲೇಟ್ ಪಾಪಣ್ಣ, ಗೋಪಾಲಕೃಷ್ಣ ಬಿನ್ ಲೇಟ್ ಪಾಪಣ್ಣ, ಕೃಷ್ಣಪ್ಪ ಬಿನ್ ಲೇಟ್ ಪಾಪಣ್ಣ, ಅಕ್ಕಯ್ಯಮ್ಮ, ಆರ್.ನಂಜಪ್ಪ ಬಿನ್ ಲೇಟ್ ರುದ್ರಪ್ಪ, ಸಿದ್ದಲಿಂಗಪ್ಪ ಬಿನ್ ಲೇಟ್ ರುದ್ರಪ್ಪ, ಚಿಕ್ಕವೀರಪ್ಪ ಬಿನ್ ಲೇಟ್ ರುದ್ರಪ್ಪ, ನಾಗರಾಜು ಬಿನ್ ಲೇಟ್ ರುದ್ರಪ್ಪ, ಬಸವರಾಜು ಬಿನ್ ಲೇಟ್ ರುದ್ರಪ್ಪ, ಗಿರೀಶ್ ಬಿನ್ ಲೇಟ್ ರುದ್ರಪ್ಪ, ಅಕ್ಕಯ್ಯಮ್ಮ, ಚಿಕ್ಕರಾಮಯ್ಯ, ರಾಮಯ್ಯ ಬಿನ್ ಕರಿಯಯ್ಯ, ಯೋಗೀಶ್ವರಮ್ಮ ಬಿನ್ ಲೇಟ್ ಭೀಮಯ್ಯ, ಶ್ರೀ ಬಸವರಾಜ ಸ್ವಾಮೀಜಿಗಳು ಖಾನಿಮಠಾಧಿಪತಿ, ಹೆಚ್.ಸಿ.ನರಸಿಂಹಪತಿ, ಹೆಚ್.ಸಿ.ರಾಮಯ್ಯ ಬಿನ್ ಚಿಕ್ಕಹನುಮಯ್ಯ, ಹನುಮಯ್ಯ ಬಿನ್ ಸಿದ್ದರಾಮಯ್ಯ, ಕ್ಲೇರಪ್ಪ ಬಿನ್ ಪುಟ್ಟಯ್ಯ, ರಂಗಪ್ಪ ಶ್ರೀಧರ್. ಕೆ.ಎ. ಬಿನ್ ಕಾಳೇಗೌಡ, ನರಸಿಂಹಯ್ಯ, ಗಂಗಬೈರಯ್ಯ ಬಿನ್ ಬೈರಣ್ಣ, ಟಿ.ಎಲ್.ಲಕ್ಷ್ಮಣ ಬಿನ್ ಲೇಟ್ ಟಿ.ಎನ್.ಲಕ್ಷ್ಮೀನರಸಿಂಹಯ್ಯ, ಗಂಗಯ್ಯ ಬೈರಯ್ಯ ಬಿನ್ ಬೈರಣ್ಣ, ಆರ್.ಗುರುದೇವ್ ಬಿನ್ ರಾಜಣ್ಣ, ಸರ್ಕಾರ, ಸಿದ್ದಯ್ಯ ಬಿನ್ ಲಿಂಗಣ್ಣ, ಪಂಚರತ್ನಮ್ಮ ಕೋಂ ಬಿ.ಇ.ಪ್ರಕಾಶ್, ಸಿದ್ದಯ್ಯ ಬಿನ್ ಲಿಂಗಣ್ಣ, ಎಸ್.ಮಂಜುನಾಥ್ ಬಿನ್ ಸಿದ್ದಪ್ಪ, ಗಂಗಬೈರಯ್ಯ ಬಿನ್ ಬೈರಣ್ಣ, ಆರ್.ಕಣ್ಣನ್ ನಾಯ್ಡು ಬಿನ್ ರಂಗಬಾಷ್ಯಂ ನಾಯ್ಡು, ನಾಗಣ್ಣ ಬಿನ್ ಕಾಡಯ್ಯ, ಮಲ್ಲಯ್ಯ ಬಿನ್ ಕಾಡಯ್ಯ, ಹೊಟ್ಟಪ್ಪ ಬಿನ್ ಕಾಡಯ್ಯ, ಕೆ.ಲಿಂಗಯ್ಯ ಬಿನ್ ಕಾಡಯ್ಯ, ಮುತ್ತಯ್ಯ ಬಿನ್ ಮುತ್ತಯ್ಯ, ರಾಮಯ್ಯ ಬಿನ್ ಕರಿಯಣ್ಣ, ಪ್ರಭುಕುಮಾರ್ ಬಿನ್ ಲೇಟ್ ವೀರಕ್ಯಾತಯ್ಯ, ಜಿ.ವಿ.ರಾಮಚಂದ್ರಕುಮಾರ್ ಬಿನ್ ಲೇಟ್ ವೀರಕ್ಯಾತಯ್ಯ, ಚನ್ನವೀರಯ್ಯ ಬಿನ್ ಹುಚ್ಚವೀರಯ್ಯ, ದೊಡ್ಡಮುದ್ದಯ್ಯ, ಚಿಕ್ಕಮುದ್ದಯ್ಯ, ವೆಂಕಟರಮಣಯ್ಯ ಬಿನ್ ನರಸಿಂಹಯ್ಯ, ಜಿ.ಹನುಮಂತಯ್ಯ, ರೇವಮ್ಮ ಮಗಳು ಗಂಗಾಧರಯ್ಯ, ನಾಗಯ್ಯ ಬಿನ್ ಲೇಟ್ ಚಿಕ್ಕೀರಪ್ಪ, ದೇವರಾಜು ಬಿನ್ ಲೇಟ್ ಚಿಕ್ಕೀರಪ್ಪ, ಕೃಷ್ಣಮೂರ್ತಿ ಬಿನ್ ಲೇಟ್ ಚಿಕ್ಕೀರಪ್ಪ, ಲಕ್ಷ್ಮಯ್ಯ ಬಿನ್ ವೆಂಕಟನರಸಯ್ಯ, ಲಿಂಗಮ್ಮ ಕೋಂಲೇಟ್ ಕಾಡಯ್ಯ, ಎಸ್.ಸುನೀಲ್ ಕುಮಾರ್ ಬಿನ್ ಬಿ.ಶಿವಾನಂದ, ಬೈರಮ್ಮ, ಈರಮ್ಮ ಕೋಂ ಆಂಜಿನಪ್ಪ, ಮಹಾದೇವಯ್ಯ.ಬಿ, ಡಿ.ಕೆ.ಶ್ರೀಕಂಠಯ್ಯ ಬಿನ್ ಲೇಟ್ ಕಾಳಪ್ಪ, ಡಿ.ಕೆ.ಕರಿಯಪ್ಪ ಬಿನ್ ಲೇಟ್ ಡಿ.ಕಾಳಪ್ಪ, ಬೈರೇಗೌಡ ಬಿನ್ ಲೇಟ್ ಎಂಜಾರಪ್ಪ ಉರುಫ್ ಹೆಂಚಾರಪ್ಪ, ಸಿದ್ದಗಂಗಪ್ಪ ಬಿನ್ ಲೇಟ್ ಎಂಜಾರಪ್ಪ ಉರುಫ್ ಹೆಂಚಾರಪ್ಪ, ಸಿದ್ದರಾಜು ಬಿನ್ ಲೇಟ್ ಎಂಜಾರಪ್ಪ ಉರುಫ್ ಹೆಂಚಾರಪ್ಪ, ಶಂಕರಪ್ಪ ಬಿನ್ ಲೇಟ್ ಎಂಜಾರಪ್ಪ ಉರುಫ್ ಹೆಂಚಾರಪ್ಪ, ತಿಮ್ಮಕ್ಕ ಕೋಂ ಲೇಟ್ ರಂಗಪ್ಪ, ಪಂಚರತ್ನಮ್ಮ ಕೋಂ ಪ್ರಕಾಶ್.ಬಿ.ಇ, ರೇವಮ್ಮ ಬಿನ್ ಬಸವರಾಜಯ್ಯ, ವೀರಭದ್ರಯ್ಯ ಬಿನ್ ಚಿಕ್ಕೀರಯ್ಯ, ಮುದ್ದಹನುಮಯ್ಯ, ಬಸವರಾಜು ಬಿನ್ ರಾಜಣ್ಣ, ರಂಗಪ್ಪ ಬಿನ್ ಪುಟ್ಟಯ್ಯ, ಚಿಕ್ಕರಸಪ್ಪ, ಕಲ್ಲೇರಪ್ಪ, ರಂಗಹನುಮಯ್ಯ, ಪುಟ್ಟಯ್ಯ ಬಿನ್ ಪುಟ್ಟರಂಗಪ್ಪ, ಗೌರಮ್ಮ ಕೋಂ ಲೇಟ್ ಜಯಣ್ಣ.ಡಿ.ಎಸ್, ಮರಾರಮ್ಮ ಕೋಂ ಆಂಜಿನಪ್ಪ, ಚನ್ನಮಾರಯ್ಯ ಬಿನ್ ಲೇಟ್ ನಂಜುಂಡಪ್ಪ, ಬಸವರಾಜಮ್ಮ ಬಿನ್ ಲೇಟ್ ಬೈರಪ್ಪ, ವರಲಕ್ಷ್ಮಿ ಬಿನ್ ಲೇಟ್ ಬೈರಪ್ಪ, ಬೈರಣ್ಣ ಬಿನ್ ಕರಿಯಣ್ಣ, ಆಂಜಿನಪ್ಪ, ಮುನಿಯಪ್ಪ.ಜಿ, ಲೆಂಕಪ್ಪ, ಗಂಗಯ್ಯ, ತಿಮ್ಮಯ್ಯ ಬಿನ್ ವೆಂಕಲೆಂಕಪ್ಪ, ಗಂಗಯ್ಯ, ಗಂಗ ಬಿನ್ ನರಸಬೈರಣ್ಣ, ಬರಗುರಯ್ಯ ಬಿನ್ ಹುಚ್ಚಹನುಮಯ್ಯ, ವೀರಪ್ಪ, ಎಸ್.ವೆಂಕಟೇಶ್ ಬಿನ್ ಲೇಟ್ ಹುಚ್ಚವೆಂಕಟರಮಣಯ್ಯ, ವೆಂಕಟರಂಗಯ್ಯ ಬಿನ್ ಮುನಿಯಪ್ಪ, ಚಿಕ್ಕರಸಯ್ಯ ಬಿನ್ ಲೇಟ್ ವೆಂಕಟರಮಣಯ್ಯ, ಹೆಚ್.ಎಸ್.ವಿಶ್ವನಾಥ್ ಬಿನ್ ಲೇಟ್ ಶಿವರುದ್ರಯ್ಯ, ನರಸಮ್ಮ ಕೋಂ ಲೇಟ್ ಹನುಮನರಸಯ್ಯ, ಹನುಮಂತರಾಯಪ್ಪ ಬಿನ್ ಗಂಗಯ್ಯ, ಗಂಗಲಕ್ಷ್ಮಮ್ಮ ಉ॥ ಗೌರಮ್ಮ ಕೋಂ ಹನುಮಂತರಾಯಪ್ಪ, ಲಕ್ಷ್ಮೀನರಸಯ್ಯ ಬಿನ್ ಲೇಟ್ ಗಂಗನರಸಯ್ಯ, ನಾರಾಯಣಪ್ಪ ಬಿನ್ ಲೇಟ್ ಗಂಗನರಸಯ್ಯ, ಮುತ್ತಹನುಮಕ್ಕ ಕೋಂ ಲೇಟ್ ಗಂಗಾಂಜಿನಪ್ಪ, ಮುನಿಯಮ್ಮ ಕೋಂ ಬಸಪ್ಪ, ನಾಗಯ್ಯ ಬಿನ್ ಮಾಲೂರಯ್ಯ, ನರಸಮ್ಮ ಕೋಂ ಹುಚ್ಚಕದರಯ್ಯ, ಗಂಗಮ್ಮ ಕೋಂ ಲೇಟ್ ನರಸಿಂಹಯ್ಯ, ಆರ್.ವಿಶ್ವನಾಥ್ ಬಿನ್ ರುದ್ರಪ್ಪ, ಮುತ್ತಮ್ಮ ಕೋಂ ಗಂಗಬೈರಪ್ಪ, ಬಿ.ಈಶ್ವರಯ್ಯ ಬಿನ್ ಬಾಳಯ್ಯ, ಚನ್ನಬಸವಣ್ಣ ಬಿನ್ ಲೇಟ್ ಬಾಳಯ್ಯ, ಚೇತನ.ಎಸ್ ಬಿನ್ ಶಂಕರಪ್ಪ, ರಾಕೇಶ್.ಎಸ್ ಬಿನ್ ಶಂಕರಪ್ಪ, ಅಡವೀಶಯ್ಯ ಬಿನ್ ಸಿದ್ದಲಿಂಗಯ್ಯ, ಚಿಕ್ಕರಸಯ್ಯ ಬಿನ್ ವೆಂಕಟರಮಣಯ್ಯ, ಗಂಗನರಸಯ್ಯ ಬಿನ್ ದೊಡ್ಡವೆಂಕಟಯ್ಯ, ಯೋಗೀಶ್ವರಮ್ಮ ಬಿನ್ ಲೇಟ್ ಭೀಮಯ್ಯ, ಎಸ್.ಮಂಜುನಾಥ ಬಿನ್ ಸಿದ್ದಪ್ಪ, ಸರ್ಕಾರಿ ಗೋಮಾಳ, ಹನುಮಂತರಾಯಪ್ಪ ಬಿನ್ ಗಂಗಯ್ಯ, ಗಂಗಾಧರ್ ಬಿನ್ ನರಸಿಂಹಯ್ಯ, ಲಕ್ಷ್ಮಮ್ಮ ಕೋಂ ದೊಡ್ಡವೆಂಕಟರಮಣಯ್ಯ, ಸಿದ್ದಗಂಗಮ್ಮ ಕೋಂ ಹೆಚ್.ಜಿ.ಶಿವಣ್ಣ, ಜಯಮ್ಮ ಕೋಂ ಸಿದ್ದಪ್ಪ, ಮಂಗಳ ಗೌರಮ್ಮ ಕೋಂ ಲೇಟ್ ಜಿ.ವಿ.ಶಿವಣ್ಣ, ಬಿ.ಸಿದ್ದರಾಜು ಬಿನ್ ಬಶೆಟ್ಟಪ್ಪ, ಬೈಲ್ಲಪ್ಪ ಬಿನ್ ಸಿದ್ದೇಗೌಡ, ಕೆಂಪಬೈರಯ್ಯ ಬಿನ್ ಸಿದ್ದೇಗೌಡ, ಮಾರ್ಕೇಂಡಯ್ಯ ಬಿನ್ ಸಿದ್ದಯ್ಯ, ಶಿವಕುಮಾರ್ ಬಿನ್ ಲೇಟ್ ಲಿಂಗಣ್ಣ, ಕೃಷ್ಣಪ್ಪ ಬಿನ್ ಲೇಟ್ ಲಿಂಗಣ್ಣ, ಲೋಕೇಶ್.ಜಿ ಬಿನ್ ಲೇಟ್ ಜಿ.ಗಂಗಪ್ಪ, ಜಗದೀಶ್.ಜಿ ಬಿನ್ ಲೇಟ್ ಜಿ.ಗಂಗಪ್ಪ, ಗುರುಶಂಕರ್.ಜಿ ಬಿನ್ ಲೇಟ್ ಜಿ.ಗಂಗಪ್ಪ, ಲಲಿತ ಕೋಂ ಲೇಟ್ ಚಂದ್ರ, ತಿಮ್ಮರಸಮ್ಮ ಕೋಂ ಲೇಟ್ ಗಂಗಹನುಮಯ್ಯ, ಲಕ್ಷ್ಮೀದೇವಮ್ಮ ಕೋಂ ಲೇಟ್ ನಾಗರಾಜು, ಉಮಾದೇವಿ ಕೋಂ ಲೇಟ್ ಕುಮಾರ್.ಬಿ, ಮುನಿಯ, ಬೈರಮ್ಮ, ಗಂಗಯ್ಯ ಬಿನ್ ಲೇಟ್ ಲೆಂಕಪ್ಪ, ಜಯಮ್ಮ ಕೋಂ ಗಂಗಯ್ಯ, ಜಿ.ಸಂಪತ್ ಕುಮಾರ್ ಬಿನ್ ಗಂಗಯ್ಯ, ಜಿ.ಸುಜಾತ ಬಿನ್ ಗಂಗಯ್ಯ, ಕಲಾವತಿ ಬಿನ್ ಗಂಗಯ್ಯ, ಮಂಜುಳ ಕೋಂ ಲೇಟ್ ಜಿ.ರಾಜಣ್ಣ, ಸಂತೋಷ್ ಆರ್ ಬಿನ್ ಲೇಟ್ ಜಿ.ರಾಜಣ್ಣ, ಲಕ್ಷ್ಮೀ ಆರ್ ಬಿನ್ ಲೇಟ್ ಜಿ.ರಾಜಣ್ಣ, ಈರಮ್ಮ ಬಿನ್ ಆಂಜನಪ್ಪ, ಗಂಗಮ್ಮ ಬಿನ್ ಭೀಮಯ್ಯ, ಬಷೆಟ್ಟಪ್ಪ ಬಿನ್ ನಂಜುಂಡಪ್ಪ, ರುದ್ರಪ್ಪ ಬಿನ್ ತುಕ್ಕಪ್ಪ, ಬಸವರಾಜು ಬಿನ್ ಲೇಟ್ ಸಿದ್ದಪ್ಪ, ಸಿದ್ದಗಂಗಯ್ಯ ಬಿನ್ ಲೇಟ್ ಸಿದ್ದಪ್ಪ, ಚಿಕ್ಕಬಸವಯ್ಯ ಬಿನ್ ಲೇಟ್ ಸಿದ್ದಪ್ಪ, ಕುಮಾರ ಬಿನ್ ಲೇಟ್ ಸಿದ್ದಪ್ಪ, ಸಿದ್ದರಾಜು ಬಿನ್ ಲೇಟ್ ಸಿದ್ದಪ್ಪ, ಮಹಂತಯ್ಯ ಬಿನ್ ಲೇಟ್ ಸಿದ್ದಪ್ಪ, ದೊಡ್ಡಕೆಂಪ ಕಲ್ಕೇರಪ್ಪ ಬಿನ್ ಪುಟ್ಟಯ್ಯ, ನಾಗರಾಜು ಬಿನ್ ಚಿಕ್ಕಮುದ್ದಯ್ಯ, ಹನುಮಂತರಾಯಪ್ಪ ಬಿನ್ ಗಂಗಯ್ಯ, ಗಂಗಾಧರ್ ಬಿನ್ ನರಸಹನುಮಯ್ಯ, ಲಕ್ಕಮ್ಮ ಕೆಂ ದೊಡ್ಡವೆಂಕಟರಮಣಯ್ಯ, ಸಿದ್ದಗಂಗಮ್ಮ ಕೋಂ ಹೆಚ್.ಜಿ.ಶಿವಣ್ಣ, ಜಯಮ್ಮ ಕೋಂ ಸಿದ್ದಪ್ಪ, ಮಂಗಳ ಗೌರಮ್ಮ ಕೋಂ ಲೇಟ್ ಜಿ.ವಿ. ಶಿವಣ್ಣ, ಬಿ. ಸಿದ್ದರಾಜು ಬಿನ್ ಬಶೆಟ್ಟಪ್ಪ, ಬೈಲಪ್ಪ ಬಿನ್ ಸಿದ್ದೇಗೌಡ, ಕೆಂಪಬೈರಯ್ಯ ಬಿನ್ ಸಿದ್ದೇಗೈಡ, ಮಾರ್ಕಂಡಯ್ಯ ಬಿನ್ ಸಿದ್ದೇಗೌಡ, ಶಿವಕುಮಾರ್ ಬಿನ್ ಲೇಟ್ ಲಿಂಗಣ್ಣ, ಕೃಷ್ಣಪ್ಪ ಬಿನ್ ಲೇಟ್ ಲಿಂಗಣ್ಣ	150 ರ ಪೈಕಿ	69–08	69–08	–
18	ಗಂಗಾಂಭಿಕೆ ಕೋಂ ಲೇಟ್ ಹೆಚ್.ಶಿವಗಂಗಯ್ಯ	153/2	2–04	0–04	2–00
19	ಜಿ.ಮಲ್ಲಿಕಾರ್ಜುನಪ್ಪ ಹಾಲಮ್ಮ ಟ್ರಸ್ಟ್ ಇದರ ಪರವಾಗಿ ಟ್ರಸ್ಟೀ ಜಿ.ಎಂ.ಲಿಂಗರಾಜು ಬಿನ್ ಲೇಟ್ ಜಿ.ಮಲ್ಲಿಕಾರ್ಜುನಪ್ಪ	153/3	2–30.08	–	2–30.08
20	ಜಿ.ಮಲ್ಲಿಕಾರ್ಜುನಪ್ಪ ಹಾಲಮ್ಮ ಟ್ರಸ್ಟ್ ಇದರ ಪರವಾಗಿ ಟ್ರಸ್ಟೀ ಜಿ.ಎಂ.ಲಿಂಗರಾಜು ಬಿನ್ ಲೇಟ್ ಜಿ.ಮಲ್ಲಿಕಾರ್ಜುನಪ್ಪ	153/4	2–19	–	2–19
21	ಜಿ.ಮಲ್ಲಿಕಾರ್ಜುನಪ್ಪ ಹಾಲಮ್ಮ ಟ್ರಸ್ಟ್ ಇದರ ಪರವಾಗಿ ಟ್ರಸ್ಟೀ ಜಿ.ಎಂ.ಲಿಂಗರಾಜು ಬಿನ್ ಲೇಟ್ ಜಿ.ಮಲ್ಲಿಕಾರ್ಜುನಪ್ಪ	153/5	2–19	–	2–19
22	ದ್ರಾಕ್ಷಾಯಣಮ್ಮ ಕೋಂ ಲೇ ಸೋಮಶೇಖರಯ್ಯ	153/6	3–28.08	–	3–28.08
23	ಹನುಮಯ್ಯ ಬಿನ್ ರಾಮಕೃಷ್ಣಪ್ಪ	154/1	5–06	–	5–06
24	ರಂಗಯ್ಯ	154/2	5–10	–	5–10
25	ಚಂದ್ರಕಲಾ ಕೋಂ ರೇಣುಕರಾಧ್ಯ	155/1ಎ	4–00.08	0–18	3–22.08
26	ತಿಮ್ಮಕ್ಕ ಕೋಂ ಗಂಗಚನ್ನಯ್ಯ	155/1ಬಿ	1–08	–	1–08
27	ತಿಮ್ಮಕ್ಕ ಕೋಂ ಗಂಗಚನ್ನಯ್ಯ	155/2	0–31	–	0–31
28	ತಿಮ್ಮಕ್ಕ ಕೋಂ ಗಂಗಚನ್ನಯ್ಯ, ಹೆಚ್.ಗೀತಾ ಕೋಂ ಬಿ.ಹೆಚ್.ರಾಜು	155/3	0–30	–	0–30
29	ತಿಮ್ಮಕ್ಕ ಕೋಂ ಗಂಗಚನ್ನಯ್ಯ	155/4	0–14	–	0–14
30	ರೇಣುಕಾರಾಧ್ಯ ಬಿನ್ ಸಿದ್ದಪ್ಪ	155/5	0–18	0–01	0–17
31	ರೇಣುಕಾರಾಧ್ಯ ಬಿನ್ ಸಿದ್ದಪ್ಪ	155/6	0–31	–	0–31
32	ಮೆ ಪಲ್ವಿತ್ ಡೆವಲಪರ್ಸ್ ಎಲ್ ಎಲ್ ಪಿ ಇದರ ಪರವಾಗಿ ಪಾಲುದಾರರು ಭೇರುಮಾಲ ಜೈನ್ ಬಿನ್ ಹಸ್ತಿಮಲ್ ಜೀ	156/1	1–05	–	1–05
33	ಮೆ ಪಲ್ವಿತ್ ಡೆವಲಪರ್ಸ್ ಎಲ್ ಎಲ್ ಪಿ ಇದರ ಪರವಾಗಿ ಪಾಲುದಾರರು ಭೇರುಮಾಲ ಜೈನ್ ಬಿನ್ ಹಸ್ತಿಮಲ್ ಜೀ	156/2	1–05	–	1–05
34	ಮೆ ಪಲ್ವಿತ್ ಡೆವಲಪರ್ಸ್ ಎಲ್ ಎಲ್ ಪಿ ಇದರ ಪರವಾಗಿ ಪಾಲುದಾರರು ಭೇರುಮಾಲ ಜೈನ್ ಬಿನ್ ಹಸ್ತಿಮಲ್ ಜೀ	156/3	2–11	–	2–11
35	ಮೆ ಪಲ್ವಿತ್ ಡೆವಲಪರ್ಸ್ ಎಲ್ ಎಲ್ ಪಿ ಇದರ ಪರವಾಗಿ ಪಾಲುದಾರರು ಭೇರುಮಾಲ ಜೈನ್ ಬಿನ್ ಹಸ್ತಿಮಲ್ ಜೀ	156/4	1–38	–	1–38
36	ಮೆ ಪಲ್ವಿತ್ ಡೆವಲಪರ್ಸ್ ಎಲ್ ಎಲ್ ಪಿ ಇದರ ಪರವಾಗಿ ಪಾಲುದಾರರು ಭೇರುಮಾಲ ಜೈನ್ ಬಿನ್ ಹಸ್ತಿಮಲ್ ಜೀ	156/5	1–10	–	1–10
37	ಎನ್.ಬಸವರಾಜಯ್ಯ ಬಿನ್ ನಂಜುಂಡಯ್ಯ	157	11–04	–	11–04
38	ಶಾಂತಪ್ಪ ಬಿನ್ ಲೇಟ್ ನಂಜುಂಡಪ್ಪ	158/1	1–00	–	1–00
39	ಹೆಚ್.ಎಸ್.ಪರಮಶಿವಯ್ಯ ಬಿನ್ ಸಿದ್ದಲಿಂಗಯ್ಯ	158/2	2–23.08	–	2–23.08
40	ಮೆ ಪಲ್ವಿತ್ ಡೆವಲಪರ್ಸ್ ಎಲ್ ಎಲ್ ಪಿ ಇದರ ಪರವಾಗಿ ಪಾಲುದಾರರು ಭೇರುಮಾಲ ಜೈನ್ ಬಿನ್ ಹಸ್ತಿಮಲ್ ಜೀ	158/3	1–23.08	–	1–23.08
41	ಸುಂಕ ಶ್ರೀನಿವಾಸ್ ಬಿನ್ ಎಸ್.ವಿ.ಶೇಷಾವತಾರಂ	232	2–05	–	2–05
42	ಶ್ರೀ ಸುಂಕ ಶ್ರೀನಿವಾಸ್ ಬಿನ್ ಎಸ್.ವಿ.ಶೇಷವತರಾಂ	233	2–04	–	2–04
43	ಶ್ರೀ ಸುಂಕ ಶ್ರೀನಿವಾಸ್ ಬಿನ್ ಎಸ್.ವಿ.ಶೇಷವತರಾಂ	234	2–02	–	2–02
44	ಎಚ್.ಕೆ.ಪಶುಪತಿ ಬಗ್ಗೈರೆ, ವಿ.ಎನ್.ಕರಿಬಸವಯ್ಯ	235	2–00	–	2–00
45	ಮುನಿಕೃಷ್ಣಪ್ಪ ಬಿನ್ ಲೇಟ್ ನರಸಿಂಹಯ್ಯ, ಮುನಿಆಂಜಿನಪ್ಪ ಬಿನ್ ಲೇಟ್ ನರಸಿಂಹಯ್ಯ	246	2–00	–	2–00
46	ರವಿಕುಮಾರ್.ಕೆ ಬಿನ್ ಲೇಟ್ ಕೆ.ಕೆಂಪಯ್ಯ	247	2–02	0–02	2–00
47	ವೆಂಕಟರಮಣಪ್ಪ ಬಿನ್ ಲೇಟ್ ತಿರುಮಲಯ್ಯ	248	2–06	0–06	2–00
48	ಕೆಂಪಯ್ಯ	249/1	0–37	0–02	0–35
49	ಚನ್ನಪ್ಪ	249/2	0–36	0–02	0–34
50	ರಾಮಯ್ಯ	249/3	0–37	0–02	0–35
51	ವೆಂಕಟರಾಮಯ್ಯ	249/4	0–36	0–02	0–34
52	ಗಂಗಣ್ಣ	249/5	0–37	0–02	0–35
53	ರಾಜಣ್ಣ ಬಿನ್ ಲೇಟ್ ಹನುಮಂತರಾಯಪ್ಪ, ರಾಮಯ್ಯ ಬಿನ್ ಲೇಟ್ ಹನುಮಂತರಾಯಪ್ಪ, ಹೆಚ್.ಶೈಲಜ ಬಿನ್ ಲೇಟ್ ಹನುಮಂತರಾಯಪ್ಪ	249/6	0–35	–	0–35
54	ಮೆ ಪಲ್ವಿತ್ ಡೆವಲಪರ್ಸ್ ಎಲ್ ಎಲ್ ಪಿ ಇದರ ಪರವಾಗಿ ಪಾಲುದಾರರು ಭೇರುಮಾಲ ಜೈನ್ ಬಿನ್ ಹಸ್ತಿಮಲ್ ಜೀ	250/1	3–03.08	0–01.08	3–02
55	ಮೆ ಪಲ್ವಿತ್ ಡೆವಲಪರ್ಸ್ ಎಲ್ ಎಲ್ ಪಿ ಇದರ ಪರವಾಗಿ ಪಾಲುದಾರರು ಭೇರುಮಾಲ ಜೈನ್ ಬಿನ್ ಹಸ್ತಿಮಲ್ ಜೀ	250/2	2–02.08	0–02.08	2–00
56	ಜಿ.ಮಲ್ಲಿಕಾರ್ಜುನಪ್ಪ ಹಾಲಮ್ಮ ಟ್ರಸ್ಟ್ ಇದರ ಪರವಾಗಿ ಟ್ರಸ್ಟೀ ಜಿ.ಎಂ.ಲಿಂಗರಾಜು ಬಿನ್ ಲೇಟ್ ಜಿ.ಮಲ್ಲಿಕಾರ್ಜುನಪ್ಪ	270	5–09	–	5–09
57	ಜಿ.ಮಲ್ಲಿಕಾರ್ಜುನಪ್ಪ ಹಾಲಮ್ಮ ಟ್ರಸ್ಟ್ ಇದರ ಪರವಾಗಿ ಟ್ರಸ್ಟೀ ಜಿ.ಎಂ.ಲಿಂಗರಾಜು ಬಿನ್ ಲೇಟ್ ಜಿ.ಮಲ್ಲಿಕಾರ್ಜುನಪ್ಪ	271	5–07	–	5–07
58	ಮೆ ಪಲ್ವಿತ್ ಡೆವಲಪರ್ಸ್ ಎಲ್ ಎಲ್ ಪಿ ಇದರ ಪರವಾಗಿ ಪಾಲುದಾರರು ಭೇರುಮಾಲ ಜೈನ್ ಬಿನ್ ಹಸ್ತಿಮಲ್ ಜೀ	272/1	2–22	–	2–22
59	ಮೆ ಪಲ್ವಿತ್ ಡೆವಲಪರ್ಸ್ ಎಲ್ ಎಲ್ ಪಿ ಇದರ ಪರವಾಗಿ ಪಾಲುದಾರರು ಭೇರುಮಾಲ ಜೈನ್ ಬಿನ್ ಹಸ್ತಿಮಲ್ ಜೀ	272/2	2–23	–	2–23
60	ಮೆ ಪಲ್ವಿತ್ ಡೆವಲಪರ್ಸ್ ಎಲ್ ಎಲ್ ಪಿ ಇದರ ಪರವಾಗಿ ಪಾಲುದಾರರು ಭೇರುಮಾಲ ಜೈನ್ ಬಿನ್ ಹಸ್ತಿಮಲ್ ಜೀ	273/1	2–25	–	2–25
61	ಮೆ ಪಲ್ವಿತ್ ಡೆವಲಪರ್ಸ್ ಎಲ್ ಎಲ್ ಪಿ ಇದರ ಪರವಾಗಿ ಪಾಲುದಾರರು ಭೇರುಮಾಲ ಜೈನ್ ಬಿನ್ ಹಸ್ತಿಮಲ್ ಜೀ	273/2	2–25	–	2–25
62	ಮೆ ಪಲ್ವಿತ್ ಡೆವಲಪರ್ಸ್ ಎಲ್ ಎಲ್ ಪಿ ಇದರ ಪರವಾಗಿ ಪಾಲುದಾರರು ಭೇರುಮಾಲ ಜೈನ್ ಬಿನ್ ಹಸ್ತಿಮಲ್ ಜೀ	274	5–31	–	5–31
63	ಗಂಗಯ್ಯ ಬಿನ್ ಹೊನ್ನಗಂಗಯ್ಯ	275	5–24	–	5–24
64	ಗಂಗಯ್ಯ ಬಿನ್ ಹೊನ್ನಗಂಗಯ್ಯ	276	5–24	–	5–24
65	ಗಂಗಯ್ಯ ಬಿನ್ ಹೊನ್ನಗಂಗಯ್ಯ	277	5–17	–	5–17
66	ಜಿ.ಶಿವಣ್ಣ ಬಿನ್ ಲೇಟ್ ಗಂಗಾಧರಪ್ಪ	278/1	2–00	0–04	1–36
67	ಜಿ.ಶಿವಣ್ಣ ಬಿನ್ ಲೇಟ್ ಗಂಗಾಧರಪ್ಪ	278/2	1–10	–	1–10
68	ಎನ್.ಆರ್.ಅನಂತರಮೂರ್ತಿ ಬಿನ್ ಲೇಟ್ ಎನ್.ರಾಮನಾಯಕ್	278/3	2–0	0–02	2–00
69	ಜಿ.ಶಿವಣ್ಣ ಬಿನ್ ಗಂಗಾಧರಪ್ಪ	279/1	0–25	–	0–25
70	ಎನ್.ಆರ್.ಅನಂತರಮೂರ್ತಿ ಬಿನ್ ಲೇಟ್ ಎನ್.ರಾಮನಾಯಕ್	279/2	2–01	0–01	2–00
71	ಮೆ ಪಲ್ವಿತ್ ಡೆವಲಪರ್ಸ್ ಎಲ್ ಎಲ್ ಪಿ ಇದರ ಪರವಾಗಿ ಪಾಲುದಾರರು ಭೇರುಮಾಲ ಜೈನ್ ಬಿನ್ ಹಸ್ತಿಮಲ್ ಜೀ	279/3	1–00.08	0–00.08	1–00
72	ಮೆ ಪಲ್ವಿತ್ ಡೆವಲಪರ್ಸ್ ಎಲ್ ಎಲ್ ಪಿ ಇದರ ಪರವಾಗಿ ಪಾಲುದಾರರು ಭೇರುಮಾಲ ಜೈನ್ ಬಿನ್ ಹಸ್ತಿಮಲ್ ಜೀ	279/4	1–18.08	0–00.08	1–18
73	ಮೆ ಪಲ್ವಿತ್ ಡೆವಲಪರ್ಸ್ ಎಲ್ ಎಲ್ ಪಿ ಇದರ ಪರವಾಗಿ ಪಾಲುದಾರರು ಭೇರುಮಾಲ ಜೈನ್ ಬಿನ್ ಹಸ್ತಿಮಲ್ ಜೀ	280/1	0–19	–	0–19
74	ಜಿ.ರಾಜಣ್ಣ ಬಿನ್ ಗಂಗಾಧರಪ್ಪ	280/2	3–36	–	3–36
75	ಮೆ ಪಲ್ವಿತ್ ಡೆವಲಪರ್ಸ್ ಎಲ್ ಎಲ್ ಪಿ ಇದರ ಪರವಾಗಿ ಪಾಲುದಾರರು ಭೇರುಮಾಲ ಜೈನ್ ಬಿನ್ ಹಸ್ತಿಮಲ್ ಜೀ	280/3	0–18.08	–	0–18.08
76	ಮೆ ಪಲ್ವಿತ್ ಡೆವಲಪರ್ಸ್ ಎಲ್ ಎಲ್ ಪಿ ಇದರ ಪರವಾಗಿ ಪಾಲುದಾರರು ಭೇರುಮಾಲ ಜೈನ್ ಬಿನ್ ಹಸ್ತಿಮಲ್ ಜೀ	280/4	0–18.08	–	0–18.08
77	ಮೆ ಪಲ್ವಿತ್ ಡೆವಲಪರ್ಸ್ ಎಲ್ ಎಲ್ ಪಿ ಇದರ ಪರವಾಗಿ ಪಾಲುದಾರರು ಭೇರುಮಾಲ ಜೈನ್ ಬಿನ್ ಹಸ್ತಿಮಲ್ ಜೀ	281/1	2–33	–	2–33
78	ಮೆ ಪಲ್ವಿತ್ ಡೆವಲಪರ್ಸ್ ಎಲ್ ಎಲ್ ಪಿ ಇದರ ಪರವಾಗಿ ಪಾಲುದಾರರು ಭೇರುಮಾಲ ಜೈನ್ ಬಿನ್ ಹಸ್ತಿಮಲ್ ಜೀ	281/2	2–20	–	2–20
79	ರಾಮಯ್ಯ	282/1	0–38	–	0–38
80	ವೆಂಕಟರಾಮಯ್ಯ	282/2	0–37	–	0–37
81	ಮೆ ಪಲ್ವಿತ್ ಡೆವಲಪರ್ಸ್ ಎಲ್ ಎಲ್ ಪಿ ಇದರ ಪರವಾಗಿ ಪಾಲುದಾರರು ಭೇರುಮಾಲ ಜೈನ್ ಬಿನ್ ಹಸ್ತಿಮಲ್ ಜೀ	282/3	0–37	–	0–37
82	ಮೆ ಪಲ್ವಿತ್ ಡೆವಲಪರ್ಸ್ ಎಲ್ ಎಲ್ ಪಿ ಇದರ ಪರವಾಗಿ ಪಾಲುದಾರರು ಭೇರುಮಾಲ ಜೈನ್ ಬಿನ್ ಹಸ್ತಿಮಲ್ ಜೀ	282/4	0–38	–	0–38
83	ಮೆ ಪಲ್ವಿತ್ ಡೆವಲಪರ್ಸ್ ಎಲ್ ಎಲ್ ಪಿ ಇದರ ಪರವಾಗಿ ಪಾಲುದಾರರು ಭೇರುಮಾಲ ಜೈನ್ ಬಿನ್ ಹಸ್ತಿಮಲ್ ಜೀ	282/5	0–38	–	0–38
84	ಕೆಂಪಯ್ಯ	282/6	0–37	–	0–37
85	ಸರ್ಕಾರಿ ಖರಾಬು	283	4–24	4–24	–
86	ಟಿ.ಕೆಂಪಯ್ಯ ಬಿನ್ ಲೇಟ್ ತಿರುಮಳಯ್ಯ	299	2–00	–	2–00
87	ಮೆ ಪಲ್ವಿತ್ ಡೆವಲಪರ್ಸ್ ಎಲ್ ಎಲ್ ಪಿ ಇದರ ಪರವಾಗಿ ಪಾಲುದಾರರು ಭೇರುಮಾಲ ಜೈನ್ ಬಿನ್ ಹಸ್ತಿಮಲ್ ಜೀ	300	2–00	–	2–00
88	ಎ.ಶಂಕರ್ ದೇವ್ ಬಿನ್ ಲೇಟ್ ಆಂಜಿನಪ್ಪ, ಎ.ತೇಜಾವತಿ ಬಿನ್ ಲೇಟ್ ಆಂಜಿನಪ್ಪ	303	2–00	–	2–00
89	ಮೆ ಪಲ್ವಿತ್ ಡೆವಲಪರ್ಸ್ ಎಲ್ ಎಲ್ ಪಿ ಇದರ ಪರವಾಗಿ ಪಾಲುದಾರರು ಭೇರುಮಾಲ ಜೈನ್ ಬಿನ್ ಹಸ್ತಿಮಲ್ ಜೀ	304	2–00	–	2–00
90	ರಂಗಶಾಮಯ್ಯ, ಅಜ್ಜಪ್ಪ	305	1–31	–	1–31
91	ಮೆ ಪಲ್ವಿತ್ ಡೆವಲಪರ್ಸ್ ಎಲ್ ಎಲ್ ಪಿ ಇದರ ಪರವಾಗಿ ಪಾಲುದಾರರು ಭೇರುಮಾಲ ಜೈನ್ ಬಿನ್ ಹಸ್ತಿಮಲ್ ಜೀ	306	5–00	–	5–00
92	ಗಂಗಮ್ಮ ಕೋಂ ಲೇಟ್ ನರಸಹನುಮಯ್ಯ	320	2–00	–	2–00
93	1ನೇ ಪುಟ್ಟನರಸಯ್ಯ, 2ನೇ ನರಸಿಂಹಯ್ಯ, 3ನೇ ಗಂಗನರಸಯ್ಯ, 4ನೇ ಲಕ್ಷ್ಮಮ್ಮ, 5ನೇ ಆಂಜಿನಪ್ಪ	321	2–00	–	2–00
94	ಕೆ.ಸಿ.ಆಂಜನೇಯ ಬಿನ್ ಲೇಟ್ ಚಿಕ್ಕಹನುಮಂತಯ್ಯ	322	2–00	–	2–00
95	ಕೆ.ಸಿ.ಆಂಜನೇಯ ಬಿನ್ ಲೇಟ್ ಚಿಕ್ಕಹನುಮಂತಯ್ಯ	323	2–00	–	2–00
96	ಮೆ ಪಲ್ವಿತ್ ಡೆವಲಪರ್ಸ್ ಎಲ್ ಎಲ್ ಪಿ ಇದರ ಪರವಾಗಿ ಡಿಸಿಗ್ನೇಟೆಡ್ ಪಾರ್ಟನರ್ ಬೇರುಮಾಲ ಜೈನ್ ಬಿನ್ ಹಸ್ತಿಮಲ್ ಜೀ	324	2–00	–	2–00
97	ನರಸಮ್ಮ ಕೋಂ ಲೇಟ್ ಗಂಗಯ್ಯ	325	2–00	–	2–00
98	ಲಕ್ಷ್ಮಮ್ಮ ಬಿನ್ ಲೇಟ್ ನರಸಯ್ಯ, ಸರೋಜಮ್ಮ ಕೋಂ ಲೇಟ್ ಪುಟ್ಟಸ್ವಾಮಯ್ಯ, ಸುನಂದ ಕೋಂ ಲೇಟ್ ತಿಮ್ಮಯ್ಯ, ಭಾಗ್ಯಮ್ಮ ಬಿನ್ ಲೇಟ್ ನರಸಯ್ಯ, ನರಸಲಮ್ಮ ಬಿನ್ ಲೇಟ್ ನರಸಯ್ಯ, ರಂಗಮ್ಮ ಬಿನ್ ಲೇಟ್ ನರಸಯ್ಯ, ನರಸಿಂಹಮೂರ್ತಿ ಬಿನ್ ಲೇಟ್ ನರಸಯ್ಯ	326	2–00	–	2–00
99	ಮೆಹ್ರಾರಾಮ್ ಬಿನ್ ಸವಾಜಿ	327	2–00	–	2–00
		ಒಟ್ಟು	**301–29**	**77–07**	**224–22**

ಗ್ರಾಮ:– ಜೋಯಿಸ ಅಗ್ರಹಾರ ಹೋಬಳಿ:– ದೊಡ್ಡಬೆಳವಂಗಲ ತಾಲ್ಲೂಕು:– ದೊಡ್ಡಬಳ್ಳಾಪುರ ಜಿಲ್ಲೆ:– ಬೆಂಗಳೂರು ಗ್ರಾಮಾಂತರ

ಕ್ರ. ಸಂ	ಖಾತೆದಾರರ /ಅನುಭವದಾರರ ಹೆಸರು	ಸರ್ವೆ ನಂ.	ಭೂಸ್ವಾಧೀನಕ್ಕೊಳಪಟ್ಟ ವಿಸ್ತೀರ್ಣ ಐನು ಎ–ಗು	ಖರಾಬು ಎ–ಗು	ಬಾಕಿ ಎ–ಗು
1	ಜಿ.ರಾಮಸ್ವಾಮಿ ಬಿನ್ ಗುಂಡಪ್ಪ, ಆರ್.ರವಿಕುಮಾರ್ ಬಿನ್ ಜಿ.ರಾಮಸ್ವಾಮಿ, ಆರ್.ಯಶೋಧರಮೂರ್ತಿ ಬಿನ್ ಜಿ.ರಾಮಸ್ವಾಮಿ	2/1	18–00	0–22	17–18
2	ಭದ್ರಕಾಳಮ್ಮ ಬಿನ್ ಈರಯ್ಯ	2/2	2–00	–	2–00
3	ರಾಮಕೃಷ್ಣಯ್ಯ ಬಿನ್ ಚಿಕ್ಕರಾಮಯ್ಯ	2/3	2–00	–	2–00
4	ಲಕ್ಷ್ಮಮ್ಮ ಬಿನ್ ಈರಯ್ಯ	2/4	2–00	–	2–00
5	ಶ್ರೀ ರಾಮಾಂಜಿನಯ್ಯ ಬಿನ್ ಲೇಟ್ ಎಸ್ ರಾಮು	2/5	0–23	–	0–23
6	ಶ್ರೀ ಟಿ ಆರ್ ಲಕ್ಷ್ಮಣ ಬಿನ್ ಲೇಟ್ ಎಸ್ ರಾಮು	2/6	1–00	–	1–00
7	ಶಿವರಾಜು ಟಿ ಆರ್ ಬಿನ್ ರಾಮಾಂಜಿನಯ್ಯ ಟಿ ಆರ್	2/7	0–20	–	0–20
8	ಕಿರಣ್ ಟಿ ಎನ್ ಬಿನ್ ನಾರಾಯಣಸ್ವಾಮಿ, ತೇಜಸ್ ಟಿ ಎನ್ ಬಿನ್ ನಾರಾಯಣಸ್ವಾಮಿ	3/1	2–08	–	2–08
9	ರಂಗನಾಥ್ ಟಿ ಎಸ್ ಬಿನ್ ಶ್ರೀನಿವಾಸಯ್ಯ, ವೇಣು ಟಿ ಎಸ್ ಬಿನ್ ಶ್ರೀನಿವಾಸ	3/2	2–08	–	2–08
10	ಅರುಂಧತಿ ಬಿನ್ ಲೇಟ್ ಟಿ ಎಸ್ ಗಂಗರಾಜು	4/1	1–21	0–01	1–20
11	ರಂಗನಾಥ್ ಟಿ ಎಸ್ ಬಿನ್ ಶ್ರೀನಿವಾಸ, ವೇಣು ಟಿ ಎಸ್ ಬಿನ್ ಶ್ರೀನಿವಾಸ	4/2	1–35	–	1–35
12	ತಾರಾದೇವಿ ಕೋಂ ಲೇ ಗೋವಿಂದರಾಜು	4/3	3–20	–	3–20
13	ನಾಗರತ್ನ ಬಿನ್ ಲೇಟ್ ಸಂಜೀವಯ್ಯ, ಮಮತ ಬಿನ್ ಟಿ.ಎಸ್.ಪದ್ಮ, ಜಿ.ದಿವ್ಯ ರಮೇಶ್ ಕೋಂ ಎಂ.ಜಿ.ರಮೇಶ್, ಎನ್..ಜಿ.ಮೋನಿಕಾ ಶಿವಸ್ವಾಮಿ ಕೋಂ ಶಿವಸ್ವಾಮಿ	4/4	1–00	–	1–00

ಕಾಮಗಾರಿ: ಮೆಟ್ರೊ ರೈಲು ಸೇವೆ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೇರಳೆ ಮಾರ್ಗದಲ್ಲಿ ಬೈಯಪ್ಪನಹಳ್ಳಿ-ಎಸ್‌ವಿ ರಸ್ತೆ ಹಾಗೂ ಕೃಷ್ಣರಾಜಪುರ-ವೈಟ್‌ಫೀಲ್ಡ್ (ಕಾಡುಗೋಡಿ) ನಿಲ್ದಾಣಗಳ ನಡುವೆ ಜುಲೈ 10ರಿಂದ ಆಗಸ್ಟ್ 9ರ ತನಕ ಬೆಳಿಗ್ಗೆ 5ರಿಂದ 7ಗಂಟೆವರೆಗೆ ಮೆಟ್ರೊ ರೈಲುಗಳ ಸೇವೆ ಸ್ಥಗಿತಗೊಳ್ಳಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.



ಬೈಯಪ್ಪನಹಳ್ಳಿ ಮತ್ತು ಕೃಷ್ಣರಾಜಪುರ ಮೆಟ್ರೊ ನಿಲ್ದಾಣಗಳ ನಡುವೆ ಸಂಪರ್ಕ ಕಲ್ಪಿಸಲು ಸಿಗ್ನಲ್ ಹಾಗೂ ಇತರೆ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವ ಕಾರಣ ರೈಲು ಸೇವೆ ಸ್ಥಗಿತಗೊಳಿಸಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ಸ್ವಾಮಿ ವಿವೇಕಾನಂದ ರಸ್ತೆ (ಬೈಯಪ್ಪನಹಳ್ಳಿ ನಿಲ್ದಾಣದ ಮೊದಲು ಒಂದು ನಿಲ್ದಾಣ) ಮತ್ತು ಕೆಂಗೇರಿ ನಿಲ್ದಾಣಗಳ ನಡುವೆ ರೈಲು ಸೇವೆಗಳು ಬೆಳಿಗ್ಗೆ 5ರಿಂದ 7 ಗಂಟೆವರೆಗೆ ಲಭ್ಯವಿರುತ್ತವೆ. ಬೆಳಿಗ್ಗೆ 7ರ ನಂತರ ಬೈಯಪ್ಪನಹಳ್ಳಿ - ಕೆಂಗೇರಿ ಹಾಗೂ ಕೆ.ಆರ್. ಪುರ - ವೈಟ್ ಫೀಲ್ಡ್ ನಿಲ್ದಾಣಗಳ ನಡುವೆ ವಾಣಿಜ್ಯ ರೈಲುಗಳ ಸಂಚಾರವು ಎಂದಿನಂತೆ ರಾತ್ರಿ 11ರ ತನಕ ಇರಲಿದೆ. ಹಸಿರು ಮಾರ್ಗದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಪ್ರಕಟಣೆ ತಿಳಿಸಿದೆ.

ಜೀವಸ್ಪಂದನ: ಪ್ರತಿಭಾ ಪುರಸ್ಕಾರ ನಾಳೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಜೀವ ಸ್ಪಂದನ ಸೇವಾ ಟ್ರಸ್ಟ್‌ನ ಹತ್ತನೇ ವಾರ್ಷಿಕೋತ್ಸವ ಪ್ರಯುಕ್ತ ಬಾಗಲಗುಂಟೆಯ ಶ್ರೀ ಸಾಯಿ ಕಲ್ಯಾಣ ಮಂಟಪದಲ್ಲಿ ಜುಲೈ 9ರ ಭಾನುವಾರ ಬೆಳಿಗ್ಗೆ 10ಕ್ಕೆ ವಿವಿಧ ವಸ್ತುಗಳ ವಿತರಣೆ, ಪ್ರತಿಭಾ ಪುರಸ್ಕಾರ ನಡೆಯಲಿದೆ.

ಸರ್ಕಾರಿ ಶಾಲೆಯ 500 ಮಕ್ಕಳಿಗೆ ಬ್ಯಾಗ್, ನೋಟ್ ಬುಕ್ಸ್, ಪೆನ್ನು ವಿತರಣೆ, ಅಂಧರಿಗೆ ಸ್ಟಿಕ್ ವಿತರಣೆ, ಬಡವರ್ಗದ ಹೆಣ್ಣು ಮಕ್ಕಳಿಗೆ ಸೀರೆ ವಿತರಣೆ, ಜೀವಸ್ಪಂದನ ಸೇವಾ ರತ್ನ ಪ್ರಶಸ್ತಿ ಪ್ರದಾನ, ಪ್ರತಿಭಾ ಪುರಸ್ಕಾರ ನಡೆಯಲಿದೆ.

ಶಾಸಕ ಎಸ್. ಮುನಿರಾಜು, ಸಾಹಿತಿ ವೈ.ಬಿ.ಎಚ್. ಜಯದೇವ್, ಕಿರುತೆರೆ ನಟ-ನಟಿಯರು ಭಾಗವಹಿಸುವರು ಎಂದು ಟ್ರಸ್ಟ್ ಅಧ್ಯಕ್ಷ ಜೀವನ್ ಕಿಶೋರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೇಂದ್ರೀಯ ವಿದ್ಯಾಲಯ, ರಾಷ್ಟ್ರೀಯ ವೈಮಾನಿಕ ಪ್ರಯೋಗ ಶಾಲೆ ಪರಿಸರ, ಬೆಂಗಳೂರು-೫೬೦೦೧೭
Kendriya Vidyalaya, NAL Campus, Bangalore-560017
(An Autonomous Body under Ministry of Education, Govt. of India)
Tel: 080-25211610 Website: https://nal.kvs.ac.in E-mail: kvnal05@gmai.com

ಕೆವಿ ಎನ್‌ಎಎಲ್ ಕ್ಯಾಂಪಸ್, ಬೆಂಗಳೂರು-560017
ಉಲ್ಲೇಖಗಳ ಆಹ್ವಾನ

2023-24ರ ಹಣಕಾಸು ವರ್ಷಕ್ಕೆ ಈ ವಿದ್ಯಾಲಯಕ್ಕೆ ಅಗತ್ಯವಿರುವ ಅಡುಗೆ ಸೇವೆಗಳಿಗಾಗಿ ವಿವಿಧ ಸಂಸ್ಥೆಗಳು / ಏಜೆನ್ಸಿಗಳು / ಕಂಪನಿಗಳಿಂದ ಮೊಹರು ಮಾಡಿದ ಉಲ್ಲೇಖಗಳನ್ನು ಆಹ್ವಾನಿಸಲಾಗಿದೆ. ದಯವಿಟ್ಟು ಕೇಂದ್ರೀಯ ವಿದ್ಯಾಲಯ NAL ವೆಬ್‌ಸೈಟ್ https://nal.kvs.ac.in / ವಿದ್ಯಾಲಯ ಕಛೇರಿಯಿಂದ ವಿನಂತಿ ಸ್ವರೂಪವನ್ನು ಭೇಟಿ ಮಾಡಿ / ಡೌನ್‌ಲೋಡ್ ಮಾಡಿ. 27-07-2023 ರಂದು 02.00 pm. ರೊಳಗೆ 8 ಇತ್ತೀಚಿನ ಉಲ್ಲೇಖಿಸಲಾದ ಐಟಂಗಳಿಗೆ ಉದ್ಧರಣವನ್ನು ಸಲ್ಲಿಸಲು ವಿನಂತಿಸಲಾಗಿದೆ. ಉಲ್ಲೇಖಗಳನ್ನು 28-07-2023 ರಂದು 10 A.M. ಕ್ಕೆ ತೆರೆಯಲಾಗುತ್ತದೆ. ನೋಂದಾಯಿತ / ಸ್ಪೀಡ್ ಪೋಸ್ಟ್ ಮೂಲಕ ಮಾತ್ರ KV NAL ಗೆ ಕೊಟೇಶನ್ ಸಲ್ಲಿಸಬೇಕು. ಸಲ್ಲಿಕೆಯ ಯಾವುದೇ ವಿಧಾನವನ್ನು ಮನರಂಜನೆ ನೀಡಲಾಗುವುದಿಲ್ಲ. **ಸಹಿ/- ಪ್ರಾಂಶುಪಾಲರು**

ವೇಮಗಲ್-ಕುರುಗಲ್ ಪಟ್ಟಣ ಪಂಚಾಯಿತಿ ಕಾರ್ಯಾಲಯ
ಕೋಲಾರ ತಾಲ್ಲೂಕು-563127, Website:www.tpvemagalkurugal@gmail.com
ಸಂಖ್ಯೆ:ವೇ-ಕುಪಪಂ/ತಾಂತ್ರಿಕ/ಡಿಪಿಆರ್/ಸಿಆರ್/1/2023-24
ದಿನಾಂಕ:04.07.2023

ಟೆಂಡರ್ ಪ್ರಕಟಣೆ
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-1 ಮತ್ತು 2 ರ ನಿಬಂಧನೆಗಳಿಗೆ ಒಳಪಟ್ಟು ಇ- ಟೆಂಡರ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ)
DMA/2023-24/SE0220

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000 ರ ಪ್ರಕಾರ ವೇಮಗಲ್-ಕುರುಗಲ್ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿನ ಘನತ್ಯಾಜ್ಯ ವಸ್ತು ನಿರ್ವಹಣೆಯ ವಿಸ್ತೃತ ಯೋಜನಾ ವರದಿ (SWM DPR) ಯನ್ನು ಸ್ವಚ್ಛ ಭಾರತ ಮಿಷನ್ ಯೋಜನೆಯಡಿಯಲ್ಲಿ ಇ-ಪ್ರಕ್ಯೂರ್‌ಮೆಂಟ್ ಮೂಲಕ ಏಕ ಲಕೋಟೆ ಪದ್ಧತಿಯಲ್ಲಿ ವೇಮಗಲ್-ಕುರುಗಲ್ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿನ Solid Waste Management DPR Preparation ಗಾಗಿ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಏಜೆನ್ಸಿದಾರರು/ಕನ್ಸಲ್ಟಂಟ್ಸ್/ಗುತ್ತಿಗೆದಾರರು ರವರಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಇ-ಪ್ರಕ್ಯೂರ್‌ಮೆಂಟ್ ಇಲಾಖಾ ವೆಬ್‌ಸೈಟ್ **https://eproc.karnataka.gov.in** ರಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ. **(1)** ಖಾಲಿ ಟೆಂಡರ್ ಫಾರಂಗಳಿಗೆ ಇ-ಪ್ರಕ್ಯೂರ್‌ಮೆಂಟ್ ಪ್ರಕಾರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್-ಬಿ ಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ: **20.07.2023** ರ ಸಂಜೆ: **05.00** ಗಂಟೆವರೆಗೆ, **(2)** ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **24.07.2023** ಬೆಳಗ್ಗೆ **11.00** ಗಂಟೆಗೆ. **ಸೂಚನೆ:** ಹೆಚ್ಚಿನ ವಿವರಗಳಿಗಾಗಿ ಪಟ್ಟಣ ಪಂಚಾಯಿತಿ ತಾಂತ್ರಿಕ ವಿಭಾಗದಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/- ಮುಖ್ಯಾಧಿಕಾರಿ, ವೇಮಗಲ್-ಕುರುಗಲ್ ಪಟ್ಟಣ ಪಂಚಾಯಿತಿ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:51/ಕೆಎಸ್‌ಎಂ.ಸಿ.ಎ/2023-24

ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ಜಿಲ್ಲೆ ಸಹಾಯಕ ನಿರ್ದೇಶಕರ ಕಛೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಸರ್.ಎಂ.ವಿ ಜಿಲ್ಲಾ ಕ್ರೀಡಾಂಗಣ, ಚಿಕ್ಕಬಳ್ಳಾಪುರ ಜಿಲ್ಲೆ
ದೂರವಾಣಿ:08156270054 EMail:dyescbpur@gmail.com

ಇ-ಟೆಂಡರ್ ಪ್ರಕಟಣೆ (01 ವರ್ಷದ ಅವಧಿಗೆ)

(1) ಟೆಂಡರ್‌ಸಂಖ್ಯೆ/ದಿನಾಂಕ:ಸಂಖ್ಯೆ:ಸನಿ/ಯುಸೇಕ್ರೀ/ಚಿಬ/ಊಟೋಪಹಾರ/**2023-24** ದಿನಾಂಕ: **01.07.2023. (2)** ವಿವರ: **2023-24**ನೇ ಸಾಲಿಗೆ ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆಯ ಕ್ರೀಡಾ ವಸತಿ ಶಾಲೆ/ನಿಲಯದ ಕ್ರೀಡಾಪಟುಗಳಿಗೆ ಒಂದು ವರ್ಷದ ಅವಧಿಗೆ ಊಟೋಪಹಾರವನ್ನು ಸರಬರಾಜು ಮಾಡಲು ಟೆಂಡರ್‌ದಾರರನ್ನು ನೇಮಿಸುವ ಕುರಿತು. **(3)** ಟೆಂಡರ್ ಅಂದಾಜು ಮೊತ್ತ: ಒಂದು ವರ್ಷದ ಅವಧಿಗೆ ರೂ.**32.40** ಲಕ್ಷ, **(4)** ಇ.ಎಂ.ಡಿ ಮೊತ್ತ: ಒಟ್ಟು ಒಂದು ವರ್ಷದ ಅವಧಿಯ ಮೆಸ್ ಬಿಲ್ ಮೊತ್ತದ **5%** ರಷ್ಟು ರೂ. **1,62,000/-, (5)** ಟೆಂಡರ್ ಡಾಕ್ಯೂಮೆಂಟ್ ಪಡೆಯುವ ವಿಧಾನ : ಇ-ಪ್ರಕ್ಯೂರ್ ಮೆಂಟ್ ಪೋರ್ಟಲ್ **http://www.KPPP.karnataka.gov.in** ರ ಮೂಲಕ **(6)** ಆನ್‌ಲೈನ್‌ನಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **21.07.2023** ರ **11.00** ಗಂಟೆಗೆ **(7)** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **24.07.2023** ರ **11.00** ಗಂಟೆಗೆ **(8)** ಆರ್ಥಿಕ ಬಿಡ್ ತೆರೆಯುವ ದಿನಾಂಕ : ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ, ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯಲ್ಲಿ ಸಂಪರ್ಕಿಸಲು ಕೋರಿದೆ.

ಸಹಿ/- ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ

ವಾಸಾಸಂಇ/ಚಿಕ್ಕಬಳ್ಳಾಪುರ/ಕೆಎಸ್‌ಎಂ.ಸಿ.ಎ/ಆರ್.ಓ.ಸಂಖ್ಯೆ:20/2023-24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮುಖ್ಯ ಆಯುಕ್ತರು, ಅನೆಕ್ಸ್ ಕಟ್ಟಡ-1, ನರಸಿಂಹರಾಜ ಚೌಕ, ಬೆಂಗಳೂರು - 560 002

ಸಂಖ್ಯೆ: ಬೃಬೆಂಮಪಾ/ಮು.ಆಯುಕ್ತರು/ಪಿಎಸ್‌ಆರ್(ಜ)/786/2022-23 **ನಮೂನೆ -3** ದಿನಾಂಕ: 04.07.2023

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯಿದೆ 1961ರ ಸೆಕ್ಷನ್ 14-ಬಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತ, ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ನರಸಿಂಹರಾಜ ಚೌಕ, ಬೆಂಗಳೂರು-560002 ಇವರಿಗೆ "ಆಶ್ರಯ ಬಡಾವಣೆ ಮಾರ್ಗವಾಗಿ ಹನುಮಾನ್ ಜಂಕ್ಷನ್‌ನಲ್ಲಿ ಗ್ರಾಫೈಟ್ ಇಂಡಿಯಾ ರಸ್ತೆಯಿಂದ ವಿಶ್ವೇಶ್ವರಯ್ಯ ಮುಖ್ಯರಸ್ತೆಯವರೆಗೆ ರಸ್ತೆಗಾಗಿ ಜಂಕ್ಷನ್ ಸುಧಾರಣೆ ಮಾಡುವ ಕಾಮಗಾರಿಗಾಗಿ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶಗಳು ಅವಶ್ಯಕವಿರುತ್ತದೆ.

ಈ ಕೆಳಗಿನ ಜಮೀನು/ಕಟ್ಟಡದ ಮಾಲೀಕರು ನ್ಯಾಯೋಚಿತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ರೀಸೆಟಲ್‌ಮೆಂಟ್ ಪಾರದರ್ಶಕ ಕಾಯಿದೆ 2013ರಂತೆ ವಿತ್ತೀಯ ಪರಿಹಾರದ ಬದಲಾಗಿ ಅಭಿವೃದ್ಧಿ ಹಕ್ಕುಗಳನ್ನು ಆಯ್ಕೆಯನ್ನು ಹೊಂದಿರುತ್ತಾರೆ. ಅಭಿವೃದ್ಧಿ ಹಕ್ಕುಗಳನ್ನು/ಮೌಲ್ಯವನ್ನು ಪ್ರಾಧಿಕಾರವು ಭೂಮಿಯನ್ನು ನೀಡಿದ/ಒಪ್ಪಿಸಿದ ದುಪ್ಪಟ್ಟು ಮತ್ತು ನೀಡಿದ/ಒಪ್ಪಿಸಿದ ಕಟ್ಟಡ ಪ್ರದೇಶದ ಎರಡರಷ್ಟು ಹಾಗೂ ನೀಡಿದ/ಒಪ್ಪಿಸಿದ ಕಟ್ಟಡದ ಪ್ರದೇಶದ ಅಂದಾಜು ಮೌಲ್ಯವನ್ನು (ಲೋಕೋಪಯೋಗಿ ಇಲಾಖೆ ಮಾನದಂಡಗಳಂತೆ) ಭೂಮಿಯ ಪೈಕಿ ಕಟ್ಟಡ ನಿರ್ಮಿಸಿರುವ ಭಾಗದ ಮಾರುಕಟ್ಟೆ ಮೌಲ್ಯದಂತೆ ವಿಂಗಡಿಸಿ ನೀಡಲಾಗುವುದು.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿಗಳು, ಉಪ ಆಯುಕ್ತರವರ ಕಚೇರಿ, (ಭೂಸ್ವಾಧೀನ ಮತ್ತು ಟಿಡಿಆರ್), ಕೇಂದ್ರ ಕಚೇರಿ, ಬೃ.ಬೆಂ.ಮ.ಪಾಲಿಕೆ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

ಭೂಮಿ/ಕಟ್ಟಡ ಪ್ರದೇಶವನ್ನು ನೀಡಿದ/ಒಪ್ಪಿಸಿದವರು ಹಾಗೂ ಡಿಆರ್‌ಸಿ ನೀಡುವ ಭೂ ಮಾಲೀಕರ ಪಟ್ಟಿ

ಜಿಲ್ಲೆಯ ಹೆಸರು: **ಬೆಂಗಳೂರು ನಗರ** ತಾಲ್ಲೂಕಿನ ಹೆಸರು: **ಬೆಂಗಳೂರು ಪೂರ್ವ** ಗ್ರಾಮದ ಹೆಸರು: **ದೊಡ್ಡನೆಕ್ಕುಂದಿ ಗ್ರಾಮ**

Sy.No/ Khatha No.	Type of Land		Nature of Land			Dimension of the Land/ Plot & Extent in Sq.M		Boundaries of the Land / Plot				Building Details			Present Activity on Land/Building (Specify Specific activity such as Shop, Office, Factory, Apartment, Individual house etc.,	Market (guide -lines) value of the land Per Sq.M (in Rs.)	Name and address of the owner of the plot/Land for Which DRC is to be issued
	Vacant	Built up	Agriculture	Converted undeveloped	Approved Layout / developed Land Building Site	Dimension	Extent	North	South	East	West	Extent in Sq.M	Type of Construction & No.of Floors	Floor Area Ratio			
Sy No: 73, 74, 75 & 77 Khatha No (Old Khatha No:33/10) 11, 12, 13, 14 & 15	Vacant		Commercial Converted "A" Khatha BDA approved Developed Land			765.19 Sqm		Remaining Portion of Sy No: 77	Road	Road	Road	-	-	-	Vacant	73,650/-	M/s Prestige Whitefield Investment having its registered off at the Falcon House No-1, Main Guard, Cross Road, Bengaluru-01, acting through its managing Director, Mr. Irfan Razack Aadhar No. 2182 8527 9634

ಆಕ್ಷೇಪಣೆ ಮತ್ತು ಸಲಹೆಗಳನ್ನು ಈ ಕೆಳಕಂಡಂತೆ ನಿರ್ಧಿಷ್ಟಪಡಿಸಿರುವ ವಿಳಾಸಕ್ಕೆ ಸಲ್ಲಿಸಬಹುದು

ವಿಭಾಗ / ಉಪ-ವಿಭಾಗ / ಶಾಖೆ ಕಚೇರಿಗಳ ಹೆಸರು ಮತ್ತು ವಿಳಾಸ	ವಿಶೇಷ ಭೂಸ್ವಾಧೀನ ಅಧಿಕಾರಿ, 1ನೇ ಮಹಡಿ, ಕೊಠಡಿ ಸಂ.107, ಅನೆಕ್ಸ್ ಕಟ್ಟಡ-3, ನರಸಿಂಹರಾಜ ಚೌಕ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು - 560 002.

ಸಹಿ/-
ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

14	ಕಿರಣ್ ಟಿ ಎನ್ ಬಿನ್ ನಾರಾಯಣಸ್ವಾಮಿ, ತೇಜಸ್ ಟಿ ಎನ್ ಬಿನ್ ನಾರಾಯಣಸ್ವಾಮಿ	4/5	1-35	-	1-35
15	ಮಲ್ಲಿಕಾರ್ಜುನಯ್ಯ ಬಿನ್ ಲೇಟ್ ಬಾಳಯ್ಯ	5/1	3-00	-	3-00
16	ಆರ್.ಮಂಜುಳ ಕೋಂ ಚನ್ನಬಸವ	5/2	2-03	-	2-03
17	ಭವರಿ ಬಾಯಿ ಕೋಂ ಕೆ.ಅಶೋಕ್ ಸಿಂಗ್	5/3	2-00	-	2-00
18	ಶ್ರೀ ಬಸವಣ್ಣ ದೇವರು ಇನಾಂತಿ	5/4	1-37	0-32	1-05
19	ಮಾಗಡಮ್ಮ ಕೋಂ ಲೇ ಚನ್ನಕೇಶವಯ್ಯ, ಮುತ್ತಮ್ಮ ಕೋಂ ಗಂಗಬೈರಪ್ಪ, ಗಂಗಲಕ್ಷ್ಮಮ್ಮ ಕೋಂ ಲೇಟ್ ಡಿ.ಗಂಗಚನ್ನಯ್ಯ, ಹೆಚ್.ಸಿದ್ದರಾಜು ಬಿನ್ ಲೇಟ್ ಹೊನ್ನಪ್ಪ, ಹೆಚ್.ಯಶೋಧಮ್ಮ ಬಿನ್ ಲೇಟ್ ಹೊನ್ನಪ್ಪ, ಬೈರಮ್ಮ ಕೋಂ ಲೇಟ್ ಚನ್ನರಾಯಪ್ಪ	5/5	3-18.04	0-11.04	3-07
20	ಗಂಗಚನ್ನಯ್ಯ ಬಿನ್ ಲೇಟ್ ಚೆನ್ನಿಗಪ್ಪ	5/6	1-01.08	-	1-01.08
21	ಎಂ ಜಿ ಮಹೇಶ್ವರಪ್ಪ	5/7	0-13	-	0-13
22	ರಮೇಶ್ ಜಿ ಬಿನ್ ಚನ್ನಮಲ್ಲಪ್ಪ.ಕೆ.ಜಿ	5/8	0-14	-	0-14
23	ಕೆ ಮಲ್ಲೇಶಪ್ಪ ಬಿನ್ ಕೆ ಬಸಪ್ಪ	5/9	0-13.12	0-00.12	0-13
24	ಕೆಂಪಯ್ಯ ಬಿನ್ ಲೇಟ್ ಆಂಜನಪ್ಪ	5/10	2-07.08	-	2-07.08
25	ಮಾರೇಗೌಡ ಬಿನ್ ಲೇಟ್ ಆಂಜಿನಪ್ಪ	5/11	2-07.08	-	2-07.08
26	ಗಂಗಚನ್ನಯ್ಯ ಬಿನ್ ಲೇಟ್ ಚೆನ್ನಿಗಪ್ಪ	5/12	1-01.08	-	1-01.08
27	ಗಂಗಚನ್ನಯ್ಯ ಬಿನ್ ಚನ್ನಿಗವು	5/13	2-01.08	0-01.08	2-00
28	ಎನ್.ಆರ್.ಅನಂತರಮೂರ್ತಿ ಬಿನ್ ಲೇಟ್ ಎನ್.ರಾಮನಾಯಕ್	5/14	2-04.08	0-02.08	2-02
29	ಸದಾಶಿವಯ್ಯ ಬಿನ್ ಬಾಳಯ್ಯ	6/1	5-16	0-06	5-10
30	ಸಿದ್ದಗಂಗಯ್ಯ ಬಿನ್ ಲೇ ಬಾಳಯ್ಯ	6/2	4-37	0-07	4-30
31	ಲೋಕೇಶ್ ಜಿ ಬಿನ್ ಗಂಗಪ್ಪ ಜಿ	6/3	3-26	0-06	3-20
32	ಜಿ ಶಿವಣ್ಣ ಬಿನ್ ಗಂಗದರಯ್ಯ	6/4	5-06	0-11	4-35
33	ಜಿ ರಾಜಣ್ಣ ಬಿನ್ ಗಂಗಾಧರಯ್ಯ	6/5	5-11	0-15	4-36
34	ಜಗದೀಶ್ ಜಿ ಬಿನ್ ಗಂಗಪ್ಪ ಜಿ	6/6	3-26	0-06	3-20
35	ಗುರುಶಂಕರ್ ಜಿ ಬಿನ್ ಗಂಗಪ್ಪ ಜಿ	6/7	3-05	0-05	3-00
36	ಗಂಗಯ್ಯ ಬಿನ್ ಲೇಟ್ ಹೊನ್ನಗಂಗಯ್ಯ	7/1ಎ	0-30	-	0-30
37	ಜಿ.ರಾಜಣ್ಣ ಬಿನ್ ಗಂಗಾಧರಯ್ಯ	7/1ಬಿ	0-35	-	0-35
38	ಜಿ.ರಾಜಣ್ಣ ಬಿನ್ ಗಂಗಾಧರಯ್ಯ	7/2ಎ	0-29	-	0-29
39	ಗಂಗಯ್ಯ	7/2ಬಿ	0-29	-	0-29
40	ಲಕ್ಷ್ಮೀಕಾಂತ್ ಎನ್.ಆರ್ ಬಿನ್ ರವಿನಂದನ, ಜಗದೀಶ್ ಎನ್.ಆರ್ ಬಿನ್ ರವಿನಂದನ	7/3	2-39	0-06	2-33
41	ನರಸಮ್ಮ ಕೋಂ ಲೇಟ್ ಗೋವಿಂದರಾಜಪ್ಪ, ಜಯಮ್ಮ ಕೋಂ ಲೇಟ್ ಹನುಮಂತಪ್ಪ, ಶಾಂತಮ್ಮ ಕೋಂ ಲೇಟ್ ನಾರಾಯಣಪ್ಪ, ಗೌರಮ್ಮ ಕೋಂ ಲೇಟ್ ನಾಗರಾಜು	7/4	7-25	0-12	7-13
42	ಗಂಗಯ್ಯ ಬಿನ್ ಹೊನ್ನಗಂಗಯ್ಯ	7/5	4-28	-	4-28
43	ಸುರೇಶ್ ಬಿನ್ ಲೇಟ್ ಬಾಳಯ್ಯ	7/6	0-21	-	0-21
44	ಸುರೇಶ ಬಿನ್ ಲೇಟ್ ಬಾಳಯ್ಯ	7/7	0-27	-	0-27
45	ಲಕ್ಷ್ಮಮ್ಮ ಕೋಂ ಲೇಟ್ ಲಕ್ಷ್ಮೀನಾರಾಯಣ, ಪದ್ಮಮ್ಮ ಬಿನ್ ಲೇಟ್ ಕೆಂಪಯ್ಯ, ರಾಧಮ್ಮ ಬಿನ್ ಲೇಟ್ ಕೆಂಪಯ್ಯ, ರಮೇಶ್ ಬಿನ್ ಲೇಟ್ ಕೆಂಪಯ್ಯ, ಕವಿತ ಕೋಂ ಲೇಟ್ ಶ್ರೀನಿವಾಸ, ಮಂಜಮ್ಮ ಬಿನ್ ಲೇಟ್ ಕೆಂಪಯ್ಯ, ಸರಸ್ವತಿ ಬಿನ್ ಲೇಟ್ ಕೆಂಪಯ್ಯ	7/8	2-39	0-06	2-33
46	ಸುರೇಶ್ ಬಿನ್ ಲೇಟ್ ಬಾಳಯ್ಯ	7/9	1-20	-	1-20
47	ಪಾಲಾಕ್ಷಯ್ಯ ಬಿನ್ ಲೇಟ್ ಬಾಳಯ್ಯ	7/10	3-00	-	3-00
48	ಆರ್.ಸುಜಾತ ಕೋಂ ವಿಜಯಕುಮಾರ್	7/11	1-20	-	1-20
49	ಶಿವಣ್ಣ ಜಿ ಬಿನ್ ಗಂಗಾಧರಪ್ಪ	7/12	1-20	-	1-20
50	ಲೋಕೇಶ್ ಜಿ ಬಿನ್ ಗಂಗಪ್ಪ ಜಿ	7/13	0-20	-	0-20
51	ಜಗದೀಶ್ ಜಿ ಬಿನ್ ಗಂಗಪ್ಪ ಜಿ	7/14	0-20	-	0-20
52	ಗುರುಶಂಕರ್ ಜಿ ಬಿನ್ ಗಂಗಪ್ಪ ಜಿ	7/15	0-20	-	0-20
53	ಶ್ರೀಮತಿ ಸವಿ ಬಿ.ಎಂ ಬಿನ್ ಮಲ್ಲಯ್ಯ	8/1	0-09	0-01	0-08
54	ಬಿ.ಎಂ.ಸವಿತ ಕೋಂ ಎಸ್.ವಿ.ಗಿರೀಶ್	8/2	2-33	0-15	2-18
55	ಗಂಗಯ್ಯ ಬಿನ್ ಹೊನ್ನಗಂಗಯ್ಯ	8/3	1-39	0-04	1-35
56	ಗಂಗಪ್ಪ ಬಿನ್ ಹೊನ್ನಗಂಗಪ್ಪ	8/4	3-31	0-10	3-21
57	ಗಂಗಪ್ಪ ಬಿನ್ ಹೊನ್ನಗಂಗಪ್ಪ	8/5	2-33	0-04	2-29
58	ಮಹಾದೇವಸ್ವಾಮಿ ಬಿನ್ ಲಕ್ಷ್ಮಯ್ಯ	8/6	0-24.12	-	0-24.12
59	ಗುರುಲಿಂಗಮ್ಮ ಕೋಂ ಲೇಟ್ ನಾರಾಯಣಪ್ಪ	8/7	1-15	-	1-15
60	ಗಂಗಪ್ಪ ಬಿನ್ ಹೊನ್ನಗಂಗಪ್ಪ	8/8	0-14	-	0-14
61	ಭೀಮಯ್ಯ ಬಿನ್ ನಾರಾಯಣಪ್ಪ	8/9	0-35	-	0-35
62	ಲಕ್ಷ್ಮೀನಾರಾಯಣ ಬಿನ್ ಲೇಟ್ ಲಕ್ಷ್ಮಯ್ಯ	8/10	0-08.04	-	0-08.04
63	ಗುರುಲಿಂಗಮ್ಮ ಕೋಂ ಲೇಟ್ ನಾರಾಯಣಪ್ಪ	8/11	0-21	-	0-21
64	ಶ್ರೀ.ಆಂಜನೇಯಸ್ವಾಮಿ ದೇವರು	8/12	2-25	0-05	2-20
65	ರಾಮಕೃಷ್ಣಯ್ಯ ಬಿನ್ ಲೇಟ್ ವೆಂಕಟಪ್ಪ, ನಾರಾಯಣಪ್ಪ ಬಿನ್ ಲೇಟ್ ವೆಂಕಟಪ್ಪ, ವೆಂಕಹನುಮಯ್ಯ ಬಿನ್ ಲೇಟ್ ವೆಂಕಟಪ್ಪ, ವೆಂಕಟೇಶ್ ಬಿನ್ ಲೇಟ್ ವೆಂಕಟಪ್ಪ	8/13	1-28	-	1-28
66	ಚಂದ್ರಶೇಖರ್ ಎನ್ ಬಿನ್ ನಂಜಪ್ಪ	8/14	1-15	-	1-15
67	ಟಿ.ಎಂ.ಪದ್ಮಾವತಿ ಬಿನ್ ಲೇಟ್ ಮೂಡ್ಲಗಿರಿಯಪ್ಪ	8/15	0-30	-	0-30
68	ಬಿ.ಎಂ.ಸವಿತಾ ಕೋಂ ಎಸ್.ವಿ.ಗಿರೀಶ್	8/16	1-09.08	-	1-09.08
69	ಸಿದ್ದಗಂಗಮ್ಮ ಬಿನ್ ಲೇ ಬಸವರಾಜು	8/17	0-28	0-02.08	0-25.08
70	ಸಂಜೀವಯ್ಯ ಬಿನ್ ರಂಗಪ್ಪ	8/18	0-24.12	-	0-24.12
71	ಲಕ್ಷ್ಮೀನಾರಾಯಣ ಬಿನ್ ಲಕ್ಷ್ಮಯ್ಯ	8/19	0-26.12	0-02	0-24.12
72	ಜಯರಾಮು ಬಿನ್ ರಂಗಪ್ಪ	8/20	0-26.12	0-02	0-24.12
73	ಸಂಜೀವಯ್ಯ ಬಿನ್ ರಂಗಪ್ಪ	8/21	0-08.04	-	0-08.04
74	ಲಕ್ಷ್ಮೀನಾರಾಯಣ ಬಿನ್ ಲಕ್ಷ್ಮಯ್ಯ	8/22	0-08.04	-	0-08.04
75	ಜಯರಾಮು ಬಿನ್ ರಂಗಪ್ಪ	8/23	0-08.04	-	0-08.04
76	ಬಿ.ಎಂ.ಸವಿತ ಬಿನ್ ಮಲ್ಲಯ್ಯ	8/24	0-26.08	0-02.08	0-24
		ಒಟ್ಟು	**154-10**	**4-38.04**	**149-11.12**

ಗ್ರಾಮ:- ತರಬನಹಳ್ಳಿ ಹೋಬಳಿ:- ದೊಡ್ಡಬೆಳವಂಗಲ ತಾಲ್ಲೂಕು:- ದೊಡ್ಡಬಳ್ಳಾಪುರ ಜಿಲ್ಲೆ:- ಬೆಂಗಳೂರು ಗ್ರಾಮಾಂತರ

ಕ್ರ. ಸಂ	ಖಾತೆದಾರರ /ಅನುಭವದಾರರ ಹೆಸರು	ಸರ್ವೆ ನಂ.	ಭೂಸ್ವಾಧೀನಕ್ಕೊಳಪಟ್ಟ ವಿಸ್ತೀರ್ಣ		
			ಐನು ಎ-ಗು	ಖರಾಬು ಎ-ಗು	ಬಾಕಿ ಎ-ಗು
1	ಶಿವಣ್ಣ ಬಿನ್ ಲೇಟ್ ಭದ್ರಯ್ಯ	30/1	0-34	-	0-34
2	ಚಿಕ್ಕಎಲ್ಲಯ್ಯ ಬಿನ್ ದೊಡ್ಡಮುನಿಯಪ್ಪ	30/2	2-10	-	2-10
3	ಎ.ಅಭಿನವ್ ರಮಾನಂದ್ ಬಿನ್ ಎ.ರಾಮಸ್ವಾಮಿ	30/3	2-17	-	2-17
4	ಎ.ಅಭಿನವ್ ರಮಾನಂದ್ ಬಿನ್ ಎ.ರಾಮಸ್ವಾಮಿ	30/4	2-02	-	2-02
5	ಹನುಮಂತರಾಜು.ಜಿ ಬಿನ್ ಗೋವಿಂದಪ್ಪ	31	3-39	-	3-39
6	ತಾಲ್ಲಸಾಯಿ ಚೈತನ್ಯ ಬಿನ್ ತಾಲ್ಲವೆಂಕಟರವಿ	32/1	1-00	-	1-00
7	ರಾಜಣ್ಣ.ಜಿ ಬಿನ್ ಗಂಗಚನ್ನಯ್ಯ	32/2	0-10	-	0-10
8	ಸೃಷ್ಟಿಗೌಡ.ಹೆಚ್ ಕೋಂ ಶ್ರೀಕಾಂತ್	32/3	3-22	-	3-22
9	ಸೃಷ್ಟಿಗೌಡ.ಹೆಚ್ ಕೋಂ ಶ್ರೀಕಾಂತ್	32/4	1-07	-	1-07
10	ತಾಲ್ಲಸಾಯಿ ಚೈತನ್ಯ ಬಿನ್ ತಾಲ್ಲವೆಂಕಟರವಿ	32/5	1-00	-	1-00
11	ತಾಲ್ಲಸಾಯಿ ಚೈತನ್ಯ ಬಿನ್ ತಾಲ್ಲವೆಂಕಟರವಿ	32/6	1-00	-	1-00
12	ಜಯಲಕ್ಷ್ಮೀ ಕೆ ಕೋಂ ಲೇಟ್ ಬೈಲಪ್ಪ	32/7	0-19	-	0-19
13	ಕೆಂಪಮ್ಮ ಕೋಂ ಲೇಟ್ ಗಂಗಚನ್ನಯ್ಯ	32/8	1-00	-	1-00
14	ವರಲಕ್ಷ್ಮಮ್ಮ ಕೋಂ ಲೇಟ್ ಬ ಸವರಾಜು	33/1	1-30	-	1-30
15	ಕೆ.ಮಲ್ಲೇಶಪ್ಪ ಬಿನ್ ಕೆ.ಬಸಪ್ಪ	33/2	1-30		1-30
16	ಶಾರದಮ್ಮ ಕೋಂ ಲೇಟ್ ಎನ್.ಚನ್ನಬಸಪ್ಪ	33/3	2-04	-	2-04
17	ಎಮ್.ಜಿ.ಉಮಾ ಕೋಂ ಲೇಟ್ ಎಂ.ಜಿ.ಮಹೇಶ್ವರಪ್ಪ	33/4	1-30	-	1-30
18	ಎ.ಅಭಿನವ್ ರಾಮಾನಂದ್ ಬಿನ್ ರಾಮಸ್ವಾಮಿ	34/1	3-23	-	3-23
19	ಶಿವಣ್ಣ ಬಿನ್ ಲೇಟ್ ಭದ್ರಯ್ಯ	34/2	1-03	0-02	1-01
20	ಸರಕಾರಿ ಬೀಳು, ಸಿದ್ದಮ್ಮ ಕೋಂ ಲೇಟ್ ಭದ್ರಯ್ಯ	35	2-09	-	2-09
21	ಈರಯ್ಯ ಬಿನ್ ನರಸಪ್ಪ	36	1-19	-	1-19
22	ನಾರಾಯಣಸ್ವಾಮಿ ಬಿನ್ ಲೇಟ್ ರಂಗಸ್ವಾಮಯ್ಯ, ಶ್ರೀನಿವಾಸ ಬಿನ್ ಲೇಟ್ ರಂಗಸ್ವಾಮಯ್ಯ	37/1	0-32	-	0-32
23	ನಾರಾಯಣಸ್ವಾಮಿ ಬಿನ್ ಲೇಟ್ ರಂಗಸ್ವಾಮಯ್ಯ, ಶ್ರೀನಿವಾಸ ಬಿನ್ ಲೇಟ್ ರಂಗಸ್ವಾಮಯ್ಯ	37/2	0-30	-	0-30
24	ರಾಮಕೃಷ್ಣಯ್ಯ ಬಿನ್ ಚಿಕ್ಕರಾಮಯ್ಯ, ಲಕ್ಷ್ಮಮ್ಮ ಬಿನ್ ಈರಯ್ಯ	45	1-31	-	1-31
25	ಲಕ್ಷ್ಮಮ್ಮ ಬಿನ್ ಈರಯ್ಯ	46/1	0-09	-	0-09
26	ರಾಮಕೃಷ್ಣಯ್ಯ ಬಿನ್ ಚಿಕ್ಕರಾಮಯ್ಯ, ಲತಾ.ಎ ಕೋಂ ರಾಮಕೃಷ್ಣಯ್ಯ	46/2	0-31	-	0-31
27	ನರಸಮ್ಮ ಕೋಂ ಲೇಟ್ ಗೋವಿಂದರಾಜು, ಜಯಮ್ಮ ಕೋಂ ಲೇಟ್ ಹನುಮಂತಪ್ಪ, ಶಾಂತಮ್ಮ ಕೋಂ ಲೇಟ್ ನಾರಾಯಣಪ್ಪ, ಗೌರಮ್ಮ ಕೋಂ ಲೇಟ್ ನಾಗರಾಜು	46/3	0-33	-	0-33
28	ರಾಮನರಸಯ್ಯ ಬಿನ್ ಲೇಟ್ ಎಸ್.ರಾಮು	46/4	0-35	-	0-35
29	ಟಿ.ಆರ್.ಸೀತಾರಾಮಯ್ಯ ಬಿನ್ ಲೇಟ್ ಎಸ್.ರಾಮು, ಟಿ.ಆರ್.ಮಂಜುನಾಥ ಬಿನ್ ಲೇಟ್ ಎಸ್.ರಾಮು	46/6	0-02	-	0-02
30	ಸೀತಾರಾಮಯ್ಯ ಆರ್ ಬಿನ್ ಲೇಟ್ ಎಸ್ ರಾಮು	46/7	0-02.08	-	0-2.08
31	ಟಿ ಆರ್ ಮಂಜುನಾಥ ಬಿನ್ ಲೇಟ್ ಎಸ್ ರಾಮು	46/8	0-02.08	-	0-02.08
		ಒಟ್ಟು	**42-36**	**0-02**	**42-34**

ಘೋಷ್ವಾರೆ

ಕ್ರ. ಸಂ.	ಗ್ರಾಮದ ಹೆಸರು	ವಿಸ್ತೀರ್ಣ		
		ಐನು ಎ-ಗು	ಖರಾಬು ಎ-ಗು	ಬಾಕಿ ಎ-ಗು
1	ಹುಲಿಕುಂಟೆ	**301-29**	**77-07**	**224-22**
2	ಜೊಯಿಸಅಗ್ರಹಾರ	**154-10**	**4-38.04**	**149-11.12**
3	ತರಬನಹಳ್ಳಿ	**42-36**	**0-02**	**42-34**
	ಒಟ್ಟು	**498-35**	**82-07.04**	**416-27.12**

ಈ ಮೇಲ್ಕಂಡ ಜಮೀನಿನ ಖಾತೆದಾರರು/ಅನುಭದಾರರು/ಹಿತಾಸಕ್ತರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕರ್ನಾಟಕ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ವಿಧಿ 28(2)ರ ಮೇರೆಗೆ ಅಧಿಸೂಚಿತ ಖಾತೆದಾರರಿಗೆ/ಅನುಭವದಾರರಿಗೆ ತಿಳುವಳಿಕೆ ನೋಟೀಸುಗಳನ್ನು ಹೊರಡಿಸಿ ಜಾರಿ ಮಾಡಲಾಗಿದೆ ಹಾಗೂ ನೋಂದಾಯಿತಿ ಅಂಚೆ ಮೂಲಕ ರವಾನಿಸಲಾಗಿತ್ತು. ಕೆಲವು ಭೂಮಾಲೀಕರ ವಿಳಾಸ ತಿಳಿದು ಬಂದಿಲ್ಲವಾದ್ದರಿಂದ ಅಂಚೆ ಲಕೋಟೆಗಳ ಮೇಲೆ ಅಂಚೆ ಇಲಾಖೆಯವರು ಷರಾ ಬರೆದು ಈ ಕಛೇರಿಗೆ ಹಿಂದಿರುಗಿಸಿರುತ್ತಾರೆ. ಮೇಲ್ಕಂಡ ಜಮೀನಿನ ಖಾತೆದಾರರು/ಹಕ್ಕದಾರರುಗಳು ಈ ಪ್ರಕಟಣೆಯನ್ನು ಕೆ.ಐ.ಎ.ಡಿ. ಕಾಯ್ದೆ 1966ರ ವಿಧಿ 28(2) ರ ಮೇರೆಗೆ ತಿಳುವಳಿಕೆ ನೋಟೀಸು ಎಂದು ಪರಿಗಣಿಸತಕ್ಕದ್ದು.

ಪ್ರಸ್ತುತ ಭೂಸ್ವಾಧೀನ ಪ್ರಕ್ರಿಯೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಭೂಮಾಲೀಕರು/ಹಿತಾಸಕ್ತಿ ಉಳ್ಳವರು ತಮ್ಮ ಆಕ್ಷೇಪಣೆಗಳನ್ನು ರಾಜ್ಯಪತ್ರದಲ್ಲಿ ಈ ಪ್ರಕಟಣೆಗೊಂಡ 30 ದಿನಗಳೊಳಗಾಗಿ ಅಗತ್ಯ ದಾಖಲೆಗಳೊಂದಿಗೆ ಖುದ್ದಾಗಿ ಅಥವಾ ಅವರ ಪರವಾಗಿ ಅಧಿಕಾರ ಪಡೆದವರು ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ. ಅವಧಿ ಮೀರಿ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂಬುದಾಗಿ ಈ ಮೂಲಕ ಸಾರ್ವಜನಿಕ ಗಮನಕ್ಕೆ ತರಲಾಗಿದೆ. ಮೇಲ್ಕಂಡ ಗ್ರಾಮಗಳ ವಿಚಾರಣೆಯನ್ನು ಕೆಳಕಂಡ ದಿನಾಂಕ ಮತ್ತು ಸಮಯಕ್ಕೆ ನಿಗದಿಪಡಿಸಲಾಗಿದೆ.

ಕ್ರ. ಸಂ.	ಗ್ರಾಮದ ಹೆಸರು	ವಿಚಾರಣಾ ದಿನಾಂಕ ಮತ್ತು ಸಮಯ
1	ಹುಲಿಕುಂಟೆ	ದಿನಾಂಕ **10.07.2023** ಬೆಳಿಗ್ಗೆ **11.00** ಗಂಟೆ
2	ಜೊಯಿಸಅಗ್ರಹಾರ	ದಿನಾಂಕ **11.07.2023** ಬೆಳಿಗ್ಗೆ **11.00** ಗಂಟೆ
3	ತರಬನಹಳ್ಳಿ	ದಿನಾಂಕ **12.07.2023** ಬೆಳಿಗ್ಗೆ **11.00** ಗಂಟೆ

ಮೇಲ್ಕಂಡ ದಿನಾಂಕಗಳಂದು ದಾಖಲಾತಿಗಳೊಂದಿಗೆ ಲಿಖಿತವಾಗಿ ಅಥವಾ ಖುದ್ದಾಗಿ ಹಾಜರಾಗಿ ಸಲ್ಲಿಸಲು ಸೂಚಿಸಿದೆ.


ವಾಸಾಸಂಇ/ಉನಿ-ಸಿ.ಪಿ/470/ಕೆಎಸ್‌ಎಂಸಿಎ/2023-24

ಸಹಿ/- ವಿಶೇಷ ಭೂಸ್ವಾಧೀನಾಧಿಕಾರಿ-2, ಕೆಐಎಡಿಬಿ (ಬಿಎಂಐಸಿಪಿ) ಮತ್ತು ಬೆಂಗಳೂರು ಗ್ರಾಮಾಂತರ



ನಗರದ ಧರ್ಮರಾಯ ಸ್ವಾಮಿ ದೇವಸ್ಥಾನದ ಮುಖ್ಯ ರಸ್ತೆಯಲ್ಲಿ ಮಳೆಯಲ್ಲಿ ಜನರು ಸಾಗುತ್ತಿರುವ ದೃಶ್ಯ ಶುಕ್ರವಾರ ಕಂಡು ಬಂತು –ಪ್ರಜಾವಾಣಿ ಚಿತ್ರ

ನಗರದಲ್ಲಿ ಉತ್ತಮ ಮಳೆ



ಮುಂಗಾರು ವೈಭವ...

'ಸಿಲಿಕಾನ್ ಸಿಟಿ' ಬೆಂಗಳೂರಿನಲ್ಲಿ ಮುಂಗಾರು ಮಳೆ ವೈಭವ ಮರಳಿದ್ದು ಹಲಸೂರು ಬಳಿ ಮಳೆ ಸುರಿಯಲು ದಟ್ಟೈಸುತ್ತಿದ್ದ ಮೋಡಗಳು, ವರುಣನ ಆಗಮನಕ್ಕೆ ಕಾದ ಹಲಸೂರು ಕೆರೆ, ಅವುಗಳ ನಡುವೆ ಗಗನಚುಂಬಿ ಕಟ್ಟಡಗಳ ಸಾಲು ಕಂಡಿದ್ದು ಹೀಗೆ. ಪ್ರಜಾವಾಣಿ ಚಿತ್ರ/ ರಂಜು ಪಿ.

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಶುಕ್ರವಾರ ಉತ್ತಮ ಮಳೆಯಾಗಿದೆ.

ಬೆಳಿಗ್ಗೆಯಿಂದಲೂ ಮೋಡ ಕವಿದ ವಾತಾವರಣ ವಿತ್ತು. ಮಧ್ಯಾಹ್ನ 3 ಗಂಟೆಯ ಸುಮಾರಿಗೆ ಅಲ್ಲಲ್ಲಿ ಸಾಧಾರಣ ಮಳೆ ಸುರಿಯಿತು. ಸಂಜೆ ಕೆಲವು ಪ್ರದೇಶಗಳಲ್ಲಿ ಜೋರು ಮಳೆಯಾಗಿ ತಂಪೆರೆಯಿತು.

ಮೆಜೆಸ್ಟಿಕ್ ಸುತ್ತಮುತ್ತ, ಮಹಾತ್ಮ ಗಾಂಧಿ ರಸ್ತೆ, ಬನಶಂಕರಿ, ಅಶೋಕನಗರ, ಇಂದಿರಾ ನಗರ, ಹಲಸೂರು, ರಾಜಾಜಿನಗರ, ಶಿವಾಜಿನಗರ, ಮಹಾಲಕ್ಷ್ಮಿ ಲೇಔಟ್, ಯಶವಂತಪುರ, ಸದಾಶಿವನಗರ, ಪೀಣ್ಯ, ಸುಂಕದಕಟ್ಟೆ ಭಾಗದಲ್ಲಿ ಉತ್ತಮ ಮಳೆಯಾಗಿದೆ.

ನಗರದಲ್ಲಿ ಓಕಳಿಪುರ ರೈಲ್ವೆ ಕೆಳಸೇತುವೆಯಲ್ಲಿ ನೀರು ಸಂಗ್ರಹಗೊಂಡಿತ್ತು. ಇದರಿಂದ, ವಾಹನ ಸವಾರರು ಪರದಾಡಿದರು.

ನಗರದಲ್ಲಿ ಇನ್ನೂ ಮೂರು ದಿನಗಳ ಕಾಲ ಮೋಡ ಕವಿದ ವಾತಾವರಣ ಇರಲಿದ್ದು, ಸಂಜೆ ಅಥವಾ ರಾತ್ರಿ ವೇಳೆ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.



ಚಲಿಸುವ ಲಾರಿಯಲ್ಲಿದ್ದ ಟರ್ಪಾಲ್ ಅಡಿಯಲ್ಲಿ ಕಾರ್ಮಿಕರು ಮಳೆಯಿಂದ ಆಶ್ರಯ ಪಡೆದರು ಪ್ರಜಾವಾಣಿ ಚಿತ್ರ ಕಿಶೋರ್ ಕುಮಾರ್ ಬೋಳಾರ್

ಕಾರ್ಕಳ: ಹರಿಯುವ ನೀರಿನಲ್ಲಿ ಕೊಚ್ಚಿ ಹೋದ ಮಹಿಳೆ ಸಾವು

ಕಾರ್ಕಳ: ದನವನ್ನು ಹುಡುಕಿಕೊಂಡು ಹೋದ ಮಹಿಳೆಯೊಬ್ಬರು ಹರಿಯುವ ನೀರಿನಲ್ಲಿ ಕೊಚ್ಚಿ ಹೋಗಿ ಮೃತಪಟ್ಟ ಘಟನೆ ಶುಕ್ರವಾರ ನಡೆದಿದೆ.

ತಾಲ್ಲೂಕಿನ ನಲ್ಲೂರು ಗ್ರಾಮದ ನದಾಯಿಫಾಲ್ಕೆ ನಿವಾಸಿ ಬೇಬಿ ಶೆಟ್ಟಿ (57) ದನ ಹುಡುಕಿಕೊಂಡು ಹೋದವರು, ಆಕಸ್ಮಿಕವಾಗಿ ಮನೆಯ ಬಳಿ ತುಂಬಿ ಹರಿಯುತ್ತಿದ್ದ ತೋಡಿಗೆ ಬಿದ್ದಿದ್ದು ನೀರಿನ ರಭಸಕ್ಕೆ ಕೊಚ್ಚಿಕೊಂಡು ಹೋಗಿ ಮೃತಪಟ್ಟಿದ್ದಾರೆ. ಕಾರ್ಕಳ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುದ್ದಿ 2 ನಿಮಿಷ

ಮತದಾನ ಪ್ರಮಾಣ ಹೆಚ್ಚಿಸಲು ಆಗ್ರಹ

ಬೆಂಗಳೂರು: ಬೆಂಗಳೂರು ನಗರದ ಮತದಾನ ಪ್ರಮಾಣ ಸುಧಾರಣೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಬೆಂಗಳೂರು ನವನಿರ್ಮಾಣ ಪಕ್ಷ ಆಗ್ರಹಿಸಿದೆ.

ಈ ಬಗ್ಗೆ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದು, '2023ರ ವಿಧಾನಸಭೆ ಚುನಾವಣೆಯಲ್ಲಿ ರಾಜ್ಯ ಸರ್ಕಾರವು ಶೇ 100ರಷ್ಟು ಮತದಾನ ಸಾಧಿಸಲು, ಮತದಾನ ದಿನದಂದು ಎಲ್ಲ ನೌಕರರಿಗೆ ವೇತನ ಸಹಿತ ರಜೆಯನ್ನು ನೀಡಿತ್ತು. ಹಲವಾರು ಜಾಗೃತಿ ಅಭಿಯಾನಗಳು ನಡೆಸಿದರೂ ಶೇ 52 ರಷ್ಟು ಮತದಾನ ಪ್ರಮಾಣ ಮಾತ್ರವೇ ಆಗಿತ್ತು. ಆದ್ದರಿಂದ, ಚುನಾವಣಾ ಆಯೋಗವು ಮತದಾರರ ಪಟ್ಟಿಯಲ್ಲಿ ಮರಣ ಹೊಂದಿದವರ ಹೆಸರುಗಳನ್ನು ತೆಗೆದು ಹಾಕಬೇಕು. ಅರ್ಹ ಮತದಾರರ ಹೆಸರುಗಳನ್ನು ಸೇರಿಸಬೇಕು. ಒಂದಕ್ಕಿಂತ ಹೆಚ್ಚು ಮತದಾನದ ಚೀಟಿಗಳಿರದಂತೆ ಕ್ರಮ ಕೈಗೊಳ್ಳಬೇಕು' ಎಂದು ಸಲಹೆ ನೀಡಿದೆ.

'ಮತದಾರರ ಚೀಟಿಯಲ್ಲಿ ಅರ್ಹರಲ್ಲದ, ಪುನರಾವರ್ತಿತ ಹೆಸರಗಳನ್ನು ತೆಗೆದು ಹಾಕಬೇಕು. ಎಲ್ಲ ಅರ್ಹ ಮತದಾರರನ್ನು ಮತದಾರರ ಪಟ್ಟಿಗೆ ಸೇರಿಸುವ ಮೂಲಕ ಮತ ಚಲಾಯಿಸುವಂತೆ ಜಾಗೃತಿ ಮೂಡಿಸಬೇಕು. ಒಂದೇ ಸಮುದಾಯದ ಮತದಾರರನ್ನು ಒಂದೇ ಬೂತ್‌ನಲ್ಲಿ ಮತದಾನ ಮಾಡಲು ಅವಕಾಶ ಕಲ್ಪಿಸಬೇಕು. ಮತದಾರರ ನೋಂದಣಿ, ವರ್ಗಾವಣೆ ಮತ್ತು ನವೀಕರಣ ಪ್ರಕ್ರಿಯೆಯನ್ನು ಸರಳೀಕರಣಗೊಳಿಸಬೇಕು' ಎಂದು ಒತ್ತಾಯಿಸಿದೆ.

ಕುಸಿದು ಬಿದ್ದ ಕ್ರೇನ್: ರಸ್ತೆ ಸಂಚಾರಕ್ಕೆ ತೊಂದರೆ



ಬೆಂಗಳೂರು: ಮಡಿವಾಳ ಬಳಿ ಮೆಟ್ರೊ ಕಾಮಗಾರಿ ನಿರ್ವಹಿಸುತ್ತಿದ್ದ ಕ್ರೇನ್ ಶುಕ್ರವಾರ ರಾತ್ರಿ ಕುಸಿದು ಬಿದ್ದಿದೆ. ಕ್ರೇನ್‌ನಲ್ಲಿದ್ದ ಕಾರ್ಮಿಕರು ಯಾವುದೇ ಅಪಾಯವಿಲ್ಲದೇ ಪಾರಾಗಿದ್ದಾರೆ. ರಸ್ತೆ ಮೇಲೆ ಕ್ರೇನ್ ಬಿದ್ದಿರುವುದರಿಂದ ವಾಹನ ಸಂಚಾರಕ್ಕೆ ತೊಡಕಾಗಿದೆ.

ಬಿಟಿಎಂನಿಂದ ಮಡಿವಾಳಕ್ಕೆ ಹೋಗುವವರು ಎಚ್‌ಎಸ್‌ಆರ್ 14ನೇ ಮುಖ್ಯ ರಸ್ತೆ ಮೂಲಕ ಸಾಗಬೇಕು. ಎಚ್‌ಎಸ್‌ಆರ್‌ನಿಂದ ಮಡಿವಾಳ ಕಡೆಗೆ ಬರುವವರು ಬಿಟಿಎಂ ಬಡಾವಣೆಯ ಮೂಲಕ ಸಂಚರಿಸಬೇಕು. ಕ್ರೇನ್ ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವವರೆಗೆ ಸಾರ್ವಜನಿಕರು ಸಹಕರಿಸಬೇಕು ಎಂದು ದಕ್ಷಿಣ ಡಿಸಿಪಿ ಸುಜಿತಾ ಸಲ್ಮಾನ್ ತಿಳಿಸಿದ್ದಾರೆ.

ಹೊರವರ್ತುಲ ರಸ್ತೆಯಲ್ಲಿ ಕ್ರೇನ್ ಜಾರಿ ಬಿದ್ದಿದೆ. ಇದಕ್ಕೆ ಕಾರಣ ಏನು ಎಂಬುದನ್ನು ಪರಿಶೀಲಿಸಲಾಗುತ್ತಿದೆ. ಯಾರಿಗೂ ಅಪಾಯ ಉಂಟಾಗಿಲ್ಲ. ಸಂಚಾರ ವ್ಯವಸ್ಥೆಯನ್ನು ಪೊಲೀಸರು ಮಾಡುತ್ತಿದ್ದಾರೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಚಿತ್ರಾವಳಿ



ನಾಡೋಜ ಡಾ.ಬರಗೂರು ಪ್ರತಿಷ್ಠಾನ ನಗರದಲ್ಲಿ ಶುಕ್ರವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಹಾಗೂ ಚಲನಚಿತ್ರ ನಟ ಸುಂದರ್ ರಾಜ್ ಅವರಿಗೆ 'ಬರಗೂರು ಪ್ರಶಸ್ತಿ' ಪ್ರದಾನ ಮಾಡಲಾಯಿತು. (ಎಡದಿಂದ) ಪ್ರತಿಷ್ಠಾನದ ಅಧ್ಯಕ್ಷ ರಾಜಪ್ಪ ದಳವಾಯಿ, ಚಿತ್ರ ನಟಿ ಪ್ರಮೀಳಾ ಜೋಷಾಯ್, ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ಸುಂದರ್ ರಾಜ್ ಅರಸು, ಚಲನಚಿತ್ರ ನಿರ್ಮಾಪಕ ಚಿನ್ನೇಗೌಡ, ವಕೀಲ ರವಿವರ್ಮ ಕುಮಾರ್, ಸಾಹಿತಿ ಬರಗೂರು ರಾಮಚಂದ್ರಪ್ಪ ಹಾಗೂ ಸರ್ಕಾರಿ ಕಲಾ ಕಾಲೇಜಿನ ಪ್ರಾಂಶುಪಾಲ ಪಿ.ಟಿ. ಶ್ರೀನಿವಾಸ ನಾಯಕ ಉಪಸ್ಥಿತರಿದ್ದರು. ಈ ಪ್ರಶಸ್ತಿಯು ತಲಾ ₹ 25 ಸಾವಿರ ನಗದು ಒಳಗೊಂಡಿದೆ –ಪ್ರಜಾವಾಣಿ ಚಿತ್ರ



ಬಿಎಂಎಸ್ ಮಹಿಳಾ ಕಾಲೇಜಿನಲ್ಲಿ ಜುಲೈ 21ಕ್ಕೆ ನಡೆಯಲಿರುವ ಉದ್ಯೋಗ ಮೇಳದ ಪ್ರಾಯೋಜಕತ್ವಕ್ಕೆ ಸಚಿವರ ಜಮೀರ ಅಹಮದ್ ಖಾನ್ ಅವರು ₹1.50 ಲಕ್ಷದ ಚೆಕ್ ಕಾಲೇಜಿನ ವಿದ್ಯಾರ್ಥಿನಿಯರಿಗೆ ಗುರುವಾರ ಹಸ್ತಾಂತರಿಸಿದರು.



ಬಿಎಂಟಿಸಿಯ ಎಲ್ಲ 49 ಘಟಕಗಳಲ್ಲಿ ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ರಸ್ತೆ ಸುರಕ್ಷತೆ, ಸಂಚಾರ ನಿಯಮ ಪಾಲನೆ ತರಬೇತಿ ಕಾರ್ಯಕ್ರಮ ಆರಂಭವಾಗಿದೆ. ಈ ತರಬೇತಿಯು ಜುಲೈ 12ಕ್ಕೆ ಮುಕ್ತಾಯಗೊಳ್ಳಲಿದೆ.

'ಪರಿಶ್ರಮ ಇದ್ದರೆ ಸ್ಪರ್ಧೆ ಸುಲಭ'

ಚಿಕ್ಕಬಳ್ಳಾಪುರ: ಪ್ರತಿ ಹಂತದಲ್ಲಿಯೂ ಕಠಿಣ ಪರಿಶ್ರಮದಿಂದ ಅಧ್ಯಯನ ನಡೆಸಿದರೆ ಐಎಎಸ್, ಐಪಿಎಸ್ ಸ್ಪರ್ಧಾತ್ಮಕ ಪರೀಕ್ಷೆಗಳ ಗುರಿ ಮುಟ್ಟಬಹುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಿ.ಎಲ್. ನಾಗೇಶ್ ಸಲಹೆ ನೀಡಿದರು.

ನಗರದ ಎಸ್‌ಜೆಸಿಐಟಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಶುಕ್ರವಾರ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್, ನೇತೃತ್ವದಲ್ಲಿ ಐಎಎಸ್ ಬಾಬಾ ಸಂಸ್ಥೆ ಸಹಭಾಗಿತ್ವದಲ್ಲಿ ನಡೆದ 'ಗೈಡಿಂಗ್ ಫೋರ್ಸ್' ಕಾರ್ಯಕ್ರಮದಲ್ಲಿ ಮಾತನಾಡಿದರು.

ಐಎಎಸ್, ಐಪಿಎಸ್‌ನ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕಠಿಣ ಪರಿಶ್ರಮ ಅತ್ಯಗತ್ಯ. ಜಾಗತಿಕ, ರಾಷ್ಟ್ರೀಯ ಮತ್ತು ರಾಜ್ಯದಲ್ಲಿ ನಡೆಯುತ್ತಿರುವ ಸಾಮಾಜಿಕ, ರಾಜಕೀಯ, ಆರ್ಥಿಕ ಸೇರಿದಂತೆ ಎಲ್ಲ ಕ್ಷೇತ್ರಗಳ ವಿದ್ಯಮಾನಗಳ ಬಗ್ಗೆ ಅರಿವು ಹೊಂದಬೇಕು. ಸಾಮಾನ್ಯ ಜ್ಞಾನ ಮತ್ತು ಪ್ರಸಕ್ತ ವಿದ್ಯಮಾನಗಳ ಬಗ್ಗೆ ಉತ್ತಮ ಅರಿವು ಅತ್ಯಗತ್ಯ ಎಂದು ಹೇಳಿದರು.



ಚಿಕ್ಕಬಳ್ಳಾಪುರದ ಎಸ್‌ಜೆಸಿಐಟಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೇತೃತ್ವದಲ್ಲಿ ಐಎಎಸ್ ಬಾಬಾ ಸಂಸ್ಥೆ ಸಹಭಾಗಿತ್ವದಲ್ಲಿ ನಡೆದ 'ಗೈಡಿಂಗ್ ಫೋರ್ಸ್' ಕಾರ್ಯಕ್ರಮಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಿ.ಎಲ್. ನಾಗೇಶ್ ಹಾಗೂ ಆದಿಚುಂಚನಗಿರಿ ಮಠದ ಮಂಗಳಾನಂದನಾಥ ಸ್ವಾಮೀಜಿ ಚಾಲನೆ ನೀಡಿದರು

ಪೂರ್ವಭಾವಿ ಪರೀಕ್ಷೆ, ಮುಖ್ಯ ಪರೀಕ್ಷೆ ಮತ್ತು ಸಂದರ್ಶನದ ಮೂರು ಹಂತಗಳಲ್ಲಿಯೂ ವಿಶಿಷ್ಟವಾದ ಕೌಶಲಗಳು ಅಭ್ಯರ್ಥಿಗಳಿಗೆ ಅಗತ್ಯ. ಮೂರು ಹಂತದಲ್ಲಿಯೂ ಉತ್ತಮವಾಗಿ ಪರೀಕ್ಷೆ ಎದುರಿಸಬೇಕು. ಹೀಗೆ ಪ್ರತಿ ಹಂತಕ್ಕೆ ಅಗತ್ಯವಾದ ಕೌಶಲ ರೂಢಿಸಿಕೊಳ್ಳಬೇಕು. ನಾವು ಸರಾಸರಿ ಅಂಕ ಪಡೆಯುವ ವಿದ್ಯಾರ್ಥಿಗಳು ನಾವು ಹೇಗೆ ಪರೀಕ್ಷೆ ಮಾಡಬಹುದು ಎನ್ನುವ ಮನೋಭಾವ ಎಂದಿಗೂ ಬರಬಾರದು ಎಂದು ಕಿವಿಮಾತು ಹೇಳಿದರು.

ಆದಿಚುಂಚನಗಿರಿ ಚಿಕ್ಕಬಳ್ಳಾಪುರ ಶಾಖಾ ಮಠದ ಮಂಗಳಾನಂದನಾಥ ಸ್ವಾಮೀಜಿ ಮಾತನಾಡಿ, 'ವಿದ್ಯಾರ್ಥಿಗಳು ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು. ಸಾಧನೆಗೆ ಸಂಕಲ್ಪವಿದ್ದರಷ್ಟೇ ಸಾಲದು ಕಾರ್ಯೋನ್ಮುಖ ಆಗಬೇಕು. ಏಕಾಗ್ರತೆ, ದೃಢ ನಿರ್ಧಾರ ನಿಮ್ಮನ್ನು ಯಶಸ್ಸಿನತ್ತ ಕೊಂಡೊಯ್ಯುತ್ತದೆ ಎಂದರು.

ಐಎಎಸ್ ಬಾಬಾ ಸಂಸ್ಥೆ ನಿರ್ದೇಶಕ ಎಸ್.ಮೋಹನ್ ಕುಮಾರ್, ಯುಪಿಎಸ್‌ಸಿ ಪರೀಕ್ಷೆ ಉತ್ತೀರ್ಣರಾಗಿರುವ ಎಂ.ಪೂಜಾ, ಐಎಫ್‌ಎಸ್ ಪರೀಕ್ಷೆಯಲ್ಲಿ ಸಾಧನೆ ತೋರಿರುವ ಟಿ.ಎಂ.ಆಕರ್ಷ್ ಸಂಪನ್ಮೂಲ ವ್ಯಕ್ತಿಗಳಾಗಿದ್ದರು. ಎಸ್‌ಜೆಸಿಐಟಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಜಿ.ಟಿ.ರಾಜು, ರಿಜಿಸ್ಟ್ರಾರ್ ಸುರೇಶ್, 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪ್ರಸರಣ ವಿಭಾಗದ ಡಿಜಿಎಂ ಜಗನ್ನಾಥ ಜೋಯಿಸ್, ಎಜಿಎಂ ಸರವಣನ್ ವೇದಿಕೆಯಲ್ಲಿ ಇದ್ದರು.

'ದೇಶ ಸದೃಢಗೊಳಿಸಿದ ಸಿಎಫ್‌ಟಿಆರ್‌ಐ'

ಆಹಾರ ಭದ್ರತೆ ನೀಡುವಲ್ಲಿ ಸಂಸ್ಥೆಯ ಕೊಡುಗೆ ಅನನ್ಯ: ಡಾ.ಕೆ.ವಿ.ರಾಜೇಂದ್ರ

ಪ್ರಜಾವಾಣಿ ವಾರ್ತೆ

ಮೈಸೂರು: 'ಸಿಎಫ್‌ಟಿಆರ್‌ಐನ ಆಹಾರ ತಂತ್ರಜ್ಞಾನದ 400 ಸಂಶೋಧನೆಗಳು ಆಧುನಿಕ ಹಾಗೂ ಗ್ರಾಮೀಣ ಭಾರತವನ್ನು ಸದೃಢಗೊಳಿಸಿವೆ' ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಶ್ಲಾಘಿಸಿದರು.

ನಗರದ ಕೇಂದ್ರೀಯ ಆಹಾರ ತಂತ್ರಜ್ಞಾನ ಮತ್ತು ಸಂಶೋಧನಾ ಸಂಸ್ಥೆಯು ಶುಕ್ರವಾರ ಆಯೋಜಿಸಿದ್ದ 'ಒಂದು ವಾರ, ಒಂದು ಪ್ರಯೋಗಾಲಯ'– ಆಹಾರ ಸಂಶೋಧನೆಯ ಸಂಭ್ರಮೋತ್ಸವದ ಸಮಾರೋಪದಲ್ಲಿ ಅವರು ಮಾತನಾಡಿದರು.

'ಸಂಸ್ಥೆಯು 7 ದಶಕದಲ್ಲಿ ದೇಶಕ್ಕೆ ಆಹಾರ ಭದ್ರತೆಯನ್ನು ತಂದುಕೊಟ್ಟಿದೆ. ಸಂಶೋಧನೆಗಳನ್ನು ನಿರಂತರವಾಗಿ ನಡೆಸಿದೆ. ಸಂಸ್ಥೆಯ ತಂತ್ರಜ್ಞಾನವನ್ನು ಯುವ ಸಮುದಾಯ ಬಳಸಿಕೊಂಡು ಉದ್ಯಮ ಸ್ಥಾಪಿಸಬೇಕು. ನವೋದ್ಯಮಿಗಳಾಗುವ ಮೂಲಕ ಉದ್ಯೋಗ ಸೃಷ್ಟಿಸಬೇಕು' ಎಂದು ಸಲಹೆ ನೀಡಿದರು.

'ದೇಶದ ಶೇ 30ರಷ್ಟು ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಲಕ್ಷಾಂತರ ಮಕ್ಕಳು ಬೊಜ್ಜಿನ ಸಮಸ್ಯೆ ಎದುರಿಸುತ್ತಿದ್ದಾರೆ. ಆಹಾರ ಪದ್ಧತಿಯನ್ನು ಬದಲಿಸಿಕೊಳ್ಳಬೇಕಿದೆ' ಎಂದರು.



ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ಶುಕ್ರವಾರ ಆಯೋಜಿಸಿದ್ದ 'ಒಂದು ವಾರ, ಒಂದು ಪ್ರಯೋಗಾಲಯ'– ಆಹಾರ ಸಂಶೋಧನೆಯ ಸಂಭ್ರಮೋತ್ಸವದ ಸಮಾರೋಪದಲ್ಲಿ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ನೈರುತ್ಯ ರೈಲ್ವೆ ವಿಭಾಗೀಯ ವ್ಯವಸ್ಥಾಪಕಿ ಶಿಲ್ಪಿ ಅಗರ್‌ವಾಲ್, ಸಿಎಸ್‌ಐಆರ್–ಎನ್‌ಐಐಎಸ್‌ಸಿ ನಿರ್ದೇಶಕ ನರಹರಿಶಾಸ್ತ್ರಿ ಇದ್ದಾರೆ

ಅಡುಗೆ ಮಾಡಿ ಬಹುಮಾನ ಗೆದ್ದರು!

ಅಡುಗೆ ಸ್ಪರ್ಧೆಗಳಲ್ಲಿ ವಿಶಿಷ್ಟ ತಿನಿಸು ತಯಾರಿಸಿದ 40 ಮಂದಿಯಲ್ಲಿ 9 ಮಂದಿ ಬಹುಮಾನ ಗೆದ್ದರು. 'ಅರ್ಕ ಧಾನ್ಯದಲ್ಲಿ ಮೊಮೊಸ್' ತಿನಿಸು ಮಾಡಿದ ಅಜಲಿನಾ ಮರಿನಾ ಡಿಸೋಜಾ, ಗುರು ನಾಗೇಂದ್ರ ಅವರು ಮೊದಲ ಬಹುಮಾನ ಗೆದ್ದರೆ, 'ಭಾಜ್ರ ಕಾ ತಾಲಿ' ಮಾಡಿಗೆ ಪಿಯಾಂಶು ಜೈನ್ ಅವರಿಗೆ 2ನೇ ಹಾಗೂ 'ರಾಗಿ ಮುದ್ದೆ ಲಾವಾ' ತಿನಿಸು ಮಾಡಿದ ದೀಪಿಕಾ 3ನೇ ಬಹಮಾನ ತಮ್ಮದಾಗಿಸಿಕೊಂಡರು.

ನೈರುತ್ಯ ರೈಲ್ವೆ ವಿಭಾಗೀಯ ವ್ಯವಸ್ಥಾಪಕಿ ಶಿಲ್ಪಿ ಅಗರವಾಲ್ ಮಾತನಾಡಿ, 'ಆಹಾರ ಸ್ವಾವಲಂಬನೆ ಸಾಧಿಸಲು ಸಂಸ್ಥೆಯ ಕೊಡುಗೆ ಅನನ್ಯ. ಅಮೂಲ್ ಮಿಲ್ಕ್ ಪೌಡರ್, ಸ್ಪ್ರೇ, ಸೀಸ್ಲಿಂ ಮೊದಲಾದ ಉತ್ಪನ್ನಗಳಿಗೆ ತಂತ್ರಜ್ಞಾನ ಒದಗಿಸಿದ ಕೀರ್ತಿ ಸಂಸ್ಥೆಯದಾಗಿದ್ದು, ಭಾರತೀಯ ರೈಲ್ವೆ ಜೊತೆಗೂ ಸಹಭಾಗಿತ್ವವನ್ನು ಹೊಂದಿದೆ' ಎಂದರು.

ಸಂಸ್ಥೆಯ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣಸಿಂಗ್, ಸಿಎಸ್‌ಐಆರ್–ಎನ್‌ಐಐಎಸ್‌ಸಿ ನಿರ್ದೇಶಕ ನರಹರಿಶಾಸ್ತ್ರಿ ಇದ್ದರು.

3 ಉತ್ಪನ್ನಗಳ ಬಿಡುಗಡೆ

- ಪಂಧಾರ ರಸ್ಸ: ಚಿಕನ್, ಮಸಾಲೆ ಹಾಗೂ ತೆಂಗಿನಕಾಯಿ ಹಾಲಿನಿಂದ ಮಾಡಿದ ಕೊಲ್ಹಾಪುರ ಮೂಲದ ತಿನಿಸಾಗಿದ್ದು, ಮಹಾರಾಷ್ಟ್ರದ ಊಟದಲ್ಲಿ ಸಾಮಾನ್ಯ. ಇದನ್ನು ವರ್ಷದವೆಗೂ ಬಳಸಬಹುದು. ಇದನ್ನು ವಿಜ್ಞಾನಿಗಳಾದ ಡಾ.ತಾನಾಜಿ ಜಿ.ಕುದ್ರೆ, ಎಚ್.ಎಸ್.ಸತೀಶ್, ಸುರೇಶ್, ಎಂ.ಪಿ.ಅಮೃತ ಅವರ ತಂಡ ಸಿದ್ಧಪಡಿಸಿದೆ.
- ಮಾಂಸ– ಮೊಟ್ಟೆಯ ಕುರುಕಲು: ಮೊಟ್ಟೆ ಹಾಗೂ ಚಿಕನ್‌ನಿಂದ ಮಾಡಿದ ಕುರುಕಲು ತಿನಿಸಾಗಿದ್ದು, ಗರಿಗರಿಯಾಗಿರುವ ಇದನ್ನು ಶುಂಠಿ, ಟೊಮೆಟೊ, ಕರಿಮೆಣಸು ಸೇರಿದಂತೆ ವಿವಿಧ ಮಿಶ್ರಣವನ್ನು ಒಳಗೊಂಡಿದೆ.
- ಐಎಂಒ: ಗ್ಲೂಕೋಸ್ ಪುಡಿಯಾಗಿದ್ದು, ಕಡಿಮೆ ಕ್ಯಾಲೊರಿಯನ್ನು ಹೊಂದಿದೆ.

ಉಪ ಸಭಾಧ್ಯಕ್ಷರಾಗಿ ರುದ್ರಪ್ಪ ಲಮಾಣಿ ಅವಿರೋಧ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯ ಉಪ ಸಭಾಧ್ಯಕ್ಷರಾಗಿ ಹಾವೇರಿ ಮೀಸಲು (ಎಸ್‌ಸಿ) ಕ್ಷೇತ್ರದ ಶಾಸಕ ರುದ್ರಪ್ಪ ಮಾನಪ್ಪ ಲಮಾಣಿ ಅವಿರೋಧವಾಗಿ ಗುರುವಾರ ಆಯ್ಕೆಯಾದರು.



ಉಪ ಸಭಾಧ್ಯಕ್ಷರ ಚುನಾವಣೆಗೆ ರುದ್ರಪ್ಪ ಮಾತ್ರ ನಾಮಪತ್ರ ಸಲ್ಲಿಸಿದ್ದರು. ಗುರುವಾರ ಪ್ರಶ್ನೋತ್ತರ ಕಲಾಪದ ಬಳಿಕ ಉಪ ಸಭಾಧ್ಯಕ್ಷರ ಚುನಾವಣೆ ನಡೆಯಿತು. ಸರ್ಕಾರದ ಮುಖ್ಯ ಸಚೇತಕ ಅಶೋಕ ಎಂ. ಪಟ್ಟಣ ಉಪ ಸಭಾಧ್ಯಕ್ಷ ಹುದ್ದೆಗೆ ರುದ್ರಪ್ಪ ಅವರ ಹೆಸರನ್ನು ಸೂಚಿಸಿದರು. ಕಾಂಗ್ರೆಸ್‌ನ ಬಸವರಾಜ ನೀಲಪ್ಪ ಶಿವಣ್ಣವರ್ ಅನುಮೋದಿಸಿದರು.

ಬಳಿಕ ಸ್ಪೀಕರ್ ಯು.ಟಿ. ಖಾದರ್ ಅವರು ರುದ್ರಪ್ಪ ಅವರನ್ನು ಉಪ ಸಭಾಧ್ಯಕ್ಷರನ್ನಾಗಿ ಆಯ್ಕೆಮಾಡುವ ಪ್ರಸ್ತಾವವನ್ನು ಧ್ವನಿಮತಕ್ಕೆ ಹಾಕಿದರು. ಕಾಂಗ್ರೆಸ್ ಸದಸ್ಯರು ರುದ್ರಪ್ಪ ಅವರ ಆಯ್ಕೆಯ ಪ್ರಸ್ತಾವವನ್ನು ಬೆಂಬಲಿಸಿದರೆ, ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಮೌನ ತಾಳಿದರು. ರುದ್ರಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಸ್ಪೀಕರ್ ಘೋಷಿಸಿದರು.

ಅಭಿನಂದಿಸಿದ ಮಾತನಾಡಿದ ಶಿವಕುಮಾರ್, 'ಬಲವಂತದಿಂದ ನಿಮಗೆ ಈ ಜವಾಬ್ದಾರಿಯನ್ನು ನೀಡಿದ್ದೇವೆ. 34 ಮಂದಿ ಸಚಿವರಾಗಬಹುದು. ಆದರೆ, ಇಬ್ಬರಷ್ಟೇ ಸಭಾಧ್ಯಕ್ಷ ಮತ್ತು ಉಪ ಸಭಾಧ್ಯಕ್ಷರಾಗಲು ಸಾಧ್ಯ. ಮುಖ್ಯಮಂತ್ರಿ, ಸಚಿವರು ನಿಮ್ಮ ಬಳಿ ಬರಬೇಕಿದೆ' ಎಂದರು. ಬಿಜೆಪಿಯ ಬಸವರಾಜ ಬೊಮ್ಮಾಯಿ ಮಾತನಾಡಿ, 'ನಮ್ಮ ಜಿಲ್ಲೆಯವರೊಬ್ಬರು ಮಂತ್ರಿ ಆಗುತ್ತಾರೆ ಅಂದುಕೊಂಡಿದ್ದೆವು. ನೀವು ಉಪ ಸಭಾಧ್ಯಕ್ಷರಾಗಿದ್ದೀರಿ. ಎಲ್ಲರನ್ನೂ ಸಮಾನವಾಗಿ ನಡೆಸಿಕೊಂಡು ಹೋಗಿ. ಹೊಸ ನಾಯಕರನ್ನು ಸೃಷ್ಟಿಸಿ' ಎಂದು ಹೇಳಿದರು.

> ಈ ಹುದ್ದೆ ನಿರೀಕ್ಷಿಸಿರಲಿಲ್ಲ. ಮಂತ್ರಿಯಾಗುವ ಆಸೆ ಇತ್ತು. ಪಕ್ಷದ ಸೂಚನೆಯಂತೆ ಒಪ್ಪಿಕೊಂಡಿದ್ದೇನೆ. ಎಲ್ಲರಿಗೂ ನ್ಯಾಯ ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡುವೆ.
> **ರುದ್ರಪ್ಪ ಲಮಾಣಿ,** ಉಪ ಸಭಾಧ್ಯಕ್ಷ

ಮೂರನೇ ಬಾರಿ ಶಾಸಕ: ರಾಣೆಬೆನ್ನೂರಿನವರಾದ ರುದ್ರಪ್ಪ ಲಮಾಣಿ ಬ್ಯಾಡಗಿ (ಈ ಹಿಂದೆ ಎಸ್‌ಸಿ ಮೀಸಲು) ವಿಧಾನಸಭಾ ಕ್ಷೇತ್ರದಿಂದ 1999ರಲ್ಲಿ ಶಾಸಕರಾಗಿ ಆಯ್ಕೆಯಾಗಿದ್ದರು. 2008ರಲ್ಲಿ ಹಾವೇರಿ ಎಸ್‌ಸಿ ಮೀಸಲು ಕ್ಷೇತ್ರವಾಗಿತ್ತು. ಆಗ ಅವರು ಹಾವೇರಿ ಕ್ಷೇತ್ರಕ್ಕೆ ವಲಸೆ ಬಂದಿದ್ದರು. 2013ರಲ್ಲಿ ಶಾಸಕರಾಗಿ ಆಯ್ಕೆಯಾಗಿದ್ದ ಅವರು ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಸಚಿವರಾಗಿದ್ದರು. 2018ರಲ್ಲಿ ಸೋತಿದ್ದರು. 2023ರಲ್ಲಿ ಪುನಃ ಆಯ್ಕೆಯಾಗಿದ್ದರು.

ಬಿಜೆಪಿ ನಾಯಕರ ಜತೆ ಪ್ರಧಾನಿ 'ಟಿಫಿನ್ ಸಭೆ'

ವಾರಾಣಸಿ (ಪಿಟಿಐ): ಪ್ರಧಾನಿ ಮೋದಿ ಅವರು ತಮ್ಮ ಸಂಸದೀಯ ಕ್ಷೇತ್ರವಾದ ವಾರಾಣಸಿಯಲ್ಲಿ ಬಿಜೆಪಿ ಕಾರ್ಯಕರ್ತರು ಮತ್ತು ಮುಖಂಡರೊಂದಿಗೆ ಶುಕ್ರವಾರ 'ಟಿಫಿನ್ ಸಭೆ' ನಡೆಸಿದರು.

ಮುಂದಿನ ವರ್ಷ ಎದುರಾಗಲಿರುವ ಲೋಕಸಭಾ ಚುನಾವಣೆಯಲ್ಲಿ ಪಕ್ಷವನ್ನು ಭಾರಿ ಅಂತರದಿಂದ ಗೆಲ್ಲಿಸಲು ಶ್ರಮಿಸುವಂತೆ ಪ್ರಧಾನಿ ಸೂಚಿಸಿದರು.

ಈಗಿನಿಂದಲೇ ಚುನಾವಣಾ ಕಾರ್ಯ ಕೈಗೊಳ್ಳಿ. ಮತದಾರರ ಮನೆ ಮನೆಗೆ ತೆರಳಿ ಬಿಜೆಪಿ ಸರ್ಕಾರದ ಜನಪರ ಕಾರ್ಯಕ್ರಮಗಳ ಬಗ್ಗೆ ತಿಳಿಸಿ ಎಂದರು. ಮುಖ್ಯಮಂತ್ರಿ ಯೋಗಿ ಆದಿತ್ಯ ನಾಥ್, ಬಿಜೆಪಿ ಪದಾಧಿಕಾರಿಗಳು, ಕಾರ್ಯಕರ್ತರು ಮತ್ತು ಜನ ಪ್ರತಿನಿಧಿಗಳು ಸೇರಿದಂತೆ ಸುಮಾರು 120 ಜನರು ಸಭೆಯಲ್ಲಿ ಭಾಗವಹಿಸಿದ್ದರು.

ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ ನಾಳೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: ನೆಲಮಂಗಲ, ತ್ಯಾಮಗೊಂಡ್ಲು, ಅವೇರಹಳ್ಳಿ ಮತ್ತು ಟಿ.ಬೇಗೂರು ವಿದ್ಯುತ್ ವಿತರಣಾ ಕೇಂದ್ರಗಳ ವ್ಯಾಪ್ತಿಯಲ್ಲಿರುವ ಮಾರ್ಗಗಳ ತುರ್ತು ನಿರ್ವಹಣಾ ಕಾರ್ಯ ಇರುವುದರಿಂದ ಇದೇ 9ರಂದು ಬೆಳಿಗ್ಗೆ 9ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಬೆಸ್ಕಾಂ ಕಾರ್ಯನಿರ್ವಾಹಕ ಎಂಜಿನಿಯರ್ ತಿಳಿಸಿದ್ದಾರೆ.

ಪ್ರದೇಶಗಳು: ನೆಲಮಂಗಲ ಟೌನ್, ಕೆಂಪಲಿಂಗನಹಳ್ಳಿ, ಶಿವನಗರ, ಜಕ್ಕಸಂದ್ರ, ಕುಣಿಗಲ್ ಸರ್ಕಲ್, ಬ್ಯಾಡರಹಳ್ಳಿ, ಹುರುಳಿಹಳ್ಳಿ, ವೀರರಾಘವನಪಾಳ್ಯ, ಗಂಡರಗೂಳಿಪುರ, ವಜ್ರಘಟ್ಟೆಪಾಳ್ಯ, ತೊರೆಕೆಂಪೋಹಳ್ಳಿ, ಮೊದಲಕೋಟೆ, ಗಂಗಬೈರಪ್ಪನಪಾಳ್ಯ, ಅಗಸರಹಳ್ಳಿ, ಅರಳಸಂದ್ರ, ಬಸವನ ಹಳ್ಳಿ, ವಾಲ್ಮೀಕಿನಗರ, ಬೆಟ್ಟಹಳ್ಳಿ, ಮೈಲನಹಳ್ಳಿ, ಹ್ಯಾಡಾಳು, ಬೈರನಾಯಕನಹಳ್ಳಿ, ಸೀತಾರಾಮಪಾಳ್ಯ, ಬೈರಶೆಟ್ಟಹಳ್ಳಿ, ಬೋಳಮಾರನಹಳ್ಳಿ, ತ್ಯಾಗದಹಳ್ಳಿ, ಅರ್ಜುನಬೆಟ್ಟಹಳ್ಳಿ, ಗುಟ್ಟೆಪಾಳ್ಯ, ದೇಗನಹಳ್ಳಿ, ಇಸ್ಲಾಂಪುರ, ಕಣ್ಣೇಗೌಡನಹಳ್ಳಿ, ಅರಸಿನಕುಂಟೆ, ವಾಜರಹಳ್ಳಿ, ಭಕ್ತನಪಾಳ್ಯ, ಗೆದ್ದಲಹಳ್ಳಿ, ಆದರ್ಶನಗರ, ಲೋಹಿತ್‌ನಗರ, ರೇಣುಕಾನಗರ, ಯಂಟಗಾನಹಳ್ಳಿ, ಸೊಂಡೆಕೊಪ್ಪ, ಬರದಿ, ಮಂಡಿಗೆರೆ, ಹೊಸೂರು, ಕೋಡೆಪಾಳ್ಯ, ಗೇರಪಾಳ್ಯ, ಕಾಚನಹಳ್ಳಿ, ಯರಮಂಚನಹಳ್ಳಿ, ತೊಣಚಿನಕುಪ್ಪೆ, ಬೊಮ್ಮನಹಳ್ಳಿ, ವೀರನಂಜೀಪುರ, ಕೆಂಚನಹಳ್ಳಿ, ಬೂದಿ ಹಾಳ್, ತ್ಯಾಮಗೊಂಡ್ಲು ಕೆಐಎಡಿಬಿ ಕೈಗಾರಿಕಾ ಪ್ರದೇಶ, ತೋಟನಹಳ್ಳಿ, ತಾವರೆಕೆರೆ, ದೊಡ್ಡಬೆಲೆ, ಮುದ್ದಲಿಂಗನಹಳ್ಳಿ, ಚೆನ್ನೋಹಳ್ಳಿ, ಗುಂಡೇನಹಳ್ಳಿ, ನರಸೀಪುರ, ಇಸುವನಹಳ್ಳಿ, ಕಳಲುಘಟ್ಟ, ಗೋವೇನಹಳ್ಳಿ, ತಿಪ್ಪಶೆಟ್ಟಿಹಳ್ಳಿ, ಬಿದಲೂರು, ಬೀರಗೊಂಡನಹಳ್ಳಿ, ಯರ್ರನಪಾಳ್ಯ, ಓಬಳಾಪುರ, ಕೊಡಿಗೆಹಳ್ಳಿ, ಮಣ್ಣೆ, ಮರಳಕುಂಟೆ ಎಲೆಕ್ಯಾತನಹಳ್ಳಿ, ಬಳ್ಳಗೆರೆ, ಗೊರಘಟ್ಟ, ಸೋಮಸಾಗರ, ಕುಂಟಗೊಮ್ಮನಹಳ್ಳಿ, ತ್ಯಾಮಗೊಂಡ್ಲು, ಟಿ.ಬೇಗೂರು, ಹಸಿರುಹಳ್ಳಿ, ಮದಗೊಂಡನಹಳ್ಳಿ, ಹನುಮಂತಪುರ, ಅರೆಬೊಮ್ಮನಹಳ್ಳಿ, ಲಕ್ಕಸಂದ್ರ, ತಿಮ್ಮಸಂದ್ರ, ತಿಪ್ಪಗೊಂಡ ನಹಳ್ಳಿ, ನೇರಳೇಹಳ್ಳಿ, ಮಂಚೇನಹಳ್ಳಿ, ಗೋವಿಂದಪುರ, ಹಾಲೇನಹಳ್ಳಿ, ತೊರೆಪಾಳ್ಯ, ಜಾಜೂರು, ಶಿವಗಂಗೆ, ಗೊಟ್ಟಿಗೆರೆ, ಮಾಚೇನಹಳ್ಳಿ, ಕಂಬಾಳು, ಬಸವಪಟ್ಟಣ, ಗಂಟೆಹೊಸಹಳ್ಳಿ, ಗುರುವನಹಳ್ಳಿ, ಮಾಗೋನಹಳ್ಳಿ, ಗಂಗೀನಪುರ, ಶಿವಾನಂದನಗರ, ಗೌರಾಪುರ, ಭಕ್ತರಪಾಳ್ಯ, ಬಿಲ್ಲಿನಕೋಟೆ, ಕುಲುವನಹಳ್ಳಿ, ಸೂಲಕುಂಟೆ, ಗಂಗೇಗೌಡನಪಾಳ್ಯ, ಪಲ್ಲರಹಳ್ಳಿ, ಗೋವಿಂದ ಪುರ, ಹೊನ್ನಾರಾಯನಹಳ್ಳಿ, ಅವೇರಹಳ್ಳಿ ಸುತ್ತಮುತ್ತಲ ಪ್ರದೇಶಗಳು.

ತಪ್ಪಿತಸ್ಥರನ್ನು ಪತ್ತೆಹಚ್ಚಿ ಗಡಿಪಾರು ಮಾಡಲು ಆಗ್ರಹ

ಕೆಂಪೇಗೌಡರ ಭಾವಚಿತ್ರಕ್ಕೆ ಮಸಿ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: ನಾಡಪ್ರಭು ಕೆಂಪೇಗೌಡರ ಭಾವಚಿತ್ರಕ್ಕೆ ಮಸಿ ಬಳಿದು ನಾಡಿಗೆ ಅವಮಾನ ಮಾಡಲಾಗಿದೆ. ಆರೋಪಿಗಳನ್ನು ಬಂಧಿಸಬೇಕು ಎಂದು ಆಗ್ರಹಿಸಿ ಕೆಂಪೇಗೌಡ ಹೋರಾಟ ಸಮಿತಿ ನೇತೃತ್ವದಲ್ಲಿ ರಾಜ್ಯ ಒಕ್ಕಲಿಗರ ಜಾಗೃತಿ ವೇದಿಕೆ, ನಾಡಪ್ರಭು ಕೆಂಪೇಗೌಡ ಸೇವಾ ಟ್ರಸ್ಟ್ ಹಾಗೂ ಒಕ್ಕಲಿಗ ಮುಖಂಡರು ಕುಣಿಗಲ್ ವೃತ್ತದಲ್ಲಿ ಕಪ್ಪು ಪಟ್ಟಿ ಧರಿಸಿ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ತಪ್ಪಿತಸ್ಥರನ್ನು ಪತ್ತೆಹಚ್ಚಿ ಗಡಿಪಾರು ಮಾಡಬೇಕು. ಪತ್ತೆಹಚ್ಚಲು ವಿಳಂಬವಾದರೆ ನೆಲಮಂಗಲ ಬಂದ್ ಮಾಡಿ ಪ್ರತಿಭಟಿಸಲಾಗುವುದು. ಎಂದು ಕೆಂಪೇಗೌಡ ಹೋರಾಟ ಸಮಿತಿ ಅಧ್ಯಕ್ಷ ಎಚ್.ಜಿ. ರಾಜು ಎಚ್ಚರಿಕೆ ನೀಡಿದರು.

ಶತಮಾನಗಳ ಹಿಂದೆಯೇ ನಗರದ ಅಭಿವೃದ್ಧಿಗೆ ಹಾಗೂ ಜನರ ಏಳಿಗೆಗೆ ಶ್ರಮಿಸಿದ ಕೆಂಪೇಗೌಡರ ಭಾವಚಿತ್ರಕ್ಕೆ ಕಪ್ಪು ಮಸಿ ಬಳಿದಿದ್ದು ಖಂಡನೀಯ ಎಂದು ಹೊಯ್ಸಳಸೇನೆ ರಾಜ್ಯಾಧ್ಯಕ್ಷ ಬಿ.ಎಸ್.ಕೃಷ್ಣಮೂರ್ತಿ ತಿಳಿಸಿದರು.




ಕೆಂಪೇಗೌಡರ ಭಾವಚಿತ್ರಕ್ಕೆ ಕಪ್ಪುಮಸಿ ಬಳಿದಿರುವುದನ್ನು ಖಂಡಿಸಿ ಕೆಂಪೇಗೌಡ ಹೋರಾಟ ಸಮಿತಿ ನೇತೃತ್ವದಲ್ಲಿ ಕಪ್ಪುಪಟ್ಟಿ ಧರಿಸಿ, ಹೆದ್ದಾರಿ ತಡೆದು ಪ್ರತಿಭಟಿಸಿದರು. ಗೋಪಿ, ರಾಮಕೃಷ್ಣಪ್ಪ, ಎಚ್.ಜಿ.ರಾಜು, ನಾಗರಾಜು, ನಗರಸಭೆ ಸದಸ್ಯ ಆಂಜನಮೂರ್ತಿ, ಹೊಯ್ಸಳಸೇನೆ ರಾಜ್ಯಾಧ್ಯಕ್ಷ ಕೃಷ್ಣಮೂರ್ತಿ ಇದ್ದಾರೆ.

ರಾಷ್ಟ್ರೀಯ ಹೆದ್ದಾರಿ 48 ಹಾಗು 75 ಸೇರುವ ಕುಣಿಗಲ್ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ತಡೆದಿದ್ದರಿಂದ 2 ಗಂಟೆಗಳ ಕಾಲ ಸಂಚಾರ ದಟ್ಟಣೆ ಉಂಟಾಯಿತು. ಪೊಲೀಸರು ಪರಿಸ್ಥಿತಿ ನಿಯಂತ್ರಿಸಿ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ನಗರಸಭೆ ಸದಸ್ಯ ಆಂಜನಮೂರ್ತಿ, ಒಕ್ಕಲಿಗರ ಸಂಘದ ತಾಲ್ಲೂಕು ಅಧ್ಯಕ್ಷ ಬಿ.ಕೆ. ತಿಮ್ಮರಾಜು, ಕಾರ್ಯದರ್ಶಿ ಬೈರಪ್ಪ, ಜಂಟಿ ಕಾರ್ಯದರ್ಶಿ ಲಕ್ಷ್ಮೀವೆಂಕಟೇಶ್, ನಾರಾಯಣಗೌಡ, ರಾಮಕೃಷ್ಣಪ್ಪ, ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರದೀಪ್, ಪ್ರಮೋದ್‌ಕುಮಾರ್ ಇದ್ದರು.

ನಿಯಂತ್ರಣ ತಪ್ಪಿ ಮನೆಗೆ ನುಗ್ಗಿದ ಲಾರಿ


ಆನೇಕಲ್ ತಾಲ್ಲೂಕಿನ ಬನ್ನೇರುಘಟ್ಟ ಸಮೀಪದ ಬೇಗಿಹಳ್ಳಿ ಬಳಿ ಲಾರಿಯೊಂದು ನಿಯಂತ್ರಣ ತಪ್ಪಿ ಮನೆಗೆ ನುಗ್ಗಿದ್ದರಿಂದ ಮನೆ ಪಕ್ಕದಲ್ಲಿದ್ದ ಅಂಗಡಿ ವಸ್ತುಗಳು ಚಲ್ಲಾಪಿಲ್ಲಿಯಾಗಿರುವುದು

ಪ್ರಜಾವಾಣಿ ವಾರ್ತೆ

ಆನೇಕಲ್: ಚಾಲಕನ ನಿಯಂತ್ರಣ ತಪ್ಪಿದ ಲಾರಿಯೊಂದು ಡಿವೈಡರ್‌ಗೆ ಡಿಕ್ಕಿ ಹೊಡೆದು ರಸ್ತೆ ಪಕ್ಕದಲ್ಲಿದ್ದ ಮನೆಗೆ ನುಗ್ಗಿದ್ದರಿಂದ ಮನೆ ಚಾವಣಿ ಛಿದ್ರಗೊಂಡಿರುವ ಘಟನೆ ಬನ್ನೇರುಘಟ್ಟ ಸಮೀಪದ ಬೇಗಿಹಳ್ಳಿ ಬಳಿ ಶುಕ್ರವಾರ ನಡೆದಿದೆ.

ಬನ್ನೇರುಘಟ್ಟದಿಂದ ಜಿಗಣಿ ಕಡೆಗೆ ಬರುತ್ತಿದ್ದ ಲಾರಿ ಚಾಲಕನ ನಿಯಂತ್ರಣ ತಪ್ಪಿ ಡಿವೈಡರ್‌ಗೆ ಡಿಕ್ಕಿ ಹೊಡೆದು ರಸ್ತೆ ಪಕ್ಕದಲ್ಲಿದ್ದ ಯಲ್ಲಪ್ಪ ಎಂಬುವವರ ಮನೆಗೆ ನುಗ್ಗಿದೆ. ಮೇಲ್ಚಾವಣಿಗೆ ಹಾಕಿದ್ದ ಶೀಟ್‌ಗಳು ಮುರಿದು, ಮನೆಯಲ್ಲಿದ್ದ ಸಾಮಗ್ರಿ ಚಲ್ಲಾಪಿಲ್ಲಿಯಾಗಿವೆ.

ಮನೆ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನವೊಂದು ಜಖಂಗೊಂಡಿದೆ. ಮನೆಯಲ್ಲಿದ್ದ ಯಲ್ಲಪ್ಪ ಮತ್ತು ಹೇಮಲತಾ ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಲಾರಿ ಚಾಲಕ ಜಿಗಣಿಯ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಬನ್ನೇರುಘಟ್ಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದೇಶಿ ಪ್ರಜೆಗಳಿಂದ ಪೊಲೀಸರ ಮೇಲೆ ಹಲ್ಲೆ

ತುಮಕೂರು: ನಗರದ ದಿಬ್ಬೂರು ಬಳಿಯ ನಿರಾಶ್ರಿತರ ಕೇಂದ್ರದಲ್ಲಿ ವಾಸವಿದ್ದ ವಿದೇಶಿ ಪ್ರಜೆಗಳು ಕೇಂದ್ರದ ಸಿಬ್ಬಂದಿ ಮತ್ತು ಮಹಿಳಾ ಪೊಲೀಸ್ ಕಾನ್‌ಸ್ಟೆಬಲ್ ಗಳಿಬ್ಬರ ಮೇಲೆ ಶುಕ್ರವಾರ ಹಲ್ಲೆ ನಡೆಸಿದ್ದಾರೆ.

ಬಾಂಗ್ಲಾದೇಶ, ನೈಜೀರಿಯಾ ಮತ್ತು ಇತರ ದೇಶಗಳ 27 ಮಂದಿ ಮಹಿಳೆಯರು ವೀಸಾ ಅವಧಿ ಮುಗಿದಿರುವುದು ಸೇರಿದಂತೆ ವಿವಿಧ ಕಾರಣಗಳಿಂದ ನಿರಾಶ್ರಿತ ಕೇಂದ್ರದಲ್ಲಿ ಆಶ್ರಯ ಪಡೆದಿದ್ದರು. ಕಳೆದ ಎರಡು ತಿಂಗಳಿನಿಂದ ಇಲ್ಲಿಯೇ ಇದ್ದರು. ನಾಲ್ಕು ಮಂದಿ ವಿದೇಶಿ ಮಹಿಳೆಯರು, ಪೊಲೀಸ್ ಕಾನ್‌ಸ್ಟೆಬಲ್‌ಗಳಾದ ಚಂದ್ರಕಲಾ, ತಾಸೀನಾ ಬಾನು, ಕೇಂದ್ರದ ವಾಹನ ಚಾಲಕ ಬಸವರಾಜು, ಅಡುಗೆ ಸಹಾಯಕಿ ಲಕ್ಷ್ಮಿ ಎಂಬುವರ ಮೇಲೆ ಹಲ್ಲೆ ನಡೆಸಿದ್ದಾರೆ.

‘ಅಡುಗೆ ಮಾಡಿಕೊಳ್ಳಲು ಅವರಿಗೆ ಗ್ಯಾಸ್ ಸಿಲಿಂಡರ್ ನೀಡಲಾಗಿತ್ತು. ಅದನ್ನು ವಾಪಸ್ ಕೇಳಲು ಹೋದಾಗ ಹಲ್ಲೆ ನಡೆಸಿದರು. ಮಹಿಳಾ ಪೊಲೀಸ್ ಕಾನ್‌ಸ್ಟೆಬಲ್‌ಗಳ ಮೇಲೂ ಹಲ್ಲೆ ಮಾಡಿದ್ದಾರೆ’ ಎಂದು ಚಾಲಕ ಬಸವರಾಜು ತಿಳಿಸಿದರು. ‘ಹಲ್ಲೆ ನಡೆಸಿದ ವಿದೇಶಿ ಪ್ರಜೆಗಳ ವಿರುದ್ಧ ಪ್ರಕರಣ ದಾಖಲಿಸಲಾಗುವುದು’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಕೆ.ಶಹಪೂರವಾಡ್ ತಿಳಿಸಿದರು.

ಅಪರಾಧ ಸುದ್ದಿ

ಅಪಹರಣ ಪ್ರಕರಣ ಸುಖಾಂತ್ಯ

ಪ್ರಜಾವಾಣಿ ವಾರ್ತೆ


ಟಿಂಬರ್ ಬಾಬು

ಮಾಲೂರು: ಅಪಹರಣಕ್ಕೆ ಒಳಗಾಗಿದ್ದ ಉದ್ಯಮಿ ಟಿಂಬರ್ ಬಾಬು ಅವರನ್ನು ಅಪಹರಣಕಾರರು ಆಂಧ್ರಪ್ರದೇಶದ ಪಲಮನೇರು ಅರಣ್ಯ ಪ್ರದೇಶದಲ್ಲಿ ಬಿಟ್ಟು ಹೋಗಿದ್ದು, ಗುರುವಾರ ರಾತ್ರಿ ಸುರಕ್ಷಿತವಾಗಿ ಮನೆಗೆ ಬಂದಿದ್ದಾರೆ.

ಬುಧವಾರ ಪಟ್ಟಣದ ಮಾರುತಿ ಬಡಾವಣೆ ಉದ್ಯಮಿ ಟಿಂಬರ್ ಬಾಬು ಅವರನ್ನು ಅಪರಿಚಿತರು ಹೆಡಗಿನಬೆಲೆ ಗೇಟ್‌ನ ಇಟ್ಟಿಗೆ ಕಾರ್ಖಾನೆ ಬಳಿ ಅಪಹರಣ ಮಾಡಿದ್ದರು. ಅವರ ಕುಟುಂಬಕ್ಕೆ ಬೆದರಿಕೆ ಒಡ್ಡಿ ₹5 ಕೋಟಿ ಹಣಕ್ಕೆ ಬೇಡಿಕೆ ಇಟ್ಟಿದ್ದರು. ಅವರ ಪುತ್ರ ಮಂಜುನಾಥ್ ಪಟ್ಟಣದ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಆರೋಪಿಗಳ ಪತ್ತೆಗೆ ಶೋಧ ನಡೆದಿದೆ.

ಆಸ್ತಿಗಾಗಿ ಕೊಲೆ

ಮಾಗಡಿ: ಆಸ್ತಿಗಾಗಿ ಅಣ್ಣ ತಮ್ಮನನ್ನು ಮಚ್ಚಿನಿಂದ ಹೊಡೆದು ಕೊಲೆ ಮಾಡಿರುವ ಘಟನೆ ತಾಲ್ಲೂಕಿನ ನೆಸೆಪಾಳ್ಯ ಗ್ರಾಮದಲ್ಲಿ ಶುಕ್ರವಾರ ಬೆಳಿಗ್ಗೆ ನಡೆದಿದೆ.

ನಾಗರಾಜು (34) ಕೊಲೆಯಾದವರು.

ಅಣ್ಣ ರಾಮಚಂದ್ರ ಕೊಲೆ ಮಾಡಿದ ಆರೋಪಿ. ಕೃತ್ಯದ ಬಳಿಕ ಆತ ಮಾಗಡಿ ಪೊಲೀಸ್ ಠಾಣೆಗೆ ಶರಣಾಗಿದ್ದಾನೆ.

ನಾಗರಾಜು ದಂಪತಿಗೆ ಮಕ್ಕಳಿರಲಿಲ್ಲ. ಹಾಗಾಗಿ, ಆಸ್ತಿಯ ಪಾಲನ್ನು ತನಗೇ ಬಿಟ್ಟು ಕೊಡುವಂತೆ ಅಣ್ಣ ರಾಮಚಂದ್ರ ತಮ್ಮನನ್ನು ಒತ್ತಾಯಿಸುತ್ತಿದ್ದ. ಇದೇ ವಿಷಯದಕ್ಕೆ ಇಬ್ಬರ ನಡುವೆ ಆಗಾಗ ಜಗಳವಾಗಿತ್ತು.

8ಕ್ಕೆ ರಾಷ್ಟ್ರೀಯ ಲೋಕ ಅದಾಲತ್

ಪ್ರಜಾವಾಣಿ ವಾರ್ತೆ


ಕೆ.ಸೋಮಶೇಖರ್


ಜಿ.ನರೇಂದರ್

ಬೆಂಗಳೂರು: ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ (ಕೆಎಸ್‌ಎಲ್‌ಎಸ್‌ಎ) ವತಿಯಿಂದ ಇದೇ 8ರಂದು ಹೈಕೋರ್ಟ್ ಸೇರಿದಂತೆ ಎಲ್ಲ ಜಿಲ್ಲೆಗಳು ಹಾಗೂ ತಾಲ್ಲೂಕು ನ್ಯಾಯಾಲಯಗಳಲ್ಲಿ ರಾಷ್ಟ್ರೀಯ ಲೋಕ ಅದಾಲತ್ ಹಮ್ಮಿಕೊಳ್ಳಲಾಗಿದೆ.

ಈ ಕುರಿತ ವಿವರಗಳನ್ನು ಕೆಎಸ್‌ಎಲ್‌ಎಸ್‌ಎ ಕಾರ್ಯನಿರ್ವಾಹಕ ಅಧ್ಯಕ್ಷರೂ ಆದ ಹೈಕೋರ್ಟ್ ನ್ಯಾಯಮೂರ್ತಿ ಜಿ.ನರೇಂದರ್ ಗುರುವಾರ ಮಾಧ್ಯಮ ಗೋಷ್ಠಿಯಲ್ಲಿ ವಿವರಿಸಿ, ‘ರಾಜ್ಯದಾದ್ಯಂತ ಒಟ್ಟು 20 ಲಕ್ಷದಷ್ಟು ಪ್ರಕರಣಗಳ ವಿಚಾರಣೆ ನಡೆಯಲಿದೆ’ ಎಂದರು.

‘ರಾಜಿ ಮಾಡಿಕೊಳ್ಳಬಹುದಾದ ನ್ಯಾಯಾಲಯಗಳಲ್ಲಿ ಬಾಕಿಯಿರುವ ಹಾಗೂ ವ್ಯಾಜ್ಯಪೂರ್ವ ಪ್ರಕರಣಗಳನ್ನು ಈ ಲೋಕ ಅದಾಲತ್‌ನಲ್ಲಿ ಇತ್ಯರ್ಥಪಡಿಸಿಕೊಳ್ಳಲು ಇದೊಂದು ಸುವರ್ಣಾವಕಾಶ’ ಎಂದು ಅವರು ತಿಳಿಸಿದರು.

‘ಕೈಗಾರಿಕಾ ಕಾರ್ಮಿಕರ ವೇತನಕ್ಕೆ ಸಂಬಂಧಿಸಿದ ಕ್ಲೇಮ್‌ಗಳು, ಮೋಟಾರು ಅಪಘಾತ ಪರಿಹಾರ ನ್ಯಾಯಮಂಡಳಿ ಪ್ರಕರಣ, ಹಣಕಾಸು ಸಂಸ್ಥೆಗಳಿಗೆ ಸಂಬಂಧಿಸಿದ, ಚೆಕ್ ಬೌನ್ಸ್, ವೈವಾಹಿಕ, ಕೌಟುಂಬಿಕ ಪ್ರಕರಣಗಳೂ (ವಿಚ್ಛೇದನ ಹೊರತುಪಡಿಸಿ) ಸೇರಿದಂತೆ ರಾಜಿಯಾಗಬಹುದಾದ ಸಿವಿಲ್ ಮತ್ತು ಕ್ರಿಮಿನಲ್ ವ್ಯಾಜ್ಯಗಳನ್ನು ಈ ಅದಾಲತ್‌ನಲ್ಲಿ ಪರಿಗಣಿಸಲಾಗುತ್ತದೆ’ ಎಂದು ಹೇಳಿದರು.

‘ಪೊಲೀಸ್ ಇಲಾಖೆಯ ಮಾಹಿತಿ ಪ್ರಕಾರ ರಾಜ್ಯದಾದ್ಯಂತ ಎರಡು ಕೋಟಿಗೂ ಹೆಚ್ಚು ಟ್ರಾಫಿಕ್ ಚಲನ್ ಪ್ರಕರಣಗಳು ದಂಡ ವಸೂಲಾತಿಗೆ ಬಾಕಿ ಇವೆ. ಇವುಗಳಿಂದ ಸಾವಿರ ಕೋಟಿಗೂ ಹೆಚ್ಚಿನ ದಂಡ ಪಾವತಿಸಿಕೊಳ್ಳಬಹುದಾಗಿದೆ. ಇದರಿಂದ ‘ಕಾನೂನು ಸೇವೆಗಳ ಪ್ರಾಧಿಕಾರವು ಜೂನ್ 14ರಂದು ಸರ್ಕಾರದೊಂದಿಗೆ ಸಭೆ ನಡೆಸಿ ಟ್ರಾಫಿಕ್ ಚಲನ್ ಪ್ರಕರಣಗಳ ದಂಡದಲ್ಲಿ ಶೇ 50ರಷ್ಟು ವಿನಾಯಿತಿ ನೀಡುವಂತೆ ಕೋರಿತ್ತು. ಸರ್ಕಾರ ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ್ದು, 2023ರ ಫೆಬ್ರುವರಿ 1ಕ್ಕೂ ಹಿಂದಿನ ಟ್ರಾಫಿಕ್ ಚಲನ್ ಪ್ರಕರಣಗಳಲ್ಲಿ ಶೇ 50ರ ದಂಡದ ಮೊತ್ತ ವಿನಾಯಿತಿ ನೀಡಿ ಇದೇ 5ರಂದು ಆದೇಶಿಸಿದೆ.

ಸಾರ್ವಜನಿಕರು ಈ ಅವಕಾಶದ ಸದುಪಯೋಗ ಮಾಡಿಕೊಳ್ಳಬೇಕು’ ಎಂದು ನ್ಯಾಯಮೂರ್ತಿ ಜಿ.ನರೇಂದರ್ ಅವರು ತಿಳಿಸಿದರು.

ಕಾಂಗ್ರೆಸ್ ಮುಖಂಡ ರಾಮುಲು ಮನೆಗೆ ಸಂಸದ ಸಂಗಣ್ಣ ಭೇಟಿ

ಪ್ರಜಾವಾಣಿ ವಾರ್ತೆ


ಸಂಗಣ್ಣ ಕರಡಿ

ಗಂಗಾವತಿ: ಮಾಜಿ ಸಂಸದ ಹಾಗೂ ಕಾಂಗ್ರೆಸ್ ಕಟ್ಟಾಳು ಎಚ್‌.ಜಿ. ರಾಮುಲು ಅವರ ಇಲ್ಲಿನ ನಿವಾಸಕ್ಕೆ ಬಿಜೆಪಿ ಸಂಸದ ಸಂಗಣ್ಣ ಕರಡಿ ಶುಕ್ರವಾರ ಭೇಟಿ ನೀಡಿದ್ದು ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

ಮುಂಬರುವ ಲೋಕಸಭಾ ಚುನಾವಣೆಗೆ ಟಿಕೆಟ್ ಕುರಿತು ಚರ್ಚೆ ನಡೆದಿರುವ ಈ ಸಂದರ್ಭದಲ್ಲಿ ಅವರು ರಾಮುಲು ಮನೆಗೆ ಭೇಟಿ ನೀಡಿದ್ದು ಕುತೂಹಲ ಮೂಡಿಸಿದೆ.

ಸತತ ಎರಡು ಬಾರಿ ಸಂಸದರಾಗಿರುವ ಸಂಗಣ್ಣ ಅವರು ಮೂರನೇ ಬಾರಿಗೆ ಟಿಕೆಟ್ ಪಡೆಯುವ ಪ್ರಯತ್ನದಲ್ಲಿದ್ದಾರೆ.

ಕಾಡಾ ಮಾಜಿ ಅಧ್ಯಕ್ಷ ತಿಪ್ಪೇರುದ್ರಸ್ವಾಮಿ, ಬಿಜೆಪಿಯ ವಿರೂಪಾಕ್ಷಪ್ಪ ಸಿಂಗನಾಳ, ಹನುಮಂತಪ್ಪ ನಾಯಕ, ಸುರೇಶ ಗೌರಪ್ಪ ಇದ್ದರು.

ಸಂಸದರ ಭೇಟಿ ಬಗ್ಗೆ ಪ್ರತಿಕ್ರಿಯಿಸಿದ ಎಚ್‌.ಜಿ. ರಾಮುಲು ಅವರ ಪುತ್ರ ಹಾಗೂ ಕಾಂಗ್ರೆಸ್ ಮುಖಂಡ ಎಚ್‌.ಆರ್. ಶ್ರೀನಾಥ್, ‘ಸಂಗಣ್ಣ ಕರಡಿ ತಂದೆ ಬಳಿ ಗೌಪ್ಯವಾಗಿ ಚರ್ಚೆ ನಡೆಸಿದ್ದು, ಯಾವ ವಿಷಯದ ಬಗ್ಗೆ ಮಾತನಾಡಿದ್ದಾರೆ ಎನ್ನುವುದು ಗೊತ್ತಿಲ್ಲ. ಒಂದು ವೇಳೆ ಅವರು ಕಾಂಗ್ರೆಸ್‌ಗೆ ಬರುವುದಾದರೆ ಸ್ವಾಗತ’ ಎಂದು ಅವರು ಹೇಳಿದರು..

ಆರೋಗ್ಯ, ಶಿಕ್ಷಣಕ್ಕೆ ರೋಟರಿ ನೆರವು

ಪ್ರಜಾವಾಣಿ ವಾರ್ತೆ



ರೋಟರಿ ಜಿಲ್ಲೆ 3192ರ ಪ್ರಥಮ ಜಿಲ್ಲಾ ಪಾಲರಾಗಿ ಶ್ರೀನಿವಾಸಮೂರ್ತಿ ಅವರು ಅಧಿಕಾರ ವಹಿಸಿಕೊಂಡರು.

ರಾಜರಾಜೇಶ್ವರಿನಗರ: ರೋಟರಿ ವತಿಯಿಂದ ಆರೋಗ್ಯ, ಶಿಕ್ಷಣ ಕ್ಷೇತ್ರ, ಶಾಲಾ-ಕಾಲೇಜು ಅಭಿವೃದ್ಧಿ, ಮೂಲ ಸೌಲಭ್ಯ ದೊರಕಿಸಿ ಕೊಡಲಾಗುವುದು ಎಂದು ನೂತನ ರೋಟರಿ ಜಿಲ್ಲೆ 3192ರ ಪ್ರಥಮ ಜಿಲ್ಲಾ ಪಾಲಕ ಶ್ರೀನಿವಾಸ್ ಮೂರ್ತಿ ಹೇಳಿದರು.

ನೂತನ ರೋಟರಿ ಜಿಲ್ಲೆ 3192ರ ಪ್ರಥಮ ಜಿಲ್ಲಾ ಪಾಲಕರಾಗಿ ಅಧಿಕಾರ ವಹಿಸಿಕೊಂಡು ಮಾತನಾಡಿದ ಅವರು, ‘ರೋಟರಿಯನ್‌ಗಳು ತಮ್ಮ ದುಡಿಮೆಯಲ್ಲಿ ಇಂತಿಷ್ಟು ಹಣವನ್ನು ತೆಗೆದಿರಿಸಿಕೊಂಡು ಸಮಾಜಮುಖಿ ಸೇವೆ ಮಾಡುತ್ತಿದ್ದಾರೆ. ನಮ್ಮ ಅವಧಿಯಲ್ಲಿ ಸುಮಾರು ₹ 150ರಿಂದ ₹ 200 ಕೋಟಿ ವೆಚ್ಚದಲ್ಲಿ ಸಮಾಜಸೇವೆ ಮಾಡಲಾಗುವುದು’ ಎಂದು ತಿಳಿಸಿದರು.

ಎಂ.ಎಸ್.ರಾಮಯ್ಯ ಶಿಕ್ಷಣ ಸಂಸ್ಥೆಯ ಡಾ.ಎಂ.ಆರ್.ಜಯರಾಂ ಮಾತನಾಡಿ, ರೋಟರಿಯ ಸಮಾಜ ಮುಖಿ ಸೇವೆ ಶ್ಲಾಘನೀಯವಾಗಿದ್ದು, ರಾಜಕೀಯವಿಲ್ಲದೆ ರೋಟರಿಯನ್‌ಗಳು ಸೇವೆ ಮಾಡುತ್ತಿದ್ದಾರೆ. ಅವರ ಸೇವೆಯಲ್ಲಿ ನಾನು ತೊಡಗಿಸಿಕೊಂಡು ಉಚಿತ ಡಯಾಲಿಸಿಸ್ ಕೇಂದ್ರಕ್ಕೆ ಆರ್ಥಿಕ ನೆರವು ನೀಡುವುದಾಗಿ ಭರವಸೆ ನೀಡಿದರು.

ಜಿಲ್ಲಾ ರೋಟರಿ 3192ರ ಪ್ರಚಾರ ಸಮಿತಿಯ ಅಧ್ಯಕ್ಷ ಕೆ.ಟಿ.ನಿರಂಜನ್ ಮಾತನಾಡಿದರು. ನಿರ್ದೇಶಕ ರಾಜು ಸುಬ್ರಹ್ಮಣ್ಯ, ಜಿಲ್ಲಾ ರೋಟರಿ 3192ರ ಪ್ರಚಾರ ಸಮಿತಿಯ ಅಧ್ಯಕ್ಷ ಕೆ.ಟಿ. ನಿರಂಜನ್, ಜಿತೇಂದ್ರ ಅನೇಜ, ಡಾ.ಎಸ್.ನಾಗೇಂದ್ರ, ವಿಜಯ ಶ್ರೀನಿವಾಸಮೂರ್ತಿ ಇದ್ದರು.

‘ಐಐಎಸ್ಸಿ ಧೋರಣೆ ಖಂಡನೀಯ’

ಬೆಂಗಳೂರು: ಕಾನೂನುಬಾಹಿರ ಚಟುವಟಿಕೆ ನಿಗ್ರಹ ಕಾಯ್ದೆ (ಯುಎಪಿಎ) ಕುರಿತು ಚರ್ಚೆ ನಡೆಸಲು ಅವಕಾಶ ನೀಡದಿರುವ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ) ಧೋರಣೆಯನ್ನು ಎಐಡಿಎಸ್‌ಒ ಖಂಡಿಸಿದೆ.

‘ವಿದ್ಯಾರ್ಥಿಗಳು ಆಯೋಜಿಸಿದ್ದ ಚರ್ಚಾ ಕಾರ್ಯಕ್ರಮವನ್ನು ಸಂಸ್ಥೆಯ ಆಡಳಿತ ಮಂಡಳಿ ರದ್ದುಗೊಳಿಸಿದೆ. ಸಂಸ್ಥೆಯ ಈ ನಡೆಯು ಶಿಕ್ಷಣ ಸಂಸ್ಥೆಯಲ್ಲಿನ ಪ್ರಜಾತಾಂತ್ರಿಕ ವಾತಾವರಣದ ಮೇಲಿನ ದಾಳಿಯಾಗಿದೆ’ ಎಂದು ದೂರಿದೆ.

‘ಶಿಕ್ಷಣ ಸಂಸ್ಥೆಗಳು ಸಾಮಾಜಿಕ ವಿಷಯಗಳ ಕುರಿತು ವೈಚಾರಿಕ ಚರ್ಚೆಗೆ ಅವಕಾಶ ನೀಡಬೇಕು. ಚಿಂತನೆಗಳು ಎಲ್ಲ ದಿಕ್ಕಿನಿಂದಲೂ ಒಂದೆಡೆ ಚರ್ಚೆಗೊಳಪಡಬೇಕು. ಸತ್ಯದ ಹುಡುಕಾಟಕ್ಕೆ ಪೂರಕ ವಿಚಾರ ಸಂಘರ್ಷ ನಡೆಯಬೇಕು. ವಿದ್ಯಾರ್ಥಿಗಳಲ್ಲಿ ಪ್ರಶ್ನಿಸುವ ಮನೋಭಾವವನ್ನು, ಸತ್ಯವನ್ನು ಹುಡುಕಾಟ ನಡೆಸುವ ಪ್ರವೃತ್ತಿ ಮತ್ತು ನ್ಯಾಯಕ್ಕಾಗಿ ಹೋರಾಡುವ ಸ್ವಭಾವವನ್ನು ಪ್ರೋತ್ಸಾಹಿಸಬೇಕು’ ಎಂದು ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ತಿಳಿಸಿದ್ದಾರೆ.

ಪಾಕ್ ಏಜೆಂಟ್‌ಗೆ ಮಾಹಿತಿ ಹಂಚಿದ್ದ ವಿಜ್ಞಾನಿ

ಪುಣೆ (ಪಿಟಿಐ): ಪಾಕಿಸ್ತಾನಿ ಮಹಿಳಾ ಏಜೆಂಟ್‌ನಿಂದ ಆಕರ್ಷಿತರಾಗಿದ್ದ ಡಿಆರ್‌ಡಿಒ ವಿಜ್ಞಾನಿ ಪ್ರದೀಪ್ ಕುರುಲ್ಕರ್ ಅವರು, ಭಾರತೀಯ ಕ್ಷಿಪಣಿ ವ್ಯವಸ್ಥೆಗಳೂ ಸೇರಿದಂತೆ ಇತರ ವರ್ಗೀಕೃತ ರಕ್ಷಣಾ ಯೋಜನೆಗಳ ಕುರಿತು ಅವರೊಂದಿಗೆ ಚಾಟ್ ಮಾಡಿದ್ದರು.

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ) ಪುಣೆ ಪ್ರಯೋಗಾಲಯದ ನಿರ್ದೇಶಕರಾಗಿದ್ದ ಪ್ರದಿಪ್ ಅವರ ವಿರುದ್ಧ ಮಹಾರಾಷ್ಟ್ರ ಪೊಲೀಸರ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಕಳೆದ ವಾರ ಇಲ್ಲಿನ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಿತ್ತು.

ಅಧಿಕೃತ ಗೋಪ್ಯ ಕಾಯ್ದೆಯಡಿ ಪ್ರದೀಪ್ ಅವರನ್ನು ಮೇ 3ರಂದು ಬಂಧಿಸಲಾಗಿದ್ದು, ಅವರು ಸದ್ಯ ನ್ಯಾಯಾಂಗ ವಶದಲ್ಲಿದ್ದಾರೆ.

‘ಜರಾ ದಾಸ್‌ಗುಪ್ತಾ’ ಹೆಸರಿನಿಂದ ಗುರುತಿಸಿಕೊಂಡಿದ್ದ ಪಾಕ್ ಏಜೆಂಟ್ ಜತೆ ವಾಟ್ಸ್‌ಆ್ಯಪ್, ವಾಯ್ಸ್ ಮತ್ತು ವಿಡಿಯೊ ಕಾಲ್‌ಗಳ ಮೂಲಕ ಪ್ರದೀಪ್ ಸಂಪರ್ಕದಲ್ಲಿದ್ದರು.

ಯು.ಕೆ ಮೂಲದ ಸಾಫ್ಟ್‌ವೇರ್ ಎಂಜಿನಿಯರ್ ಎಂದು ಗುರುತಿಸಿಕೊಂಡಿದ್ದ ದಾಸ್‌ಗುಪ್ತಾ, ಅಶ್ಲೀಲ ಸಂದೇಶ ಮತ್ತು ವಿಡಿಯೊಗಳನ್ನು ಕಳುಹಿಸುವ ಮೂಲಕ ಪ್ರದೀಪ್ ಜತೆ ಸ್ನೇಹ ಬೆಳೆಸಿದ್ದರು. ತನಿಖೆಯ ಸಂದರ್ಭದಲ್ಲಿ ಈ ಮಹಿಳೆಯ ಐ.ಪಿ ವಿಳಾಸ ಪಾಕಿಸ್ತಾನದಲ್ಲಿದೆ ಎಂಬುದನ್ನು ಪತ್ತೆ ಹಚ್ಚಲಾಗಿದೆ ಎಂದು ಎಟಿಎಸ್ ಚಾರ್ಜ್‌ಶೀಟ್‌ನಲ್ಲಿ ತಿಳಿಸಿದೆ.

ಬ್ರಹ್ಮೋಸ್ ಲಾಂಚರ್, ಡ್ರೋನ್, ಯುಸಿವಿ, ಅಗ್ನಿ ಕ್ಷಿಪಣಿ ಲಾಂಚರ್ ಮತ್ತು ಮಿಲಿಟರಿ ಬ್ರಿಡ್ಜಿಂಗ್ ಸಿಸ್ಟಮ್‌ಗೆ ಸಂಬಂಧಿಸಿದ ಗೋಪ್ಯ ಮತ್ತು ಸೂಕ್ಷ್ಮ ಮಾಹಿತಿಯನ್ನು ಪಡೆಯಲು ಪಾಕಿಸ್ತಾನಿ ಏಜೆಂಟ್ ಪ್ರಯತ್ನಿಸಿದ್ದಾರೆ. ಈ ಮಹಿಳೆಯಿಂದ ಆಕರ್ಷಿತರಾದ ಪ್ರದೀಪ್, ಡಿಆರ್‌ಡಿಒದ ವರ್ಗೀಕೃತ ಮತ್ತು ಸೂಕ್ಷ್ಮ ಮಾಹಿತಿಯನ್ನು ತನ್ನ ವೈಯಕ್ತಿಕ ಫೋನ್‌ನಲ್ಲಿ ಸಂಗ್ರಹಿಸಿ ನಂತರ ಆ ಮಹಿಳೆಯೊಂದಿಗೆ ಹಂಚಿಕೊಂಡಿದ್ದಾರೆ ಎಂದು ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಡ್ರೋನ್ ಅವಿಷ್ಕಾರದಿಂದ ತಂತ್ರಜ್ಞಾನದ ಪ್ರಗತಿ ಸಾಧ್ಯ

ಪ್ರಜಾವಾಣಿ ವಾರ್ತೆ



ನಾಗರಭಾವಿಯ ಡಾ.ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಕೃಷಿ ಕ್ಷೇತ್ರದಲ್ಲಿ ಡ್ರೋನ್ ಅವಿಷ್ಕಾರದ ವಿಚಾರದ ಬಗ್ಗೆ ಹಮ್ಮಿಕೊಂಡಿದ್ದ ವಿಚಾರ ಸಂಕಿರಣವನ್ನು ಕೇಂದ್ರದ ಕಂದಾಯ ಇಲಾಖೆಯ ಉಪ ಆಯುಕ್ತ ಪಿ.ವಿ.ಬೈರಪ್ಪ ಉದ್ಘಾಟಿಸಿದರು. ಡಾ.ಬಿಜಯ್‌ಕುಮಾರ್ ಸಾಹು, ಬಿ.ಎನ್‌ಉಮೇಶ್, ಪುಟ್ಟರಾಜು, ಎಸ್‌ಮರಿಸ್ವಾಮಿ, ಶಿವಮಲ್ಲು ಇದ್ದರು.

ರಾಜರಾಜೇಶ್ವರಿನಗರ: ಕೃಷಿ, ಶಿಕ್ಷಣ, ತಂತ್ರಜ್ಞಾನ, ವೈದ್ಯಕೀಯ, ವಿಜ್ಞಾನ ಕ್ಷೇತ್ರ ಸೇರಿದಂತೆ ಯಾವುದೇ ಕ್ಷೇತ್ರವಾಗಲಿ ಕಠಿಣ ಪರಿಶ್ರಮದಿಂದ ಅಭ್ಯಾಸ, ಅವಿಷ್ಕಾರ, ಸಂಶೋಧನೆ ಮಾಡಿದಾಗ ಯಶಸ್ಸಿನ ಹಾದಿಯಲ್ಲಿ ಸಾಗಬಹುದು ಎಂದು ಕೇಂದ್ರ ಸರ್ಕಾರದ ಕಂದಾಯ ಇಲಾಖೆಯ ಉಪ ಆಯುಕ್ತ ಪಿ.ವಿ. ಬೈರಪ್ಪ ಹೇಳಿದರು.

ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನಾಗರಭಾವಿಯಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆದ ರಾಷ್ಟ್ರೀಯ ಮಟ್ಟದ ತಾಂತ್ರಿಕ ವಸ್ತುಪ್ರದರ್ಶನ, ಡ್ರೋನ್ ಶೃಂಗ ಸಭೆಯಲ್ಲಿ ಅವರು ಮಾತನಾಡಿದರು.

ದೇಶದಲ್ಲಿ ಡ್ರೋನ್ ತಂತ್ರಜ್ಞಾನ ಶರವೇಗದಲ್ಲಿ ಅಭಿವೃದ್ಧಿ ಹೊಂದುತ್ತಿದ್ದು. ಈ ತಂತ್ರಜ್ಞಾನವನ್ನು ಸಂಪೂರ್ಣವಾಗಿ ಬಳಸಿಕೊಂಡು ಕೃಷಿ, ರಕ್ಷಣೆ ಸೇರಿದಂತೆ ಎಲ್ಲ ರಂಗಗಳಲ್ಲಿಯೂ ಪ್ರಗತಿ ಸಾಧಿಸಿದೆ ಎಂದು ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯದ ಕಾರ್ಯದರ್ಶಿ ಬಿ.ಎನ್. ಉಮೇಶ್ ಹೇಳಿದರು.

ಪಿವಿಪಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಸ್.ಮರಿಸ್ವಾಮಿ ಮಾತನಾಡಿ, ಸರಕು ಸಾಗಾಣಿಕೆ, ರಕ್ಷಣೆ, ವಿಜ್ಞಾನ, ತಂತ್ರಜ್ಞಾನ ಕ್ಷೇತ್ರದಲ್ಲಿಯೂ ಡ್ರೋನ್ ಬಳಕೆಯಿಂದ ಪರಿಸರ ಮಾಲಿನ್ಯ ತಡೆಗಟ್ಟಬಹುದಾಗಿದೆ. ಜೊತೆಗೆ ಸಮಯ, ಆರ್ಥಿಕತೆ ಕಡಿಮೆ ಮಾಡಬಹುದಾಗಿದೆ ಎಂದರು.

ರಾಷ್ಟ್ರ, ವಿದೇಶಗಳಲ್ಲಿಯೂ ಡ್ರೋನ್ ತಂತ್ರಜ್ಞಾನ ಮಿಂಚಿನ ವೇಗದಲ್ಲಿ ಅಭಿವೃದ್ಧಿ ಹೊಂದುತ್ತಿದ್ದು, ಯುವಜನತೆ ಹೆಚ್ಚು ಸಂಶೋಧನೆಗಳ ಮೂಲಕ ಡ್ರೋನ್ ತಂತ್ರಜ್ಞಾನ ಅಭಿವೃದ್ಧಿ ಪಡಿಸಬೇಕೆಂದು ಮಂಡ್ಯ ವಿಶ್ವ ವಿದ್ಯಾಲಯದ ಕುಲಪತಿ ಡಾ.ಪುಟ್ಟರಾಜು ಹೇಳಿದರು.

ಡಯಟ್ ವಿಶ್ರಾಂತ ಕುಲಪತಿ ಪ್ರೊ. ಎಲ್.ಎಂ.ಪಟ್ನಾಯಕ್, ರಾಷ್ಟ್ರೀಯ ಸಂಶೋಧನಾ ಅಭಿವೃದ್ಧಿ ನಿಗಮದ ಪ್ರಾದೇಶಿಕ ಮುಖ್ಯಸ್ಥ ಡಾ.ಬಿಜಯ್‌ಕುಮಾರ್ ಸಾಹು, ಪಿವಿಪಿ ಟಸ್ಟಿ ಶಿವಮಲ್ಲು ಇದ್ದರು.

ಬಿಬಿಎಂಪಿ ಶಾಲೆಗಳ ಪ್ರವೇಶದಲ್ಲಿ ಕುಸಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಶಾಲೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ವಿದ್ಯಾರ್ಥಿಗಳ ಪ್ರವೇಶದಲ್ಲಿ ಏರಿಕೆ ಕಂಡುಬಂದಿತ್ತು. ಆದರೆ, ಈ ವರ್ಷ ಶೇ 23ರಷ್ಟು ಕುಸಿತಗೊಂಡಿದೆ.

2022–23ನೇ ಶೈಕ್ಷಣಿಕ ವರ್ಷದಲ್ಲಿ ಬಿಬಿಎಂಪಿ ಶಾಲಾ– ಕಾಲೇಜುಗಳಲ್ಲಿ 26 ಸಾವಿರ ವಿದ್ಯಾರ್ಥಿಗಳಿದ್ದರು. ಈ ವರ್ಷ ಈ ಸಂಖ್ಯೆ 20 ಸಾವಿರಕ್ಕೆ ಇಳಿದಿದೆ.

‘ಬಿಬಿಎಂಪಿ ಶಾಲೆ–ಕಾಲೇಜುಗಳಿಗೆ ಪ್ರವೇಶ ಪಡೆಯಲು ಜುಲೈ 30ರವರೆಗೆ ಸಮಯವಿದೆ. ಹೀಗಾಗಿ, ಪ್ರವೇಶ ಸಂಖ್ಯೆ ಹೆಚ್ಚಾಗುವ ನಿರೀಕ್ಷೆ ಇದೆ’ ಎಂದು ಬಿಬಿಎಂಪಿ ಶಿಕ್ಷಣ ವಿಭಾಗದ ಉಪ ಆಯುಕ್ತ ವೆಂಕಟರಾಜು ತಿಳಿಸಿದರು.

ಶಾಲೆಗಳಲ್ಲಿ ಮೂಲಸೌಕರ್ಯದ ಕೊರತೆ ಮತ್ತು ಶಿಕ್ಷಕರಿಲ್ಲದಿರುವುದು ಹೊಸ ವಿದ್ಯಾರ್ಥಿಗಳ ಪ್ರವೇಶದಲ್ಲಿ ಕುಸಿತವಾಗುತ್ತಿದೆ ಎಂದು ಬಿಬಿಎಂಪಿ ಮೂಲಗಳು ಹೇಳಿವೆ.

‘ಹೊಸ ಪೀಠೋಪಕರಣಗಳನ್ನು ಖರೀದಿಸಬೇಕು ಮತ್ತು ಇತರೆ ಮೂಲಸೌಕರ್ಯಗಳನ್ನು ಒದಗಿಸಬೇಕಿದೆ. ಕೆಲವು ಶಾಲೆಗಳಲ್ಲಿ ಹೊಸ ತರಗತಿ ಕೊಠಡಿಗಳನ್ನು ನಿರ್ಮಿಸಲಾಗುತ್ತಿದೆ. ಇಷ್ಟಾದರೂ ಪ್ರವೇಶದಲ್ಲಿ ಹೆಚ್ಚಳ ಕಾಣುತ್ತಿಲ್ಲ’ ಎಂದು ಬಿಬಿಎಂಪಿ ಅಧಿಕಾರಿಗಳು ಹೇಳಿದರು.

ಶಿಕ್ಷಕರ ಕೊರತೆ ಮತ್ತೊಂದು ಸಮಸ್ಯೆಯಾಗಿದ್ದು, ಸುಮಾರು 800 ಶಿಕ್ಷಕರಿದ್ದು, ಇದರಲ್ಲಿ 640 ಶಿಕ್ಷಕರು ಹೊರಗುತ್ತಿಗೆಯಲ್ಲಿದ್ದಾರೆ. ಕಾಯಂ ಶಿಕ್ಷಕರ ನೇಮಕಕ್ಕೆ ನಗರಾಭಿವೃದ್ಧಿ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ. ಕಾಯಂ ಶಿಕ್ಷಕರ ನೇಮಕ 25 ವರ್ಷದ ಹಿಂದೆ ಆಗಿತ್ತು. ಅವರಲ್ಲಿ ಬಹುತೇಕರು ನಿವೃತ್ತಿ ಅಂಚಿನಲ್ಲಿದ್ದಾರೆ.

ಕೋವಿಡ್ ಸಂದರ್ಭದಲ್ಲಿ ಪೋಷಕರು ಆರ್ಥಿಕ ಸಮಸ್ಯೆಯಲ್ಲಿದ್ದುದ್ದರಿಂದ ಪಾಲಿಕೆ ಶಾಲೆಗಳಿಗೆ ಮಕ್ಕಳನ್ನು ಸೇರಿಸಿದ್ದರು. ಇದೀಗ ಕೆಲವರು ಖಾಸಗಿ ಶಾಲೆಗೆ ಸೇರಿಸಿರುವುದೂ ಮಕ್ಕಳ ಒಟ್ಟಾರೆ ಸಂಖ್ಯೆ ಇಳಿಕೆಗೆ ಕಾರಣವಾಗಿದೆ ಎಂದು ಬಿಬಿಎಂಪಿಯ ಹಿರಿಯ ಅಧಿಕಾರಿಗಳು ಹೇಳಿದರು.

‘ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಟೆಂಡರ್ ಕರೆಯಲಾಗಿತ್ತು. ಅದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಲಿಲ್ಲ. ಹೀಗಾಗಿ ಪ್ರಸ್ತುತವಿರುವ ಸಿಬ್ಬಂದಿಯನ್ನು ಮುಂದುವರಿಸಲು ನಿರ್ಧರಿಸಲಾಗಿದೆ. ಕೆಲವು ಶಿಕ್ಷಕರು ಹುದ್ದೆಗೆ ಸೂಕ್ತವಾಗಿಲ್ಲ ಎಂಬುದು ಕಂಡುಬಂದಿರುವುದರಿಂದ, ಅವರನ್ನು ಬದಲಿಸಲು ಏಜೆನ್ಸಿಗೆ ತಿಳಿಸಲಾಗಿದೆ’ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಹೆಸರಘಟ್ಟ: ನೂತನ ಪ್ರಾರ್ಥನಾ ಸಭಾಂಗಣ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ತೋಟಗೆರೆ ಬಸವೇಶ್ವರ ಗ್ರಾಮಾಂತರ ಪ್ರೌಢಶಾಲೆಯಲ್ಲಿನೂತನ ಪ್ರಾರ್ಥನಾ ಸಭಾಂಗಣ ಮತ್ತು ವಿದ್ಯಾರ್ಥಿ ಸಂಘದ ವಾರ್ಷಿಕ ಚಟುವಟಿಕೆಗಳ ಉದ್ಘಾಟನೆ, ಪ್ರತಿಭಾ ಪುರಸ್ಕಾರ ಮತ್ತು ದಾನಿಗಳಿಗೆ ಸನ್ಮಾನ ಸಮಾರಂಭ ಕಾರ್ಯಕ್ರಮ ನಡೆಯಿತು.

ಶಾಸಕ ಎಸ್.ಆರ್ .ವಿಶ್ವನಾಥ್, ಸಿದ್ಧಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ, ಮಾಜಿ ಸಚಿವ ಬಿ. ರಾಮಚಂದ್ರಗೌಡ ಭಾಗವಹಿಸಿದ್ದರು.

ಸಮಾಜ ಸೇವೆಗಾಗಿ ಆರ್.ಬಿ.ಎಸ್. ಚನ್ನಬಸವ ಆರಾಧ್ಯ ಅವರಿಗೆ ಬಸವ ರತ್ನ ಪ್ರಶಸ್ತಿ, ಬಸವೇಗೌಡರಿಗೆ ಬಸವ ವಿಭೂಷಣ ಪ್ರಶಸ್ತಿ, ವಿ. ರಾಮಸ್ವಾಮಿ ಅವರಿಗೆ ಬಸವ ಭೂಷಣ ಪ್ರಶಸ್ತಿ ನೀಡಲಾಯಿತು. ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಗೋಪಾಲಪುರ ಬಳಿ ಓಡಾಟಕ್ಕೆ ಜನರ ಪರದಾಟ

ಅಂಡರ್‌ಪಾಸ್: ಮಳೆಯಾದರೆ ಸಂಚಾರಕ್ಕೆ ಅಡ್ಡಿ

ಪ್ರಜಾವಾಣಿ ವಾರ್ತೆ


ಗೋಪಾಲಪುರ ಅಂಡರ್‌ಪಾಸ್

ಹೆಸರಘಟ್ಟ: ಹೆಸರಘಟ್ಟ ಸಮೀಪವಿರುವ ಗೋಪಾಲಪುರ ಗ್ರಾಮದ ರೈಲ್ವೆ ಅಂಡರ್ ಪಾಸ್‌ನಲ್ಲಿ ಮಳೆ ನೀರು ನಿಂತರೆ ನೆಲಮಂಗಲ ತಲುಪಲು ಹೆಚ್ಚುವರಿಯಾಗಿ 7 ಕಿ.ಮೀ ಸುತ್ತು ಹಾಕಬೇಕಾದ ಪರಿಸ್ಥಿತಿ ಎದುರಾಗಿದೆ.

ಗೋಪಾಲಪುರದಲ್ಲಿ ಈ ಹಿಂದೆ ಹಳಿ ದಾಟಲು ‘ಓಪನ್‌ಗೇಟ್’ ವ್ಯವಸ್ಥೆ ಇತ್ತು. ಜನ ಅಪಾಯವನ್ನೂ ಲೆಕ್ಕಿಸದೇ ರೈಲ್ವೆ ಹಳಿ ದಾಟಿ ನೆಲಮಂಗಲದ ಕಡೆಗೆ ಹೋಗುತ್ತಿದ್ದರು. ಅವಘಡ ತಪ್ಪಿಸುವ ದೃಷ್ಟಿಯಿಂದ ರೈಲ್ವೆ ಇಲಾಖೆ 7 ವರ್ಷಗಳ ಹಿಂದೆ ಇಲ್ಲಿ ಅಂಡರ್‌ಪಾಸ್ ನಿರ್ಮಿಸಿದೆ. ಗೋಪಾಲಪುರದಿಂದ ನೆಲಮಂಗಲಕ್ಕೆ ಸಂಪರ್ಕ ಕಲ್ಪಿಸುವ ಮಾರ್ಗ ಇದಾಗಿದ್ದು, ಕಾಂಕ್ರೀಟ್ ರಸ್ತೆಯನ್ನೂ ಮಾಡಲಾಗಿದೆ. ರಸ್ತೆ ಉತ್ತಮ ಸ್ಥಿತಿಯಲ್ಲಿದ್ದು, ಪ್ರಯಾಣಿಕರಿಗೆ ಅನುಕೂಲವಾಗಿದೆ. ಆದರೆ, ಮಳೆಗಾಲ ಬಂದರೆ ನಿರುಪಯುಕ್ತವಾಗುತ್ತಿದೆ.

ಗೋಪಾಲಪುರ ಅಂಡರ್ ಪಾಸ್ ಬಳಸಿದರೆ, ಬೊಮ್ಮಶೆಟ್ಟಹಳ್ಳಿ, ಬೆತ್ತನಗೆರೆ ಮಾರ್ಗವಾಗಿ ಕೇವಲ ಐದು ಕಿಲೋ ಮೀಟರ್ ಕ್ರಮಿಸಿ ನೆಲಮಂಗಲ ತಲುಪಬಹುದು. ಅಂಡರ್ ಪಾಸ್‌ನಲ್ಲಿ ನೀರು ತುಂಬಿದರೆ ಗೊಲ್ಲಹಳ್ಳಿ, ಹ್ಯಾಡಾಳು, ಮೈಲನಹಳ್ಳಿ ಮಾರ್ಗವಾಗಿ 13 ಕಿ.ಮೀ ಕ್ರಮಿಸಿ ನೆಲಮಂಗಲ ತಲುಪಬೇಕಾಗುತ್ತದೆ.

ನೀರನ್ನು ಲೆಕ್ಕಿಸದೇ ಅಂಡರ್‌ಪಾಸ್ ಪ್ರವೇಶಿಸಿದ ಅನೇಕ ದ್ವಿಚಕ್ರ ವಾಹನಗಳು ಕೆಟ್ಟುನಿಂತ ಉದಾಹರಣೆಗಳೂ ಇವೆ. ಮಳೆಗಾಲದಲ್ಲಿ ಈ ಮಾರ್ಗವನ್ನು ಬಳಸುವುದನ್ನೇ ನಿಲ್ಲಿಸಿದ್ದಾರೆ.

ರೈಲು ಲೆಕ್ಕಿಸದೇ ಹಳಿ ದಾಟುವ ಜನ: ಕಾಲ್ನಡಿಗೆಯಲ್ಲಿ ಹೋಗುವ ಜನ ಅಂಡರ್‌ಪಾಸ್‌ನಲ್ಲಿ ನೀರು ನಿಂತರೆ ರೈಲ್ವೆ ಹಳಿ ದಾಟಿ ನೆಲಮಂಗಲದ ಕಡೆಗೆ ಹೋಗುವ ಸಾಹಸಕ್ಕೆ ಮುಂದಾಗುತ್ತಾರೆ.

ಮಳೆಗಾಲದಲ್ಲಿ ನೀರು ನಿಲ್ಲುವುದರಿಂದ ಓಡಾಡಲು ಬಹಳ ತೊಂದರೆಯಾಗುತ್ತಿದೆ. ಪಕ್ಕದಲ್ಲೇ ಇರುವ ಕೆರೆಗೆ ನೀರನ್ನು ಅಲ್ಲಿಗೆ ಹರಿಸಬಹುದು. ಆದರೆ ಯಾರೂ ಗಮನ ಹರಿಸುತ್ತಿಲ್ಲ
ಸುರೇಶ್, ಸ್ಥಳೀಯ

ಗೋಪಾಲಪುರ ಅಂಡರ್‌ಪಾಸ್ ರೈಲ್ವೆ ಇಲಾಖೆ ನಿರ್ಮಿಸಿದೆ. ಹೀಗಾಗಿ ಅದನ್ನು ನಾವೇನು ಮಾಡಲು ಸಾಧ್ಯವಿಲ್ಲ. ರೈಲ್ವೆ ಇಲಾಖೆಯವರೇ ಸರಿಪಡಿಸಬೇಕು
ಕಮಲಮ್ಮ, ಗೋಪಾಲಪುರ ಗ್ರಾಮ ಪಂಚಾಯಿತಿ ಅಧ್ಯಕ್ಷೆ

ನಿಲ್ಲಿಸದೆ ಹೋಗುತ್ತಿದ್ದ ಬಸ್‌ಗೆ ಕಲ್ಲು: ಗಾಜು ಪುಡಿ

ಕಲಬುರಗಿ: ನಿಲ್ದಾಣದ ಬಳಿ ಬಸ್ ನಿಲ್ಲಿಸದೇ ಹೋಗುತ್ತಿದ್ದರಿಂದ ಕೋಪಗೊಂಡ ಅನಾಮಿಕರು ಕಲ್ಲು ಬೀಸಿದ ಪರಿಣಾಮ ಬಸ್ ಹಿಂಭಾಗದ ಗಾಜು ಪುಡಿಯಾಗಿದೆ.

ಕಮಲಾಪುರ ತಾಲ್ಲೂಕಿನ ಕಾಳಮಂದಿರಗಿ ಸಮೀಪದ ಗುತ್ತಿ ತಾಂದಾ ಸಮೀಪ ಶುಕ್ರವಾರ ಈ ಘಟನೆ ನಡೆದಿದೆ. ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ ಸೇರಿದ್ದ ಬಸ್‌ಗೆ ಕಲ್ಲು ಹೊಡೆಯಲಾಗಿದೆ. ಕೃತ್ಯ ಎಸಗಿದ್ದವರ ಬಗ್ಗೆ ತಿಳಿದುಬಂದಿಲ್ಲ.

ಲೇಖಕಿಯರ ಸಂಘ: ದತ್ತಿ ಪ್ರಶಸ್ತಿಗೆ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘವು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ 14 ದತ್ತಿ ಪ್ರಶಸ್ತಿಗಳಿಗೆ ಲೇಖಕಿಯರಿಂದ ಕೃತಿಗಳನ್ನು ಆಹ್ವಾನಿಸಿದೆ.

ಕಾಕೋಳು ಸರೋಜಮ್ಮ ದತ್ತಿ ಪ್ರಶಸ್ತಿಗೆ ಕಾದಂಬರಿ, ಭಾಗ್ಯ ನಂಜಪ್ಪ ದತ್ತಿ ಪ್ರಶಸ್ತಿಗೆ ವಿಜ್ಞಾನ ಸಾಹಿತ್ಯ, ನಾಗರತ್ನ ಚಂದ್ರಶೇಖರ್ ದತ್ತಿ ಪ್ರಶಸ್ತಿಗೆ ಲಲಿತ ಪ್ರಬಂಧ, ಜಿ.ವಿ. ನಿರ್ಮಲ ದತ್ತಿ ಪ್ರಶಸ್ತಿಗೆ ಅನುವಾದಿತ ಕಾದಂಬರಿ, ಕಥಾ ಸಂಕಲನ ಹಾಗೂ ಜೀವನ ಚರಿತ್ರೆ, ತ್ರಿವೇಣಿ ಸಾಹಿತ್ಯ ಪುರಸ್ಕಾರಕ್ಕೆ ಸಣ್ಣಕಥೆ ಹಾಗೂ ಕಾದಂಬರಿ, ಕಮಲಾ ರಾಮಸ್ವಾಮಿ ದತ್ತಿ ಪ್ರಶಸ್ತಿಗೆ ಪ್ರವಾಸ ಸಾಹಿತ್ಯ, ನುಗ್ಗೆಹಳ್ಳಿ ಪಂಕಜ ದತ್ತಿ ಪ್ರಶಸ್ತಿಗೆ ಹಾಸ್ಯ ಕೃತಿ, ಗುಣಸಾಗರಿ ನಾಗರಾಜ್ ದತ್ತಿ ಪ್ರಶಸ್ತಿಗೆ ಮಕ್ಕಳ ಸಾಹಿತ್ಯ, ಇಂದಿರಾ ವಾಣಿರಾವ್ ದತ್ತಿ ಪ್ರಶಸ್ತಿಗೆ ನಾಟಕ ಕೃತಿಗಳನ್ನು ಆಹ್ವಾನಿಸಿದೆ.

ಜಯಮ್ಮ ಕರಿಯಣ್ಣ ದತ್ತಿ ಪ್ರಶಸ್ತಿಗೆ ಸಂಶೋಧನೆ, ತ್ರಿವೇಣಿ ದತ್ತಿ ಪ್ರಶಸ್ತಿಗೆ ಕಥೆ ಹಾಗೂ ಕಾದಂಬರಿ, ಉಷಾ ಪಿ.ರೈ ದತ್ತಿ ಪ್ರಶಸ್ತಿಗೆ ಆತ್ಮಕಥೆ ಹಾಗೂ ಸ್ಮೃತಿ ಚಿತ್ರ ಲೇಖನ, ನಿರುಪಮಾ ದತ್ತಿ ಪ್ರಶಸ್ತಿಗೆ ಕತೆಗಳನ್ನು ಆಹ್ವಾನಿಸಲಾಗಿದೆ. 2021 ಹಾಗೂ 2022ನೇ ಸಾಲಿಗೆ ಆಯ್ಕೆ ನಡೆಯಲಿದೆ.

ಎಚ್‌.ವಿ. ಸಾವಿತ್ರಮ್ಮ ದತ್ತಿ ಪ್ರಶಸ್ತಿಗೆ ಕಥಾ ಸಂಕಲನ, ಅನುವಾದಿತ ಕೃತಿ ಹಾಗೂ ಕಾದಂಬರಿಗಳನ್ನು ಪರಿಗಣಿಸಲಾಗುತ್ತದೆ. 2020ನೇ ಸಾಲಿಗೆ ಸ್ವತಂತ್ರ ಕಥಾ ಸಂಕಲನ, 2021ನೇ ಸಾಲಿಗೆ ಅನುವಾದ ಸಾಹಿತ್ಯ ಹಾಗೂ 2022ನೇ ಸಾಲಿಗೆ ಸ್ವತಂತ್ರ ಕನ್ನಡ ಕಾದಂಬರಿ ಆಹ್ವಾನಿಸಲಾಗಿದೆ.

ಕೃತಿಯ ಮೂರು ಪ್ರತಿಗಳು ಹಾಗೂ ವಿಳಾಸ ಸಹಿತ ಅಗತ್ಯ ವಿವರವನ್ನು ಜುಲೈ 6ರೊಳಗೆ ಕರ್ನಾಟಕ ಲೇಖಕಿಯರ ಸಂಘ, 206, 2ನೇ ಮಹಡಿ, ವಿಜಯ ಮ್ಯಾನ್ ಶನ್, 2ನೇ ತಿರುವು, 2ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು-560018 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಸಂಘದ ಅಧ್ಯಕ್ಷೆ ಎಚ್‌.ಎಲ್.ಪುಷ್ಪ ತಿಳಿಸಿದ್ದಾರೆ.

‘ಶೂದ್ರ– ನೆಲದಮಾತು’ ಪ್ರಶಸ್ತಿಗೆ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶೂದ್ರ’ ಪತ್ರಿಕೆಗೆ 50 ವರ್ಷಗಳಾಗುತ್ತಿರುವ ಹಿನ್ನೆಲೆಯಲ್ಲಿ ‘ಶೂದ್ರ ಶ್ರೀನಿವಾಸ ನೆಲದಮಾತು ಪ್ರತಿಷ್ಠಾನ’ ಅಸ್ತಿತ್ವಕ್ಕೆ ಬಂದಿದೆ. ವಿವಿಧ ಕ್ಷೇತ್ರದ ಸಾಧಕರಿಗೆ ಪ್ರಶಸ್ತಿ ನೀಡಲು ಈ ಪ್ರತಿಷ್ಠಾನ ನಿರ್ಧರಿಸಿದೆ.

‘ಶೂದ್ರ’ ಮತ್ತು ‘ನೆಲದ ಮಾತು’ ಪತ್ರಿಕೆಗಳ ವತಿಯಿಂದ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಹೆಸರಿನಲ್ಲಿ ವರ್ಷದ ಅತ್ಯುತ್ತಮ ಕವನ ಸಂಕಲನಕ್ಕೆ ನೀಡುತ್ತಿದ್ದ ಪ್ರಶಸ್ತಿಯನ್ನು ಪ್ರತಿಷ್ಠಾನ ಮುಂದುವರಿಸಲಿದೆ.

ಪ್ರಶಸ್ತಿ ಮೊತ್ತವನ್ನು ₹ 10,000ಕ್ಕೆ ನಿಗದಿ ಮಾಡಲಾಗಿದೆ. ಇದರೊಂದಿಗೆ ಆಯಾ ವರ್ಷದ ಉತ್ತಮ ರಂಗಭೂಮಿ ನಟ/ನಟಿಗೆ ಕೆ. ಮರುಳಸಿದ್ದಪ್ಪ ಹೆಸರಿನಲ್ಲಿ ₹ 10,000, ಕಿ.ರಂ. ನಾಗರಾಜ ಹೆಸರಿನಲ್ಲಿ 'ಅತ್ಯುತ್ತಮ ಸಾಹಿತಿ' ಪ್ರಶಸ್ತಿ ₹ 25,000, ಪ್ರಗತಿಪರ ರೈತ ಎಂ ನಂಜಪ್ಪರೆಡ್ಡಿ ಹೆಸರಿನಲ್ಲಿ ರೈತ ಪ್ರಶಸ್ತಿ ₹ 25,000 ನೀಡಿ ಗೌರವಿಸಲಾಗುವುದು.

ವಿಚಾರ ಸಾಹಿತ್ಯವನ್ನು ಪ್ರೋತ್ಸಾಹಿಸಲು ಆಯಾ ವರ್ಷದ ಉತ್ತಮ ವಿಚಾರ ಸಾಹಿತ್ಯ ಕೃತಿಗೆ ₹ 10,000 ನಗದು ಒಳಗೊಂಡ ‘ಸಿದ್ಧಲಿಂಗಯ್ಯ ವೈಚಾರಿಕ ಪ್ರಶಸ್ತಿ’ ನೀಡಲಾಗುವುದು.

ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಮತ್ತು ಸಿದ್ಧಲಿಂಗಯ್ಯ ಪ್ರಶಸ್ತಿಗಳಿಗಾಗಿ 2022ರಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟವಾಗಿರುವ ಕವನ ಸಂಕಲನ ಮತ್ತು ವಿಚಾರ ಸಾಹಿತ್ಯದ ಎರಡು ಪ್ರತಿಗಳನ್ನು ‘ಮಾನಸ ವಿದ್ಯಾಕೇಂದ್ರ’, ಅಣ್ಣಯ್ಯರೆಡ್ಡಿ ಬಡಾವಣೆ,ಜೆ ಪಿ ನಗರ ಆರನೇ ಹಂತ, ಬೆಂಗಳೂರು 560078 ಇಲ್ಲಿಗೆ ಕಳುಹಿಸಬೇಕು.

ಮಾಹಿತಿಗೆ ಮೊಬೈಲ್: 7899896744 ಸಂಪರ್ಕಿಸಬಹುದು. ಆಗಸ್ಟ್ 10 ಕೃತಿ ಕಳುಹಿಸಲು ಕೊನೇ ದಿನಾಂಕ ಎಂದು ಪ್ರತಿಷ್ಠಾನದ ಅಧ್ಯಕ್ಷ ಎಚ್. ದಂಡಪ್ಪ ಮಾಹಿತಿ ನೀಡಿದ್ದಾರೆ.



ಟೊಮೆಟೊ ರಹಿತ ರಸಂ ವೈವಿಧ್ಯ!

ಈಗ ಟೊಮೆಟೊ ಬೆಲೆ ಗಗನಕ್ಕೇರಿದೆ. ಟೊಮೆಟೊ ಇಲ್ಲದೆ ಅಡುಗೆಯೇ ಸಾಧ್ಯವಿಲ್ಲ ಎನ್ನುವ ಮಟ್ಟಿಗೆ ಅದರ ಬಳಕೆ ಸಾರ್ವತ್ರಿಕವಾಗಿದೆ. ಹುಳಿಯ ರಸಾನುಭವಕ್ಕೆ ಟೊಮೆಟೊ ಬೇಕೇ ಬೇಕು. ಆದರೆ ಟೊಮೆಟೊ ಇಲ್ಲದೆಯೂ ಅಡುಗೆ ಮಾಡಬಹುದು. ಟೊಮೆಟೊ ಹಣ್ಣಿನಂತೆ ಸ್ವಾದ ನೀಡುವ ಹಲವು ಬಗೆಯ ಹಣ್ಣುಗಳು ನಮ್ಮ ಸುತ್ತ ಲಭ್ಯ ಇವೆ. ಅವುಗಳನ್ನೇ ಬಳಸಿ ರುಚಿಕರ ರಸಂ ತಯಾರಿಸಬಹುದು. ಅಂಥ ಕೆಲವು ರೆಸಿಪಿಗಳನ್ನು ಸೌಖ್ಯ ಮೋಹನ್ ತಲಕಾಲುಕೊಪ್ಪ ಇಲ್ಲಿ ಪರಿಚಯಿಸಿದ್ದಾರೆ.

ಚಿತ್ರಗಳು: ಲೇಖಕರವು

ನೆಲ್ಲಿಕಾಯಿ ರಸಂ

ಬೇಕಾಗುವ ಸಾಮಗ್ರಿಗಳು: ಬೆಟ್ಟದ ನೆಲ್ಲಿಕಾಯಿ 3, ತೆಂಗಿನ ತುರಿ ಅರ್ಧ ಕಪ್, ಸಾರಿನ ಪುಡಿ ಒಂದು ಚಮಚ, ಖಾರದಪುಡಿ, ಕೊತ್ತುಂಬರಿ ಸೊಪ್ಪು, ಬೆಲ್ಲ ಉಪ್ಪು, ಅರಿಸಿನ ಪುಡಿ. ಒಗ್ಗರಣೆಗೆ ಎಣ್ಣೆ ಮೂರು ಚಮಚ, ಜೀರಿಗೆ, ಒಣಮೆಣಸು, ಕರಿಬೇವು, ಸಾಸಿವೆ, ಬೆಳ್ಳುಳ್ಳಿ ಅಥವಾ ಇಂಗು

ಮಾಡುವ ವಿಧಾನ: ಮೊದಲು ನೆಲ್ಲಿಕಾಯಿ ಕತ್ತರಿಸಿ ಬೀಜ ತೆಗೆದುಕೊಳ್ಳಿ. ಅದಕ್ಕೆ ತೆಂಗಿನತುರಿ ಮತ್ತು ಒಂದು ಹಸಿಮೆಣಸು ಹಾಕಿ ರುಬ್ಬಿಕೊಳ್ಳಿ. ನಂತರ ರುಬ್ಬಿದ ಮಿಶ್ರಣಕ್ಕೆ ಸ್ವಲ್ಪ ನೀರು ಹಾಕಿ ಕುದಿಯಲು ಇಡಿ. ಸಾರಿನ ಪುಡಿ, ಕಾರದಪುಡಿ, ಅರಿಶಿನ ಪುಡಿ, ಉಪ್ಪು, ಬೆಲ್ಲ ಹಾಕಿ ಚೆನ್ನಾಗಿ ಮಿಶ್ರಣ ಮಾಡಿ ಕುದಿಸಿ ಕೊತ್ತಂಬರಿ ಸೊಪ್ಪು ಸಣ್ಣಗೆ ಹೆಚ್ಚಿ ಹಾಕಿ ಕೊನೆಯಲ್ಲಿ ಒಗ್ಗರಣೆ ಕೊಡಿ. ಇದಕ್ಕೆ ಇಂಗು ಅಥವಾ ಬೆಳ್ಳುಳ್ಳಿ ಸೇರಿಸಿಕೊಳ್ಳಬಹುದು. ಟೊಮ್ಯಾಟೊ ಇಲ್ಲದ ರಸಂ ತಯಾರಿಸಬಹುದು.





ಪುನರ್ಪುಳಿ/ಕೋಕಂ ಸಾರು



ಬೇಕಾಗುವ ಸಾಮಗ್ರಿಗಳು: ಪುನರ್ಪುಳಿ ಸಿಪ್ಪೆ 5-6, ತೆಂಗಿನಕಾಯಿ ತುರಿ ಅರ್ಧ ಕಪ್, ಸಾರಿನ ಪುಡಿ ಒಂದು ಚಮಚ, ಕರಿ ಮೆಣಸಿನ ಪುಡಿ ಅರ್ಧ ಚಮಚ, ಅರಿಶಿನ ಪುಡಿ, ಉಪ್ಪು, ಬೆಲ್ಲ ಮತ್ತು ಕರಿಬೇವು

ಮಾಡುವ ವಿಧಾನ: ಮೊದಲು ಒಣಗಿದ ಕೋಕಂ ಸಿಪ್ಪೆಯನ್ನು ನೀರಿನಲ್ಲಿ ನೆನೆಸಿಕೊಳ್ಳಿ. ನಂತರ ತೆಂಗಿನ ಕಾಯಿ ತುರಿಯನ್ನು ರುಬ್ಬಿ ಹಾಲನ್ನು ತೆಗೆದಿಟ್ಟುಕೊಳ್ಳಿ. ಆಮೇಲೆ ಒಗ್ಗರಣೆಗೆ ಎಲ್ಲಾ ಸಾಮಾನುಗಳನ್ನು ಹಾಕಿ ಕರಿಮೆಣಸಿನ ಪುಡಿ ಸೇರಿಸಿ. ಸ್ವಲ್ಪ ನೀರು ಹಾಕಿ ಕುದಿಸಿ. ಅದಕ್ಕೆ ಸಾರಿನ ಪುಡಿ, ಅರಿಶಿನ ಪುಡಿ ಹಾಕಿ ನಂತರ ಕೋಕಮ್ ಸಿಪ್ಪೆಯನ್ನು ಕಿವುಚಿ ಅದರ ರಸವನ್ನು ತೆಗೆದು ಸೇರಿಸಿ. ನಂತರ ತೆಂಗಿನಕಾಯಿ ಹಾಲನ್ನು ಹಾಕಿ ಚೆನ್ನಾಗಿ ಕುದಿಸಿ. ಕುದಿಯುವಾಗ ಉಪ್ಪು ಬೆಲ್ಲ ಹಾಕಿ. ಒಣಗಿದ ಪುನರ್ಪುಳಿ ಸಿಪ್ಪೆಯನ್ನು ತಂದಿಟ್ಟುಕೊಂಡರೆ ವರ್ಷವಿಡಿ ಬಳಸಬಹುದು. ಈ ರಸಂ ಅನ್ನಕ್ಕೂ ರುಚಿ, ಪಿತ್ತದ ಸಮಸ್ಯೆಗೂ ಬಹಳ ಒಳ್ಳೆಯದು.

ನೀರು ಮಾವಿನ ಕಾಯಿ ಸಾರು

ಬೇಕಾಗುವ ಸಾಮಗ್ರಿಗಳು: ನೀರು ಮಾವಿನ ಕಾಯಿ ಅರ್ಧ, ತೆಂಗಿನಕಾಯಿ, ಹಸಿಮೆಣಸು ಎರಡು, ಉಪ್ಪು, ಬೆಲ್ಲ, ಬೆಳ್ಳುಳ್ಳಿ, ರಸಂ ಪೌಡರ್, ಕರಿಬೇವು ಒಗ್ಗರಣೆಗೆ ಸಾಸಿವೆ, ಜೀರಿಗೆ ಮತ್ತು ಒಣ ಮೆಣಸು

ಮಾಡುವ ವಿಧಾನ: ಮೊದಲು ಒಗ್ಗರಣೆಗೆ ಎಲ್ಲಾ ಪದಾರ್ಥಗಳನ್ನು ಹಾಕಿ. ಬೆಳ್ಳುಳ್ಳಿ ಮತ್ತು ಹಸಿಮೆಣಸನ್ನು ಜಜ್ಜಿ ಹಾಕಿ. ನಂತರ ಸಿಪ್ಪೆ ಸಮೇತವಾಗಿ ನುರಿದು ಅಥವಾ ಚಿಕ್ಕದಾಗಿ ಕತ್ತರಿಸಿ ಹಾಕಿ ಹುರಿಯಿರಿ. ನೀರು ಹಾಕಿ ಕುದಿಸಿ. ಅರಿಶಿಣ, ಉಪ್ಪು ಮತ್ತು ಬೆಲ್ಲ ಹಾಕಿ. ಉಪ್ಪನ್ನು ನೋಡಿಕೊಂಡು ಹಾಕಿ, ಯಾಕೆಂದರೆ ನೀರು ಮಾವಿನ ಕಾಯಿಯಲ್ಲಿ ಉಪ್ಪಿನ ಅಂಶ ಇರುತ್ತದೆ. ಆಮೇಲೆ ತೆಂಗಿನಕಾಯಿ ಮತ್ತು ರಸಂ ಪೌಡರ್ ನ್ನು ಅದಕ್ಕೆ ಸೇರಿಸಿ ಕುದಿಸಿ . ಮಾವಿನ ಕಾಯಿಯನ್ನು ಸ್ವಲ್ಪ ಬೇಯಿಸಿ ಉಪ್ಪು ನೀರಿನಲ್ಲಿ ಹಾಕಿಟ್ಟುಕೊಂಡರೆ ನಿಮಗೆ ಬೇಕಾದಾಗ ರಸಂ ತಯಾರಿಸಬಹುದು.

ಮೆಂತೆ ಹುಣಸೆ ಸಾರು



ಬೇಕಾಗುವ ಸಾಮಗ್ರಿಗಳು: ಮೆಂತೆ ಒಂದೂವರೆ ಚಮಚ, ಮೆಣಸಿನ ಪುಡಿ, ಕಾಯಿತುರಿ ಅರ್ಧ ಕಪ್, ಹುಣಸೆಹಣ್ಣು ಸ್ವಲ್ಪ, ಕರಿಬೇವು, ಅರಿಶಿನಪುಡಿ, ಉಪ್ಪು, ಬೆಲ್ಲ, ಒಣ ಮೆಣಸು ಎರಡು , ಒಗ್ಗರಣೆಗೆ ಎಣ್ಣೆ, ಜೀರಿಗೆ, ಸಾಸಿವೆ

ಮಾಡುವ ವಿಧಾನ: ಮೊದಲು ಹುಣಸೆ ಹಣ್ಣನ್ನು ನೀರಿನಲ್ಲಿ ನೆನೆಸಿ ರಸ ತೆಗೆದುಕೊಳ್ಳಿ. ಒಗ್ಗರಣೆಗೆ ಇಟ್ಟು ಸಾಸಿವೆ ಸಿಡಿದ ನಂತರ ಮೆಂತೆ ಮತ್ತು ಒಣಮೆಣಸು ಹಾಕಿ ಹುರಿಯಿರಿ. ನಂತರ ಅದಕ್ಕೆ ನೀರು ಹಾಕಿ. ಉಪ್ಪು, ಬೆಲ್ಲ, ಅರಿಶಿನ ಪುಡಿ ಸೇರಿಸಿ ಕುದಿಸಿ. ಮೆಂತೆ ಕಾಳು ಚೆನ್ನಾಗಿ ಬೇಯಬೇಕು. ನಂತರ ಹುಣಸೆ ರಸ ಹಾಕಿ. ತೆಂಗಿನ ತುರಿ, ಸಾರಿನಪುಡಿ, ಮೆಣಸಿನಕಾಯಿ ಹಾಕಿ ನುಣ್ಣನೆ ರುಬ್ಬಿ. ಅದನ್ನು ಕುದಿಯುವ ಸಾರಿಗೆ ಹಾಕಿ. ಕರಿಬೇವು ಹಾಕಿ ಕುದಿಸಿ ಇಳಿಸಿ. ಮಳೆಗಾಲಕ್ಕೆ ಸೂಕ್ತವಾದ ಸಾರು. ಇಂತಹ ಸಾರುಗಳನ್ನು ಮನೆಯಲ್ಲೇ ಇರುವ ವಸ್ತುಗಳಿಂದ ತಯಾರಿಸಬಹುದು.

ಕಿಚ್ಚು ಯಾವುದಾದರೇನು ಬೇಯಿಸಿದ್ದು ಅನ್ನವನ್ನೇ...

ದು.ಸರಸ್ವತಿ

ಈಗ ಎಲ್ಲೇ ನೋಡಿದರೂ ಶಕ್ತಿ ಯೋಜನೆಯದ್ದೇ ಮಾತು. ಟಿವಿ ಚಾನೆಲ್, ಸಾಮಾಜಿಕ ಜಾಲತಾಣಗಳಲ್ಲಿ, ಬೀದಿ, ಬಿಎಂಟಿಸಿ, ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ; ಬಸ್ ಚಕ್ರಕ್ಕೆ ತಲೆಕೊಡಲು ಹೋದ ವ್ಯಕ್ತಿಯಿಂದ ಹಿಡಿದು ದೇಶದ ಆರ್ಥಿಕತೆಯ ಬಗ್ಗೆ ತಲೆಬಿಸಿ ಮಾಡಿಕೊಂಡ ಸೋಷಿಯಲ್ ಮೀಡಿಯಾದ ಸಾಫ್ಟ್‌ವೇರುಗಳವರೆಗೂ ಮಹಿಳೆಯರ ಉಚಿತ ಪ್ರಯಾಣ ಕುರಿತೇ ಚರ್ಚೆ!

ಆದರೆ ಈ ಚರ್ಚೆಯ ಸೋಂಕನ್ನೇ ತಗುಲಿಸಿಕೊಳ್ಳದ ಮಹಿಳೆಯರು ರಶ್ ಆದ ಬಸ್‌ನಲ್ಲಿ, ನೂಕುತ್ತಾ, ನುಗ್ಗುತ್ತಾ ತಳ್ಳಾಡುತ್ತಾ ಕಚೇರಿ, ಮಾರ್ಕೆಟು, ನೆಂಟರ ಮನೆ, ದೇವಾಲಯಗಳೆಂದು ಓಡಾಡುತ್ತಿದ್ದಾರೆ. 'ಉಚಿತ' ಯೋಜನೆಯಿಂದ ಉಳಿತಾಯವಾದ ಬಸ್ ಚಾರ್ಜ್ ಹಣದಲ್ಲಿ ಔಷಧಿ, ಮಕ್ಕಳಿಗೆ ತಿಂಡಿ, ಮನೆಗೆ ತರಕಾರಿ ಕೊಂಡು ತೆರಿಗೆ ಕಟ್ಟುತ್ತಿದ್ದಾರೆ. ಪೌರಕಾರ್ಮಿಕರು ಪೊರಕೆ ಹಿಡಿದು ಬಸ್ ಹತ್ತಿದ್ದಕ್ಕೆ ಸಂತೋಷಪಟ್ಟ ತರುಣಿಯ ವಿಡಿಯೊ ನೋಡಿ ನಾನಂತು ಸಖತ್ ಖುಷ್ ಆಗಿದ್ದೇನೆ.

ಪೌರಕಾರ್ಮಿಕರ ಕುರಿತು 2019ರಲ್ಲಿ ನಾನು ಸಲ್ಲಿಸಿದ ಪಿಎಚ್.ಡಿ ಪ್ರಬಂಧಕ್ಕೆಂದು ಮಹಿಳಾ ಪೌರಕಾರ್ಮಿಕರನ್ನು ಸಂದರ್ಶಿಸಿದ್ದೆ. ಅದರಲ್ಲಿ ಅವರು 'ತಿಂಗಳ ಸಂಬಳದಲ್ಲಿ ದಿನಸಿಗೆ ಶೇ 34, ಬಾಡಿಗೆಗೆ ಶೇ 20, ವೈದ್ಯಕೀಯ ಚಿಕಿತ್ಸೆಗೆ ಶೇ 8 (ತ್ಯಾಜ್ಯದೊಂದಿಗೆ ಕೆಲಸ ಮಾಡುವುದು ಅಪಾಯಕಾರಿಯಾದ್ದರಿಂದ), ಸಾರಿಗೆಗೆ ಶೇ 9 ರಷ್ಟು ಖರ್ಚಾಗುತ್ತದೆ. ಬೇಗನೆ ಹೊರಡುವುದರಿಂದ ತಿಂಡಿಗೆಂದು ದಿನಕ್ಕೆ ₹50 ಖರ್ಚಾಗುತ್ತದೆ' ಎಂದು ಹೇಳಿದ್ದರು. ಹೀಗಿರುವಾಗ ಶಕ್ತಿ ಯೋಜನೆ, ಅನ್ನಭಾಗ್ಯ, ಗೃಹಲಕ್ಷ್ಮಿ ಯೋಜನೆಗಳು ಕೊಂಚ ನಿರಾಳವಾಗಿ ಅವರು ಉಸಿರಾಡುವಂತೆ ಮಾಡುವುದು ಗ್ಯಾರಂಟಿ.

ಕಳೆದೆರಡು ದಶಕಗಳಲ್ಲಿ ದುಡಿಮೆಯ ಕ್ಷೇತ್ರದಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಾಗಿದ್ದರೂ ಅವರಿಗೆ ಸಿಗುತ್ತಿರುವುದು ಗಾರ್ಮೆಂಟ್ಸ್, ಕಸಗುಡಿಸುವುದು, ಮನೆಕೆಲಸ, ಸಣ್ಣಪುಟ್ಟ ಆಫೀಸಿನ ಕೆಲಸ, ಮಾಲ್‌ಗಳಲ್ಲಿ ಮಾಡುವಂತಹ ಅತ್ಯಲ್ಪ ಸಂಬಳದ ಕೆಲಸಗಳೇ. ಸಿಗುವ ತಿಂಗಳ ಆದಾಯ ಸರಾಸರಿ ₹15 ಸಾವಿರ ದಾಟುವುದಿಲ್ಲ. ಸಾರಿಗೆಗೆ ಬಸ್ಸನ್ನೇ ಅವಲಂಬಿಸಿರುವ ಇವರಿಗೆ ಸರ್ಕಾರ ಒದಗಿಸಿರುವ ಶಕ್ತಿ ಯೋಜನೆ ತುಂಬ 'ಉಚಿತ'ವಾಗಿದೆ. ತಮ್ಮ ದುಡಿಮೆಯಿಂದಲೇ ಇಡೀ ಸಂಸಾರದ ಜವಾಬ್ದಾರಿ ನೀಗಿಸಬೇಕಿರುವ ಮಹಿಳೆಯರು ಬಸ್‌ಚಾರ್ಜ್‌ನಲ್ಲಿ ಉಳಿಸಿದ ಚೂರುಪಾರು ಹಣವನ್ನೇನೂ ಕೂಡಿಟ್ಟು ಕಪ್ಪಾಗಿಸಿ ಶ್ರೀಮಂತರಾಗುವುದಿಲ್ಲ. ಆದರೆ ಅದು ಅವರ ಬದುಕಿನ ಕೌದಿಯ ಬೆಚ್ಚಗಾಗಿಸುವಷ್ಟು ಮಹತ್ವದ್ದು. ಅದೇ ಹಣದಲ್ಲಿ ಮತ್ತೇನೊ ಕೊಂಡು ತೆರಿಗೆ ಕಟ್ಟಿ ಮರಳಿಸುತ್ತಾರೆ. ದೇಶದ ಪ್ರಗತಿ ಸಾಕಾರವಾಗಬೇಕಿರುವುದು ಹಾಗೂ ಯಾವುದೇ ಸಿದ್ಧಾಂತ, ರಾಜಕೀಯ ಬೇರು ಬಿಡಬೇಕಾಗಿರುವುದು ಮಹಿಳೆಯರು ಎಳೆಯುವ ನಿತ್ಯದ ಬದುಕಿನ ಬಂಡಿಯಲ್ಲಿ.

ಕುಟುಂಬದೊಳಗಿನ ಮಹಿಳೆಯರ ದುಡಿಮೆ ಅದೃಶ್ಯವಾಗಿದ್ದರೆ ಹೊರಗಿನ ದುಡಿಮೆ ಪೂರಕ ದುಡಿಮೆಯೆಂದೇ ಪರಿಗಣಿತವಾಗಿದೆ. ಮಹಿಳೆಯರ ದುಡಿಮೆ/ಸೇವೆ ದೇಶದ ಆರ್ಥಿಕತೆಯೆಡೆಗಿನ ಕೊಡುಗೆಯಾಗಿ ಮಾನ್ಯವಾಗಿಲ್ಲ. ಹಾಗಾಗಿ ಅಗತ್ಯಗಳನ್ನು ಸರ್ಕಾರ ಭಾಗ್ಯವೆನ್ನದೆ ನ್ಯಾಯೋಚಿತ ಪ್ರತಿಫಲವೆನ್ನುವುದು ಸೂಕ್ತ. ಅಗತ್ಯಗಳ ಭಾಗ್ಯಗಳಾಗಿ ಕರುಣಿಸಿದಾಗ ದುಡಿದುಣ್ಣುವ ಜನರ ಇರುವಿನ ನೆದರೇ ಇಲ್ಲದವರು ಅವರ ಬಗ್ಗೆ ದಿಢೀರನೆ ಜಾಗೃತರಾಗಿ ದೇಶದ ಆರ್ಥಿಕತೆಯ ಬಗ್ಗೆ ತಲೆಬಿಸಿ ಮಾಡಿಕೊಳ್ಳುತ್ತಾರೆ!

ಕುಡಿದ ಮತ್ತಿನಲ್ಲಿದ್ದವರೊಬ್ಬರು 'ಬಸ್‌ನಲ್ಲಿ ಹೋದ ಹೆಂಡತಿ ಬಂದಿಲ್ಲ ಫ್ರೀ ಬಸ್ ಕಿತ್ತಾಕಿ' ಎಂದ ಮಾತು, ಕುಡಿಯದೇ ಮತ್ತೇರಿದವರು ಮಾಡಿದ ಕಮೆಂಟುಗಳ ಹಿಂದೆ ಎದ್ದಿರುವ ಉರಿ ಒಂದೇ. ಕುಟುಂಬದೊಳಗಿನ ಆರ್ಥಿಕ ಸಂಕಷ್ಟಗಳನ್ನು, ನೋಟು ಅಮಾನ್ಯೀಕರಣ ಮತ್ತು ಜಿಎಸ್‌ಟಿಯಂತಹ ದಾಳಿಗಳನ್ನು ಎದುರಿಸಲು ಸಾಧ್ಯವಾಗಿರುವುದು ಗಂಡಸರ ಕಪಿಮುಷ್ಟಿಯಲ್ಲೂ ಕಾಸು ಗಿಂಜುವ ಹೆಣ್ಣುಮಕ್ಕಳ 'ಸಾಸ್ವೆಡಬ್ಬಿ ಎಕಾನಮಿ'ಯಿಂದ ಎಂಬುದು ಕಮೆಂಟು ಮಾಡುವವರಿಗೆ ತಿಳಿಯದು. ಸಾಸಿವೆ ಎಂಬುದೇನೆಂದೇ ತಿಳಿಯದವರಿಗೆ ಜತನದಿಂದ ಕಾಪಿಟ್ಟ ಕಾಸುಗಳಿರುವ ಸಾಸಿವೆ ಡಬ್ಬಿ ಮತ್ತದನ್ನು ಜೋಪಾನವಾಗಿಡುವ ಅಡುಗೆ ಮನೆ ವಿಳಾಸ ಸಿಗುವುದುಂಟೇ?

ನಿತ್ಯವೂ ಬಸ್‌ನಲ್ಲಿ ಏಳುವ ಮಾತಿನ ಉರಿಗಳು, ಹೆಣ್ಣುಮಕ್ಕಳ 'ಫ್ರೀ ಪ್ರಯಾಣ' ಎಬ್ಬಿಸಿರುವ ಆತಂಕವನ್ನು ಬಿಂಬಿಸುತ್ತವೆ. ನಾವು ಗೆಳತಿಯರು ಮೊನ್ನೆ ಬಸ್ ಹತ್ತಿದಾಗ ಎದ್ದ ಉರಿಮಾತಿಗೆ 'ಹೆಣ್ಮಕ್ಳು ದುಡಿಯಲ್ವಾ, ಫ್ರೀಯಾಗಿ ಕೊಟ್ರೇ ಏನೀಗ' ಅಂದೆ. ಆಗ ಗಂಡಸರ ದುಡಿಮೆಯ ಬಗ್ಗೆ ಜಾಗೃತರಾದ ಒಬ್ಬರು 'ಕಂಡಕ್ಟರ್‌ಗಳು ಡ್ರೈವರ್‌ಗಳು ಸಂಬಳ ಜಾಸ್ತಿ ಮಾಡ್ಸೋಕೆ ಹೋರಾಡಿದ್ರೂ ಆಗ್ಲಿಲ್ಲ, ಅವ್ರು ದುಡಿಯಲ್ವಾ? ಹೆಂಗಸ್ರಿಗೆ ಫ್ರೀ ಕೊಡೋದ್ರ ಬದ್ಲು ಅವ್ರಿಗೆ ಸಂಬ್ಳ ಜಾಸ್ತಿ ಮಾಡ್ಬೋದಾಗಿತ್ತಲ್ವಾ' ಎಂದರು. 'ಒಂದ್ ವಾರ ಹೆಂಡ್ದಂಗ್ದಿಗೆ ವೋಗಲ್ಲ ಅಂತ ಮಾತ್ ಕೊಡ್ಲಪ್ಪ ಆಗ ಗಂಡಸ್ರಿಗೂ ಫ್ರೀ ಕರ್ಕೊಂಡು ಹೋಗ್ಬೋದು' ಎಂದು ಸೂಕ್ತವಾಗಿಯೇ ಉತ್ತರಕೊಟ್ಟ ಕಂಡಕ್ಟ್ರಣ್ಣ.

ದುಡಿಮೆಯ ಕ್ಷೇತ್ರದಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಾಗಿದ್ದರೂ ಅವರಿಗೆ ಸಿಗುತ್ತಿರುವುದು ಗಾರ್ಮೆಂಟ್ಸ್, ಕಸಗುಡಿಸುವುದು, ಮನೆಕೆಲಸ, ಸಣ್ಣಪುಟ್ಟ ಆಫೀಸಿನ ಕೆಲಸ, ಮಾಲ್‌ಗಳಲ್ಲಿ ಮಾಡುವಂತಹ ಅತ್ಯಲ್ಪ ಸಂಬಳದ ಕೆಲಸಗಳೇ. ಸಿಗುವ ತಿಂಗಳ ಆದಾಯ ಸರಾಸರಿ ₹15 ಸಾವಿರ ದಾಟುವುದಿಲ್ಲ. ಸಾರಿಗೆಗೆ ಬಸ್ಸನ್ನೇ ಅವಲಂಬಿಸಿರುವ ಇವರಿಗೆ ಸರ್ಕಾರ ಒದಗಿಸಿರುವ ಶಕ್ತಿ ಯೋಜನೆ ತುಂಬ 'ಉಚಿತ'ವಾಗಿದೆ.



ಯೋಜನೆ ಜಾರಿಯಾದ ದಿನ ಫ್ರೀ ಎಂಬುದು ಮರೆತು, ರಶ್‌ನಲ್ಲಿ ಟಿಕೇಟ್‌ಗೆ ಹಣ ತೆಗೆಯಲು ಪರದಾಡುತ್ತಿದ್ದಾಗ ಕಂಡಕ್ಟರ್, 'ಅಮ್ಮಾ ಯಾಕೆ ಪರದಾಡ್ತೀರಾ, ಆಧಾರ್ ತೋರ್‍ಸಿ, ಫೋನಲ್ಲಿದ್ರೂ ಸಾಕು' ಎಂದರು. ತಾಳ್ಮೆಯಿಂದ ಯೋಜನೆ ಜಾರಿಗೊಳಿಸುತ್ತಿರುವ, ಆಧಾರ್ ಕಾರ್ಡುಗಳ ಕೇಳಿ ಕೇಳಿ ಟಿಕೆಟು ಹರಿಯುವ, ಉಚಿತವೆಂದು ಟಿಕೆಟು ತೆಗೆದುಕೊಳ್ಳದಿದ್ದರೆ ದಂಡ ಹಾಕುವರೆಂದು ಎಚ್ಚರಿಸುತ್ತಿರುವ ನಮ್ಮ ಕಂಡಕ್ಟರ್ ಸೋದರರಿಗೆ ಸಲಾಮು ಹೇಳಲೇಬೇಕು.

ಮೈಸೂರಿನಲ್ಲಿ ಆಟೊ ಅಣ್ಣನೊಬ್ಬ 'ಅಮ್ಮಾ ಇಲ್ಲಿರದು ಇಪ್ಪತ್ತ್ ಬಸ್ಸು, ಅಲ್ಲಿ ಚಾಮುಂಡಿ ಬೆಟ್ಟದ್ಮೇಲೆ ಲಕ್ಷಕ್ಕಿಂತ ಜಾಸ್ತಿ ಜನ ಅವ್ರೆ. ಫ್ರೀ ಕೊಡ್ತರೆ ಅಂತ ಇಂಗ ಆಡದು' ಅಂದ. 'ಇರ್‍ಲಿ ಬಿಡು ನೂಕು ನುಗ್ಲಲ್ಲಿ ಹೋಗಿ ದೇವಿತವ ಬೇಡ್ಕಳದು ಮನೆಮಕ್ಳು ಚೆನ್ನಾಗಿರ್‍ಲಿ ಅಂತ ತಾನೇ?'ಎಂದೆ. ಏನೂ ಮಾತಾಡಲಿಲ್ಲ.

ಪರಿಚಯವಿಲ್ಲದೆಯೂ ಮಾತನಾಡಲು ಶಕ್ತಿ ಯೋಜನೆ ನೆವವಾಗಿದೆ. ಒಮ್ಮೆ ಪಕ್ಕ ಕೂತಿದ್ದ ಮಹಿಳೆ 'ಏನಂದ್ರೂ ಪಾಪ ಗಂಡಸ್ರಿಗೆ ಸ್ಯಾನೆ ವಟ್ಟೆಉರಿ ಆಗ್ಬೋದಲ್ವಾ' ಅಂದ ಮಾತು, ಉರಿಯ ಕಂಡು ಉರಿಯದೆ ಪಾಪ ಎನ್ನುವ ದೊಡ್ಡತನದ್ದು.

ಕಿಚ್ಚು ಎಂತದ್ದೆ ಆಗಿರಲಿ ನಾವು ಬೇಯಿಸಿರುವುದು ಹಸಿವಿಗೆ ಉಣ್ಣುವ ಅನ್ನವನ್ನಲ್ಲವೇ? ಯಾಕಿಷ್ಟು ಕಿಚ್ಚು? ಫ್ರೀಯಾಗಿ ತಿರುಗಾಡಿದರೆ ಹಿಡಿತ ಕಳೆದುಕೊಳ್ಳುವ ಭೀತಿಯೇ?

ನಿತ್ಯವೂ ಹೋಗಲೇಬೇಕಾದಲ್ಲಿಗೆ ಹೋಗಲು ಆಗುತ್ತಿದ್ದ ಖರ್ಚು ಉಳಿಯಿತೆಂದು ಒಂದಷ್ಟು ಮಹಿಳೆಯರು ಸಮಾಧಾನ ಪಡುತ್ತಿದ್ದರೆ, ಹೋಗಬೇಕೆನಿಸಿದರೂ ಖರ್ಚೆಂದು ಹೋಗದೆ ಉಳಿದಿದ್ದ ಮಹಿಳೆಯರು ಹೋಗುವ ಜಾಗಗಳನ್ನೆಲ್ಲ ನೆನಪು ಮಾಡಿಕೊಂಡು ಬಸ್ ಹತ್ತುತ್ತಿದ್ದಾರೆ. ಗೋಡೆ-ಬಾಗಿಲುಗಳ ಹೊರಗೆ ಹೋಗಬೇಕೆಂದ ಕಡೆ ಹೋಗಲು, ಮಹಿಳೆಯರು ನೂಕಿ, ನುಗ್ಗಿ ಬಸ್ ಹತ್ತುವ ಖುಷಿ ಕಂಡು ಬಿಡುಗಡೆಯ ಚಿಟಗುಬ್ಬಿ ಕುಂಡೆ ಕುಣಿಸಿ ಚೀವ್‌ಗುಟ್ಟಿತು. ❖

ಮಕ್ಕಳು ಕೌಟುಂಬಿಕ ವಾತಾವರಣದ ಕನ್ನಡಿ



ಏನಾದ್ರೂ ಕೇಳ್ಬೋದು


ನಡಹಳ್ಳಿ ವಸಂತ್

ನಾನು ನಿಮ್ಮ ಲೇಖನಗಳ ಅಭಿಮಾನಿ. ಮಕ್ಕಳು ಹೇಗೆ ಬೆಳೆದರೂ ತಾಯಂದಿರು ಜವಾಬ್ದಾರರಾಗುತ್ತಾರೆ. ಮನೆಯಲ್ಲಿ ತಾಯಿ ಬಿಟ್ಟು ಬೇರೆ ಯಾರಲ್ಲಿ ಅವಗುಣಗಳಿದ್ದರೂ ಅದನ್ನು ಮಕ್ಕಳು ಸುಲಭವಾಗಿ ಕಲಿಯುತ್ತಾರೆ. ಆದರೂ ಮಕ್ಕಳನ್ನು ದೂರುವಾಗ ಅಮ್ಮಂದಿರನ್ನೇ ಗುರಿಮಾಡಲಾಗುತ್ತದೆ. ಮಕ್ಕಳನ್ನು ಬೆಳೆಸುವಲ್ಲಿ ಕುಟುಂಬದ ಪಾತ್ರ ಹೇಳಬಹುದಾ?

ಹೆಸರು ಊರು ತಿಳಿಸಿಲ್ಲ.

ನಿಮ್ಮ ಪ್ರೀತಿ ಅಭಿಮಾನಕ್ಕೆ ಧನ್ಯವಾದಗಳು. ಮಕ್ಕಳು ತಾಯಂದಿರ ದೇಹದ ಒಂದು ಭಾಗವಾಗಿ ಜನಿಸುತ್ತಾರೆ. ಹಾಗಾಗಿ ಅವರನ್ನು ಬೆಳೆಸುವುದರಲ್ಲಿ ಸ್ವಲ್ಪ ಹೆಚ್ಚಿನ ಜವಾಬ್ದಾರಿಯನ್ನು ಪ್ರಕೃತಿ ತಾಯಂದಿರಿಗೆ ನೀಡಿರುವುದು ನಿಜ. ಆದರೆ ಅಗತ್ಯಕ್ಕಿಂತಲೂ ಹೆಚ್ಚಿನ ಜವಾಬ್ದಾರಿಯನ್ನು ಪುರುಷ ಪ್ರಧಾನ ಕೌಟುಂಬಿಕ ವ್ಯವಸ್ಥೆ ತಾಯಂದಿರ ಮೇಲೆ ಹೇರಿದೆ. ಇದನ್ನು ಗುರುತಿಸದಿದ್ದರೆ ತಮಗೆ ನಿಭಾಯಿಸಲು ಸಾಧ್ಯವಾಗದ ಜವಾಬ್ದಾರಿಗಳನ್ನು ಹೊತ್ತು ತಾಯಂದಿರು ಕುಗ್ಗುತ್ತಾರೆ. ಕೌಟುಂಬಿಕ ವ್ಯವಸ್ಥೆಯಲ್ಲಿ ತಂದೆ-ತಾಯಂದಿರಲ್ಲಿ ಸಮತೋಲನವಿಲ್ಲದಿದ್ದರೆ ಅದರ ಸಂಪೂರ್ಣ ದುಷ್ಪರಿಣಾಮ ಮಕ್ಕಳ ಮೇಲಾಗುತ್ತದೆ. ಜನಿಸುವಾಗ ಇನ್ನೂ ಎಳತಾಗಿರುವ ಮಕ್ಕಳ ದೇಹ ಮಿದುಳು ನರಮಂಡಲಗಳ ಸಮರ್ಪಕ ಬೆಳವಣಿಗೆಗೆ ಅಗತ್ಯವಾಗಿರುವುದು ಸೌಹಾರ್ದಯುತ ಕೌಟುಂಬಿಕ ವಾತಾವರಣ. ಇಂತಹ ವಾತಾವರಣದಲ್ಲಿ ಮಗುವಿಗೆ ದೊರಕುವ ಸುರಕ್ಷತೆ, ಪ್ರೀತಿಯ ಅನುಭವ, ಭಾವನಾತ್ಮಕ ಬೆಂಬಲ- ಇವೆಲ್ಲವೂ ಮಕ್ಕಳ ಮಿದುಳಿನಲ್ಲಿ ಅನುಭವಗಳ ರೂಪದಲ್ಲಿ ದಾಖಲಾಗುತ್ತದೆ. ಇವುಗಳ ಆಧಾರದ ಮೇಲೆ ಮಗು ಜಗತ್ತನ್ನು ನೋಡುವ, ಕಷ್ಟದ ಸಂದರ್ಭಗಳನ್ನು ನಿಭಾಯಿ ಸುವ, ಭಾವನಾತ್ಮಕ ಏರುಪೇರುಗಳನ್ನು ನಿರ್ವಹಿಸುವ ಮತ್ತು ಸಂಬಂಧಗಳನ್ನು ಕಟ್ಟಿಕೊಳ್ಳುವ ವಿಚಾರಗಳಲ್ಲಿ ತನ್ನ ದೃಷ್ಟಿಕೋನವನ್ನು ಬೆಳೆಸಿಕೊಳ್ಳುತ್ತದೆ.

ಚಿಕ್ಕವಯಸ್ಸಿನಲ್ಲಿ ಮಗುವಿಗೆ ಏನೂ ಅರ್ಥವಾಗುವುದಿಲ್ಲ ಎನ್ನುವುದು ಜನ ಸಾಮಾನ್ಯರಲ್ಲಿರುವ (ಸಾಕಷ್ಟು ತಜ್ಞರ ಲ್ಲಿಯೂ ಕೂಡ) ತಪ್ಪುತಿಳಿವಳಿಕೆ. ಬುದ್ಧಿ ತರ್ಕಗಳಿಗೆ ಬಳಕೆಯಾಗುವ ಮಾನವರಲ್ಲಿ ಮಾತ್ರ ಇರುವ ಮುಮ್ಮಿದುಳು ಆ ವಯಸ್ಸಿನಲ್ಲಿ ಬೆಳವಣಿಗೆಯಾಗಿರುವುದಿಲ್ಲ. ಆದರೆ ಪ್ರೀತಿ, ತಿರಸ್ಕಾರ, ನೋವು ಅಸಮಧಾನ, ಹತಾಶೆ ಮುಂತಾದ ಭಾವನೆಗಳನ್ನು ಅನುಭವಿಸುವ ಮತ್ತು ದಾಖಲಿಸುವ ಮಿದುಳಿನ ಭಾಗಗಳು ಹುಟ್ಟುವಾಗಲೇ ಬೆಳವಣಿಗೆಯಾಗಿರುತ್ತದೆ. ಹಾಗಾಗಿ ಇಂತಹ ಎಲ್ಲಾ ಅನುಭವಗಳು ಮಗುವಿನಲ್ಲಿ ದಾಖಲಾಗುತ್ತಾ ಹೋಗುತ್ತದೆ. ಸಂಬಂಧಿಸಿದ ಘಟನೆಗಳು ನೆನಪಿಲ್ಲದಿದ್ದರೂ ಕೇವಲ ಅನುಭವಗಳ ರೂಪದಲ್ಲಿರುವ ಇಂತಹ ನೆನಪಗಳನ್ನು 'ಅಂತರ್ಗತ ನೆನಪುಗಳು' (Implicit Memory) ಎನ್ನಲಾಗುತ್ತದೆ. ಇಂತಹ ನೆನಪುಗಳೇ ಮುಂದಿನ ಬದುಕಿನ ದಾರಿದೀಪವಾಗಿರುತ್ತವೆ. ಹೀಗೆ ಬಾಲ್ಯದಲ್ಲಿ ಪೋಷಕರು ಮಕ್ಕಳ ಭಾವೀ ಬದುಕಿನ ಚಿತ್ರಕಥೆಯ ರೂಪುರೇಶೆಗಳನ್ನು ಸಿದ್ಧಪಡಿಸುತ್ತಾರೆ. ಇದರ ಅರ್ಥ ದಾರಿ ತಪ್ಪಿದ ಮಕ್ಕಳ ಪೋಷಕರು ಕೆಟ್ಟವರು ಎಂದೇನಲ್ಲ. ಎಲ್ಲಾ ಪೋಷಕರು ಮಕ್ಕಳನ್ನು ಪ್ರೀತಿಸುತ್ತಾರೆ ಮತ್ತು ಅವರನ್ನು ಬೆಳೆಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಾರೆ. ಆದರೆ ತಮ್ಮದೇ ಮಾನಸಿಕ ಏರುಪೇರುಗಳನ್ನು ನಿಭಾಯಿಸಲು ಮತ್ತು ತಮ್ಮ ಸಂಬಂಧಗಳನ್ನು ಸೌಹಾರ್ದಯುತವಾಗಿ ಮಾಡಿಕೊಳ್ಳಲು ಸಾಧ್ಯವಾಗದಿದ್ದಾಗ ಪೋಷಕರಿಗೆ ಅರಿವಿಲ್ಲದೆ ಅವರು ಮಕ್ಕಳಿಗೆ ಕೆಟ್ಟ ಮಾದರಿಗಳನ್ನು ಒದಗಿಸುತ್ತಾರೆ. ಮಕ್ಕಳು ಕಲಿಯುವುದು ನಾವು ಕೊಡುವ ಸೌಲಭ್ಯಗಳಿಂದಲ್ಲ. ಅಥವಾ ನಮ್ಮ ಬುದ್ಧಿವಾದ ಉಪದೇಶ ಶಿಸ್ತು ಶಿಕ್ಷೆಗ ಳಿಂದಲ್ಲ. ಬದಲಾಗಿ ಬದುಕಿನ ಬಗೆಗೆ ಪೋಷಕರಿಂದ ಬಾಲ್ಯದಲ್ಲಿ ಗ್ರಹಿಸಿರುವ ಮಾದರಿಗಳನ್ನು ಮಕ್ಕಳು ಮೈಗೂಡಿಸಿಕೊಳ್ಳುತ್ತಾರೆ. ಇವೆಲ್ಲ ಕಾಣದ ಕೈಗಳಂತೆ ನಮ್ಮ ಬದುಕನ್ನು ನಿರ್ದೇಶಿಸುತ್ತಿರುತ್ತದೆ.



ಮಕ್ಕಳ ಕಣ್ಣೆದುರು ನಡೆಯದೆ ಇರುವ ಅಂಶಗಳಿಂದ ಅವರು ಪ್ರಭಾವಿತರಾಗುವುದಿಲ್ಲ ಎನ್ನುವುದು ಇನ್ನೊಂದು ತಪ್ಪುತಿಳಿವಳಿಕೆ. ನಮ್ಮೆಲ್ಲರ ಮಿದುಳಿಗೆ ಸುತ್ತಲಿನ ವಾತಾವರಣದ ಸೂಚನೆಗಳನ್ನು ಗ್ರಹಿಸುವ ಶಕ್ತಿಯನ್ನು ಪ್ರಕೃತಿ ಹುಟ್ಟುವಾಗಲೇ ನೀಡಿರುತ್ತದೆ. ಇದನ್ನು Brain Mapping Capacity ಎನ್ನಲಾಗುತ್ತದೆ. ಇಂತಹ ಶಕ್ತಿಯಿಂದಲೇ ಕಾಡುಮೇಡುಗಳಲ್ಲಿ ಪ್ರಾಣಿಗಳು ತಮ್ಮನ್ನು ತಾವು ರಕ್ಷಿಸಿಕೊಳ್ಳುತ್ತವೆ. ಈ ಶಕ್ತಿ ಮಕ್ಕಳ ಮಿದುಳಿಗೂ ಇರುತ್ತದೆ. ಹಾಗಾಗಿ ಇಡೀ ಮನೆಯ ಭಾವನಾತ್ಮಕ ವಾತಾವರಣದ ಸೂಚನೆಗಳನ್ನು ಮಕ್ಕಳು ಗ್ರಹಿಸಿರುತ್ತಾರೆ. ಆದರೆ ಅದನ್ನು ವ್ಯಕ್ತಪಡಿಸಲು ಅಗತ್ಯವಿರುವ ಮಿದುಳಿನ ಭಾಗಗಳು ಮಕ್ಕಳಲ್ಲಿ ಬೆಳವಣಿಗೆಯಾಗಿರುವುದಿಲ್ಲ. ಅಪ್ಪ ಅಮ್ಮಂದಿರು ತಮ್ಮ ಜಗಳವನ್ನು ಖಾಸಗಿಯಾಗಿ ಇಟ್ಟುಕೊಂಡರೂ ಅವರೊಳಗೆ ಇರುವ ಸಿಟ್ಟು ಹತಾಶೆ ಅಸಮಾಧಾನಗಳ ಶಾಖ ಮಕ್ಕಳಿಗೆ ಒಂದಲ್ಲಾ ಒಂದು ರೀತಿಯಲ್ಲಿ ತಲುಪಿರುತ್ತದೆ. ಪೋಷಕರಲ್ಲಿ ಭಿನ್ನಾಭಿಪ್ರಾಯವಿದ್ದಾಗ ಮಕ್ಕಳು ಅದರ ಲಾಭಪಡೆದುಕೊಳ್ಳುತ್ತಾರೆ!

ಯಾವುದೇ ಘಟನೆ ಒಂದೇ ಕುಟುಂಬದ ಎಲ್ಲಾ ಮಕ್ಕಳ ಮೇಲೆ ಬೇರೆ ಬೇರೆ ಪರಿಣಾಮಗಳನ್ನು ಬೀರಲು ಸಾಧ್ಯವಿದೆ. ಹಾಗಾಗಿ ಒಂದೇ ತಾಯಿಯ ಮಕ್ಕಳು ಒಂದೇ ರೀತಿಯ ಸ್ವಭಾವ ಹೊಂದಿರಲೇಬೇಕಾಗಿಲ್ಲ. ಮನೋವೈದ್ಯರುಗಳು, ನರವಿಜ್ಞಾನಿಗಳು ಆಧುನಿಕ ವಿಜ್ಞಾನದ ಎಲ್ಲಾ ಸಂಶೋಧನೆಗಳನ್ನು ಆಧರಿಸಿ ಹೇಳುತ್ತಿರುವ ಸತ್ಯ ಇದು.

ಗ್ರೀಕ್ ತತ್ವಶಾಸ್ತ್ರಜ್ಞ ಅರಿಸ್ಟಾಟಲ್ ಹೇಳುತ್ತಾನೆ '7 ವರ್ಷದ ಮಗುವನ್ನು ನನಗೆ ತೋರಿಸಿ, ಅವನು ಪ್ರೌಢ ವಯಸ್ಸಿನವನಾದಾಗ ಹೇಗಿರುತ್ತಾನೆ ಎಂದು ನಾನು ಹೇಳುತ್ತೇನೆ'. ಅಂದರೆ ಮಕ್ಕಳ ಬಾಲ್ಯದ 10 ರಿಂದ 12 ವರ್ಷಗಳ ಅನುಭವಗಳು ಅವರ ಭವಿಷ್ಯವನ್ನು ರೂಪಿಸುತ್ತವೆ. ಒಳ್ಳೆಯ ಶಾಲೆ, ಆಧುನಿಕ ಪರಿಕರಗಳು, ಪೋಷಕರು ಕೊಡುವ ಸುಖ ಸೌಲಭ್ಯಗಳು ಮಾತ್ರ ಮಕ್ಕಳಿಗೆ ಉತ್ತಮ ಭವಿಷ್ಯವನ್ನು ರೂಪಿಸುತ್ತವೆ ಎನ್ನುವುದು ಸಂಪೂರ್ಣ ತಪ್ಪುತಿಳಿವಳಿಕೆ.

ಅಹಿತಕರ ಕೌಟುಂಬಿಕ ಹಿನ್ನೆಲೆ, ಸ್ವಭಾವದ ತೊಂದರೆಗಳು ಭಾವನಾತ್ಮಕ ಏರುಪೇರುಗಳಿದ್ದಾಗ ಮಕ್ಕಳು ತಮ್ಮ ಬೌದ್ಧಿಕ ಶಕ್ತಿ ಬಳಸಲು ಸಾಧ್ಯವಾಗವುದಿಲ್ಲ. ಇದರಿಂದಾಗಿ ಓದು ವಿದ್ಯಾಭ್ಯಾಸಗಳಲ್ಲಿಯ ಅಂತಹ ಮಕ್ಕಳು ಹಿಂದೆ ಉಳಿಯುತ್ತಾರೆ. ಹಾಗಾಗಿ ಮಕ್ಕಳೊಡನೆ ಸೌಹಾರ್ದಯುತ ಸಂಬಂಧವನ್ನು ರೂಪಿಸಿಕೊಳ್ಳುವುದು ಪೋಷಕರ ಮೊದಲ ಆದ್ಯತೆಯಾಗಬೇಕು. ಮಕ್ಕಳ ಹೆಚ್ಚಿನ ಸಮಸ್ಯೆಗಳು ಹುಟ್ಟಿನಿಂದ ಬಂದಿರುವುದಲ್ಲ. ಮಕ್ಕಳು ಕೌಟುಂಬಿಕ ವಾತಾವರಣವನ್ನು ಪ್ರತಿಫಲಿಸುವ ಕನ್ನಡಿ ಮಾತ್ರ.

ಪೋಷಕರು ಮಕ್ಕಳನ್ನು ದೂಷಿಸುವ ಬದಲು ಅವರಿಗೆ ಉತ್ತಮ ಕೌಟುಂಬಿಕ ಪರಿಸರವನ್ನು ಒದಗಿಸುವ ಕುರಿತು ಯೋಚಿಸಬೇಕು. ಇದಕ್ಕಾಗಿ ಮೊದಲು ಪೋಷಕರು ತಮ್ಮ ಮಾನಸಿಕ ಹೋರಾಟಗಳನ್ನು ಸಮರ್ಥವಾಗಿ ನಿಭಾಯಿಸುವುದನ್ನು ಕಲಿಯಬೇಕು. ❖

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು.

ರಾಜ್ಯ ಒಕ್ಕಲಿಗರ ಸಂಘದೊಳಗಿನ ಕಿತ್ತಾಟಕ್ಕೆ ಹೈಕೋರ್ಟ್ ಬೇಸರ

'ದೇಶದ ವ್ಯವಸ್ಥೆ ಕುಲಗೆಟ್ಟು ಹೋಗಿದೆ'

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ದೇಶದ ವ್ಯವಸ್ಥೆ ಕುಲಗೆಟ್ಟು ಹೋಗಿದ್ದು, ಎಲ್ಲೆಡೆ ಕುದುರೆ ವ್ಯಾಪಾರ ಮೆರೆದಾಡುತ್ತಿದೆ. ಇದನ್ನೆಲ್ಲಾ ಹೇಳಲು ನನಗೆ ನಾಚಿಕೆಯಾಗುತ್ತಿದೆ' ಎಂದು ಮೌಖಿಕವಾಗಿ ಬೇಸರ ವ್ಯಕ್ತಪಡಿಸಿರುವ ಹೈಕೋರ್ಟ್, ರಾಜ್ಯ ಒಕ್ಕಲಿಗರ ಸಂಘದೊಳಗಿನ ಕಿತ್ತಾಟಕ್ಕೆ ತೀವ್ರ ವ್ಯಥೆ ವ್ಯಕ್ತಪಡಿಸಿದೆ.

ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಬಿ.ಕೆಂಚಪ್ಪಗೌಡ ಅಧ್ಯಕ್ಷತೆಯಲ್ಲಿ ನಡೆಯಬೇಕಿದ್ದ ಸಂಘದ ಕಾರ್ಯಕಾರಿ ಸಮಿತಿ ಸಭೆಯನ್ನು ಪ್ರಶ್ನಿಸಿ ಸಂಘದ ಸದಸ್ಯರಾದ ಹಾಸನ ಜಿಲ್ಲೆಯ ಸಂಕ್ಲಾಪುರದ ಎಸ್.ಎಸ್.ರಘುಗೌಡ, ಸೇರಿದಂತೆ ನಾಲ್ವರು ಸದಸ್ಯರು ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಈ ವೇಳೆ ನ್ಯಾಯಪೀಠವು, ಸಿ.ಎನ್. ಬಾಲಕೃಷ್ಣ ಮತ್ತು ಕೋನಪ್ಪ ರೆಡ್ಡಿ ನೇತೃತ್ವದ ಕಾರ್ಯಕಾರಿ ಸಮಿತಿ ವಿರುದ್ಧ ಕೆಂಚಪ್ಪಗೌಡರ ಗುಂಪು 2023ರ ಮೇ 9ರಂದು ಅವಿಶ್ವಾಸ ನಿರ್ಣಯ ಮಂಡಿಸಿ, ನಂತರ ಚುನಾವಣೆ ನಡೆಸಿ ಅಧಿಕಾರ ಪಡೆದದ್ದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅಸಲು ದಾವೆಯಲ್ಲಿನ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಿದ್ದ ವಿಚಾರಣಾ ನ್ಯಾಯಾಲಯದ ಆದೇಶವನ್ನು ರದ್ದುಪಡಿಸಿತು.

ಈ ಆದೇಶಕ್ಕೆ ಪ್ರತಿಕ್ರಿಯಿಸಿದ ಕೆಂಚಪ್ಪಗೌಡರ ಪರ ಹಾಜರಾಗಿದ್ದ ಹಿರಿಯ ವಕೀಲ ಡಿ.ಆರ್.ರವಿಶಂಕರ್, 'ಉಭಯ ಬಣಗಳು 17ರವರೆಗೆ ಯಾವುದೇ ಸಭೆ ಹಾಗೂ ನಿರ್ಧಾರ ತೆಗೆದುಕೊಳ್ಳದಂತೆ ನಿರ್ದೇಶಿಸಬೇಕು. ಇಲ್ಲದಿದ್ದಲ್ಲಿ ಇದು ರೆಸಾರ್ಟ್ ರಾಜಕೀಯಕ್ಕೆ ದಾರಿ ಮಾಡಿಕೊಡುತ್ತದೆ' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಮೂರ್ತಿ, 'ಬಾಲಕೃಷ್ಣ ನೇತೃತ್ವದ ಗುಂಪು ಇದೇ 17ರವರೆಗೆ ಯಾವುದೇ ಸಭೆ ನಡೆಸಬಾರದು ಹಾಗೂ ಪ್ರಮುಖ ನಿರ್ಧಾರ ತೆಗೆದುಕೊಳ್ಳಬಾರದು' ಎಂದು ತಾಕೀತು ಮಾಡಿದರು. ಅಂತೆಯೇ, ಹೈಕೋರ್ಟ್ ಮೆಟ್ಟಲೇರಿರುವ ಸದಸ್ಯರನ್ನು ಹೊರತುಪಡಿಸಿ ಉಳಿದ ಸದಸ್ಯರಿಗೆ ಪೂರ್ವ ನೋಟಿಸ್ ನೀಡಿ ಅವಿಶ್ವಾಸ ನಿರ್ಣಯ ಮಂಡಿಸುವಂತೆ ನಿರ್ದೇಶಿಸಿ ವಿಚಾರಣೆಯನ್ನು ಇದೇ 17ಕ್ಕೆ ಮುಂದೂಡಿದರು.

ಅರ್ಜಿ ವಿಚಾರಣೆ ಮುಂದೂಡುವ ಮೊದಲು ಸಂದೇಶ್ ಅವರು ಸಂಘದ ಚಟುವಟಿಕೆಗಳ ಬಗ್ಗೆ ತೀವ್ರ ಅಸಮಾಧಾನ ಹೊರಹಾಕಿದರಲ್ಲದೆ, 'ಸಂಘದಲ್ಲಿ ಮೆಡಿಕಲ್ ಸೀಟುಗಳನ್ನು ಅನಿವಾಸಿ ಭಾರತೀಯರಿಗೆ ಕೋಟಿಗಟ್ಟಲೆ ರೂಪಾಯಿಗಳಿಗೆ ಮಾರಿಕೊಳ್ಳಲಾಗುತ್ತಿದೆ. ಇದಕ್ಕಾಗಿಯೇ ಈ ಕುಸ್ತಿ ನಡೆಯುತ್ತಿದೆ. 1904ರಲ್ಲಿ ಸ್ಥಾಪನೆಗೊಂಡ ಈ ಸಂಘದ ಮೂಲ ಉದ್ದೇಶಗಳೇ ಇಂದು ಮರೆಯಾಗಿವೆ. ಸಂಘದ ಸದಸ್ಯರ ಆತ್ಮಾವಲೋಕನಕ್ಕೆ ಇದು ಸಕಾಲವಾಗಿದೆ' ಎಂದರು.

'ನನ್ನ ಮಗಳಿಗೆ ಕಿಮ್ಸ್‌ನಲ್ಲಿ (ಕೆಂಪೇಗೌಡ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ) ವೈದ್ಯಕೀಯ ಪದವಿಗೆ ಸೇರಿಸುವಂತೆ ನನ್ನನ್ನು ಬಲ್ಲವರೊಬ್ಬರು ಸಲಹೆ ನೀಡಿದ್ದರು. ಆದರೆ, ಸಂಘದೊಳಗಿನ ಕಿತ್ತಾಟ ನೋಡಿ ಇವರ ಸಹವಾಸವೇ ಬೇಡ ಎಂದು ಕಿಮ್ಸ್‌ನಿಂದ ದೂರ ಉಳಿದೆ. ಇಂದು ಎಲ್ಲೆಡೆ ಕುದುರೆ ವ್ಯಾಪಾರ ವ್ಯಾಪಕವಾಗಿ ತಾಂಡವವಾಡುತ್ತಿದೆ. ಬಂಡವಾಳ ಹಾಕಿ ಅದನ್ನು ವಾಪಸು ತೆಗೆಯುವ ಪ್ರವೃತ್ತಿ ನೋಡಿದರೆ ಹೇಸಿಗೆ ಹುಟ್ಟಿಸುತ್ತದೆ' ಎಂದು ತಮ್ಮ ಕಹಿ ಅನುಭವವನ್ನು ವಿವರಿಸಿದರು. ಮೇಲ್ಮನವಿದಾರರ ಪರ ವಕೀಲ ಮಧುಕರ ದೇಶಪಾಂಡೆ ಮತ್ತು ಬಸವರಾಜು ವಕಾಲತ್ತು ವಹಿಸಿದ್ದಾರೆ.

ಸದನದಲ್ಲಿ 'ನಕಲಿ ಶಾಸಕ'!

ಒಂದನೇ ಪುಟದಿಂದ...

'ಆರೋಪಿ ತಿಪ್ಪೇರುದ್ರಪ್ಪ, ಮಾನಸಿಕ ಅಸ್ವಸ್ಥನಂತೆ ವರ್ತಿಸುತ್ತಿದ್ದಾರೆ. 'ನಾನೊಬ್ಬ ಶಾಸಕ. ಸದ್ಯದಲ್ಲೇ ಸಚಿವ ಆಗುತ್ತೇನೆ' ಎನ್ನುತ್ತಿದ್ದಾರೆ. 'ನಾನು ವಕೀಲ' ಎಂಬುದಾಗಿಯೂ ಆಗಾಗ ಹೇಳುತ್ತಿದ್ದಾರೆ. ಸಮಗ್ರ ವಿಚಾರಣೆ ನಡೆಸಿದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಮೂಲಗಳು ತಿಳಿಸಿವೆ.

ವೀಕ್ಷಕರ ಪಾಸ್ ಪಡೆದು ಪ್ರವೇಶ: 'ವಿಧಾನಸೌಧಕ್ಕೆ ಬೆಳಿಗ್ಗೆ ಬಂದಿದ್ದ ತಿಪ್ಪೇರುದ್ರಪ್ಪ, ಸರದಿ ಸಾಲಿನಲ್ಲಿ ನಿಂತು ವೀಕ್ಷಕರ ಪಾಸ್ ಪಡೆದುಕೊಂಡಿದ್ದರು. ಮಧ್ಯಾಹ್ನ 12.10ರ ಸುಮಾರಿಗೆ ವೀಕ್ಷಕರ ಗ್ಯಾಲರಿಗೆ ಹೋಗುವ ಬದಲು, ಶಾಸಕರ ಪ್ರವೇಶ ದ್ವಾರದ ಬಳಿ ತೆರಳಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿಯನ್ನು ತಡೆದಿದ್ದ ಮಾರ್ಷಲ್‌ಗಳು, 'ನೀವು ಯಾರು' ಎಂದು ಪ್ರಶ್ನಿಸಿದ್ದರು. 'ನಾನು ಮೊಳಕಾಲ್ಮೂರು ಕ್ಷೇತ್ರದ ಶಾಸಕ. ಒಳಗೆ ಬಿಡಿ' ಎಂಬುದಾಗಿ ಜೋರು ಧ್ವನಿಯಲ್ಲಿ ಹೇಳಿದ್ದರು. ಹೊಸ ಶಾಸಕ ಇರಬಹುದೆಂದು ತಿಳಿದ ಮಾರ್ಷಲ್‌ಗಳು ಆರೋಪಿಯನ್ನು ಒಳಗೆ ಬಿಟ್ಟಿದ್ದರು.'

'ಶಾಸಕರ ಜೊತೆಗೆ ವಿಧಾನಸೌಧದೊಳಗೆ ಹೋಗಿದ್ದ ಆರೋಪಿ, ಶಾಸಕಿ ಕರೆಮ್ಮ ಜಿ. ನಾಯಕ ಅವರ ಆಸನದ ಮೇಲೆ 15 ನಿಮಿಷ ಕುಳಿತಿದ್ದರು. ಇದನ್ನು ಗಮನಿಸಿದ ಶಾಸಕರೊಬ್ಬರು ಸಭಾಧ್ಯಕ್ಷ ಯು.ಟಿ.ಖಾದರ್ ಬಳಿ ಹೋಗಿ ವಿಷಯ ತಿಳಿಸಿದ್ದರು. ಅಷ್ಟರಲ್ಲೇ ಆರೋಪಿಯನ್ನು ಮಾರ್ಷಲ್‌ಗಳು ಹಿಡಿದು ವಿಧಾನಸೌಧದಿಂದ ಹೊರಗೆ ಕರೆತಂದಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆರೋಪಿ, ವಕೀಲ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ವಿಧಾನಸೌಧ ಭದ್ರತಾ ಸಿಬ್ಬಂದಿ ಕರ್ತವ್ಯ ಲೋಪವೂ ಎದ್ದು ಕಾಣುತ್ತಿದೆ' ಎಂದು ಹೇಳಿವೆ.

ಶಾಹೀನ್ ಶಾಲೆ – ನಾಟಕದಲ್ಲಿ ಹಿಂಸೆ ಇರಲಿಲ್ಲ: ಹೈಕೋರ್ಟ್

ದೇಶದ್ರೋಹ ಪ್ರಕರಣ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಧಾನಿಗೆ ಪಾದರಕ್ಷೆಯಿಂದ ಹೊಡೆಯಬೇಕು ಎಂಬ ನಿಂದನೆಯ ಮಾತುಗಳು ಅವಹೇಳನಕಾರಿ ಮಾತ್ರವಲ್ಲ, ಬೇಜವಾಬ್ದಾರಿಯೂ ಆಗಿದೆ. ಆದರೆ, ಸರ್ಕಾರದ ನೀತಿಯ ಕುರಿತು ರಚನಾತ್ಮಕ ಟೀಕೆಗೆ ಅನುಮತಿಯಿದೆ. ಅಂತೆಯೇ, ಕೆಲವು ವರ್ಗದ ಜನರ ಆಕ್ಷೇಪಣೆಯನ್ನು ಸ್ವೀಕಾರ ಯೋಗ್ಯ ರೀತಿಯಲ್ಲಿ ಪರಿಗಣಿಸಬೇಕು' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಕೇಂದ್ರ ಸರ್ಕಾರ ಜಾರಿಗೊಳಿಸಿದ ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಮತ್ತು ಪ್ರಜೆಗಳ ರಾಷ್ಟ್ರೀಯ ನೋಂದಣಿ (ಎನ್‌ಆರ್‌ಸಿ) ಕುರಿತು ಬೀದರ್ ಶಾಹೀನ್ ಶಾಲೆಯ ಮಕ್ಕಳು ನಾಟಕ ಪ್ರದರ್ಶಿಸಿದ್ದಕ್ಕೆ ಸಂಬಂಧಿಸಿದಂತೆ ಶಾಲೆಯ ಆಡಳಿತ ಮಂಡಳಿಯ ನಾಲ್ವರ ವಿರುದ್ಧ ದಾಖಲಿಸಲಾಗಿದ್ದ ದೇಶದ್ರೋಹ ಪ್ರಕರಣವನ್ನು ವಜಾಗೊಳಿಸಿದ್ದ ಪ್ರಕರಣದಲ್ಲಿ ನೀಡಲಾದ ಆದೇಶದಲ್ಲಿ ಈ ಅಭಿಪ್ರಾಯ ವ್ಯಕ್ತಪಡಿಸಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಶಾಹೀನ್ ಶಾಲೆಯ ಮುಖ್ಯಸ್ಥರಾದ ಅಲ್ಲಾವುದ್ದೀನ್, ಅಬ್ದುಲ್ ಖಾಲಿಕ್, ಮೊಹಮ್ಮದ್ ಬಿಲಾಲ್ ಇನಾಂದಾರ್ ಮತ್ತು ಮೊಹಮ್ಮದ್ ಮೆಹ್ತಾಬ್ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ನ್ಯಾಯಮೂರ್ತಿ ಹೇಮಂತ್ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿತು.

ಈ ಕುರಿತ ವಿಸ್ತೃತ ಆದೇಶದಲ್ಲಿ, 'ನಾಟಕದಲ್ಲಿ ಹಿಂಸಾಚಾರಕ್ಕೆ ಎಣೆ ಮಾಡಿಕೊಡುವ ಅಥವಾ ಸಾರ್ವಜನಿಕ ಅಸ್ವಸ್ಥತೆ ಸೃಷ್ಟಿಸಿ ಮಕ್ಕಳನ್ನು ಪ್ರಚೋದಿಸುವ ಯಾವುದೇ ಪದಗಳಿಲ್ಲ. ಅರ್ಜಿದಾರರು ಸರ್ಕಾರದ ವಿರುದ್ಧ ಹಿಂಸಾಚಾರಕ್ಕೆ ಜನರನ್ನು ಪ್ರಚೋದಿಸುವ ಅಥವಾ ಸಾರ್ವಜನಿಕ ಅವ್ಯವಸ್ಥೆಯನ್ನು ಸೃಷ್ಟಿಸುವ ಉದ್ದೇಶದಿಂದ ನಾಟಕ ಮಾಡಿದ್ದಾರೆ ಎಂಬುದನ್ನು ಯಾವುದೇ ಕಲ್ಪನೆ ಮೂಲಕ ಹೇಳಲು ಆಗದು' ಎಂದು ವಿವರಿಸಲಾಗಿದೆ.

ಪ್ರಕರಣವೇನು?: ಶಾಹೀನ್ ಶಿಕ್ಷಣ ಸಂಸ್ಥೆಯ ನಾಲ್ಕನೇ ತರಗತಿಯ ಮಕ್ಕಳು 2020ರ ಜನವರಿಯಲ್ಲಿ ಸಿಎಎ ವಿರೋಧಿ ವಿಷಯ ಆಧರಿಸಿ ನಾಟಕ ಪ್ರದರ್ಶಿಸಿದ್ದರು. 'ಈ ನಾಟಕದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ನಿಂದಿಸುವ ಸಂಭಾಷಣೆ ಇತ್ತು' ಎಂದು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಸದಸ್ಯ ನೀಲೇಶ್ ರಕ್ಷಾಲ್ ದೂರು ದಾಖಲಿಸಿದ್ದರು.

'ಸಂಸತ್‌ನಲ್ಲಿ ಒಪ್ಪಿಗೆ ಪಡೆದ ಸಿಎಎ ವಿರುದ್ಧ ಮಕ್ಕಳಲ್ಲಿ ತಪ್ಪು ಮಾಹಿತಿ ಬಿತ್ತಲು ಶಾಲಾ ಆಡಳಿತ ಮಂಡಳಿ ಪ್ರಯತ್ನಿಸಿದ್ದು, ಈ ಮೂಲಕ ಕೋಮು ಪ್ರಚೋದನೆಗೆ ನಾಂದಿ ಹಾಡಲಾಗಿದೆ' ಎಂದು ಆರೋಪಿಸಲಾಗಿತ್ತು.

ಈ ದೂರು ಆಧರಿಸಿ ಪೊಲೀಸರು ಭಾರತೀಯ ದಂಡ ಸಂಹಿತೆ (ಐಪಿಸಿ) ಕಲಂ 504, 505 (2), 124 (ಎ) ಮತ್ತು 153(ಎ) ಅಡಿ ಪ್ರಕರಣ ದಾಖಲಿಸಿದ್ದರು. ವಿಚಾರಣೆ ಹಂತದಲ್ಲಿ ಶಾಲೆಯ ಮುಖ್ಯ ಶಿಕ್ಷಕಿ ಫರೀದಾ ಬೇಗಂ ಮತ್ತು ವಿದ್ಯಾರ್ಥಿಯೊಬ್ಬರ ತಾಯಿ ನಜ್ಬುನ್ನೀಸಾ ಅವರನ್ನು ಬಂಧಿಸಲಾಗಿತ್ತು. ನಂತರ ಜಾಮೀನಿನ ಮೇಲೆ ಅವರನ್ನು ಬಿಡುಗಡೆ ಮಾಡಲಾಗಿತ್ತು.



ಉಪವಲಯ ಅರಣ್ಯಾಧಿಕಾರಿ ಸಾವು

ಪ್ರಜಾವಾಣಿ ವಾರ್ತೆ



ಯೋಗೇಶ ನಾಯ್ಕ

ದಾಂಡೇಲಿ: ಅರಣ್ಯ ಸಾಗವಾನಿ ಸಸಿಗಳಿಗೆ ಕಳನಾಶಕ ಸಿಂಪಡಿಸಿದ ಬಳಿಕ ಅಸ್ವಸ್ಥಗೊಂಡಿದ್ದ ವಿರ್ನೋಳಿ ಅರಣ್ಯ ವಲಯದ ಕುಳಗಿ ಶಾಖೆಯ ಉಪ ವಲಯ ಅರಣ್ಯಾಧಿಕಾರಿ ಯೋಗೇಶ ನಾಯ್ಕ (33) ಶುಕ್ರವಾರ ಹುಬ್ಬಳ್ಳಿಯ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ.

'4 ದಿನದ ಹಿಂದೆ ಹೊಟ್ಟೆನೋವು ಕಾರಣಕ್ಕೆ ಹುಬ್ಬಳ್ಳಿಯ ಆಸ್ಪತ್ರೆಗೆ ತೆರಳಿದ್ದರು. ವಾರದ ಹಿಂದೆ ಸಾಗವಾನಿ ಸಸಿಗಳಿಗೆ ಕೀಟನಾಶಕ ಸಿಂಪಡಿಸಿದ ಬಳಿಕ ಅವರ ಆರೋಗ್ಯದಲ್ಲಿ ಏರುಪೇರು ಆಗಿತ್ತು. ಕೀಟನಾಶಕದ ಅಂಶ ದೇಹಕ್ಕೆ ಸೇರಿದ್ದರಿಂದ ಈ ರೀತಿ ಆಗಿರಬಹುದು' ಎಂದು ಯೋಗೀಶ್ ಅವರ ಸಹೋದ್ಯೋಗಿಯೊಬ್ಬರು ತಿಳಿಸಿದ್ದಾರೆ.

'ಯೋಗೀಶ್ ಸಾವಿಗೆ ಕಾರಣ ಸ್ಪಷ್ಟವಾಗಿಲ್ಲ. ಮರಣೋತ್ತರ ಪರೀಕ್ಷೆ ವರದಿ ಮತ್ತು ಪೊಲೀಸ್ ವರದಿ ಬಂದ ಬಳಿಕ ನಿರ್ದಿಷ್ಟ ಕಾರಣ ತಿಳಿಯಲಿದೆ' ಎಂದು ಹಳಿಯಾಳ ಉಪ ಅರಣ್ಯ ಸಂರಕ್ಷಣಾಧಿಕಾರಿ ಬಾಲಚಂದ್ರ ತಿಳಿಸಿದ್ದಾರೆ.

ಆತ್ಮಹತ್ಯೆ ಯತ್ನ: ರಾಜಕಾರಣ ಮಾಡದಂತೆ ಮನವಿ

ನಾಗಮಂಗಲ (ಮಂಡ್ಯ ಜಿಲ್ಲೆ): 'ಆತ್ಮಹತ್ಯೆಗೆ ಯತ್ನಿಸಿದ್ದ ಸಾರಿಗೆ ಸಂಸ್ಥೆ ಬಸ್ ಚಾಲಕ ಎಚ್.ಆರ್.ಜಗದೀಶ್ ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಸಾವು- ಬದುಕಿನ ನಡುವೆ ಹೋರಾಡುತ್ತಿದ್ದು, ಈ ವಿಚಾರದಲ್ಲಿ ಯಾರೂ ರಾಜಕೀಯ ಮಾಡಬಾರದು' ಎಂದು ಅವರ ಸಹೋದರ ರವಿಕುಮಾರ್ ಮನವಿ ಮಾಡಿದ್ದಾರೆ.

'ಯಾರ ಒತ್ತಡದಿಂದ ಆತ್ಮಹತ್ಯೆಗೆ ಯತ್ನಿಸಿದರೆಂಬುದು ನಮಗೆ ಮುಖ್ಯವಲ್ಲ, ಅವರ ಜೀವ ಉಳಿಸಿಕೊಳ್ಳುವುದೇ ಮುಖ್ಯ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಡೆತ್‌ನೋಟ್‌ನಲ್ಲಿ ಸಚಿವ ಚಲುವರಾಯಸ್ವಾಮಿಯವರ ಹೆಸರು ಹೇಗೆ ಬಂತೆಂಬುದು ಗೊತ್ತಿಲ್ಲ. ಯಾವ ಒತ್ತಡದ ಬಗ್ಗೆಯೂ ಅವರು ಹೇಳಿಕೊಂಡಿರಲಿಲ್ಲ. ಅತ್ತಿಗೆ ಗ್ರಾಮ ಪಂಚಾಯ್ತಿ ಸದಸ್ಯೆಯಾಗಿದ್ದರೂ ಅಣ್ಣ ಸರ್ಕಾರಿ ಉದ್ಯೋಗಿಯಾಗಿದ್ದರಿಂದ ರಾಜಕೀಯದಲ್ಲಿ ಗುರುತಿಸಿಕೊಂಡಿರಲಿಲ್ಲ' ಎಂದರು. 'ಐಸಿಯುನಲ್ಲಿರುವ ಅಣ್ಣನ ಬಗ್ಗೆ ಸದ್ಯ ಏನೂ ಹೇಳಲಾಗದು ಎಂದು ವೈದ್ಯರು ತಿಳಿಸಿದ್ದಾರೆ. ಪ್ರಜ್ಞೆ ಬಂದಿದ್ದರೂ ಮಾತನಾಡುವ ಸ್ಥಿತಿಯಲ್ಲಿಲ್ಲ' ಎಂದರು.

ಚಾಲಕ ಜಗದೀಶ್ ಅವರ ಪತ್ನಿ ಪಾವನಾ ಮಾತನಾಡಲು ನಿರಾಕರಿಸಿದರು.



ಜಲಧಾರೆ

ಛತ್ತೀಸಗಢದ ಬಸ್ತರ್ ಜಿಲ್ಲೆಯ ಚಿತ್ರಕೋಟೆ ಜಲಪಾತದ ನೋಟ –ಪಿಟಿಐ ಚಿತ್ರ

ಪ. ಬಂಗಾಳ: ಕಾಂಗ್ರೆಸ್ ಕಾರ್ಯಕರ್ತನ ಹತ್ಯೆ

ಕೋಲ್ಕತ್ತ (ಪಿಟಿಐ): ಪಶ್ಚಿಮಬಂಗಾಳದ ಮುರ್ಶಿರಾಬಾದ್ ಜಿಲ್ಲೆಯಲ್ಲಿ ಪಂಚಾಯತ್ ಚುನಾವಣೆಗೂ ಮುನ್ನ ಕಾಂಗ್ರೆಸ್ ಕಾರ್ಯಕರ್ತರೊಬ್ಬರ ಮೇಲೆ ಅಪರಿಚಿತರು ಹಲ್ಲೆ ನಡೆಸಿ ಹತ್ಯೆ ಮಾಡಿದ್ದಾರೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಅರಬಿಂದೊ ಮಂಡಲ್ (45) ಮೃತ ಕಾಂಗ್ರೆಸ್ ಕಾರ್ಯಕರ್ತ.

ಗಲಭೆಯಿಂದ ಹಾನಿಯಾದ ಪ್ರದೇಶಕ್ಕೆ ರಾಜ್ಯಪಾಲ ಸಿ.ವಿ ಆನಂದ ಬೋಸ್ ಅವರು ತಲುಪುವ ಕೆಲವೇ ಗಂಟೆಗಳ ಮೊದಲು ರಾಣಿನಗರದಲ್ಲಿ ಈ ಘಟನೆ ನಡೆದಿದೆ.

ಎರಡು ಗುಂಪುಗಳ ನಡುವೆ ನಡೆದ ಗಲಾಟೆಯಲ್ಲಿ ಗುರುವಾರ ರಾತ್ರಿ ಅಪರಿಚಿತರು ಅರಬಿಂದೊ ಮೇಲೆ ಹಲ್ಲೆ ನಡೆಸಿದ್ದಾರೆ. ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಸಾವನ್ನಪ್ಪಿರುವುದಾಗಿ ಘೋಷಣೆ ಮಾಡಿದ್ದಾರೆ. ಈ ಬಗ್ಗೆ ತನಿಖೆ ಮಾಡಲಾಗುತ್ತಿದೆ, ಯಾರನ್ನೂ ಬಂಧಿಸಿಲ್ಲ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಶನಿವಾರ ಪಂಚಾಯತ್ ಚುನಾವಣೆ ನಡೆಯಲಿದೆ.

ಕೆಇಎ ಅರ್ಜಿ ಆಹ್ವಾನ; ತಾಂತ್ರಿಕ ಸಮಸ್ಯೆ ಸರಿಪಡಿಸಲು ಒತ್ತಾಯ

ಸಲ್ಲಿಕೆಯಾಗದ ಅರ್ಜಿ ಆಕಾಂಕ್ಷಿಗಳಿಗೆ ಸಂಕಷ್ಟ

● ಮಲ್ಲಪ್ಪ ಪಾರೇಗಾಂವ

ಕಲಬುರಗಿ: ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ರಾಜ್ಯ ಸರ್ಕಾರದ ಅಧೀನದಲ್ಲಿರುವ ವಿವಿಧ ವೃಂದಗಳಲ್ಲಿ ಖಾಲಿ ಇರುವ 670 ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಿದೆ. ಆದರೆ, ತಾಂತ್ರಿಕ ಸಮಸ್ಯೆಯಿಂದಾಗಿ ಅರ್ಜಿ ನಮೂನೆ ತೆರೆದುಕೊಳ್ಳುತ್ತಿಲ್ಲ. ಇದು ಸರ್ಕಾರಿ ನೌಕರಿಯ ಆಕಾಂಕ್ಷಿಗಳನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಕೆಇಎಯು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಆಹಾರ ಮತ್ತು ಸರಬರಾಜು ನಿಗಮ, ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ (ಕಿಯೋನಿಕ್ಸ್), ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಎಂಎಸ್‌ಐಎಲ್) ಸಂಸ್ಥೆಗಳಲ್ಲಿ ಖಾಲಿಯಿರುವ ವಿವಿಧ ಹುದ್ದೆಗಳಿಗೆ ಜೂನ್ 23ರಿಂದ ಅರ್ಜಿ ಸಲ್ಲಿಕೆಗೆ ಅವಕಾಶ ನೀಡಲಾಗಿದೆ.

> **ತಾಂತ್ರಿಕ ಸಮಸ್ಯೆಯಿಂದಾಗಿ ಅರ್ಜಿ ಸಲ್ಲಿಸಲು ಸಾಧ್ಯವಾಗುತ್ತಿಲ್ಲ. ಶೀಘ್ರವೇ ಸರ್ವರ್ ಸಮಸ್ಯೆ ಪರಿಹರಿಸಬೇಕು. ಇಲ್ಲದಿದ್ದರೆ ಅವಕಾಶ ವಂಚಿತರಾಗುತ್ತೇವೆ ರಫೀಕ್ ಚಿನ್ಮಳ್ಳಿ, ಆಕಾಂಕ್ಷಿ,** ಕಲಬುರಗಿ

> **ಅರ್ಜಿ ಸಲ್ಲಿಕೆ ವೇಳೆ ತಾಂತ್ರಿಕ ತೊಂದರೆಯಾಗುತ್ತಿರುವುದು ಗಮನಕ್ಕೆ ಬಂದಿದೆ. ಶೀಘ್ರವೇ ಸಮಸ್ಯೆ ಸರಿಪಡಿಸಿ, ಅರ್ಜಿ ಸಲ್ಲಿಕೆಗೆ ಅವಕಾಶ ಮಾಡಿಕೊಡಲಾಗುವುದು ರಮ್ಯಾ,** ಕೆಇಎ ನಿರ್ದೇಶಕಿ

ಅರ್ಜಿ ಆಹ್ವಾನಿಸಿದ ಆರಂಭದಲ್ಲಿಯೇ ಆಕಾಂಕ್ಷಿಗಳಲ್ಲಿ ಗೊಂದಲ ಉಂಟಾಗಿತ್ತು. ಕೆಇಎ ಆರಂಭದಲ್ಲಿ ಒಂದು ಅರ್ಜಿಗೆ ₹1000 ಶುಲ್ಕ ನಿಗದಿಗೊಳಿಸಿತ್ತು. ಆಕಾಂಕ್ಷಿಗಳಿಂದ ವಿರೋಧ ವ್ಯಕ್ತವಾದ ಬಳಿಕ ಅರ್ಜಿ ಶುಲ್ಕವನ್ನು ಕಡಿತಗೊಳಿಸಿತ್ತು. ಈಗ ತಾಂತ್ರಿಕ ಸಮಸ್ಯೆಯಿದ್ದರೂ ಸರಿಪಡಿಸುತ್ತಿಲ್ಲ. ಒಂದು ದಿನ ಕಾಯ್ದರೂ ಅರ್ಜಿ ಸಲ್ಲಿಕೆ ಕಾರ್ಯ ಮುಗಿಯುತ್ತಿಲ್ಲ. ಅರ್ಜಿ ನಮೂನೆ ಭರ್ತಿ ಮಾಡಿದರೆ, ಸಹಿ ಹಾಗೂ ಭಾವಚಿತ್ರಗಳು ಅಪ್‌ಲೋಡ್ ಆಗುತ್ತಿಲ್ಲ. ಒಂದು ವೇಳೆ ಅಪ್‌ಲೋಡ್ ಆದರೂ ಅರ್ಜಿ ಸ್ವೀಕಾರವಾಗುತ್ತಿಲ್ಲ ಎಂದು ಆಕಾಂಕ್ಷಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಆರಂಭದ ಒಂದೆರಡು ದಿನ ಈ ಸಮಸ್ಯೆಯಿರಲಿಲ್ಲ. ಆದರೆ, ಕಳೆದೊಂದು ವಾರದಿಂದ ತಾಂತ್ರಿಕ ಸಮಸ್ಯೆಯಾಗಿದ್ದು, ಅರ್ಜಿ ಸಲ್ಲಿಕೆಯಾಗುತ್ತಿಲ್ಲ. ಈಗ ನೋಡಿದರೆ ಅರ್ಜಿ ನಮೂನೆಯೇ ತೆರೆದುಕೊಳ್ಳುತ್ತಿಲ್ಲ. ಅರ್ಜಿ ಸಲ್ಲಿಕೆಗೆ ಜುಲೈ 22 ಕೊನೆಯ ದಿನವಾಗಿದ್ದು, ಪರೀಕ್ಷೆ ಪ್ರಾಧಿಕಾರದವರು ಸಮಸ್ಯೆಯನ್ನು ಶೀಘ್ರವೇ ಪರಿಹರಿಸಬೇಕು ಎಂದು ಸರ್ಕಾರಿ ಹುದ್ದೆ ಆಕಾಂಕ್ಷಿ ಗಿರೀಶ್ ಒತ್ತಾಯಿಸಿದ್ದಾರೆ.

ಆರ್.ಡಿ. ನಂಬರ್: ಯೋಜನಾ ನಿರಾಶ್ರಿತರಿಗಾಗಿ ನೀಡಲಾಗಿರುವ ಯೋಜನಾ ನಿರಾಶ್ರಿತ ಪ್ರಮಾಣಪತ್ರದಲ್ಲಿ (ಪಿಡಿಪಿ) ಆರ್‌ಡಿ ನಂಬರ್ ಇರುವುದಿಲ್ಲ. ಆದರೆ, ಅರ್ಜಿ ಸಲ್ಲಿಕೆ ವೇಳೆ ಆರ್‌ಡಿ ನಂಬರ್ ಕೇಳುತ್ತಿದ್ದು, ಅರ್ಜಿ ಸಲ್ಲಿಸಲು ಸಾಧ್ಯವಾಗುತ್ತಿಲ್ಲ. ಇದನ್ನು ಕೂಡ ಸರಿಪಡಿಸಬೇಕು ಎಂದು ಆಕಾಂಕ್ಷಿಗಳು ಆಗ್ರಹಿಸಿದ್ದಾರೆ.

₹ 5 ಲಕ್ಷ ಲಂಚ: ಅನುದಾನಿತ ಶಾಲಾ ಸಂಚಾಲಕಿ ಬಂಧನ

ಮಂಗಳೂರು: ಈ ತಿಂಗಳ ಅಂತ್ಯಕ್ಕೆ ನಿವೃತ್ತಿಯಾಗಲಿರುವ ಮುಖ್ಯ ಶಿಕ್ಷಕಿಯ ದಾಖಲೆಗಳಿಗೆ ಸಹಿ ಮಾಡಲು ಲಂಚಕ್ಕೆ ಬೇಡಿಕೆಯಿಟ್ಟು, ಶುಕ್ರವಾರ ₹ 5 ಲಕ್ಷ ಸ್ವೀಕರಿಸುತ್ತಿದ್ದ ವೇಳೆ ಅನುದಾನಿತ ಶಾಲಾ ಸಂಚಾಲಕಿಯನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಮಂಗಳೂರು ಹೊರವಲಯದ ಬಜಪೆಯ ನಿರಂಜನ ಸ್ವಾಮಿ ಅನುದಾನಿತ ಹಿರಿಯ ಪ್ರಾಥಮಿಕ ಶಾಲಾ ಸಂಚಾಲಕಿ ಜ್ಯೋತಿ ಪೂಜಾರಿ ಲೋಕಾಯುಕ್ತ ಬಲೆಗೆ ಬಿದ್ದ ಆರೋಪಿ.

ಅದೇ ಶಾಲೆಯಲ್ಲಿ ಮುಖ್ಯ ಶಿಕ್ಷಕಿಯಾಗಿದ್ದ ಶೋಭಾರಾಣಿ ಅವರ ನಿವೃತ್ತಿ ಹಾಗೂ ಉಪದಾನ ದಾಖಲೆಗಳಿಗೆ ಶಾಲಾ ಸಂಚಾಲಕರು ಸಹಿ ಮಾಡಿ ಕ್ಷೇತ್ರ ಶಿಕ್ಷಣಾಧಿಕಾರಿಗೆ ನೀಡಬೇಕಾಗಿತ್ತು. ಈ ದಾಖಲೆಗೆ ಸಹಿ ಹಾಕಿ ಹಾಕಲು ಜ್ಯೋತಿ ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎಂದು ದೂರು ನೀಡಲಾಗಿತ್ತು.

ಲೋಕಾಯಯಕ್ತ ಎಸ್ಪಿ ಸೈಮನ್ ಅವರ ಮಾರ್ಗದರ್ಶನದಲ್ಲಿ ಡಿವೈಎಸ್ಪಿಗಳಾದ ಚೆಲುವರಾಜ, ಕಲಾವತಿ, ಇನ್‌ಸ್ಪೆಕ್ಟರ್ ವಿನಾಯಕ ಬಿಲ್ಲವ ಮತ್ತು ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು ಎಂದು ಲೋಕಾಯುಕ್ತ ಪ್ರಕಟಣೆ ತಿಳಿಸಿದೆ.

ಜಾರ್ಖಂಡ್: ಐವರ ಬಂಧನ

ರಾಂಚಿ (ಪಿಟಿಐ): ಜಾರ್ಖಂಡ್‌ನ ಲೋಹರ್ದಗಾ ಜಿಲ್ಲೆಯಲ್ಲಿ ಐವರು ಮಾವೋವಾದಿಗಳನ್ನು ಬಂಧಿಸಿ, ಭಾರಿ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಕೃಷ್ಣ, ಕಾವೇರಿ, ಲಕ್ಷ್ಮಣತೀರ್ಥ ಸೇರಿದಂತೆ ಇತರ ನದಿಗಳ ನೀರಿನಮಟ್ಟ ಏರಿಕೆ: ಉಳ್ಳಾಲದಲ್ಲಿ ಕಡಲ ಕೊರೆತ

ತಗ್ಗಿದ ವರ್ಷಧಾರೆ, ಮೈದುಂಬಿದ ತುಂಗಭದ್ರಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ದಕ್ಷಿಣ ಕನ್ನಡ, ಉಡುಪಿ, ಕೊಡಗು ಜಿಲ್ಲೆ ಸೇರಿದಂತೆ ವಿವಿಧೆಡೆ ಶುಕ್ರವಾರ ಮಳೆಯ ತೀವ್ರತೆ ತುಸು ಕಡಿಮೆಯಾಗಿದೆ. ಕೆಲವು ಜಿಲ್ಲೆಗಳಲ್ಲಿ ಇಡೀ ದಿನ ಮೋಡ ಕವಿದ ವಾತಾವರಣವಿತ್ತು. ಕೆಲವೆಡೆ ಸಾಧಾರಣ ಮಳೆಯಾಗಿದೆ.

ಶಿವಮೊಗ್ಗದ ತುಂಗಾ ಜಲಾಶಯದಿಂದ ನೀರು ಹರಿಬಿಟ್ಟಿರುವುದರಿಂದ ಹೊನ್ನಾಳಿ, ಉಕ್ಕಡಗಾತ್ರಿ, ಹರಿಹರ ಬಳಿ ತುಂಗಭದ್ರಾ ನದಿ ಅಪಾಯ ಮಟ್ಟದಲ್ಲಿ ಹರಿಯುತ್ತಿದೆ. ಕೊಡಗು ಜಿಲ್ಲೆಯಲ್ಲಿ ಕಾವೇರಿ, ಲಕ್ಷ್ಮಣತೀರ್ಥ ನದಿಗಳಲ್ಲೂ ನೀರಿನಮಟ್ಟ ಏರಿಕೆಯಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿ ಮಲಪ್ರಭಾ, ಘಟಪ್ರಭಾ, ಹಿರಣ್ಯಕೇಶಿ ಹಾಗೂ ಮಾರ್ಕಂಡೇಯ ನದಿಗಳಲ್ಲಿನ ನೀರಿನ ಮಟ್ಟ ತುಸು ಏರಿಕೆಯಾಗಿದೆ. ಮಹಾರಾಷ್ಟ್ರದ ಘಟ್ಟ ಪ್ರದೇಶದಲ್ಲಿ ಮಳೆ ಮುಂದುವರಿದ ಕಾರಣ ಕೃಷ್ಣಾ ನದಿಯ ಹರಿವಿನಲ್ಲೂ ಏರಿಕೆ ಕಂಡು ಬಂದಿದೆ. ಹುಕ್ಕೇರಿ ತಾಲ್ಲೂಕಿನ ಹಿಡಕಲ್‌ನ ರಾಜಾ ಲಖಮಗೌಡ ಜಲಾಶಯದ ಒಳಹರಿವು 814 ಕ್ಯುಸೆಕ್‌ಗೆ ಏರಿಕೆಯಾಗಿದೆ.

ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ ಕುಡಿಯುವ ನೀರು ಪೂರೈಸುವ ಕೂಟುಹೊಳೆ ಶುಕ್ರವಾರ ಭರ್ತಿಯಾಗಿದೆ. ಚೇಲಾವರ ಸೇರಿದಂತೆ ಜಿಲ್ಲೆಯ ಬಹುತೇಕ ಎಲ್ಲ ಜಲಪಾತಗಳು ಭೋರ್ಗರೆಯುತ್ತಿವೆ.

ಮಡಿಕೇರಿಯ ರಾಣಿಪೇಟೆಯಲ್ಲಿ ಮನೆಯೊಂದರ ತಡೆಗೋಡೆ ಕುಸಿದು, ಆವರಣದಲ್ಲಿ ಹೂತುಹೋಗಿದ್ದ ಅಡುಗೆ ಅನಿಲ ಸಿಲಿಂಡರ್‌ಗಳನ್ನು ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡವು ತೆರವುಗೊಳಿಸಿ ಅವಘಡ ತಪ್ಪಿಸಿದೆ. ಪೆರಾಜೆ ಗ್ರಾಮದಲ್ಲಿ ಶಾಲೆಯ ತಡೆಗೋಡೆ ಕುಸಿದಿದೆ. ಜಿಲ್ಲೆಯಲ್ಲಿ ಶುಕ್ರವಾರ 8 ಮನೆಗಳಿಗೆ ಹಾನಿಯಾಗಿದ್ದು, 58 ವಿದ್ಯುತ್ ಕಂಬಗಳು ನೆಲಕಚ್ಚಿವೆ.

ಭಾಗಮಂಡಲ- ನಾಪೋಕ್ಲು ರಸ್ತೆಯಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿದ್ದು, ಬಸ್ ಸಂಚಾರ ಆರಂಭಗೊಂಡಿದೆ. ಸಿದ್ದಾಪುರ ಭಾಗದಲ್ಲಿ ಸಾಧಾರಣ ಮಳೆಯಾಗುತ್ತಿದ್ದು, ಕಾವೇರಿ ನದಿ ನೀರಿನ ಮಟ್ಟ ಏರಿಕೆಯಾಗಿದೆ.

(ಮಂಗಳೂರು ವರದಿ): ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಳೆಯ ತೀವ್ರತೆ ಕೊಂಚ ಕಡಿಮೆಯಾಗಿದೆ.

ಉಡುಪಿ ಜಿಲ್ಲೆಯ ಪಡುಬಿದ್ರಿ-ಕಾಡಿಪಟ್ಟದಲ್ಲಿ ಕಡಲ್ಕೊರೆತ ಶುಕ್ರವಾರ ತೀವ್ರಗೊಂಡಿದ್ದು, ಮೀನುಗಾರಿಕಾ ಶೆಡ್ ಸಂಪೂರ್ಣ ನೆಲಸಮಗೊಂಡಿದೆ. ಪಡುಬಿದ್ರಿ ಬೀಚ್‌ನಲ್ಲಿ ಐದು ವರ್ಷಗಳ ಹಿಂದೆ ನಿರ್ಮಿಸಿದ್ದ ಇಂಟರ್‌ಲಾಕ್, ಕಾಂಕ್ರೀಟ್ ತಡೆಗೋಡೆ ಬಹುತೇಕ ಸಮುದ್ರದ ಒಡಲು ಸೇರಿವೆ. ಉಳ್ಳಾಲ ತಾಲ್ಲೂಕಿನ ವ್ಯಾಪ್ತಿಯಲ್ಲೂ ಕಡಲ್ಕೊರೆತ ಮುಂದುವರಿದಿದೆ.

ಸಂಸದ ನಳಿನ್ ಕುಮಾರ್ ಕಟೀಲ್ ಅವರ ಕಚೇರಿಯನ್ನು ವಾರ್ ರೂಂ ಆಗಿ ಮಾರ್ಪಾಡು ಮಾಡಿ, ಸಹಾಯವಾಣಿ ತೆರೆಯಲಾಗಿದೆ. ಮೆಸ್ಕಾಂ ವ್ಯಾಪ್ತಿಯಲ್ಲಿ ಮಳೆ ಹಾನಿಯಿಂದ ಈ ವರೆಗೆ ₹ 11.28 ಕೋಟಿ ನಷ್ಟವಾಗಿದೆ.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಜುಲೈ 8ರಂದು ಆರೆಂಜ್ ಅಲರ್ಟ್ ಹಾಗೂ 9, 10ರಂದು ಯಲ್ಲೊ ಅಲರ್ಟ್ ಘೋಷಿಸಲಾಗಿದೆ.

(ಹುಬ್ಬಳ್ಳಿ ವರದಿ): ಉತ್ತರ ಕನ್ನಡ ಜಿಲ್ಲೆಯಲ್ಲಿ ಕರಾವಳಿ ಭಾಗದಲ್ಲಿ ಮಳೆ ಅಬ್ಬರ ಶುಕ್ರವಾರ ಕಡಿಮೆಯಾಗಿದೆ. ಶಿರಸಿ, ಯಲ್ಲಾಪುರ ಮತ್ತು ಸಿದ್ದಾಪುರದಲ್ಲಿ ಭಾರಿ ಮಳೆಯಾಗಿದೆ.

ಬೆಳಗಾವಿ ನಗರ ಸೇರಿ ಜಿಲ್ಲೆಯ ಖಾನಾಪುರ, ಯರಗಟ್ಟಿ, ಬೈಲಹೊಂಗಲ, ಹುಕ್ಕೇರಿ, ಚಿಕ್ಕೋಡಿ, ನಿಪ್ಪಾಣಿತಾಲ್ಲೂಕುಗಳಲ್ಲಿಮಳೆಯಾಗಿದೆ.

ಕರಾವಳಿಯ ಕೆಲವು ಪ್ರದೇಶದಲ್ಲಿ ಭಾರಿ ಮಳೆ ಸಾಧ್ಯತೆ (ಬೆಂಗಳೂರು): ಕರಾವಳಿ ವ್ಯಾಪ್ತಿಯ ಜಿಲ್ಲೆಗಳ ಕೆಲವು ಪ್ರದೇಶದಲ್ಲಿ ಶನಿವಾರ ಹಾಗೂ ಭಾನುವಾರ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉತ್ತರ ಒಳನಾಡಿನ ಬೆಳಗಾವಿ ಜಿಲ್ಲೆ, ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಹಾಸನ, ಕೊಡಗು, ಶಿವಮೊಗ್ಗ ಜಿಲ್ಲೆಯ ಅಲ್ಲಲ್ಲಿ ಬಿರುಸಿನ ಮಳೆಯಾಗುವ ಸಾಧ್ಯತೆಯಿದೆ ಎಂದು ತಿಳಿಸಿದೆ.

ಜುಲೈ 8ರಂದು ಧಾರವಾಡ, ಉತ್ತರ ಕನ್ನಡ, ಶಿವಮೊಗ್ಗ ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಕೊಡಗು ಜಿಲ್ಲೆ ಹಾಗೂ ಜುಲೈ 9ರಂದು ಉಡುಪಿ, ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ಕರಾವಳಿ ಭಾಗದಲ್ಲಿ ಗಾಳಿಯು 45–55 ಕಿ.ಮೀಯಿಂದ 65 ಕಿ.ಮೀ ವೇಗದಲ್ಲಿ ಬೀಸುವ ಸಾಧ್ಯತೆಯಿದೆ ಎಂದು ಸೂಚನೆ ನೀಡಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಅಲ್ಲಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ.

ಭದ್ರಾ, ಲಿಂಗನಮಕ್ಕಿ ಒಳಹರಿವು ಹೆಚ್ಚಳ

ಶಿವಮೊಗ್ಗ: ಜಿಲ್ಲೆಯಲ್ಲಿ ಆರಿದ್ರಾ ಮಳೆ ಕೊಂಚ ತಗ್ಗಿದೆ. ಶುಕ್ರವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ಒಟ್ಟು 19.70 ಸೆಂ.ಮೀ ಮಳೆಯಾಗಿದೆ. ಗುರುವಾರ 25.48 ಸೆಂ.ಮೀ ಮಳೆ ದಾಖಲಾಗಿತ್ತು.

ಗಾಜನೂರಿನ ತುಂಗಾ ಜಲಾಶಯದಲ್ಲಿ 15,272 ಕ್ಯುಸೆಕ್ ಒಳಹರಿವು ಇದ್ದು, 16,186 ಕ್ಯುಸೆಕ್ ನೀರು ನದಿಗೆ ಬಿಡಲಾಗುತ್ತಿದೆ. ಇದರಿಂದ ಶಿವಮೊಗ್ಗ ನಗರದ ಮೂಲಕ ಹರಿಯುವ ತುಂಗೆ ಮೈದುಂಬಿದ್ದಾಳೆ. ನೀರು ಇಲ್ಲದೇ ಸೊರಗಿದ್ದ ತುಂಗಭದ್ರಾ ನದಿಗೆ ತುಂಗೆ ಜೀವಕಳೆ ನೀಡಿದ್ದಾಳೆ.

ಲಕ್ಕವಳ್ಳಿಯ ಭದ್ರಾ ಜಲಾಶಯದಲ್ಲಿ ಶುಕ್ರವಾರ ನೀರಿನಮಟ್ಟ 138.11 ಅಡಿಗೆ ಏರಿದೆ. ಒಳಹರಿವು 7,232 ಕ್ಯುಸೆಕ್‌ಗೆ ಏರಿಕೆಯಾಗಿದೆ.

ಶರಾವತಿ ಜಲಾನಯನ ಪ್ರದೇಶದಲ್ಲಿ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಲಿಂಗನಮಕ್ಕಿ ಜಲಾಶಯಕ್ಕೆ ಒಂದೇ ದಿನ 7,500 ಕ್ಯುಸೆಕ್ ಒಳಹರಿವು ಹೆಚ್ಚಳಗೊಂಡಿದೆ. ಲಿಂಗನಮಕ್ಕಿಯಲ್ಲಿ ಶುಕ್ರವಾರ 23,252 ಕ್ಯುಸೆಕ್ ಒಳಹರಿವು ದಾಖಲಾಗಿದೆ. ಸದ್ಯ 798 ಕ್ಯುಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ.

ದಾವಣಗೆರೆ ಜಿಲ್ಲೆಯ ದಾವಣಗೆರೆ, ಚನ್ನಗಿರಿ, ಹರಿಹರ ತಾಲ್ಲೂಕುಗಳಲ್ಲೂ ಶುಕ್ರವಾರ ಸಾಧಾರಣ ಮಳೆಯಾಗಿದೆ. ಕೆಲವು ದಿನಗಳಿಂದ ಬತ್ತಿದ್ದ ತುಂಗಭದ್ರಾ ನದಿಯು ಇದೀಗ ಸುರಿಯುತ್ತಿರುವ ಮಳೆಯಿಂದ ತುಂಬಿ ಹರಿಯುತ್ತಿರುವುದು ದಾವಣಗೆರೆ, ಹಾವೇರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲೆಯ ನದಿ ಪಾತ್ರದ ಜನರಲ್ಲಿ ಸಂತಸ ಮೂಡಿಸಿದೆ.

ಐದು ಮಂದಿ ಸಾವು

ಮಂಗಳೂರು/ಹುಬ್ಬಳ್ಳಿ: ಮಳೆ ಸಂಬಂಧಿತ ಅವಘಡಗಳಲ್ಲಿ ಶುಕ್ರವಾರ ರಾಜ್ಯದಲ್ಲಿ ಐದು ಮಂದಿ ಮೃತಪಟ್ಟಿದ್ದಾರೆ.

ಸತತ ಮಳೆಯಿಂದಾಗಿ ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕಿನ ಸಜೀಪ ಮುನ್ನೂರು ಗ್ರಾಮದ ನಂದಾವರದಲ್ಲಿ ಶುಕ್ರವಾರ ಬೆಳಿಗ್ಗೆ ಮನೆಯ ಮೇಲೆ ಗುಡ್ಡ ಕುಸಿದಿದೆ. ಮನೆಯ ಒಳಗಿದ್ದ ಝರಿನಾ ಮಹಮ್ಮದ್ (48) ಮೃತಪಟ್ಟಿದ್ದು, ಅವರ ಪುತ್ರಿ ಶಫಾ (20) ಗಾಯಗೊಂಡಿದ್ದಾರೆ.

ಭಾರಿ ಗಾಳಿ ಮಳೆಗೆ ಮರ ಬಿದ್ದು ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕಿನ ಬೆಳ್ಮಣ್ಣು ಮುಖ್ಯ ರಸ್ತೆಯಲ್ಲಿ ಪ್ರವೀಣ್ ಆಚಾರ್ಯ ಎಂಬುವರು ಮೃತಪಟ್ಟಿದ್ದಾರೆ. ಕಾರ್ಕಳ ತಾಲ್ಲೂಕಿನ ನಿಟ್ಟೆ ಗ್ರಾಮದ ರಾಜು (45) ಆಕಸ್ಮಿಕವಾಗಿ ಕಾಲುಜಾರಿ ನದಿಗೆ ಬಿದ್ದು ಸಾವನ್ನಪ್ಪಿದ್ದಾರೆ.

ನೀರಲ್ಲಿ ಮುಳುಗಿ ಇಬ್ಬರು ಸಾವು (ಹುಬ್ಬಳ್ಳಿ ವರದಿ): ಮಳೆನೀರು ತುಂಬಿಕೊಂಡಿದ್ದ ಗದ್ದೆಗೆ ಬೇಲಿ ಹಾಕಲು ಗುರುವಾರ ತಡರಾತ್ರಿ ತೆರಳಿದ್ದ ಕುಮಟಾ ತಾಲ್ಲೂಕಿನ ಬೆಟ್ಕುಳಿ ಗ್ರಾಮದ ರೈತ ಸತೀಶ ನಾಯ್ಕ (39) ಮತ್ತು ಕೃಷಿ ಕೂಲಿಕಾರ್ಮಿಕ ಉಲ್ಲಾಸ ಗಾವಡಿ (60) ಕಾಲುಜಾರಿ ನೀರಿಗೆ ಬಿದ್ದು ಮೃತಪಟ್ಟಿದ್ದಾರೆ.



ಹಾವೇರಿ ಜಿಲ್ಲೆ ಸವಣೂರಿನ ಕಲ್ಮಠದಲ್ಲಿ ದೊಡ್ಡಹುಣಸೆ ಮರ ಗಾಳಿ ಮಳೆಗೆ ಶುಕ್ರವಾರ ಧರೆಗುರುಳಿದೆ. ಇದು ದಕ್ಷಿಣ ಆಫ್ರಿಕಾ ಖಂಡದಲ್ಲಿ ದೊರೆಯುವ ಅಪರೂಪದ ತಳಿಯ ಹುಣಸೆ ಮರ

ಜನಜೀವನ ಅಸ್ತವ್ಯಸ್ತ: ಶಿಬಿರಗಳಲ್ಲಿ ಆಶ್ರಯ

ತಿರುವನಂತಪುರ (ಪಿಟಿಐ): ಕೇರಳದಲ್ಲಿ ನೈರುತ್ಯ ಮುಂಗಾರು ಮಳೆಯ ಪ್ರಭಾವ ಶುಕ್ರವಾರ ತಗ್ಗಿದ್ದರೂ; ಹಲವೆಡೆ ಜನಜೀವನ ಅಸ್ತವ್ಯಸ್ತಗೊಂಡಿದೆ. ಸಾವಿರಾರು ಜನರು ನಿರಾಶ್ರಿತರಾಗಿದ್ದಾರೆ.

ಪತ್ತನಂತಿಟ್ಟ, ಕೋಟಯಂ, ಕೋಯಿಕ್ಕೋಡ್, ಕಣ್ಣೂರು, ಕಾಸರಗೋಡು ಹಾಗೂ ಆಳಪ್ಪುಳ್ಳ ಜಿಲ್ಲೆಯ ಚೆಂಗನ್ನೂರು, ಕಾರ್ತಿಕಪಳ್ಳಿ, ಕುಟ್ಟನಾಡು ತಾಲ್ಲೂಕಿನಲ್ಲಿ ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು.

'ಗುರುವಾರ 112 ನಿರಾಶ್ರಿತರ ಶಿಬಿರ ಆರಂಭಿಸಲಾಗಿದ್ದು, 6,500 ಜನರು ಆಸರೆ ಪಡೆದಿದ್ದರು. ಶುಕ್ರವಾರ ಶಿಬಿರಗಳ ಸಂಖ್ಯೆ 186ಕ್ಕೇರಿದೆ. ಮಳೆಯಿಂದ 41 ಮನೆಗಳಿಗೆ ಸಂಪೂರ್ಣ ಹಾನಿಯಾಗಿದ್ದರೆ, 818 ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಮುನ್ನಾರಿನಲ್ಲಿ ಭೂಕುಸಿತವಾಗಿದೆ. ಉತ್ತರದ ಐದು ಜಿಲ್ಲೆಗಳಲ್ಲಿ ಯೆಲ್ಲೋ ಅಲರ್ಟ್ ಮುಂದುವರಿದಿದೆ' ಎಂದು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಎಸ್‌ಡಿಎಂಎ) ತಿಳಿಸಿದೆ.

ಪೆರಿಂಗಲ್‌ಕೂತ್ತು ಅಣೆಕಟ್ಟೆಯಿಂದ ಚಾಲಕ್ಕುಡಿ ನದಿಗೆ ನೀರು ಬಿಡಲಾಗಿದೆ ಎಂದು ತ್ರಿಶ್ಯೂರ್ ಜಿಲ್ಲಾಡಳಿತ ಹೇಳಿದೆ.

ಸಂಪರ್ಕ ಕಡಿತ (ಪಿಥೋರಗಡ/ಉತ್ತರಾಖಂಡ): ಗುರುವಾರ ರಾತ್ರಿ ಸುರಿದ ಭಾರಿ ಮಳೆಯಿಂದಾಗಿ ಧೌಲಿ ನದಿಯಲ್ಲಿ ಪ್ರವಾಹ ಬಂದಿದ್ದು, ಧಾರಮಾ ಕಣಿವೆಯಲ್ಲಿನ ಚಲ್ ಗ್ರಾಮಕ್ಕೆ ಸಂಪರ್ಕ ಕಲ್ಪಿಸಿದ್ದ ಟ್ರಾಲಿ ಕೊಚ್ಚಿಕೊಂಡು ಹೋಗಿದ್ದರಿಂದ ಗ್ರಾಮದಲ್ಲಿ ವಾಸವಿರುವ ನೂರಕ್ಕೂ ಹೆಚ್ಚು ಜನರು ಹೊರ ಜಗತ್ತಿನೊಂದಿಗೆ ಸಂಪರ್ಕ ಕಳೆದುಕೊಂಡಿದ್ದಾರೆ.

'ಗ್ರಾಮದ 25ಕ್ಕೂ ಹೆಚ್ಚು ಜನರು ಗಿಡಮೂಲಿಕೆ ಸಂಗ್ರಹಿಸಲು ಹಿಮಾಲಯದ ಎತ್ತರದ ಪ್ರದೇಶಕ್ಕೆ ತೆರಳಿದ್ದು, ಟ್ರಾಲಿ ಕೊಚ್ಚಿ ಹೋಗಿರುವುದರಿಂದ, ಊರಿಗೆ ಮರಳಲಾಗದ ಸ್ಥಿತಿಯಲ್ಲಿದ್ದಾರೆ' ಎಂದು ಗ್ರಾಮಸ್ಥ ದಿನೇಶ್ ಚಲಾಲ್ ತಿಳಿಸಿದ್ದಾರೆ.

ಚಾವಣಿ ಕುಸಿದು ಸಾವು (ಶಿಮ್ಲಾ/ಉನಾ): ಹಿಮಾಚಲ ಪ್ರದೇಶದಲ್ಲಿ ಭಾರಿ ಮಳೆಯಾಗಿದೆ. ಸಿರಮೌರ್ ಜಿಲ್ಲೆಯಲ್ಲಿ ಗುರುದ್ವಾರವೊಂದರ ಮೇಲ್ಛಾವಣಿ ಕುಸಿದು ವ್ಯಕ್ತಿಯೊಬ್ಬರು ಮೃತಪಟ್ಟಿದ್ದು, ಇಬ್ಬರು ಗಾಯಗೊಂಡಿದ್ದಾರೆ. ಉನಾದ ಗ್ರಾಮವೊಂದರಲ್ಲಿನ ಸ್ಮಶಾನದಲ್ಲಿ ಸಿಲುಕಿದ್ದ 130 ಜನರನ್ನು ರಕ್ಷಿಸಲಾಗಿದೆ.

ರಾಜ್ಯದಲ್ಲಿ ಗುರುವಾರ ಸಂಜೆವರೆಗೆ 59 ರಸ್ತೆಗಳನ್ನು ಮುಚ್ಚಲಾಗಿದೆ. ಇದುವರೆಗೂ ಮುಂಗಾರು ಮಳೆಯಿಂದ ₹320 ಕೋಟಿ ಹಾನಿಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶುಕ್ರವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ಮಳೆ ಪ್ರಮಾಣ (ಸೆಂಟಿಮೀಟರ್‌ಗಳಲ್ಲಿ)

ಮಂಡೆಕೋಲು (ದಕ್ಷಿಣ ಕನ್ನಡ)	21.1	ಕಾವಳಪಡೂರು(ದಕ್ಷಿಣ ಕನ್ನಡ)	15.3
ಜಾಲ್ಸೂರು (ದಕ್ಷಿಣ ಕನ್ನಡ)	17.5	ಕೊಡಿಬೆಟ್ಟು (ಉಡುಪಿ)	14.0
ಸರಪಾಡಿ (ದಕ್ಷಿಣ ಕನ್ನಡ)	16.6	ಆತ್ರಾಡಿ(ಉಡುಪಿ)	13.5
ಬಡಗಬೆಳ್ಳೂರು(ದಕ್ಷಿಣ ಕನ್ನಡ)	16.1	ಮಣಿಪುರ(ಉಡುಪಿ)	13.4
ತೆಕ್ಕಾರು, ವಿಟ್ಲಮೂಡನುರು, ಮಂಗಳೂರು ನಗರದ ಮೂಡುಶೆಡ್ಡೆ (ದಕ್ಷಿಣ ಕನ್ನಡ)	15.9	ಮಂದಳ್ಳಿ, ರೆಂಜಾಳ (ಉಡುಪಿ)	13.1
		ಬಡಗುಬೆಟ್ಟು (ಉಡುಪಿ)	12.9
		ಆಗುಂಬೆ (ಶಿವಮೊಗ್ಗ)	12.64
ಅಜ್ಜಾವರ (ದಕ್ಷಿಣ ಕನ್ನಡ)	15.8	ಪಳ್ಳಿ, ಕಾಂತಾವರ (ಉಡುಪಿ)	12.6
ಪಿಲಾತಬೆಟ್ಟು (ದಕ್ಷಿಣ ಕನ್ನಡ)	15.5	ವಡ್ಡರ್ಸೆ, ಮಡಮಕ್ಕಿ (ಉಡುಪಿ)	12.2

ಸುದ್ದಿ 2 ನಿಮಿಷ

ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ: ಬ್ರಿಜ್‌ಭೂಷಣ್‌ಗೆ ಸಮನ್ಸ್

ನವದೆಹಲಿ: ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಬಿಜೆಪಿ ಸಂಸದ ಹಾಗೂ ಭಾರತೀಯ ಕುಸ್ತಿ ಫೆಡರೇಷನ್‌ನ ನಿರ್ಗಮಿತ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರಿಗೆ ದೆಹಲಿ ನ್ಯಾಯಾಲಯ ಇದೇ 18ರಂದು ಹಾಜರಾಗುವಂತೆ ಶುಕ್ರವಾರ ಸಮನ್ಸ್ ನೀಡಿದೆ.

ಪ್ರಕರಣದಲ್ಲಿ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಲು ಸಾಕಷ್ಟು ಸಾಕ್ಷ್ಯಾಧಾರಗಳು ಇವೆ ಎಂದೂ ನ್ಯಾಯಾಲಯವು ಹೇಳಿದೆ.

ಆರೋಪಪಟ್ಟಿಯನ್ನು ಗಮನದಲ್ಲಿಟ್ಟುಕೊಂಡು, ದೆಹಲಿ ಕೋರ್ಟ್ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಹರ್ಜಿತ್ ಸಿಂಗ್ ಜಸ್ಪಾಲ್ ಅವರು ಜುಲೈ 18ರಂದು ನ್ಯಾಯಾಲಯಕ್ಕೆ ಹಾಜರಾಗುವಂತೆ ಬ್ರಿಜ್‌ಭೂಷಣ್ ಹಾಗೂ ಕುಸ್ತಿ ಫೆಡರೇಷನ್‌ನಿಂದ ಅಮಾನತಾಗಿರುವ ಸಹಾಯಕ ಕಾರ್ಯದರ್ಶಿ ವಿನೋದ್ ತೋಮರ್‌ಗೆ ನಿರ್ದೇಶನ ನೀಡಿದ್ದಾರೆ.

ಆರು ಬಾರಿ ಸಂಸದರಾಗಿರುವ ಬ್ರಿಜ್ ಭೂಷಣ್ ವಿರುದ್ಧ ಈಗಾಗಲೇ ದೆಹಲಿ ನಗರ ಪೊಲೀಸರು ಐಪಿಸಿ ಸೆಕ್ಷನ್ 354 (ಹೆಣ್ಣಿನ ಘನತೆಗೆ ಧಕ್ಕೆ ತರುವ ಉದ್ದೇಶದಿಂದ ಹಲ್ಲೆ ಅಥವಾ ಕ್ರಿಮಿನಲ್ ಬಲ ಪ್ರಯೋಗ), ಸೆಕ್ಷನ್ 354 (ಎ) (ಲೈಂಗಿಕ ಕಿರುಕುಳ) ಹಾಗೂ 354 (ಡಿ) (ಹಿಂಬಾಲಿಸುವುದು) ಹಾಗೂ 506 (ಬೆದರಿಕೆ ಒಡ್ಡುವುದು) ಅಡಿ ಜೂನ್ 15ರಂದು ಪ್ರಕರಣ ದಾಖಲಿಸಿದ್ದಾರೆ. ವಿನೋದ್ ವಿರುದ್ಧವೂ ಐಪಿಸಿ ಸೆಕ್ಷನ್ 109, ಐಪಿಸಿ ಸೆಕ್ಷನ್ 354, 354 (ಎ), 506 ಅಡಿ ಆರೋಪಪಟ್ಟಿ ಸಲ್ಲಿಸಲಾಗಿದೆ.



ತಮಿಳುನಾಡು: ಹಿರಿಯ ಪೊಲೀಸ್ ಅಧಿಕಾರಿ ಆತ್ಮಹತ್ಯೆ

ಕೊಯಮತ್ತೂರು (ತಮಿಳುನಾಡು) (ಪಿಟಿಐ): 'ಖಿನ್ನತೆಯಿಂದ ಬಳಲುತ್ತಿದ್ದ ಕೊಯಮತ್ತೂರು ವಲಯದ ಡಿಐಜಿ ಸಿ.ವಿಜಯಕುಮಾರ್ ಅವರು ಶುಕ್ರವಾರ ಬೆಳಿಗ್ಗೆ ತಮ್ಮ ನಿವಾಸದಲ್ಲಿ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಎಡಿಜಿಪಿ (ಕಾನೂನು ಮತ್ತು ಸುವ್ಯವಸ್ಥೆ) ಎ. ಅರುಣ್ ಅವರು ಹೇಳಿದ್ದಾರೆ.

ಪೂರ್ವಭಾವಿ ತನಿಖೆಯನ್ನು ಉದಾಹರಿಸಿ ಮಾತನಾಡಿದ ಅರುಣ್ ಅವರು, 'ವಿಜಯಕುಮಾರ್ ಅವರು ಖಿನ್ನತೆಯ ಕಾರಣದಿಂದಾಗಿ ಕೆಲವು ವರ್ಷಗಳಿಂದ ವೈದ್ಯರ ಬಳಿ ಚಿಕಿತ್ಸೆ ಪಡೆಯುತ್ತಿದ್ದರು. ಅವರ ಸಾವು ವೈದ್ಯಕೀಯ ಕಾರಣದಿಂದ ಸಂಭವಿಸಿದ್ದು, ಇದನ್ನು ರಾಜಕೀಯಗೊಳಿಸುವುದು ಬೇಡ' ಎಂದಿದ್ದಾರೆ.

'ನಾನು ವಿಜಯಕುಮಾರ್ ಅವರಿಗೆ ಚಿಕಿತ್ಸೆ ನೀಡುತ್ತಿದ್ದ ವೈದ್ಯರೊಂದಿಗೆ ಚರ್ಚಿಸಿದ್ದೇನೆ. ಮಾನಸಿಕ ಒತ್ತಡದ ಹಿನ್ನೆಲೆಯಲ್ಲಿ ನಾಲ್ಕು ದಿನಗಳ ಹಿಂದೆ ಅವರು ವೈದ್ಯರನ್ನು ಸಂಪರ್ಕಿಸಿ, ಔಷಧಿ ಪಡೆದಿದ್ದರು' ಎಂದು ಮಾಹಿತಿ ನೀಡಿದರು.

ವಿಜಯಕುಮಾರ್ ಅವರು ಗುಂಡು ಹಾರಿಸಿಕೊಳ್ಳುವುದಕ್ಕೂ ಮುನ್ನ ತಮ್ಮ ಗನ್‌ಮ್ಯಾನ್‌ನಿಂದ ಆಯುಧ ಪಡೆದಿದ್ದರೆ ಎಂಬ ಪ್ರಶ್ನೆಗೆ, ಈ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಅರುಣ್ ಹೇಳಿದರು.

ವಿಜಯಕುಮಾರ್ ಅವರ ಸಾವಿಗೆ ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ, ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಹಾಗೂ ವಿರೋಧ ಪಕ್ಷದ ನಾಯಕ ಕೆ. ಪಳನಿಸ್ವಾಮಿ ಅವರು ಸಂತಾಪ ಸೂಚಿಸಿದ್ದಾರೆ. ಪಳನಿಸ್ವಾಮಿ ಅವರು ಸಾವಿನ ಕುರಿತ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಆಗ್ರಹಿಸಿದ್ದಾರೆ.

ಜೈನ ಮುನಿ ಅನುಮಾನಾಸ್ಪದ ಸಾವು

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಹಿರೇಕೋಡಿಯ ನಂದಿಪರ್ವತ ಜೈನ ಆಶ್ರಮದಿಂದ ಮುನಿ ಆಚಾರ್ಯ ಶ್ರೀ 108 ಕಾಮಕುಮಾರ ನಂದಿ ಮಹಾರಾಜ ಅವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಅವರ ದೇಹ ಶುಕ್ರವಾರ ರಾತ್ರಿ ಖಡಕಬಾವಿ ಹೊರವಲಯದಲ್ಲಿ ಪತ್ತೆಯಾಗಿದೆ. ಮೈಮೇಲೆ ಗಾಯಗಳಾಗಿವೆ.



ಕಾಮಕುಮಾರ ನಂದಿ ಮಹಾರಾಜ

ಎರಡು ದಿನಗಳಿಂದ ನಾಪತ್ತೆಯಾಗಿದ್ದ ಮುನಿ ಮಹಾರಾಜ ಅವರನ್ನು ಹುಡುಕಿಕೊಡುವಂತೆ ಭಕ್ತರು ಚಿಕ್ಕೋಡಿ ಪೊಲೀಸ್ ಠಾಣೆಗೆ ಶುಕ್ರವಾರ ದೂರು ನೀಡಿದ್ದರು.

'ಬುಧವಾರ ರಾತ್ರಿ 10ರವರೆಗೆ ಆಶ್ರಮದ ಕೋಣೆಯಲ್ಲಿದ್ದ ಮುನಿಗಳು, ಗುರುವಾರ ಬೆಳಿಗ್ಗೆ ಕಾಣೆಯಾಗಿದ್ದಾರೆ. ಅವರು ಬಳಸುತ್ತಿದ್ದ ಕಮಂಡಲ ಮತ್ತು ಮೊಬೈಲ್ ಕೋಣೆಯಲ್ಲಿವೆ' ಎಂದು ಭಕ್ತರು ತಿಳಿಸಿದ್ದರು.

ಮುಂಜಾಗ್ರತಾ ಕ್ರಮವಾಗಿ ಹಿರೇಕೋಡಿ ಗ್ರಾಮದಲ್ಲಿ 500ಕ್ಕೂ ಹೆಚ್ಚು ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗಿದೆ.

ತ್ರಿಪುರಾ ವಿಧಾನಸಭೆ: ಕಲಾಪದಿಂದ ಐವರು ಶಾಸಕರ ಅಮಾನತು

ಅಗರ್ತಲಾ (ಪಿಟಿಐ): ತ್ರಿಪುರಾ ವಿಧಾನಸಭೆಯಲ್ಲಿ ಕಲಾಪಕ್ಕೆ ಅಡ್ಡಿಯುಂಟುಮಾಡಿದ ಐವರು ಶಾಸಕರನ್ನು ಶುಕ್ರವಾರ ಅಮಾನತು ಮಾಡಲಾಯಿತು. ಇದರ ಬೆನ್ನಲ್ಲೇ ವಿರೋಧ ಪಕ್ಷಗಳ ಸದಸ್ಯರು ಕಲಾಪವನ್ನು ಬಹಿಷ್ಕರಿಸಿ ಪ್ರತಿಭಟನೆ ನಡೆಸಿದರು.

ಸಿಪಿಎಂ ಶಾಸಕ ನಯನ್ ಸರ್ಕಾರ್, ಕಾಂಗ್ರೆಸ್‌ನ ಸುದೀಪ್ ರಾಯ್ ಬರ್ಮನ್, ಟಿಪ್ರ ಮೊಥಾ ಪಕ್ಷದ ಶಾಸಕರಾದ ಬುಷಕೇತು ದೇವವರ್ಮಾ, ನಂದಿತಾ ರೆಯಾಂಗ್ ಮತ್ತು ರಂಜಿತ್ ದೇವವರ್ಮಾ ಅವರನ್ನು ವಿಧಾನಸಭೆಯ ಸ್ಪೀಕರ್ ವಿಶ್ವಬಂಧು ಸೇನ್ ಅವರು ಒಂದು ದಿನದ ಮಟ್ಟಿಗೆ ಕಲಾಪದಿಂದ ಅಮಾನತು ಮಾಡಿದರು.

ಕಳೆದ ಮಾರ್ಚ್‌ನಲ್ಲಿ ನಡೆದ ವಿಧಾನಸಭೆಯ ಅಧಿವೇಶನದ ಸಂದರ್ಭದಲ್ಲಿ ಅಶ್ಲೀಲ ವಿಡಿಯೊ ನೋಡಿದ ಆರೋಪ ಹೊತ್ತಿರುವ ಬಿಜೆಪಿ ಶಾಸಕ ಜಬಾಬ್ ಲಾಲ್ ನಾಥ್ ಅವರ ಅನುಚಿತ ವರ್ತನೆ ಕುರಿತು ಚರ್ಚಿಸುವಂತೆ ಟಿಪ್ರ ಮೊಥಾ ಶಾಸಕ ಅನಿಮೇಶ್ ದೇವವರ್ಮಾ ಅವರು ಪಟ್ಟು ಹಿಡಿದರು. ಈ ವಿಷಯವಾಗಿ ನಿಲುವಳಿ ಸೂಚನೆ ಮಂಡಿಸಲು ಅವಕಾಶ ನೀಡುವಂತೆ ಕೋರಿದರು.

ಆದರೆ ಸ್ಪೀಕರ್ ಇದಕ್ಕೆ ಅವಕಾಶ ನೀಡಲಿಲ್ಲ. ಇದರಿಂದ ಸಿಟ್ಟಾದ ಟಿಪ್ರ ಮೊಥಾ ಸದಸ್ಯರು ಪ್ರತಿಭಟನೆ ಆರಂಭಿಸಿದರು. ಸಿಪಿಎಂ ಮತ್ತು ಕಾಂಗ್ರೆಸ್ ಸದಸ್ಯರು ಇವರನ್ನು ಬೆಂಬಲಿಸಿ ಸಭಾಧ್ಯಕ್ಷರ ಪೀಠದ ಮುಂದೆ ಧರಣಿ ನಡೆಸಿದರು. ನಂತರ ಸ್ಪೀಕರ್ ಕಲಾಪಕ್ಕೆ ಅಡ್ಡಿ ಮಾಡಿದ ಐವರು ಶಾಸಕರನ್ನು ಅಮಾನತು ಮಾಡಿದರು. ಸ್ಪೀಕರ್ ನಿರ್ಧಾರ ಖಂಡಿಸಿ ಪ್ರತಿಪಕ್ಷಗಳ ಸದಸ್ಯರು ಕಲಾಪ ಬಹಿಷ್ಕರಿಸಿ ಹೊರಗೆ ಪ್ರತಿಭಟನೆ ನಡೆಸಿದರು.

ಶಿಕ್ಷಕರ ನೇಮಕ: ಮಧ್ಯಂತರ ಆದೇಶ ವಜಾಗೊಳಿಸಿದ 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ಇದೇ ವರ್ಷದ ಆಗಸ್ಟ್ ಅಂತ್ಯದೊಳಗೆ 32 ಸಾವಿರ ಶಿಕ್ಷಕರ ಹುದ್ದೆಗಳಿಗೆ ಹೊಸದಾಗಿ ನೇಮಕಾತಿ ನಡೆಸುವಂತೆ ಪಶ್ಚಿಮ ಬಂಗಾಳ ಪ್ರಾಥಮಿಕ ಶಿಕ್ಷಣ ಮಂಡಳಿಗೆ ನಿರ್ದೇಶನ ನೀಡಿದ್ದ ಕಲ್ಕತ್ತಾ ಹೈಕೋರ್ಟ್‌ನ ಮಧ್ಯಂತರ ಆದೇಶವನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ನ್ಯಾಯಮೂರ್ತಿಗಳಾದ ಜೆ.ಕೆ. ಮಾಹೇಶ್ವರಿ ಮತ್ತು ಕೆ.ವಿ. ವಿಶ್ವನಾಥನ್ ಅವರಿದ್ದ ಪೀಠವು, 'ಉದ್ಯೋಗಕ್ಕಾಗಿ ಲಂಚ' ಹಗರಣಕ್ಕೆ ಸಂಬಂಧಿಸಿದ ಪ್ರಕರಣವನ್ನು ಆದಷ್ಟು ಶೀಘ್ರ ಇತ್ಯರ್ಥಪಡಿಸುವಂತೆ ಹೈಕೋರ್ಟ್‌ಗೆ ಸೂಚನೆ ಕೊಟ್ಟಿದೆ.

ಹೈಕೋರ್ಟ್ ವಿಧಿಸಿರುವ ಕಾಲಮಿತಿಯೊಳಗೆ ನೇಮಕಾತಿ ಪ್ರಕ್ರಿಯೆಯನ್ನು ನಡೆಸುವುದು ಸಾಧ್ಯವಾಗುವುದಿಲ್ಲ ಎಂದು ಪ್ರಾಥಮಿಕ ಶಿಕ್ಷಣ ಮಂಡಳಿ ಪರವಾಗಿ ವಕೀಲರು ಮಾಡಿದ ವಾದವನ್ನು ಪೀಠವು ಮಾನ್ಯ ಮಾಡಿದೆ.


ಹಿರಿಯ ವಕೀಲರಾದ ಮುಕುಲ್ ರೋಹಟಗಿ, ಎ.ಎಂ.ಸಿಂಘ್ವಿ, ಶ್ಯಾಮ್ ದಿವಾನ್ ಮತ್ತು ಕಲ್ಯಾಣ್ ಬಂಡೋಪಾಧ್ಯಾಯ ಅವರ ಮನವಿ ಆಲಿಸಿದ ನಂತರ ಪೀಠವು, 'ಇದು ಹೆಚ್ಚಿನ ಸಂಖ್ಯೆಯ ಸಹ ಶಿಕ್ಷಕರ ಆಯ್ಕೆ ಮತ್ತು ನೇಮಕಾತಿಗೆ ಸಂಬಂಧಿಸಿದ ವಿಷಯವೆಂದು ನಂಬಿದ್ದೇವೆ. ಈ ವಿವಾದವನ್ನು ಆದಷ್ಟು ಬೇಗ ಇತ್ಯರ್ಥಪಡಿಸಬೇಕು. ಆದ್ದರಿಂದ, ಮೇಲ್ಮನವಿಯನ್ನು ತ್ವರಿತ ವಿಚಾರಣೆ ನಡೆಸುವಂತೆ ಹೈಕೋರ್ಟ್‌ಗೆ ವಿನಂತಿಸುತ್ತೇವೆ' ಎಂದು ಹೇಳಿತು.

ಹೈಕೋರ್ಟ್ ಏಕ ಸದಸ್ಯ ಪೀಠವು ಶಿಕ್ಷಕರ ನೇಮಕಾತಿ ವಜಾಗೊಳಿಸಿ ನೀಡಿರುವ ತೀರ್ಪಿಗೆ ವಿಭಾಗೀಯ ಪೀಠ ತಡೆ ನೀಡಿ, ಹೊಸದಾಗಿ ನೇಮಕಾತಿ ನಡೆಸುವ ನಿರ್ದೇಶನ ಸಮರ್ಥನೀಯವಲ್ಲವೆಂದು ಅಭಿಪ್ರಾಯಪಟ್ಟಿರುವುದನ್ನು ಪ್ರಾಥಮಿಕ ಶಿಕ್ಷಣ ಮಂಡಳಿಯ ವಕೀಲರು ನ್ಯಾಯಪೀಠದ ಗಮನಕ್ಕೆ ತಂದರು.

ಹೈಕೋರ್ಟ್ ನ್ಯಾಯಮೂರ್ತಿ ಅಭಿಜಿತ್ ಗಂಗೋಪಾಧ್ಯಾಯ ಅವರಿದ್ದ ಏಕ ಸದಸ್ಯ ಪೀಠವು ಶಿಕ್ಷಕರ ನೇಮಕಾತಿ ವಜಾಗೊಳಿಸಿ, ಮೂರು ತಿಂಗಳೊಳಗೆ ಹೊಸದಾಗಿ ಆಯ್ಕೆ ನಡೆಸುವಂತೆ ಆದೇಶಿಸಿತ್ತು.

'ಉದ್ಯೋಗಗಳನ್ನು ಸರಕುಗಳಂತೆ ಮಾರಾಟ ಮಾಡಲಾಗಿದೆ' ಮತ್ತು ಈ ಪ್ರಮಾಣದ ಭ್ರಷ್ಟಾಚಾರ ಪಶ್ಚಿಮ ಬಂಗಾಳದಲ್ಲಿ ಎಂದಿಗೂ ನಡೆದಿರಲಿಲ್ಲ. ಅಭ್ಯರ್ಥಿಗಳು ಅರ್ಹತಾ ಪರೀಕ್ಷೆಗೆ ಹಾಜರಾಗದೇ ಹುದ್ದೆಗಳಿಗೆ ನೇಮಕಾತಿಯಾಗಿದ್ದಾರೆ ಎಂದು ಹೇಳಿತ್ತು.

ಸ್ಪೈಸ್‌ಜೆಟ್‌ಗೆ ಗಡುವು ವಿಸ್ತರಣೆಗೆ ನಕಾರ



ನವದೆಹಲಿ (ಪಿಟಿಐ): ಸಂಧಾನ ಮಾತುಕತೆಯಲ್ಲಿ ನಿಗದಿ ಆಗಿರುವಂತೆ ಮಾಧ್ಯಮ ಪ್ರಮುಖರಾದ ಕಲಾನಿಧಿ ಮಾರನ್ ಮತ್ತು ಅವರ ಕಲ್ ಏರ್‌ವೇಸ್ ಸಂಸ್ಥೆಗೆ ₹578 ಕೋಟಿ ಪಾವತಿಸಲು ಸ್ಪೈಸ್‌ಜೆಟ್ ಸಂಸ್ಥೆಗೆ ಗಡುವು ವಿಸ್ತರಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಷೇರು ವರ್ಗಾವಣೆ ವಿವಾದವನ್ನು ಇತ್ಯರ್ಥಪಡಿಸುವುದರ ಭಾಗವಾಗಿ ₹578 ಕೋಟಿ ಪಾವತಿಸಬೇಕು ಎಂದು ನಿಗದಿಯಾಗಿತ್ತು. 'ಇವು ವಿಲಾಸಿ ಮೊಕದ್ದಮೆಗಳು' ಎಂದು ಕೋರ್ಟ್ ಶುಕ್ರವಾರ ಬಣ್ಣಿಸಿತು.

ಈ ಹಿಂದೆ ಜೂನ್ 1ರಂದು ಗಡುವು ವಿಸ್ತರಿಸಲು ನಿರಾಕರಿಸಿದ್ದ ದೆಹಲಿ ಹೈಕೋರ್ಟ್, ಇತ್ಯರ್ಥವಾಗಿರುವ ಮೊತ್ತಕ್ಕೆ ಬಡ್ಡಿಯಾಗಿ ಪಾವತಿಸಲು ₹ 75 ಕೋಟಿ ಅನ್ನು ಠೇವಣಿ ಇಡಬೇಕು ಎಂದು ಸ್ಪೈಸ್‌ಜೆಟ್‌ಗೆ ನಿರ್ದೇಶಿಸಿತ್ತು.

ಅದಕ್ಕೂ ಹಿಂದೆ ಸುಪ್ರೀಂ ಕೋರ್ಟ್ ಮೇ 13ರ ಒಳಗೆ, ಬಡ್ಡಿ ಮೊತ್ತವನ್ನು ಪಾವತಿಸಲು ಸ್ಪೈಸ್‌ಜೆಟ್ ವಿಫಲವಾದಲ್ಲಿ ಆ ಸಂಸ್ಥೆಯು ಬ್ಯಾಂಕ್ ಖಾತರಿಯಾಗಿ ಇಟ್ಟಿರುವ ₹270 ಕೋಟಿ ಅನ್ನು ತಕ್ಷಣವೇ ನಗದೀಕರಣಗೊಳಿಸಬಹುದು ಎಂದು ಆದೇಶಿಸಿತ್ತು.

ಶುಕ್ರವಾರ ಈ ಪ್ರಕರಣದ ವಿಚಾರಣೆ ನಡೆಸಿದ ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಪಿ.ಎಸ್.ನರಸಿಂಹ ಅವರಿದ್ದ ಪೀಠ, ಸ್ಪೈಸ್‌ಜೆಟ್ ಸಂಸ್ಥೆಯನ್ನು ಪ್ರತಿನಿಧಿಸಿದ್ದ ವಕೀಲ ಮುಕುಲ್ ರೋಹಟಗಿ ಅವರ ವಾದವನ್ನು ಮಾನ್ಯ ಮಾಡಲಿಲ್ಲ.

ನ್ಯಾಯಾಂಗ ನಿಂದನೆ: ಯತಿ ನರಸಿಂಘಾನಂದಗೆ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ನ್ಯಾಯಾಂಗ ವ್ಯವಸ್ಥೆಯ ವಿರುದ್ಧ ಹೇಳಿಕೆ ನೀಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಶುಕ್ರವಾರ ವಿವಾದಿತ ಸ್ವಾಮೀಜಿ ಯತಿ ನರಸಿಂಘಾನಂದ ಅವರಿಗೆ ನೋಟಿಸ್ ಜಾರಿ ಮಾಡಿದೆ.

ದ್ವೇಷ ಭಾಷಣ ಪ್ರಕರಣದಲ್ಲಿ ಜಾಮೀನು ಮೇಲೆ ಬಿಡುಗಡೆಯಾದ ಬಳಿಕ ಸ್ವಾಮೀಜಿ ಆಕ್ಷೇಪಾರ್ಹವಾದ ಹೇಳಿಕೆಯನ್ನು ನೀಡಿದ್ದರು. ನ್ಯಾಯಮೂರ್ತಿಗಳಾದ ಎ.ಎಸ್.ಬೋಪಣ್ಣ, ಎಂ.ಎಂ.ಸುಂದರೇಶ್ ಅವರಿದ್ದ ಪೀಠ ಈ ಸಂಬಂಧ ನೋಟಿಸ್ ಜಾರಿಗೆ ಆದೇಶಿಸಿತು. 'ಸುಪ್ರೀಂ ಕೋರ್ಟ್‌ನ ಘನತೆಗೆ ಧಕ್ಕೆ ತರುವ ಯಾವುದೇ ಯತ್ನ, ಜನತೆ ಇಂತಹ ಸಂಸ್ಥೆಗಳ ಮೇಲೆ ಇಟ್ಟಿರುವ ನಂಬಿಕೆಗೆ ಪೆಟ್ಟುನೀಡಲಿದೆ. ಸ್ವಾಮೀಜಿ ಅವರ ಹೇಳಿಕೆಯು ಇತಿಹಾಸದಲ್ಲಿಯೇ ಅತಿ ನಿಂದನಾತ್ಮಕವಾದುದಾಗಿದೆ' ಎಂದು ಅರ್ಜಿಯಲ್ಲಿ ಉಲ್ಲೇಖಿಸಿದ್ದರು.

ನರಸಿಂಘಾನಂದ ಅವರು ಗಾಜಿಯಾಬಾದ್‌ನ ಡಸ್ನಾ ದೇಗುಲದ ಮುಖ್ಯ ಅರ್ಚಕರಾಗಿದ್ದಾರೆ. ಹರಿದ್ವಾರ ಧರ್ಮ ಸಂಸತ್‌ನಲ್ಲಿ ಮಾಡಿದ್ದ ದ್ವೇಷ ಭಾಷಣಕ್ಕೆ ಸಂಬಂಧಿಸಿದಂತೆ ಇವರನ್ನು ಬಂಧಿಸಲಾಗಿದ್ದು, ನ್ಯಾಯಾಂಗ ಬಂಧನದಲ್ಲಿದ್ದರು.

ಸಾಕ್ಷಿಗಳಿಗೆ ರಕ್ಷಣೆ: ಮನವಿ ನಕಾರ

ನವದೆಹಲಿ (ಪಿಟಿಐ): ಕೆಲಸದ ಸ್ಥಳದಲ್ಲಿ ನಡೆಯುವ ಲೈಂಗಿಕ ಕಿರುಕುಳದ ಪ್ರಕರಣಗಳಲ್ಲಿ ದೂರುದಾರ ಸಂತ್ರಸ್ತರು ಮತ್ತು ಸಾಕ್ಷಿಗಳ ಮೇಲೆ ಆರೋಪಿಗಳು ಅಥವಾ ಸಂಸ್ಥೆಗಳು ಪ್ರತೀಕಾರ ತೀರಿಸಿಕೊಳ್ಳುವ ಅಥವಾ ಬಲಿಪಶು ಮಾಡುವುದರಿಂದ ರಕ್ಷಿಸಲು ನಿರ್ದೇಶನಗಳನ್ನು ನೀಡಲು ಕೋರಿ ಸಲ್ಲಿಸಲಾದ ಮನವಿ ಪರಿಗಣಿಸಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರಿದ್ದ ಪೀಠವು, ಇಂತಹದ್ದೇ ಅರ್ಜಿಗೆ ಸಂಬಂಧಿಸಿ ಮಧ್ಯಪ್ರವೇಶಿಸಲು ನ್ಯಾಯಾಲಯವು 2020ರಲ್ಲಿ ನಿರಾಕರಿಸಿರುವುದನ್ನು ಉಲ್ಲೇಖಿಸಿದೆ. ಅಲ್ಲದೆ, ತಮ್ಮ ಪ್ರಕರಣಕ್ಕೆ ಪೂರಕವಾಗಿ ನಿರ್ದಿಷ್ಟವಾದ ಉದಾಹರಣೆಗಳನ್ನು ನೀಡುವಂತೆ ಅರ್ಜಿದಾರಿಗೆ ಸೂಚಿಸಿದೆ.

'ಇದೇ ರೀತಿ ಕೋರಿಕೆಯ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯನ್ನು ದೆಹಲಿ ಹೈಕೋರ್ಟ್ ವಜಾಗೊಳಿಸಿದಾಗ, ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸಲು ನಿರಾಕರಿಸಿ 2020ರ ಜನವರಿ 6ರಂದು ಆದೇಶ ನೀಡಿದೆ ಎಂದು ಹೇಳಿದೆ.

ಅಧಿಕಾರಿಗೆ ಕೊಲೆ ಬೆದರಿಕೆ: ಡಾ. ವೆಂಕಟರಾಮಯ್ಯ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಯುಷ್ ಇಲಾಖೆಯ ಮುಖ್ಯ ಆಡಳಿತಾಧಿಕಾರಿಗೆ ಕೊಲೆ ಬೆದರಿಕೆ ಹಾಕಿ, ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಡಿ ಜಯಚಾಮರಾಜೇಂದ್ರ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆಯ ಹಿರಿಯ ವೈದ್ಯಾಧಿಕಾರಿ ಡಾ. ವೆಂಕಟರಾಮಯ್ಯ ಅವರನ್ನು ಸರ್ಕಾರ ಸೇವೆಯಿಂದ ಅಮಾನತುಗೊಳಿಸಿದೆ.

ಈ ಬಗ್ಗೆ ಆದೇಶ ಹೊರಡಿಸಿದ್ದು, ಕಳೆದ ಫೆ.6ರಂದು ಆಯುಷ್ ಇಲಾಖೆಯ ಮುಖ್ಯ ಆಡಳಿತಾಧಿಕಾರಿ ಎಸ್. ಶೈಲಜಾ ಅವರು ಕಚೇರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ವೇಳೆ ಡಾ. ವೆಂಕಟರಾಮಯ್ಯ ಕೊಲೆ ಬೆದರಿಕೆ ಹಾಕಿದ್ದರು.

ಫೆ.7ರಂದು ಅವರ ವಿರುದ್ಧ ಶೈಲಜಾ ಅವರು ಇಲಾಖೆ ಆಯುಕ್ತರಿಗೆ ದೂರು ಸಲ್ಲಿಸಿದ್ದರು.

ಮುಖ್ಯ ಆಡಳಿತಾಧಿಕಾರಿ ದೂರಿನ ಅನ್ವಯ ದಾಖಲೆಗಳನ್ನು ಪರಿಶೀಲಿಸಿದ ಆಯುಕ್ತರು, ಡಾ. ವೆಂಕಟರಾಮಯ್ಯ ಅವರು ಸರ್ಕಾರಿ ನೌಕರರಿಗೆ ಸಲ್ಲದ ರೀತಿಯಲ್ಲಿ ವರ್ತಿಸಿ, ನಾಗರಿಕ ಸೇವಾ (ನಡತೆ) ನಿಯಮ ಉಲ್ಲಂಘಿಸಿರುವುದು ಕಂಡು ಬಂದಿರುವುದಾಗಿ ವರದಿ ಸಲ್ಲಿಸಿದ್ದರು. ಅದರಂತೆ ಡಾ. ವೆಂಕಟರಾಮಯ್ಯ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರಿಸಿ, ಸೇವೆಯಿಂದ ಅಮಾನತುಗೊಳಿಸಲಾಗಿದೆ.

ಅಮಾನತು ಅವಧಿಯಲ್ಲಿ ನಿಯಮಾನುಸಾರ ಜೀವನಾಧಾರ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ. ಈ ಅವಧಿಯಲ್ಲಿ ಸಕ್ಷಮ ಅಧಿಕಾರಿಯ ಅನುಮತಿ ಪಡೆಯದೇ ಕೇಂದ್ರ ಸ್ಥಾನ ಬಿಡಬಾರದು ಎಂದು ಸೂಚಿಸಲಾಗಿದೆ.

ಭಾಷಾ ಭವನಕ್ಕೆ ಡಾ.ಶ್ಯಾಮ್‌ಪ್ರಸಾದ್ ಮುಖರ್ಜಿ ಹೆಸರು ಮರುನಾಮಕರಣ

ಮುಖ್ಯಾಂಶಗಳು

- ಕೇಂದ್ರದ ವಿರುದ್ಧ ತೃಣಮೂಲ ಕಾಂಗ್ರೆಸ್, ಸಿಪಿಎಂ ಕಿಡಿ
- 19 ವರ್ಷ ಹಳೆಯ ಭಾಷಾ ಭವನಕ್ಕೆ ಮರುನಾಮಕರಣ

ಕೋಲ್ಕತ್ತ(ಪಿಟಿಐ): ರಾಷ್ಟ್ರೀಯ ಗ್ರಂಥಾಲಯವಿರುವ ಇಲ್ಲಿನ 'ಭಾಷಾ ಭವನ'ವನ್ನು 'ಡಾ. ಶ್ಯಾಮ್‌ಪ್ರಸಾದ್ ಮುಖರ್ಜಿ' ಭವನ ಎಂದು ಕೇಂದ್ರ ಸಂಸ್ಕೃತಿ ಸಚಿವಾಲಯ ಮರುನಾಕರಣ ಮಾಡಿದೆ.

ಕೇಂದ್ರದ ಬಿಜೆಪಿ ಸರ್ಕಾರವು ನಿರಂಕುಶವಾಗಿ ಕಟ್ಟಡಗಳ ಹೆಸರನ್ನು ತಮ್ಮ ರಾಜಕೀಯ ಲಾಭಕ್ಕಾಗಿ ಬದಲಾಯಿಸುತ್ತಿದೆ ಎಂದು ತೃಣಮೂಲ ಕಾಂಗ್ರೆಸ್ ಮತ್ತು ಸಿಪಿಎಂ ಆರೋಪಿಸಿದೆ.

ಜುಲೈ 6ರಂದು ಶ್ಯಾಮ್ ಪ್ರಸಾದ್ ಮುಖರ್ಜಿ ಅವರ 123ನೇ ಜನ್ಮ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಗ್ರಂಥಾಲಯದ ಸಲಹಾ ಸಮಿತಿಯು 19 ವರ್ಷ ಹಳೆಯ ಭಾಷಾಭವನಕ್ಕೆ ಮರುನಾಮಕರಣ ಮಾಡಲು ನಿರ್ಧರಿಸಿದೆ.

ಡಾ. ಶ್ಯಾಮ್ ಪ್ರಸಾದ್ ಮುಖರ್ಜಿ ರಿಸರ್ಚ್ ಫೌಂಡೇಷನ್‌ನ ಡಾ ಅನಿರ್ಬನ್ ಗಂಗೂಲಿ ಅವರು ಕೇಂದ್ರ ಸಂಸ್ಕೃತಿ ಸಚಿವಾಲಯಕ್ಕೆ ಈ ಕುರಿತು ಮನವಿ ಸಲ್ಲಿಸಿದ್ದ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ರಾಷ್ಟ್ರೀಯ ಗ್ರಂಥಾಲಯ ಹೇಳಿಕೆಯಲ್ಲಿ ತಿಳಿಸಿದೆ.

ಕಾಶ್ಮೀರದ ಹಲವೆಡೆ ಭಾರಿ ಮಳೆ, ಪ್ರತಿಕೂಲ ಹವಾಮಾನ

ಅಮರನಾಥ ಯಾತ್ರೆ ತಾತ್ಕಾಲಿಕ ಸ್ಥಗಿತ

ಜಮ್ಮು/ಶ್ರೀನಗರ (ಪಿಟಿಐ): ಕಾಶ್ಮೀರದ ಹಲವೆಡೆ ಭಾರಿ ಮಳೆಯಾಗುತ್ತಿದ್ದು, ಪ್ರತಿಕೂಲ ಹವಾಮಾನದಿಂದಾಗಿ ಅಮರನಾಥಯಾತ್ರೆಯನ್ನು ಶುಕ್ರವಾರ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ಅನಂತ್‌ನಾಗ್ ಜಿಲ್ಲೆಯ ಮತ್ತು ಗಾಂದರ್‌ಬಲ್ ಜಿಲ್ಲೆಯ ಪಹಲ್ಗಾಮ್ ಮಾರ್ಗಗಳಲ್ಲಿ ಯಾತ್ರೆ ಸ್ಥಗಿತಗೊಳಿಸಲಾಗಿದೆ ಎಂದು ಎಂದು ಅಧಿಕಾರಿಗಳು ಹೇಳಿದ್ದಾರೆ.

'ಬೆಳಿಗ್ಗೆಯಿಂದಲೇ, ಪವಿತ್ರ ಅಮರನಾಥ ಗುಹೆಗೆ ಹೋಗಲು ಯಾವುದೇ ಯಾತ್ರಿಕರಿಗೂ ಅನುಮತಿ ನೀಡಿಲ್ಲ. ಶುಕ್ರವಾರ ನಸುಕಿನಲ್ಲಿ ಸುರಿದ ಭಾರಿ ಮಳೆಯಿಂದಾಗಿ ಈ ನಿರ್ಧಾರ ತೆಗೆದುಕೊಳ್ಳಬೇಕಾಯಿತು. ಪಹಲ್ಗಾಮ್ ಪ್ರದೇಶದಲ್ಲಿ ಪ್ರತಿಕೂಲ ಹವಾಮಾನ ಇದ್ದು, ಚಂದರ್‌ಕೋಟೆ ಪ್ರದೇಶದಲ್ಲಿ ಯಾತ್ರೆ ಸ್ಥಗಿತಗೊಳಿಸಲಾಗಿದೆ' ಎಂದು ರಾಮ್‌ಬನ್‌ನ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಮೋಹಿತ್ ಶರ್ಮಾ ತಿಳಿಸಿದ್ದಾರೆ.

ಜಮ್ಮು ಅಧಿಕಾರಿಗಳ ಪ್ರಕಾರ, ಪರಿಸ್ಥಿತಿ ಸಹಜ ಸ್ಥಿತಿಗೆ ಮರಳಿದ ತಕ್ಷಣ ಯಾತ್ರೆ ಪುನರಾರಂಭವಾಗಲಿದೆ. ಪಹಲ್ಗಾಮ್‌ನ ಶಿಬಿರದಿಂದ ಹೊರಟಿದ್ದ 4,600 ಮಂದಿಯ ಯಾತ್ರೆ ಚಂದರ್‌ಕೋಟೆಯಲ್ಲಿ ಸ್ಥಗಿತಗೊಂಡಿದೆ. ಬಾಲ್‌ಟಾಲ್ ಶಿಬಿರಕ್ಕೆ ಪ್ರಯಾಣಿಸುವ 2,410 ಭಕ್ತಾದಿಗಳ ಮತ್ತೊಂದು ಗುಂಪಿಗೆ ಪ್ರಯಾಣಕ್ಕೆ ಅವಕಾಶ ನೀಡಲಾಗಿದೆ.

ಅಮರನಾಥ ಗುಹೆಯಲ್ಲಿ ಸ್ವಾಭಾವಿಕವಾಗಿ ಮೂಡುವ ಹಿಮದ ಶಿವಲಿಂಗ ದರ್ಶನದ ವಾರ್ಷಿಕ ಯಾತ್ರೆಯು ಜುಲೈ 1ರಿಂದ ಆರಂಭವಾಗಿದ್ದು, ಆಗಸ್ಟ್ 31ರವರೆಗೆ ನಡೆಯಲಿದೆ.



ಜಮ್ಮು ಮತ್ತು ಕಾಶ್ಮೀರ ಪೊಲೀಸ್ ಇಲಾಖೆಯ ಎಂಆರ್‌ಟಿ (ಮೌಂಟೇನರಿಂಗ್ ರೆಸ್ಕ್ಯು ಟೀಮ್) ಸಿಬ್ಬಂದಿ ಅನಂತ್‌ನಾಗ್ ಜಿಲ್ಲೆಯಲ್ಲಿ ಶುಕ್ರವಾರ ಅಮರನಾಥ ಯಾತ್ರೆಯ ವೇಳೆ ಬಳಲಿದ್ದ ಯಾತ್ರಿಕರೊಬ್ಬರಿಗೆ ಪೂರಕ ಆ್ಯಕ್ಸಿಜನ್ ನೀಡಿ ಉಪಚರಿಸಿದರು– ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

ಉಗ್ರರ ವಿರುದ್ಧ ಕ್ರಮ ಕೈಗೊಳ್ಳಿ: ಬ್ರಿಟನ್‌ಗೆ ಡೊಭಾಲ್ ಆಗ್ರಹ

ನವದೆಹಲಿ (ಪಿಟಿಐ): ಬ್ರಿಟನ್‌ನಲ್ಲಿರುವ ಭಾರತದ ಹೈಕಮಿಷನ್ ಕಚೇರಿಯ ಅಧಿಕಾರಿಗಳಿಗೆ ಬೆದರಿಕೆಯೊಡ್ಡಿರುವ ಭಯೋತ್ಪಾದಕರ ವಿರುದ್ಧ ಸಾರ್ವಜನಿಕವಾಗಿ ಕ್ರಮ ಕೈಗೊಳ್ಳಿ ಎಂದು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಅವರು ಒತ್ತಾಯಿಸಿದ್ದಾರೆ.

ಭಾರತಕ್ಕೆ ಭೇಟಿ ನೀಡಿರುವ ಬ್ರಿಟನ್‌ನ ರಾಷ್ಟ್ರೀಯ ಭದ್ರತಾ ಸಲಹೆಗಾರ ಟಿಮ್ ಬ್ಯಾರೊ ಅವರೊಂದಿಗಿನ ಮಾತುಕತೆಯ ವೇಳೆ ಡೊಭಾಲ್ ಅವರು ಈ ವಿಷಯವನ್ನು ಪ್ರಸ್ತಾಪಿಸಿದ್ದಾರೆ.

ಭಯೋತ್ಪಾದನೆ ಚಟುವಟಿಕೆ ನಿಗ್ರಹಕ್ಕೆ ಹಾಗೂ ಉಗ್ರರಿಗೆ ಹಣಕಾಸಿನ ನೆರವು ನೀಡುವುದರ ವಿರುದ್ಧ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲು ಬ್ರಿಟನ್ ಮತ್ತು ಭಾರತ ಸಮ್ಮತಿ ಸೂಚಿಸಿವೆ ಎಂದು ಮೂಲಗಳು ತಿಳಿಸಿವೆ.

ಬ್ರಿಟನ್, ಅಮೆರಿಕ, ಕೆನಡಾ ಮತ್ತು ಆಸ್ಟ್ರೇಲಿಯಾದಲ್ಲಿ ಈಚೆಗೆ ಖಾಲಿಸ್ತಾನ ಪರ ಗುಂಪುಗಳು ಭಾರತದ ಹೈಕಮಿಷನ್ ಕಚೇರಿಯ ಅಧಿಕಾರಿಗಳ ಭಾವಚಿತ್ರವಿರುವ ಪೋಸ್ಟರ್‌ಗಳನ್ನು ಆನ್‌ಲೈನ್‌ನಲ್ಲಿ ಹಂಚಿಕೊಂಡಿದ್ದವು.

ಭಾರತದ ರಾಜತಾಂತ್ರಿಕ ಅಧಿಕಾರಿಗಳಿಗೆ ಸೂಕ್ತ ಭದ್ರತೆ ಒದಗಿಸಬೇಕು ಎಂದು ಭಾರತ ಈಗಾಗಲೇ ಈ ದೇಶಗಳಿಗೆ ಮನವಿ ಮಾಡಿದೆ.

ಮೂತ್ರ ವಿಸರ್ಜನೆ ಪ್ರಕರಣ: ಸಂತ್ರಸ್ತನಿಗೆ ₹6.5 ಲಕ್ಷ ಪರಿಹಾರ

ಭೋಪಾಲ್ (ಪಿಟಿಐ): ಮಧ್ಯಪ್ರದೇಶದ ಸೀದೀ ಜಿಲ್ಲೆಯಲ್ಲಿ ಬುಡಕಟ್ಟು ಯುವಕನ ಮೇಲೆ ಮೂತ್ರ ವಿಸರ್ಜಿಸಿದ ಪ್ರಕರಣಕ್ಕೆ ಸಂಬಂಧಿಸಿ ಸಂತ್ರಸ್ತ ಯುವಕನಿಗೆ ರಾಜ್ಯ ಸರ್ಕಾರ ₹5 ಲಕ್ಷ ಆರ್ಥಿಕ ನೆರವು ಹಾಗೂ ಮನೆ ಕಟ್ಟಲು ₹1.5 ಲಕ್ಷ ಸೇರಿ ಒಟ್ಟು ₹6.5 ಲಕ್ಷ ಪರಿಹಾರ ಮಂಜೂರು ಮಾಡಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಸಂತ್ರಸ್ತ ಯುವಕ ದಶಮತ್ ರಾವತ್ ಅವರ ಪಾದ ತೊಳೆದು ಕ್ಷಮೆ ಕೇಳಿದ ಒಂದು ದಿನದ ಬಳಿಕ ಪರಿಹಾರ ಹಣ ಘೋಷಣೆ ಮಾಡಲಾಗಿದೆ.

ಮುಖ್ಯಮಂತ್ರಿಗಳ ನಿರ್ದೇಶನದ ಮೇರೆಗೆ ಪರಿಹಾರ ನೀಡಲಾಗುತ್ತಿದೆ ಎಂದು ಸೀದೀ ಜಿಲ್ಲೆಯ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಸೂರತ್ ಕೋರ್ಟ್‌ನ ತೀರ್ಪು ಎತ್ತಿಹಿಡಿದ ಗುಜರಾತ್ ಹೈಕೋರ್ಟ್ • ತೀರ್ಪಿನಲ್ಲಿ ಯಾವುದೇ ಪ್ರಕರಣದ ದೃಷ್ಟಾಂತ ಉಲ್ಲೇಖಿಸಿಲ್ಲ: ಸಿಂಘ್ವಿ

ಮಾನನಷ್ಟ ಪ್ರಕರಣ: ರಾಹುಲ್‌ಗೆ ಮತ್ತೆ ಹಿನ್ನಡೆ

ಪ್ರಜಾವಾಣಿ ವಾರ್ತೆ



ಅಹಮದಾಬಾದ್: ಮಾನನಷ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಗುಜರಾತ್‌ನ ಸೂರತ್ ಮ್ಯಾಜಿಸ್ಟ್ರೇಟ್ ಕೋರ್ಟ್ ವಿಧಿಸಿರುವ ಶಿಕ್ಷೆಗೆ ತಡೆ ಕೋರಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸಲ್ಲಿಸಿದ್ದ ಮರುಪರಿಶೀಲನಾ ಅರ್ಜಿಯನ್ನು ಗುಜರಾತ್ ಹೈಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ಎರಡು ವರ್ಷ ಶಿಕ್ಷೆಗೆ ಗುರಿಯಾಗಿ ಲೋಕಸಭಾ ಸದಸ್ಯತ್ವದಿಂದ ಅನರ್ಹಗೊಂಡಿರುವ ರಾಹುಲ್ ಅವರು ಈ ತೀರ್ಪಿನಿಂದ ಮತ್ತೆ ಹಿನ್ನಡೆ ಅನುಭವಿಸುವಂತಾಗಿದೆ.

ಈಗಾಗಲೇ ವಿಚಾರಣೆಯನ್ನು ಪೂರ್ಣಗೊಳಿಸಿ ಕಾಯ್ದಿರಿಸಿದ್ದ ತೀರ್ಪನ್ನು ಶುಕ್ರವಾರ ಪ್ರಕಟಿಸಿದ ನ್ಯಾಯಮೂರ್ತಿ ಹೇಮಂತ್ ಪ್ರಚ್ಛಕ್ ಅವರಿದ್ದ ಏಕಸದಸ್ಯ ಪೀಠ, 'ಸೂಕ್ತ ನೆಲೆಯಲ್ಲಿ ಅರ್ಜಿದಾರರು ಶಿಕ್ಷೆಗೆ ತಡೆ ಕೋರಿಲ್ಲ. ವಿಶೇಷ ಪ್ರಕರಣಗಳಲ್ಲಿ ಶಿಕ್ಷೆಗೆ ತಡೆ ನೀಡಲು ಸಾಧ್ಯವಿಲ್ಲ. ಅನರ್ಹತೆ ಎಂಬುದು ಸಂಸದರು ಮತ್ತು ಶಾಸಕರಿಗಷ್ಟೇ ಸೀಮಿತವಲ್ಲ. ರಾಹುಲ್ ವಿರುದ್ಧ 10 ಕ್ರಿಮಿನಲ್ ಪ್ರಕರಣಗಳ ವಿಚಾರಣೆ ಬಾಕಿಯಿದೆ. ಸೂರತ್ ಕೋರ್ಟ್ ವಿಧಿಸಿರುವ ಶಿಕ್ಷೆಯು ನ್ಯಾಯೋಚಿತವಾಗಿದೆ' ಎನ್ನುವ ಮೂಲಕ ಸೂರತ್ ಕೋರ್ಟ್ ನೀಡಿದ್ದ ತೀರ್ಪನ್ನು ಎತ್ತಿಹಿಡಿಯಿತು.

ಪುಣೆ ನ್ಯಾಯಾಲಯದಲ್ಲಿ ರಾಹುಲ್ ವಿರುದ್ಧ ವಿನಾಯಕ ದಾಮೋದರ್ ಸಾವರ್ಕರ್ ಅವರ ಮೊಮ್ಮಗ ಸಲ್ಲಿಸಿರುವ ಮಾನನಷ್ಟ ಪ್ರಕರಣವನ್ನೂ ಆದೇಶ ಪ್ರಕಟಿಸುವ ವೇಳೆ ಉಲ್ಲೇಖಿಸಿತು.

ಪ್ರಕರಣದ ಹಿನ್ನೆಲೆ?: ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಕೆ.ಎಚ್. ಮುನಿಯಪ್ಪ ಪರ ಪ್ರಚಾರಕ್ಕಾಗಿ ರಾಹುಲ್ ಅವರು 2019ರ ಏಪ್ರಿಲ್ 13ರಂದು ಕೋಲಾರ ನಗರದ ಸರ್ ಎಂ. ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಭಾಷಣ ಮಾಡಿದ್ದರು. ಜನಸ್ತೋಮ ಉದ್ದೇಶಿಸಿ ಮಾತನಾಡುತ್ತಾ, 'ಎಲ್ಲಾ ಕಳ್ಳರಿಗೆ ಮೋದಿ ಎಂಬ ಉಪನಾಮ ಏಕಿದೆ' ಎಂದು ಪ್ರಶ್ನಿಸಿದ್ದರು.

ಗುಜರಾತ್ ಶಾಸಕ ಪೂರ್ಣೇಶ್ ಮೋದಿ ಅವರು, 'ಮೋದಿ' ಉಪನಾಮದ ಬಗ್ಗೆ ಅಪಮಾನಕರವಾಗಿ ಮಾತನಾಡಿದ್ದಾರೆ ಎಂದು ಆರೋಪಿಸಿ ಸೂರತ್ ನ್ಯಾಯಾಲಯದಲ್ಲಿ ಐಪಿಸಿ ಸೆಕ್ಷನ್ 499 ಮತ್ತು 500ರ ಅಡಿ ಮೊಕದ್ದಮೆ ಹೂಡಿದ್ದರು. ನ್ಯಾಯಾಲಯವು ಕಳೆದ ಮಾರ್ಚ್ 23ರಂದು ಶಿಕ್ಷೆ ಪ್ರಕಟಿಸಿತ್ತು. ಇದನ್ನು ಪ್ರಶ್ನಿಸಿ ಅವರು ಸೂರತ್ ಸೆಷನ್ಸ್ ನ್ಯಾಯಾಲಯದ ಮೆಟ್ಟಿಲೇರಿದ್ದರು. ಅಲ್ಲಿಯೂ ಅವರಿಗೆ ಹಿನ್ನಡೆಯಾಗಿತ್ತು. ಇದನ್ನು ಪ್ರಶ್ನಿಸಿ ಅವರು ಹೈಕೋರ್ಟ್‌ಗೆ ಸಲ್ಲಿಸಿದ್ದ ಮರು ಪರಿಶೀಲನಾ ಅರ್ಜಿಯೂ ಈಗ ವಜಾಗೊಂಡಿದೆ. ಸುಪ್ರೀಂ ಕೋರ್ಟ್ ಶಿಕ್ಷೆಗೆ ತಡೆ ನೀಡಿದರಷ್ಟೇ ಅವರು ಸಂಸತ್ ಸದಸ್ಯರಾಗಿ ಮುಂದುವರಿಯಲಿದ್ದಾರೆ.

'ನರೇಂದ್ರ ಮೋದಿ ಕುರಿತು ಈ ಹೇಳಿಕೆ ನೀಡಿದ್ದೇನೆ. ಅವರಿಗೆ ನೋವಾಗಿದ್ದರೆ ಅವರಷ್ಟೇ ಮೊಕದ್ದಮೆ ಹೂಡಬಹುದು. ಅದರ ಬದಲಾಗಿ ಪೂರ್ಣೇಶ್ ಮೋದಿ ಅವರಿಗೆ ಪ್ರಕರಣ ದಾಖಲಿಸಲು ಯಾವುದೇ ಹಕ್ಕಿಲ್ಲ' ಎಂದು ನ್ಯಾಯಾಲಯದಲ್ಲಿ ರಾಹುಲ್ ವಾದಿಸಿದ್ದರು.

'ಸುಪ್ರೀಂ' ಮೆಟ್ಟಿಲೇರಲು ಕಾಂಗ್ರೆಸ್ ನಿರ್ಧಾರ

ನವದೆಹಲಿ: 'ಗುಜರಾತ್ ಹೈಕೋರ್ಟ್‌ನ ತೀರ್ಪು ತೀವ್ರ ನಿರಾಸೆ ತಂದಿದ್ದು, ಇದನ್ನು ನಾವು ನಿರೀಕ್ಷಿಸಿರಲಿಲ್ಲ' ಎಂದು ಪ್ರತಿಕ್ರಿಯಿಸಿರುವ ಕಾಂಗ್ರೆಸ್ ನಾಯಕರು, ಶೀಘ್ರವೇ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ನಿರ್ಧರಿಸಿದ್ದಾರೆ.

ತೀರ್ಪು ಪ್ರಕಟಗೊಂಡ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಕೀಲ ಅಭಿಷೇಕ್ ಮನು ಸಿಂಘ್ವಿ, 'ನಾವು ಈ ರೀತಿಯ ತೀರ್ಪು ನಿರೀಕ್ಷಿಸಿರಲಿಲ್ಲ. ಮಾನನಷ್ಟ ಮೊಕದ್ದಮೆಗೆ ಸಂಬಂಧಿಸಿದಂತೆ ಈಗಾಗಲೇ ಹೊರಬಿದ್ದಿರುವ ಯಾವುದೇ ಪ್ರಕರಣಗಳ ದೃಷ್ಟಾಂತವನ್ನೂ ತನ್ನ ತೀರ್ಪಿನಲ್ಲಿ ಹೈಕೋರ್ಟ್ ಉಲ್ಲೇಖಿಸಿಲ್ಲ' ಎಂದರು.

ಮೋದಿ ಸರ್ಕಾರವು ರಾಹುಲ್ ಅವರ ಧ್ವನಿ ಅಡಗಿಸಲು ಹೊಸ ತಂತ್ರ ಹೆಣೆಯುತ್ತಿದೆ. ಅವರ ಹೋರಾಟವನ್ನು ತಡೆಯಲಾಗದೆ ತಡಬಡಾಯಿಸುತ್ತಿದೆ. ರಾಹುಲ್ ಹೇಳಿಕೆಯು 'ಮೋದಿ' ಎಂಬ ಉಪನಾಮದ ವ್ಯಕ್ತಿಗಳಿಗೆ ವೈಯಕ್ತಿಕವಾಗಿ ಮಾನಹಾನಿ, ಹಗೆತನ ಹೇಗೆ ಸೃಷ್ಟಿಸುತ್ತದೆ ಅಥವಾ ತೇಜೋವಧೆ ಮಾಡುತ್ತಿದೆ ಎಂಬ ಪ್ರಶ್ನೆಗಳಿಗೂ ಹೈಕೋರ್ಟ್ ಉತ್ತರಿಸಿಲ್ಲ' ಎಂದು ಹೇಳಿದರು.

ಸಾವರ್ಕರ್ ಮೊಮ್ಮಗ ಕೂಡ ಮಾನನಷ್ಟ ಮೊಕದ್ದಮೆ ಹೂಡಿರುವ ಕುರಿತು ತೀರ್ಪಿನಲ್ಲಿ ಉಲ್ಲೇಖಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಈ ಪ್ರಕರಣ ದಾಖಲಾದ ಒಂದು ತಿಂಗಳ ಬಳಿಕ ಸೂರತ್ ನ್ಯಾಯಾಲಯ ತೀರ್ಪು ನೀಡಿದೆ. ಅದು ಹೇಗೆ ಈ ತೀರ್ಪಿಗೆ ನೇರವಾಗಿ ಸಂಬಂಧಪಡುತ್ತದೆ' ಎಂದು ಪ್ರಶ್ನಿಸಿದರು. 'ದಾಖಲಾಗಿರುವ ಯಾವುದೇ ಪ್ರಕರಣಗಳಲ್ಲಿ ರಾಹುಲ್‌ಗೆ ಶಿಕ್ಷೆಯಾಗಿಲ್ಲ. ಪ್ರಧಾನಿ ಮೋದಿಗೆ ಅಪಮಾನವಾಗಿದೆ ಎಂದು ಕೇಂದ್ರ ಸರ್ಕಾರ ಹೇಳುತ್ತದೆ. ಆದರೆ, ಆ ಪಕ್ಷದ ಹಿರಿಯ ನಾಯಕರು ಏಕೆ ಮೊಕದ್ದಮೆ ಹೂಡಿಲ್ಲ' ಎಂದು ಪ್ರಶ್ನಿಸಿದರು.

ಮಾನನಷ್ಟ ತಡೆ ಕಾನೂನುಗಳ ದುರುಪಯೋಗವಾಗುತ್ತಿದೆ. ಆದರೆ, ನ್ಯಾಯಾಂಗ ವ್ಯವಸ್ಥೆ ಮತ್ತು ಸುಪ್ರೀಂ ಕೋರ್ಟ್ ಮೇಲೆ ನಮಗೆ ನಂಬಿಕೆ ಇದೆ ಎಂದರು.

ರಾಜಕೀಯ ಹುನ್ನಾರಕ್ಕೆ ಹೆದರಲ್ಲ: ಖರ್ಗೆ

'ಬಿಜೆಪಿ ರಾಜಕೀಯ ಪಿತೂರಿಗೆ ಕಾಂಗ್ರೆಸ್ ನಾಯಕರು ಅಥವಾ ಕಾರ್ಯಕರ್ತರು ಭಯಪಡುವುದಿಲ್ಲ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

ರಾಹುಲ್ ಅವರನ್ನು ಸಂಸತ್‌ನಿಂದ ಅನರ್ಹಗೊಳಿಸಲು ಬಿಜೆಪಿಯು ಸುಳ್ಳಿನ ಕಥೆಗಳನ್ನು ಹೆಣೆದು ಪಿತೂರಿ ನಡೆಸಿದೆ. ಅವರು ಸತ್ಯಕ್ಕಾಗಿ ಹೋರಾಡುತ್ತಿದ್ದಾರೆ. ಹಾಗಾಗಿ, ಬಿಜೆಪಿಯು ಈ ಸಂಚು ರೂಪಿಸಿದೆ. ಇದಕ್ಕೆ ಅವರು ಎದೆಗುಂದುವುದಿಲ್ಲ ಎಂದು ಟ್ವೀಟ್ ಮಾಡಿದ್ದಾರೆ.

'ಮುಂದಿನ ದಿನಗಳಲ್ಲೂ ಸತ್ಯಕ್ಕಾಗಿ ಅವರ ಹೋರಾಟ ಮುಂದುವರಿಯಲಿದೆ. ಮೋದಿ ಸರ್ಕಾರದ ಮೇಲ್ವಿಚಾರಣೆಯಲ್ಲಿಯೇ ಲಲಿತ್ ಮೋದಿ, ನೀರವ್ ಮೋದಿ, ಮೆಹುಲ್ ಚೋಕ್ಸಿ, ವಿಜಯ್ ಮಲ್ಯ, ಜತಿನ್ ಮೆಹ್ತಾ ಅವರು ಸಾರ್ವಜನಿಕರ ಹಣ ದೋಚಿಕೊಂಡು ದೇಶ ತೊರೆದಿದ್ದಾರೆ. ಇದು ಸತ್ಯವಲ್ಲವೇ ಎಂದು ಪ್ರಶ್ನಿಸಿದ್ದಾರೆ.

'ಬಿಜೆಪಿಯ ಅಧಿಕಾರಾವಧಿಯಲ್ಲಿ ಭ್ರಷ್ಟರು ದೇಶದಿಂದ ಓಡಿಹೋಗಿದ್ದಾರೆ. ಇದಕ್ಕೆ ಬಿಜೆಪಿಯೇ ಬೆಂಬಲ ನೀಡಿದೆ. ಅಧಿಕಾರ ಹಿಡಿದ ಮೋದಿ ಸರ್ಕಾರವು ಸ್ವಚ್ಛ ಭಾರತ ಅಭಿಯಾನದ ಭಾಗವಾಗಿ ಅವರೆಲ್ಲರ ಭ್ರಷ್ಟಾಚಾರವನ್ನೂ ಸ್ವಚ್ಛಗೊಳಿಸಿದೆ' ಎಂದು ವ್ಯಂಗ್ಯವಾಡಿದ್ದಾರೆ.

ರಾಹುಲ್ ದುರಭ್ಯಾಸಕ್ಕೆ ತಕ್ಕ ಶಾಸ್ತಿ: ಬಿಜೆಪಿ

ನವದೆಹಲಿ(ಪಿಟಿಐ): 'ಸಂಘಟನೆಗಳು ಮತ್ತು ಗಣ್ಯರ ಮಾನಹಾನಿ ಮಾಡುವುದು ರಾಹುಲ್ ಗಾಂಧಿ ಅವರ ದುರಭ್ಯಾಸವಾಗಿದೆ. ಇದಕ್ಕೆ ನ್ಯಾಯಾಲಯವು ತಕ್ಕ ಶಾಸ್ತಿ ನೀಡಿದೆ' ಎಂದು ಪ್ರತಿಕ್ರಿಯಿಸಿರುವ ಬಿಜೆಪಿಯು, ಗುಜರಾತ್ ಹೈಕೋರ್ಟ್ ತೀರ್ಪನ್ನು ಸ್ವಾಗತಿಸಿದೆ.

'ಘೋರ ಅಪರಾಧ ಎಸಗಿರುವ ಕಾಂಗ್ರೆಸ್ ನಾಯಕನಿಗೆ ಹೈಕೋರ್ಟ್ ಕಾನೂನಿನ ಮೂಲಕ ಸೂಕ್ತ ಉತ್ತರ ನೀಡಿದೆ. ಸ್ವಾತಂತ್ರ್ಯ ಹೋರಾಟಗಾರ ವಿ.ಡಿ. ಸಾವರ್ಕರ್ ಹಾಗೂ ಆರೆಸ್ಸೆಸ್ ಸಂಘಟನೆಯನ್ನೂ ಟೀಕಿಸಿದ್ದ ಅವರು ಈಗ ಕಾನೂನಿನ ಕುಣಿಕೆಗೆ ಸಿಲುಕಿದ್ದಾರೆ' ಎಂದು ಬಿಜೆಪಿ ನಾಯಕ ರವಿಶಂಕರ್ ಪ್ರಸಾದ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ರಫೇಲ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ರಾಹುಲ್ ಕ್ಷಮೆಯಾಚಿಸಿದ್ದರು. ಬಳಿಕ ಸುದ್ದಿಗೋಷ್ಠಿಯಲ್ಲಿ ಪತ್ರಕರ್ತರೊಬ್ಬರನ್ನು ಬಿಜೆಪಿಯ ವಕ್ತಾರನೆಂದು ಜರಿದಿದ್ದರು. ನಾನು ಗಾಂಧಿ ಕುಟುಂಬದ ಕುಡಿ ಎಂದು ಭಾವಿಸಿರುವ ಅವರು ಸಾರ್ವಜನಿಕವಾಗಿ ಅಹಂಕಾರದಿಂದ ವರ್ತಿಸುತ್ತಿದ್ದಾರೆ. 'ಮೋದಿ' ಉಪನಾಮದ ಬಗ್ಗೆ ಟೀಕಿಸಿರುವ ಮೂಲಕ ಹಿಂದುಳಿದ ಸಮುದಾಯವನ್ನೂ ಅವಮಾನಿಸಿದ್ದಾರೆ' ಎಂದು ಹೇಳಿದರು.

ಬಿಜೆಪಿ ಪಿತೂರಿ – 'ಕೈ' ನಾಯಕರ ಕಿಡಿ



ವಿಧಾನಸೌಧ ಆವರಣದಲ್ಲಿರುವ ಗಾಂಧಿ ಪ್ರತಿಮೆಯ ಮುಂಭಾಗದಲ್ಲಿ ನಡೆದ ಪ್ರತಿಭಟನೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಜಿ. ಪರಮೇಶ್ವರ, ಕೆ.ಎಚ್.ಮುನಿಯಪ್ಪ, ಎನ್.ಎಸ್. ಬೋಸರಾಜ್, ಡಿ. ಸುಧಾಕರ್, ಕೆಪಿಸಿಸಿ ಕಾರ್ಯಾಧ್ಯಕ್ಷ ಬಿ.ಎನ್. ಚಂದ್ರಪ್ಪ, ಶಾಸಕರಾದ ಡಾ.ಎಚ್.ಡಿ. ರಂಗನಾಥ್, ಎಸ್.ಆರ್. ಶ್ರೀನಿವಾಸ್, ಕೆ.ವೈ. ನಂಜೇಗೌಡ, ತನ್ವೀರ್ ಸೇಠ್, ಬಿ. ಶಿವಣ್ಣ ಇದ್ದರು

ಬೆಂಗಳೂರು: 'ರಾಹುಲ್ ಗಾಂಧಿ ಅವರ ಸಂಸತ್ ಸದಸ್ಯತ್ವ ರದ್ದತಿಯ ಹಿಂದೆ ಬಿಜೆಪಿ ಪಿತೂರಿಯಿದೆ' ಎಂದು ಆರೋಪಿಸಿ ವಿಧಾನಸೌಧ ಆವರಣದಲ್ಲಿರುವ ಗಾಂಧಿ ಪ್ರತಿಮೆ ಮುಂಭಾಗದಲ್ಲಿ ಉಪ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಸಚಿವರು, ಕಾಂಗ್ರೆಸ್ ಶಾಸಕರು ಶುಕ್ರವಾರ ಪ್ರತಿಭಟನೆ ನಡೆಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಶಿವಕುಮಾರ್, 'ನಮ್ಮ ನಾಯಕ ರಾಹುಲ್ ಗಾಂಧಿ ಅವರ ಮೇಲೆ ಮಾನನಷ್ಟ ಮೊಕದ್ದಮೆ ದಾಖಲು ಮಾಡಿ, ಅದರ ತೀರ್ಪಿನ ಅನ್ವಯ ಅವರನ್ನು ಸಂಸತ್ ಸದಸ್ಯ ಸ್ಥಾನದಿಂದ ಅನರ್ಹಗೊಳಿಸಿದ್ದಾರೆ. ರಾಹುಲ್ ಗಾಂಧಿ ಅವರ ರಾಜಕೀಯ ಬೆಳವಣಿಗೆ ತಡೆಯಲು ಬಿಜೆಪಿ ಈ ಕುತಂತ್ರ ನಡೆಸಿದೆ' ಎಂದು ಆರೋಪಿಸಿದರು.

'ರಾಹುಲ್ ಗಾಂಧಿ ಅವರು ದೇಶದ ಬಡವರ ಧ್ವನಿಯಾಗಿ, ಬೆಲೆ ಏರಿಕೆ ಮತ್ತು ನಿರುದ್ಯೋಗದ ವಿರುದ್ಧ ಹೋರಾಟ ಮಾಡುತ್ತಿದ್ದು, ಈ ಹೋರಾಟವನ್ನು ಹತ್ತಿಕ್ಕುವ ಪ್ರಯತ್ನಕ್ಕೆ ಬಿಜೆಪಿಯವರು ಮುಂದಾಗಿದ್ದಾರೆ. ದೇಶದ ಐಕ್ಯತೆ, ಸಮಗ್ರತೆ ಹಾಗೂ ಶಾಂತಿ ಸ್ಥಾಪನೆಗೆ ಭಾರತ ಒಗ್ಗೂಡಿಸಲು ಮುಂದಾಗಿರುವ ನಮ್ಮ ನಾಯಕನ ವಿರುದ್ಧ ಬಿಜೆಪಿ ಸಂಚು ರೂಪಿಸುತ್ತಿದೆ. ಆದರೆ, ರಾಹುಲ್ ಗಾಂಧಿ ಅವರ ಹೋರಾಟವನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಜನ ಸೂಕ್ತ ಉತ್ತರ ನೀಡುತ್ತಾರೆ. ಮೈಸೂರು, ಬೆಳಗಾವಿ, ಧಾರವಾಡ ಸೇರಿದಂತೆ ವಿಭಾಗೀಯ ಕೇಂದ್ರಗಳಲ್ಲಿಯೂ ಪ್ರತಿಭಟನೆ ನಡೆಸುವಂತೆ ಪಕ್ಷದ ಕಾರ್ಯಕರ್ತರಿಗೆ ತಿಳಿಸಿದ್ದೇನೆ' ಎಂದರು.


ಸತ್ಯ ಮತ್ತು ಜನರ ಹಿತಾಸಕ್ತಿ ರಕ್ಷಣೆಗೆ ರಾಹುಲ್ ಹೋರಾಡುತ್ತಿದ್ದಾರೆ. ಇದರ ತಡೆಗೆ ಕೇಂದ್ರದ ದುರಾಡಳಿತ ಮುಂದಾಗಿದೆ. ಆದರೆ, ಹೋರಾಟ ನಿಲ್ಲುವುದಿಲ್ಲ
ಪ್ರಿಯಾಂಕಾ ಗಾಂಧಿ
ಕಾಂಗ್ರೆಸ್ ನಾಯಕಿ

ಮೋದಿಯ ದ್ವಿಮುಖ ನೀತಿ ಬಗ್ಗೆ ಜನರಿಗೆ ಅರಿವಿದೆ. ಷಡ್ಯಂತ್ರಕ್ಕೆ ನಾವು ಭಯಪಡುವುದಿಲ್ಲ. ಕಾನೂನಿನ ನೆಲೆಗಟ್ಟಿನಲ್ಲಿ ಹೋರಾಟ ಮುಂದುವರಿಯಲಿದೆ
ಜೈರಾಮ್ ರಮೇಶ್, ಪ್ರಧಾನ ಕಾರ್ಯದರ್ಶಿ (ಸಂವಹನ), ಎಐಸಿಸಿ

'ಹೈಕೋರ್ಟ್ ತೀರ್ಪಿನ ಅಧ್ಯಯನದ ಬಳಿಕ ಇದರ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಹೋರಾಟ ನಡೆಸುತ್ತೇವೆ
ಕೆ.ಸಿ. ವೇಣುಗೋಪಾಲ್
ಪ್ರಧಾನ ಕಾರ್ಯದರ್ಶಿ (ಸಂಘಟನೆ), ಎಐಸಿಸಿ

ರಾಜಸ್ಥಾನ: ಜೋಶಿಗೆ ಚುನಾವಣಾ ಸಾರಥ್ಯ

ಪ್ರಜಾವಾಣಿ ವಾರ್ತೆ



ಪ್ರಲ್ಹಾದ ಜೋಶಿ

ನವದೆಹಲಿ: ಈ ವರ್ಷದ ಅಂತ್ಯದೊಳಗೆ ಚುನಾವಣೆ ನಡೆಯಲಿರುವ ನಾಲ್ಕು ರಾಜ್ಯಗಳಿಗೆ ಚುನಾವಣಾ ಉಸ್ತುವಾರಿಗಳನ್ನು ಬಿಜೆಪಿ ಶುಕ್ರವಾರ ನೇಮಿಸಿದೆ. ರಾಜಸ್ಥಾನದ ಹೊಣೆಯನ್ನು ಕೇಂದ್ರ ಕಲ್ಲಿದ್ದಲು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಅವರಿಗೆ ವಹಿಸಲಾಗಿದೆ.

ಕಳೆದ ವರ್ಷ ನಡೆದ ಉತ್ತರಾಖಂಡ ವಿಧಾನಸಭಾ ಚುನಾವಣೆಗೆ ಜೋಶಿ ಅವರನ್ನು ಚುನಾವಣಾ ಉಸ್ತುವಾರಿಯನ್ನಾಗಿ ನೇಮಿಸಲಾಗಿತ್ತು. ಆ ರಾಜ್ಯದಲ್ಲಿ ಪಕ್ಷ ಮತ್ತೆ ಅಧಿಕಾರಕ್ಕೆ ಬಂದಿತು. ಮೇ ತಿಂಗಳಲ್ಲಿ ನಡೆದ ಕರ್ನಾಟಕ ವಿಧಾನಸಭಾ ಚುನಾವಣೆಯ ಟಿಕೆಟ್ ಹಂಚಿಕೆಯಲ್ಲೂ ಜೋಶಿ ಮಹತ್ವದ ಪಾತ್ರ ವಹಿಸಿದ್ದರು.

ರಾಜಸ್ಥಾನದ ಸಹ ಚುನಾವಣಾ ಉಸ್ತುವಾರಿಗಳನ್ನಾಗಿ ಗುಜರಾತ್‌ನ ಮಾಜಿ ಉಪ ಮುಖ್ಯಮಂತ್ರಿ ನಿತಿನ್ ಪಟೇಲ್ ಹಾಗೂ ಹರಿಯಾಣದ ಮುಖಂಡ ಕುಲದೀಪ್ ಬಿಷ್ಣೋಯ್ ಅವರನ್ನು ನೇಮಿಸಲಾಗಿದೆ.

ಮಧ್ಯಪ್ರದೇಶದ ಚುನಾವಣಾ ಉಸ್ತುವಾರಿಯಾಗಿ ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್, ಸಹ ಉಸ್ತುವಾರಿಯಾಗಿ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ನೇಮಕಗೊಂಡಿದ್ದಾರೆ.

ಛತ್ತೀಸಗಡದ ಚುನಾವಣಾ ಉಸ್ತುವಾರಿಯಾಗಿ ಹಿರಿಯ ಮುಖಂಡ ಓಂ ಪ್ರಕಾಶ್ ಮಾಥೂರ್, ಸಹ ಉಸ್ತುವಾರಿಯಾಗಿ ಕೇಂದ್ರ ಸಚಿವ ಮನ್ಸುಖ್ ಮಾಂಡವೀಯ ಅವರನ್ನು ನೇಮಿಸಲಾಗಿದೆ.

ತೆಲಂಗಾಣದ ಉಸ್ತುವಾರಿ ಜವಾಬ್ದಾರಿಯನ್ನು ಕೇಂದ್ರದ ಮಾಜಿ ಸಚಿವ ಪ್ರಕಾಶ ಜಾವಡೇಕರ್, ಸಹ ಉಸ್ತುವಾರಿ ಹೊಣೆಯನ್ನು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸುನೀಲ್ ಬನ್ಸಾಲ್ ಅವರಿಗೆ ವಹಿಸಲಾಗಿದೆ.

ಈ ನಾಲ್ಕು ರಾಜ್ಯಗಳು ಹಾಗೂ ಮಿಜೋರಾಂ ವಿಧಾನಸಭಾ ಚುನಾವಣೆ ಅಕ್ಟೋಬರ್ ಅಥವಾ ನವೆಂಬರ್‌ನಲ್ಲಿ ನಡೆಯುವ ಸಾಧ್ಯತೆ ಇದೆ.

ನಕಲಿ, ಸುಳ್ಳು ಪದಗಳ ಮಿತಿ ತಿಳಿಯಬೇಕಿದೆ: ಹೈಕೋರ್ಟ್

ಮುಂಬೈ (ಪಿಟಿಐ): ಮಾಹಿತಿ ಮತ್ತು ತಂತ್ರಜ್ಞಾನ (ಐ.ಟಿ) ನಿಯಮ ತಿದ್ದುಪಡಿಯು ನಾಗರಿಕರ ಮೂಲಭೂತ ಹಕ್ಕುಗಳ ಮೇಲೆ ಬೀರುವ ಪರಿಣಾಮಗಳನ್ನು ತಿಳಿದುಕೊಳ್ಳುವ ಮೊದಲು, 'ನಕಲಿ', 'ಸುಳ್ಳು' ಮತ್ತು 'ದಾರಿತಪ್ಪಿಸು' (ಫೇಕ್, ಫಾಲ್ಸ್ ಮತ್ತು ಮಿಸ್‌ಲೀಡಿಂಗ್)– ಈ ಮೂರು ಪದಗಳ ಮಿತಿ ಮತ್ತು ಎಲ್ಲೆಯನ್ನು ಅರ್ಥ ಮಾಡಿಕೊಳ್ಳಬೇಕಿದೆ ಎಂದು ಬಾಂಬೆ ಹೈಕೋರ್ಟ್ ಶುಕ್ರವಾರ ಹೇಳಿದೆ.

ಐ.ಟಿ ನಿಯಮ ತಿದ್ದುಪಡಿ ಪ್ರಶ್ನಿಸಿದ್ದ ಅರ್ಜಿಗಳನ್ನು ನ್ಯಾಯಮೂರ್ತಿಗಳಾದ ಗೌತಮ್ ಪಟೇಲ್ ಮತ್ತು ನೀಲ ಗೋಖಲೆ ಅವರನ್ನು ಒಳಗೊಂಡ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು. ಈ ವೇಳೆ, ಸರ್ಕಾರದ ಯಾವುದೇ ನೀತಿಯ ಬಗೆಗಿನ ಅಭಿಪ್ರಾಯಗಳು ಮತ್ತು ಸಂಪಾದಕೀಯ ಬರಹಗಳನ್ನೂ 'ತಪ್ಪುದಾರಿಗೆಳೆಯುತ್ತಿವೆ' ಎಂದು ಪರಿಗಣಿಸಬಹುದೇ ಮತ್ತು ವಿವೇಚನಾಧಿಕಾರಕ್ಕೆ ಚೌಕಟ್ಟು ಹಾಕಲು ಹಾಗೂ ಅನಿಮಿಯತ ಅಧಿಕಾರ ನೀಡಲು ಕಾನೂನಿನಲ್ಲಿ ಅವಕಾಶ ಇದೆಯೇ ಎಂದು ಪ್ರಶ್ನಿಸಿತು.

ಸುಳ್ಳು ಸುದ್ದಿ ಹರಡುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ನಿಯಮದಲ್ಲಿ ತಿಳಿಸಲಾಗಿದೆ. ಆದರೆ, ಸರ್ಕಾರಕ್ಕೆ ಸಂಬಂಧಿಸಿದ ಸುದ್ದಿ ಅಥವಾ ಸಂಬಂಧಿಸದ ಸುದ್ದಿ ಎಂದು ವ್ಯಾಖ್ಯಾನಿಸುವುದು ಹೇಗೆ ಎಂದು ಪೀಠ ಪ್ರಶ್ನಿಸಿದೆ.

'ಇದು ಸುಳ್ಳು ಎಂದು ಒಬ್ಬರು ನಿರ್ಣಾಯಕವಾಗಿ ಹೇಳಲು ಹೇಗೆ ಸಾಧ್ಯ? ಇಂಥ ಅಧಿಕಾರದ ಮೂಲ ಏನು? ಎಫ್‌ಸಿಯು (ಫ್ಯಾಕ್ಟ್ ಚೆಕ್ ಘಟಕ) ಮಾಹಿತಿಯು ವಿಶ್ವಾಸಾರ್ಹ ಅಥವಾ ಅಲ್ಲ ಎಂದು ಹೇಳಬಹುದು. ಸಿವಿಲ್ ನ್ಯಾಯಾಲಯ ಸಹ ಅಧಿಕಾರಯುಕ್ತವಾಗಿ ಯಾವುದು ಸತ್ಯ ಎಂದು ಹೇಳಲು ಸಾಧ್ಯವಿಲ್ಲ. ಸಂಭಾವ್ಯತೆ ಆಧಾರದಲ್ಲಿ ಅದು ಹೇಳಿಕೆ ನೀಡಬಹುದು' ಎಂದು ನ್ಯಾಯಮೂರ್ತಿ ಹೇಳಿದರು.

ವ್ಯಕ್ತಿಯ ವೈಯಕ್ತಿಕ ಅಭಿಪ್ರಾಯ ಮತ್ತು ಸಂಪಾದಕೀಯ ಬರಹಗಳೂ ಕಾನೂನಿನ ಅಡಿಗೆ ಒಳಪಡುತ್ತವೆಯೇ? ಉದಾಹರಣೆಗೆ ದೇಶದ ಆರ್ಥಿಕತೆಗೆ ಸಂಬಂಧಿಸಿದಂತೆ ಸರ್ಕಾರ ನೀಡುವ ಅಂಕಿಅಂಶಗಳ ಕುರಿತ ಟೀಕೆ. ಇದನ್ನೂ ಸುಳ್ಳು ಅಥವಾ ದಾರಿ ತಪ್ಪಿಸುವ ಸುದ್ದಿ ಎಂದು ಪರಿಗಣಿಸಲಾಗುತ್ತದೆಯೇ ಎಂದು ಕೋರ್ಟ್ ಪ್ರಶ್ನಿಸಿತು. ನಂತರ ವಿಚಾರಣೆಯನ್ನು ಜುಲೈ 13ಕ್ಕೆ ಮುಂದೂಡಿ ಆದೇಶಿಸಿತು. ಈ ನಿಯಮವು ಮಾಹಿತಿ ಮತ್ತು ತಂತ್ರಜ್ಞಾನ ಸಚಿವಾಲಯಕ್ಕೆ ಫ್ಯಾಕ್ಟ್ ಚೆಕ್ ಘಟಕ ಸ್ಥಾಪಿಸುವ ಅಧಿಕಾರ ನೀಡುತ್ತದೆ. ಈ ಘಟಕವು ಕೇಂದ್ರ ಸರ್ಕಾರದ ವ್ಯವಹಾರಗಳಿಗೆ ಸಂಬಧಿಸಿದ ಯಾವ ಸುದ್ದಿ ಸುಳ್ಳು ಅಥವಾ ದಾರಿತಪ್ಪಿಸುವ ಸುದ್ದಿ ಎಂಬುದನ್ನು ಗುರುತಿಸಲಿದೆ.

ಸ್ಟ್ಯಾಂಡಪ್ ಕಮಿಡಿಯನ್ ಕುನಾಲ್ ಕಮ್ರಾ, ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯಾ, ಭಾರತದ ನಿಯತಕಾಲಿಕೆಗಳ ಸಂಘ ತಿದ್ದುಪಡಿ ನಿಯಮದ ವಿರುದ್ಧ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಹೊಸ ನಿಯಮಗಳನ್ನು ಅಸಾಂವಿಧಾನಿಕ ಎಂದು ಕರೆದು ಇವುನಾಗರಿಕರ ಮೂಲಭೂತ ಹಕ್ಕುಗಳ ಮೇಲೆ ಪರಿಣಾಮ ಬೀರಲಿವೆ ಎಂದಿದ್ದರು.

ಬಾಲೇಶ್ವರ ರೈಲು ದುರಂತ: ಮೂವರ ಬಂಧನ

ನವದೆಹಲಿ (ಪಿಟಿಐ): ಒಡಿಶಾದ ಬಾಲೇಶ್ವರದಲ್ಲಿ ನಡೆದ ಭೀಕರ ರೈಲು ದುರಂತ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಶುಕ್ರವಾರ ಮೂವರು ರೈಲ್ವೆ ಸಿಬ್ಬಂದಿಯನ್ನು ಬಂಧಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹಿರಿಯ ಸೆಕ್ಷನ್ ಎಂಜಿನಿಯರ್ (ಸಿಗ್ನಲ್) ಅರುಣ್ ಕುಮಾರ್ ಮಹಾಂತ, ಸೆಕ್ಷನ್ ಎಂಜಿನಿಯರ್ ಮಹಮ್ಮದ್ ಅಮಿರ್ ಖಾನ್ ಮತ್ತು ಟೆಕ್ನಿಷಿಯನ್ ಪಪ್ಪು ಕುಮಾರ್ ಬಂಧಿತರು. ಮೂವರನ್ನೂ ಬಾಲೇಶ್ವರ ಜಿಲ್ಲೆಯಲ್ಲಿ ನಿಯೋಜಿಸಲಾಗಿತ್ತು. ಭಾರತೀಯ ದಂಡ ಸಂಹಿತೆ ಸೆಕ್ಷನ್ 304 (ಉದ್ದೇಶಪೂರ್ವಕ ಕೊಲೆ) ಮತ್ತು 201 (ಸಾಕ್ಷ್ಯ ನಾಶ) ಅಡಿಯಲ್ಲಿ ಬಂಧಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಜೂನ್ 2 ಜಿಲ್ಲೆಯ ಬಹನಾಗ ಬಜಾರ್ ರೈಲು ನಿಲ್ದಾಣ ಸಮೀಪ ತ್ರಿವಳಿ ರೈಲುಗಳ ನಡುವೆ ನಡೆದ ಭೀಕರ ರೈಲು ಅಪಘಾತ ಸಂಭವಿಸಿತ್ತು. ದುರಂತದಲ್ಲಿ 293 ಮಂದಿ ಮೃತಪಟ್ಟಿದ್ದರು. ಹಲವರು ಗಾಯಗೊಂಡಿದ್ದರು,

ಮುಂಬೈನ ಭರತ್ ಜೈನ್ ವಿಶ್ವದಲ್ಲೇ ಶ್ರೀಮಂತ ಭಿಕ್ಷುಕ!

ಮುಂಬೈ: ಕೆದರಿದ ಕೂದಲು, ಮೈಮುಚ್ಚಲು ಹರಿದ ಬಟ್ಟೆ ಧರಿಸಿ, ಆಹಾರ, ಹಣಕ್ಕಾಗಿ ಅಂಗಲಾಚುವ ಭಿಕ್ಷುಕರನ್ನು ಸಾಮಾನ್ಯವಾಗಿ ನಾವೆಲ್ಲ ನೋಡಿರುತ್ತೇವೆ. ಆದರೆ ಇಲ್ಲಿನ ಬೀದಿಗಳಲ್ಲಿ ಭಿಕ್ಷಾಟನೆ ಮಾಡುವ ಭರತ್ ಜೈನ್ ಎಂಬುವವರು ವಿಶ್ವದಲ್ಲೇ ಅತ್ಯಂತ ಶ್ರೀಮಂತ ಭಿಕ್ಷುಕನೆಂಬ ಖ್ಯಾತಿಗೆ ಪಾತ್ರರಾಗಿದ್ದಾರೆ.

ಭಿಕ್ಷಾಟನೆಯ ಮೂಲಕವೇ ಭರತ್ ಅವರು ₹7.5 ಕೋಟಿ ಸಂಪಾದಿಸಿದ್ದಾರೆ. ತಿಂಗಳಿಗೆ ₹60ಸಾವಿರದಿಂದ ₹75ಸಾವಿರದವರೆಗೂ ಗಳಿಸುತ್ತಾರೆ ಎಂದು 'ಹಿಂದೂಸ್ತಾನ್ ಟೈಮ್ಸ್' ತನ್ನ ವರದಿಯಲ್ಲಿ ಮಾಹಿತಿ ನೀಡಲಾಗಿದೆ.

ಬಡತನದಿಂದಾಗಿ ಪ್ರಾಥಮಿಕ ಶಿಕ್ಷಣವನ್ನೂ ಪಡೆಯಲು ಸಾಧ್ಯವಾಗದ ಭರತ್ ಅವರು ಇಂದು ಮುಂಬೈನಲ್ಲಿ ₹1.2 ಕೋಟಿ ಮೌಲ್ಯದ ಎರಡು ಬಿಎಚ್‌ಕೆ ಫ್ಲ್ಯಾಟ್‌ನ ಒಡೆಯರಾಗಿದ್ದಾರೆ. ಠಾಣೆಯಲ್ಲಿ ಎರಡು ಅಂಗಡಿಗಳನ್ನು ತಿಂಗಳಿಗೆ ₹30 ಸಾವಿರಕ್ಕೆ ಬಾಡಿಗೆಗೆ ನೀಡಿದ್ದಾರೆ ಎಂದೂ ತಿಳಿಸಿದೆ.

ಪತ್ನಿ, ಇಬ್ಬರು ಮಕ್ಕಳು, ಸಹೋದರ ಮತ್ತು ತಂದೆಯೊಂದಿಗೆ ವಾಸವಿರುವ ಭರತ್ ಅವರು, ಛತ್ರಪತಿ ಶಿವಾಜಿ ಟರ್ಮಿನಸ್ ರೈಲು ನಿಲ್ದಾಣ ಅಥವಾ ಆಜಾದ್ ಮೈದಾನ್ ಬಳಿ ಭಿಕ್ಷೆ ಬೇಡುತ್ತಾರೆ ಎಂದೂ ವರದಿಯಲ್ಲಿ ಹೇಳಲಾಗಿದೆ.

ಸಾಕಷ್ಟು ಹಣ ಆಸ್ತಿ ಹೊಂದಿದ್ದರೂ ಭರತ್ ಅವರು ಈಗಲೂ ಭಿಕ್ಷಾಟನೆಯನ್ನು ಮುಂದುವರಿಸಿದ್ದಾರೆ.

ಜೈನ್ ಅವರು ಸದ್ಯ ಪರೇಲ್‌ನಲ್ಲಿ 1ಬಿಎಚ್‌ಕೆ ಡ್ಯುಪ್ಲೆಕ್ಸ್ ಮನೆಯಲ್ಲಿ ವಾಸವಿದ್ದು, ಅವರ ಮಕ್ಕಳು ಕಾನ್ವೆಂಟ್ ಶಾಲೆಯಲ್ಲಿ ಶಿಕ್ಷಣ ಪೂರೈಸಿದ್ದಾರೆ.

ಎನ್‌ಸಿಪಿ ಶಾಸಕರ ಬೆಂಬಲ ಪಡೆಯುವಲ್ಲಿ ಅಜಿತ್ ಬಣ ಮುನ್ನಡೆ

ನಿಷ್ಠೆ: 6 ಶಾಸಕರ ನಿಲುವು ಇನ್ನೂ ಅಸ್ಪಷ್ಟ

ಮುಂಬೈ: 25 ವರ್ಷ ಹಳೆಯದಾದ ಎನ್‌ಸಿಪಿಯಲ್ಲಿ ಬಣ ರಾಜಕಾರಣ ಶುರುವಾಗಿ ವಾರ ಕಳೆದರೂ, ಸುಮಾರು 6 ಮಂದಿ ಶಾಸಕರು, ತಾವು ಯಾವ ಬಣದ ಪರವಾಗಿದ್ದೇವೆ ಎಂದು ನಿರ್ಧರಿಸಲು ಆಗಿಲ್ಲ. 288 ಸದಸ್ಯ ಬಲದ ವಿಧಾನಸಭೆಯಲ್ಲಿ ಎನ್‌ಸಿಪಿ 53 ಶಾಸಕರನ್ನು ಹೊಂದಿದೆ.

ಪಕ್ಷದ ಮೇಲೆ ಹಕ್ಕು ಸ್ಥಾಪಿಸುವ ಅಜಿತ್ ಬಣದ ಯತ್ನ ಶುಕ್ರವಾರವು ಮುಂದುವರಿದಿದೆ. ಕಾರ್ಯಾಧ್ಯಕ್ಷ ಪ್ರಫುಲ್ ಪಟೇಲ್ ಅವರು, 'ಪಕ್ಷ ಇಬ್ಭಾಗ ಆಗಿಲ್ಲ. ಬಹುಸಂಖ್ಯಾತ ಶಾಸಕರು ಸೇರಿದಂತೆ ಅಜಿತ್ ಪವಾರ್ ಅವರನ್ನೇ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ' ಎಂದಿದ್ದಾರೆ.

ಮಹಾರಾಷ್ಟ್ರದಲ್ಲಿ ಬದಲಾದ ರಾಜಕೀಯ ಬೆಳವಣಿಗೆಗಳು ಬಹು ನಿರೀಕ್ಷಿತ ಸಂಪುಟ ವಿಸ್ತರಣೆ ಅಥವಾ ಪುನರ್ ರಚನೆ ಪ್ರಕ್ರಿಯೆಗೂ ಅಡ್ಡಗಾಲಾಗಿದೆ. ಸಂಪುಟದಲ್ಲಿ ಪ್ರಾತಿನಿಧ್ಯಕ್ಕಾಗಿ ಶಿವಸೇನೆ (ಶಿಂದೆ), ಬಿಜೆಪಿ ಮತ್ತು ಎನ್‌ಸಿಪಿ ಚೌಕಾಸಿಗೆ ಇಳಿದಿರುವುದು ವಿಳಂಬಕ್ಕೆ ಕಾರಣವಾಗಿದೆ.

ಸಂಪುಟ ಪುನರ್ ರಚನೆ, ವಿಸ್ತರಣೆ ಕಸರತ್ತು ಸಂಕೀರ್ಣವಾಗಿದ್ದರೂ 'ಆತಂಕ ಪಡಲು ಯಾವುದೇ ಕಾರಣಗಳಿಲ್ಲ. ಆದಷ್ಟು ಶೀಘ್ರ ವಿಸ್ತರಣೆ ಪ್ರಕ್ರಿಯೆ ನಡೆಯಲಿದೆ' ಎಂದು ಮುಖ್ಯಮಂತ್ರಿ ಏಕನಾಥ ಶಿಂದೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ಶಿವಸೇನೆಯ ಉದ್ಧವ್ ಬಣ ತ್ಯಜಿಸಿ ಶಿಂದೆ ಬಣವನ್ನು ಸೇರಿದ ವಿಧಾನಪರಿಷತ್ ಉಪ ಸಭಾಪತಿ ನೀಲಂ ಗೋರ್ಹೆ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಮುಖಮಂತ್ರಿ ಏಕನಾಥ ಶಿಂದೆ, ಉಪ ಮುಖ್ಯಮಂತ್ರಿಗಳಾದ ಅಜಿತ್ ಪವಾರ್, ದೇವೇಂದ್ರ ಫಡಣವೀಸ್ ಇದ್ದಾರೆ. –ಪಿಟಿಐ ಚಿತ್ರ

ನಿಷ್ಠೆ ಬದಲಿಸಿದ ಗೋರ್ಹೆ

ಮುಂಬೈ (ಪಿಟಿಐ): ವಿಧಾನಪರಿಷತ್ತಿನ ಉಪ ಸಭಾಪತಿ ನೀಲಂ ಗೋರ್ಹೆ (ಶಿವಸೇನೆಯ ಉದ್ಧವ್ ಬಣ) ಅವರು ಶುಕ್ರವಾರ ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಬಣಕ್ಕೆ ತಮ್ಮ ನಿಷ್ಠೆಯನ್ನು ಬದಲಿಸಿದ್ದಾರೆ.

ಶಿಂದೆ ಮತ್ತು ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ನೇತೃತ್ವದಲ್ಲಿ ಅವರು ಶುಕ್ರವಾರ ಪಕ್ಷಾಂತರಗೊಂಡರು. ಪ್ರಸ್ತುತ ಸಂದರ್ಭದಲ್ಲಿ ಈ ಬೆಳವಣಿಗೆಯಿಂದ ಉದ್ಧವ್ ಬಣಕ್ಕೆ ತೀವ್ರ ಹಿನ್ನಡೆಯಾದಂತಾಗಿದೆ.

ಎರಡು ತಿಂಗಳು ವಿರಾಮ: ಪಂಕಜಾ

ಮುಂಬೈ: ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾಗಲಿದ್ದಾರೆ ಎಂಬ ವದಂತಿ ನಡುವೆಯೇ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಪಂಕಜಾ ಮುಂಡೆ, ದಿಡೀರ್ ಬೆಳವಣಿಗೆಯಲ್ಲಿ ಎರಡು ತಿಂಗಳು ಸಕ್ರಿಯ ರಾಜಕಾರಣದಿಂದ ದೂರ ಉಳಿಯುವ ನಿರ್ಧಾರಕ್ಕೆ ಬಂದಿದ್ದಾರೆ.

'20 ವರ್ಷದಿಂದ ಸಕ್ರಿಯ ರಾಜಕಾರಣದಲ್ಲಿದ್ದೇನೆ. ವಿರಾಮ ಬೇಕಿದೆ' ಎಂದಿರುವ ಅವರು, ಕಾಂಗ್ರೆಸ್ ಸೇರಲಿದ್ದಾರೆ ಎಂಬ ವದಂತಿಯನ್ನು ತಳ್ಳಿಹಾಕಿದ್ದಾರೆ. ಇವರು ಇತ್ತೀಚೆಗೆ ಕಾಂಗ್ರೆಸ್ ನಾಯಕರದ ಸೋನಿಯಾಗಾಂಧಿ ಮತ್ತು ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿದ್ದರು.

'ಶರದ್ ಪವಾರ್ ನಮಗೆ ಸ್ಫೂರ್ತಿ'

ಮುಂಬೈ (ಪಿಟಿಐ): 'ರಾಷ್ಟ್ರೀಯವಾದಿ ಕಾಂಗ್ರೆಸ್ ಪಾರ್ಟಿ (ಎನ್‌ಸಿಪಿ) ಸ್ಥಾಪಕ ಶರದ್ ಪವಾರ್ ಅವರು ಈ ವಯಸ್ಸಿನಲ್ಲೂ ಬಂಡಾಯಗಾರರ ವಿರುದ್ಧ ಹೋರಾಟ ನಡೆಸಿರುವುದು ನಮಗೆ ಪ್ರೇರಣೆ' ಎಂದು ಶಿವಸೇನೆ (ಉದ್ಧವ್ ಬಣ) ನಾಯಕ ಸಂಜಯ್ ರಾವುತ್ ಹೇಳಿದ್ದಾರೆ.

ಶರದ್ ಪವಾರ್ ಅವರು ನಿವೃತ್ತರಾಗಲಿ ಎಂಬ ಅಣ್ಣನ ಮಗ ಅಜಿತ್ ಪವಾರ್ ಹೇಳಿಕೆಗೆ ಪ್ರತಿಕ್ರಿಯಿಸುತ್ತಾ, 'ನನಗೆ 82 ಅಥವಾ 92 ವರ್ಷವಾಗಿರಲಿ. ನಾನು ಸಮರ್ಥನಿದ್ದೇನೆ. ಪಕ್ಷ ಬಲಪಡಿಸುತ್ತೇನೆ' ಎಂದು ಹೇಳಿದ್ದರು. ಸುದ್ದಿಗಾರರ ಜೊತೆಗೆ ಮಾತನಾಡಿದ ರಾವುತ್, 'ಭಾಳಾಠಾಕ್ರೆ ಅವರಿಗೂ 84–86 ವರ್ಷವಾಗಿತ್ತು. ಅವರು ನಮಗೆ ಪ್ರೇರೇಪಣೆ. ಅಷ್ಟಕ್ಕೂ ವಯಸ್ಸಿನಲ್ಲಿ ಏನಿದೆ? ಗಾಂಧೀಜಿ ಅವರಿಗೂ ವಯಸ್ಸಾಗಿತ್ತು. ಅವರು ಬ್ರಿಟಿಷರ ವಿರುದ್ಧ ಹೋರಾಡಲಿಲ್ಲವೇ' ಎಂದು ಪ್ರಶ್ನಿಸಿದರು.

ಮಣಿಪುರ ಹಿಂಸಾಚಾರ: ಅಮೆರಿಕ ರಾಯಭಾರಿ ಹೇಳಿಕೆಗೆ ಆಕ್ಷೇಪ

'ಭಾರತಕ್ಕೆ ನೆರವು ನೀಡಲು ಅಮೆರಿಕ ಸಿದ್ಧ'

ನವದೆಹಲಿ (ಪಿಟಿಐ): 'ಮಣಿಪುರದಲ್ಲಿ ನಡೆಯುತ್ತಿರುವ ಜನಾಂಗೀಯ ಘರ್ಷಣೆ ಭಾರತದ ಆಂತರಿಕ ವಿಚಾರ. ಆದರೆ, ನೆರವು ಕೇಳಿದರೆ ನೀಡಲು ಅಮೆರಿಕ ಸಿದ್ಧವಿದೆ' ಎಂದು ಭಾರತದಲ್ಲಿನ ಅಮೆರಿಕ ರಾಯಭಾರಿ ಎರಿಕ್ ಗಾರ್ಸೆಟ್ಟಿ ಅವರು ಗುರುವಾರ ಕೋಲ್ಕತ್ತದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಹಿಂಸಾಚಾರದ ಕುರಿತು ಬೇಸರ ವ್ಯಕ್ತಪಡಿಸಿದ ಅವರು, 'ಹಿಂಸಾಚಾರದಲ್ಲಿ ಸಾವಿಗೀಡಾಗುತ್ತಿರುವ ಮಕ್ಕಳು ಮತ್ತು ಇತರರ ಕುರಿತು ಕಾಳಜಿ ಹೊಂದಲು ಭಾರತೀಯರೇ ಆಗಬೇಕೆಂದಿಲ್ಲ. ಈಶಾನ್ಯ ರಾಜ್ಯಗಳು ಸಾಕಷ್ಟು ಪ್ರಗತಿ ಕಾಣುತ್ತಿವೆ. ಮಣಿಪುರಕ್ಕೆ ಸಂಬಂಧಿಸಿದಂತೆ ನೆರವು ಕೇಳಿದರೆ ನೆರವು ನೀಡಲು ನಾವು ಸಿದ್ಧರಿದ್ದೇವೆ. ಇದು ಭಾರತದ ಆಂತರಿಕ ವಿಚಾರ ಎಂದು ನಮಗೂ ತಿಳಿದಿದೆ' ಎಂದಿದ್ದಾರೆ.

'ಶಾಂತಿ ನೆಲೆಸಿದರೆ ಮಾತ್ರ ಉಭಯ ದೇಶಗಳ ನಡುವೆ ಇನ್ನೂ ಹೆಚ್ಚಿನ ಸಹಭಾಗಿತ್ವ, ಯೋಜನೆಗಳು, ಬಂಡವಾಳ ಹೂಡಿಕೆ ಸಾಧ್ಯ' ಎಂದರು.

ಗಾರ್ಸೆಟ್ಟಿ ಅವರ ಹೇಳಿಕೆ ಕುರಿತು ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರಿಸಿದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಅವರು, 'ವಿದೇಶಗಳ ರಾಯಭಾರಿಗಳು ಭಾರತದ ಆಂತರಿಕ ವಿಚಾರಗಳ ಕುರಿತು ಹೇಳಿಕೆ ನೀಡಬಹುದಾ ಎಂಬ ಕುರಿತು ನನಗೆ ಖಚಿತತೆ ಇಲ್ಲ. ಅವರ ಹೇಳಿಕೆಯನ್ನು ಪರಿಶೀಲಿಸದೇ ಈ ಕುರಿತು ಮಾತನಾಡುವುದಿಲ್ಲ' ಎಂದಿದ್ದಾರೆ.

ಕಾಂಗ್ರೆಸ್ ವಿರೋಧ: ಎರಿಕ್ ಗಾರ್ಸೆಟ್ಟಿ ಅವರ ಹೇಳಿಕೆಗೆ ಕಾಂಗ್ರೆಸ್ ಸಂಸದ ಮನೀಷ್ ತಿವಾರಿ ಅವರು ವಿರೋಧ ವ್ಯಕ್ತಪಡಿಸಿದ್ದಾರೆ.

'ಭಾರತದ ಅಮೆರಿಕ ರಾಯಭಾರಿಯೊಬ್ಬರು ದೇಶದ ಆಂತರಿಕ ವಿಚಾರವಾಗಿ ಈ ರೀತಿಯ ಹೇಳಿಕೆ ನೀಡಿದ್ದನ್ನು ನಾನು ನಾಲ್ಕು ದಶಕಗಳ ಸಾರ್ವಜನಿಕ ಜೀವನದಲ್ಲಿ ನೋಡಿಲ್ಲ' ಎಂದು ಟ್ವೀಟ್ ಮಾಡಿದ್ದಾರೆ.

'ಅಮೆರಿಕ ಮತ್ತು ಭಾರತದ ನಡುವಿನ ಜಟಿಲ ಮತ್ತು ಹಿಂಸಾತ್ಮಕ ದ್ವಿಪಕ್ಷೀಯ ಸಂಬಂಧದ ಕುರಿತು ರಾಯಭಾರಿಯಾಗಿ ಹೊಸದಾಗಿ ನೇಮಕವಾಗಿರುವ ಎರಿಕ್ ಗಾರ್ಸೆಟ್ಟಿ ಅವರಿಗೆ ಅರಿವಿರುವ ಬಗ್ಗೆ ನನಗೆ ಸಂದೇಹವಿದೆ'.

ಜೊತೆಗೆ, ನಮ್ಮ ಆಂತರಿಕ ವಿಚಾರದಲ್ಲಿ ಹಸ್ತಕ್ಷೇಪ ಮಾಡುತ್ತಿರುವುದರ ಹಿಂದೆ ಒಳ್ಳೆಯ ಉದ್ದೇಶವಿದೆಯೊ ಅಥವಾ ದುರುದ್ದೇಶವಿದೆಯೊ ಎಂಬ ಕುರಿತು ತಿಳಿದುಕೊಳ್ಳುವಲ್ಲಿ ಭಾರತೀಯರಿಗಿರುವ ಸೂಕ್ಷ್ಮತೆ ಬಗ್ಗೆ ಅವರಿಗೆ ಅರಿವಿರುವ ಕುರಿತು ಸಂದೇಹವಿದೆ' ಎಂದಿದ್ದಾರೆ.

ಗುಂಡಿನ ದಾಳಿ: 3 ಸಾವು

ಇಂಫಾಲ್ (ಪಿಟಿಐ): ಮಣಿಪುರದ ವಿಷ್ಣುಪುರ ಜಿಲ್ಲೆಯಲ್ಲಿ ಶುಕ್ರವಾರ ನಡೆದ ಮೂರು ಪ್ರತ್ಯೇಕ ಗುಂಡಿನ ದಾಳಿಗಳಲ್ಲಿ ವಿದ್ಯಾರ್ಥಿ ಸೇರಿ ಮೂವರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಿಲ್ಲೆಯ ಫೌಬಾಕ್ಚಾವೊ ಗ್ರಾಮದಲ್ಲಿ ಅಪರಿಚಿತ ಬಂದೂಕುಧಾರಿಗಳು ಮನಬಂದಂತೆ ಗುಂಡು ಹಾರಿಸಿದರು. ಈ ವೇಳೆ ವಿದ್ಯಾರ್ಥಿಗೆ ಗುಂಡು ತಗುಲಿದೆ.

ಘಟನೆಯಿಂದ ಆಕ್ರೋಶಗೊಂಡ ಸ್ಥಳೀಯರು, ಅದರಲ್ಲೂ ಬಹುತೇಕ ಮಹಿಳೆಯರು ಮೋಯಿರಾಂಗ್ ಪಟ್ಟಣದಲ್ಲಿ ರಸ್ತೆಗಿಳಿದು ಪ್ರತಿಭಟಿಸಿದರು ಎಂದು ಅಧಿಕಾರಿಗಳು ಹೇಳಿದ್ದಾರೆ.

ಚುರಾಚಾಂದ್‌ಪುರ ಜಿಲ್ಲೆಯ ಅವಾಂಗ್ ಲೇಕಿ ಮತ್ತು ಕಂಗ್ವಾಯಿ ಗ್ರಾಮಗಳಲ್ಲಿ ಎರಡು ಗುಂಪುಗಳ ನಡುವೆ ಗುರುವಾರ ಮಧ್ಯರಾತ್ರಿ ಸುಮಾರು 1.30 ಗಂಟೆಗೆ ಗುಂಡಿನ ಚಕಮಕಿ ನಡೆದದ್ದು ಮೊದಲು ವರದಿಯಾಯಿತು. ಈ ಗ್ರಾಮಗಳು ಫೌಬಾಕ್ಚಾವೊ ಗ್ರಾಮಕ್ಕೆ ಹತ್ತಿರವಿವೆ. ಕೆಲ ಗಂಟೆಗಳ ವಿರಾಮದ ಬಳಿಕ ಮಧ್ಯಾಹ್ನ 11.30ಕ್ಕೆ ಪುನಃ ಗುಂಡಿನ ಚಕಮಕಿ ಆರಂಭವಾದ ಕುರಿತು ವರದಿ ಬಂದಿತು.

ಗ್ರಾಮಗಳ ಪರಿಸ್ಥಿತಿ ಕುರಿತು ಮಾಹಿತಿ ಪಡೆಯಲು ಹಿರಿಯ ಪೊಲೀಸ್ ಅಧಿಕಾರಿಗಳು ಕಂಗ್ವಾಯಿ ಜಿಲ್ಲೆಗೆ ತೆರಳಿದ್ದಾರೆ ಎಂದು ಅವರು ತಿಳಿಸಿದರು.

ಪ್ರತ್ಯೇಕ ಘಟನೆಗಳಲ್ಲಿ ಮಾನಸಿಕ ಅಸ್ವಸ್ಥ ಮಹಿಳೆ ಮತ್ತು ಪೊಲೀಸ್ ಕಮಾಂಡರ್ ಒಬ್ಬರು ಕುಕಿ ಸಮುದಾಯದ ಶಂಕಿತ ಬಂಡುಕೋರರು ಹಾರಿಸಿದ ಗುಂಡಿಗೆ ಬಲಿಯಾಗಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

'ತಾಯ್ನಾಡಿನಲ್ಲೇ ಜನರು ನಿರಾಶ್ರಿತರಾಗಿದ್ದಾರೆ'

'ತಮ್ಮ ಸ್ವಂತ ದೇಶದಲ್ಲೇ ನಿರಾಶ್ರಿತರಾಗುವಂತೆ ಮಣಿಪುರ ಜನರ ಮೇಲೆ ಒತ್ತಡ ತರಲಾಗಿದೆ' ಎಂದು ಸಿಪಿಐ ಸಂಸದ ಬಿನಾಯ್ ವಿಶ್ವನಾಥ್ ಅವರು ಆರೋಪಿಸಿದ್ದಾರೆ.

ಎರಡು ದಿನಗಳ ಭೇಟಿಗಾಗಿ ಮಣಿಪುರಕ್ಕೆ ಗುರುವಾರ ಬಂದಿರುವ ಸಿಪಿಎಂ ಮತ್ತು ಸಿಪಿಐ ಸಂಸದರ ನಿಯೋಗದಲ್ಲಿ ಬಿನಾಯ್ ಕೂಡಾ ಒಬ್ಬರು. 'ಆಡಳಿತಗಾರರ ಒಡೆದು ಆಳುವ ನೀತಿ ಕುರಿತು ಮಣಿಪುರದ ಜನರು ನಮ್ಮ ನಿಯೋಗಕ್ಕೆ ಮಾಹಿತಿ ನೀಡಿದ್ದಾರೆ. ಸಾಮಾನ್ಯ ಜನರಿಗೆ ತಿಳುವಳಿಕೆ ಇದೆ. ಆದರೆ ಬಿಜೆಪಿ ಅವರನ್ನು ವಂಚಿಸಿದೆ. ಈ ವಂಚನೆಗೆ ಬಿಜೆಪಿ ಬೆಲೆ ತೆರುತ್ತದೆ' ಎಂದಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಬದುಕು ಎಷ್ಟೇ ಸಂಕೀರ್ಣವಾಗಿ ಕಂಡರೂ ನೀವು ಮಾಡಲು ಮತ್ತು ಯಶಸ್ಸು ಪಡೆಯಲು ಏನಾದರೂ ಅವಕಾಶ ಇದ್ದೇ ಇರುತ್ತದೆ. -ಸ್ಟೀಫನ್ ಹಾಕಿಂಗ್

ಅಭಿವೃದ್ಧಿಗೆ ಹೊಸ ವ್ಯಾಖ್ಯಾನ ‘ಗ್ಯಾರಂಟಿ’ಗೆ ಬಲ ಕೊಡುವ ಕಸರತ್ತು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಮಂಡಿಸಿದ 2023–24ನೇ ಸಾಲಿನ ರಾಜ್ಯ ಬಜೆಟ್ ಹಲವು ದೃಷ್ಟಿಗಳಲ್ಲಿ ಗಮನಾರ್ಹವಾಗಿದೆ. ಐದು ಗ್ಯಾರಂಟಿ ಯೋಜನೆಗಳಿಗೆ ತನ್ನ ಪರಿಪೂರ್ಣ ಬದ್ಧತೆಯನ್ನು ಪ್ರದರ್ಶಿಸಿರುವ ಈ ಬಜೆಟ್, ಸುಮಾರು 1.30 ಕೋಟಿ ಕುಟುಂಬಗಳಿಗೆ ಸಾರ್ವತ್ರಿಕ ಮೂಲ ಆದಾಯವನ್ನು ಒದಗಿಸುವಂತಹ ಹೊಸ ಪರಿಕಲ್ಪನೆಯ ಕುರಿತು ಮಾತನಾಡಿದೆ. ಪ್ರತಿ ಕುಟುಂಬಕ್ಕೆ ತಿಂಗಳಿಗೆ ನಾಲ್ಕೈದು ಸಾವಿರ ರೂಪಾಯಿಯಷ್ಟು ಮೂಲ ಆದಾಯ ಖಾತರಿಪಡಿಸುವಂತಹ ಯೋಜನೆಗಳ ಅನುಷ್ಠಾನದಿಂದ ಬಡವರ ಕೈಗೆ ಹೆಚ್ಚಿನ ಹಣ ಸಿಕ್ಕಂತಾಗುತ್ತದೆ. ಇದರಿಂದ ಬಡತನ ಬಂಡಿ ಸರಾಗವಾಗಿ ಉರುಳಲಿದೆ ಎಂಬ ಬಜೆಟ್‌ನ ಆಶಯ ಕುತೂಹಲಕಾರಿ. ಸಂಪತ್ತಿನ ಮರುಹಂಚಿಕೆಯ ಮೂಲಕ ಅಭಿವೃದ್ಧಿಗೆ ಹೊಸ ಭಾಷ್ಯವೊಂದನ್ನು ಬರೆಯುವ ಇರಾದೆಯೂ ಎದ್ದು ಕಾಣುವಂತಹದ್ದು. ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯವನ್ನು ಒಟ್ಟೊಟ್ಟಿಗೆ ಮುನ್ನಡೆಸುವ ಮಾತುಗಳನ್ನೂ ಮುಖ್ಯಮಂತ್ರಿ ಆಡಿದ್ದಾರೆ. ಅವರ ಈ ಆಶಯದ ವರ್ಗಗಳ ಮೇಲೆ ಕಣ್ಣಳತೆ ಹೆಚ್ಚು ಎನ್ನುವುದು ಸುವಿದಿತ. ಬಜೆಟ್ ಉದ್ದಕ್ಕೂ ಅದಕ್ಕೆ ಪೂರಕವಾದ ಸಾಕ್ಷ್ಯಗಳು ಸಿಕ್ಕುತ್ತವೆ. ಆದರಲ್ಲಿ, ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಉಪಯೋಜನೆ (ಎಸ್‌ಸಿಎಸ್‌ಪಿ, ಟಿಎಸ್‌ಪಿ) ಕಾಯ್ದೆಯ ಸೆಕ್ಷನ್ 7(ಡಿ) ನಿಯಮವನ್ನು ರದ್ದುಪಡಿಸಲು ನಿರ್ಧರಿಸಿರುವುದು ಬಲು ಮಹತ್ವದ್ದು. ವಿಭಜನೆಯಾಗದ ಮೂಲಸೌಕರ್ಯ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಯೋಜನಾ ವೆಚ್ಚದ ಒಂದು ಭಾಗವನ್ನು ಪರಿಶಿಷ್ಟ ಜಾತಿ ಹಾಗೂ ಪಂಗಡಗಳಿಗೆ ಒದಗಿಸಲಾಗಿದೆ ಎಂದು ಪರಿಭಾವಿಸುವ ಈ ನಿಯಮ ಕೈಬಿಡಲು ನಿರ್ಧರಿಸಿರುವುದು, ಮೀಸಲಿಟ್ಟ ಅನುದಾನವು ಆಯಾ ಸಮುದಾಯಗಳಿಗೇ ಸಲ್ಲಬೇಕೆಂಬ ಕಳಕಳಿಗೆ ದ್ಯೋತಕ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಜಮೀನು ಪರಭಾರೆ ಆಗದಂತೆ ತಡೆಯಲು ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ ತರಲು ಹೊರಟಿರುವುದು ಸಹ ಮಹತ್ವದ ತೀರ್ಮಾನ. ಹಿಂದುಳಿದ ವರ್ಗಗಳ ಪ್ರವರ್ಗ-1 ಮತ್ತು ಪ್ರವರ್ಗ-2ಎನಲ್ಲಿ ಬರುವ ಜಾತಿಗಳ ಗುತ್ತಿಗೆದಾರರಿಗೆ ಒಂದು ಕೋಟಿ ರೂಪಾಯಿವರೆಗಿನ ನಿರ್ಮಾಣ ಕಾಮಗಾರಿಗಳಲ್ಲಿ ಮೀಸಲಾತಿ ನೀಡಲು ಉದ್ದೇಶಿಸಿರುವುದು ದುರ್ಬಲರ ಸಬಲೀಕರಣದಲ್ಲಿ ದೂರಗಾಮಿ ಪರಿಣಾಮ ಬೀರುವಂಥದ್ದು. ಅಹಿಂದ ವರ್ಗಗಳೊಟ್ಟಿಗೆ ಜೈನರು, ಕ್ರೈಸ್ತರೂ ಸೇರಿದಂತೆ ಎಲ್ಲರನ್ನೂ ಒಳಗೊಂಡು ಮುನ್ನಡೆಯುವ ಆಶಯವೂ ಬಜೆಟ್‌ನಲ್ಲಿದೆ.



ಕಲ್ಯಾಣ ಕಾರ್ಯಕ್ರಮಗಳಿಗೆ ಒತ್ತು ನೀಡಿರುವುದು ಎಲ್ಲರನ್ನೂ ಒಳಗೊಳ್ಳುವ ಆಶಯಕ್ಕೆ ಪೂರಕವಾಗಿದೆ. ಆದರೆ, ದೀರ್ಘಾವಧಿ ಪರಿಣಾಮ ಬೀರುವಂತಹ ದೂರದೃಷ್ಟಿಯ ಯೋಜನೆಗಳ ಬರ ಬಜೆಟ್‌ನ ಬಹುದೊಡ್ಡ ಕೊರತೆಯಾಗಿದೆ

ಕೃಷಿಕರನ್ನು ಖುಷಿಯಾಗಿಡುವ ಮಾತುಗಳನ್ನೂ ಬಜೆಟ್‌ನಲ್ಲಿ ಆಡಲಾಗಿದೆ. ಕೃಷಿಭಾಗ್ಯ ಯೋಜನೆಯನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯೊಂದಿಗೆ ಸಂಯೋಜಿಸಿ ಮರುಜಾರಿಗೊಳಿಸುವ, ಕೃಷಿ ಸಂಬಂಧಿತ ನವೋದ್ಯಮಗಳನ್ನು ಉತ್ತೇಜಿಸುವ, ‘ನಂದಿನಿ’ ಮಾದರಿಯಲ್ಲಿ ರೈತ ಉತ್ಪನ್ನಗಳಿಗೆ ಏಕೀಕೃತ ಬ್ರ್ಯಾಂಡಿಂಗ್ ವ್ಯವಸ್ಥೆ ರೂಪಿಸುವ ಭರವಸೆಗಳನ್ನು ನೀಡಲಾಗಿದೆ. ರೈತರಿಗೆ ಶೂನ್ಯ ಬಡ್ಡಿದರದಲ್ಲಿ ನೀಡಲಾಗುತ್ತಿರುವ ಸಾಲದ ಮಿತಿಯನ್ನು ₹ 5 ಲಕ್ಷಕ್ಕೆ ಹೆಚ್ಚಿಸಲು ನಿರ್ಧರಿಸಲಾಗಿದೆ. ಮಹಿಳೆಯರಿಗೆ ಉದ್ಯೋಗಾವಕಾಶ ಹೆಚ್ಚಿಸಲು ನಾಲ್ಕು ಸಾವಿರ ಗ್ರಾಮ ಪಂಚಾಯಿತಿಗಳಲ್ಲಿ ‘ಕೂಸಿನಮನೆ’ ಶಿಶುಪಾಲನಾ ಕೇಂದ್ರಗಳನ್ನು ತೆರೆಯುವುದಾಗಿ ಪ್ರಕಟಿಸಲಾಗಿದೆ. ರಾಜ್ಯಕ್ಕೊಂದು ಹೊಸ ಶಿಕ್ಷಣ ನೀತಿ ರೂಪಿಸುವ ಮಾತುಗಳನ್ನಾಡುವ ಮೂಲಕ ಬಹುಚರ್ಚಿತ ರಾಷ್ಟ್ರೀಯ ಶಿಕ್ಷಣ ನೀತಿಗೆ ಸಡ್ಡು ಹೊಡೆಯಲಾಗಿದೆ. ರಾಜ್ಯದ ಎಲ್ಲ ಪ್ರದೇಶಗಳ ಅಭಿವೃದ್ಧಿಗೆ ಅನುದಾನ ಒದಗಿಸಲು ಮುಖ್ಯಮಂತ್ರಿ ಕಸರತ್ತು ನಡೆಸಿರುವುದು ಸುಸ್ಪಷ್ಟ. ಆದ್ದರಿಂದಲೇ ರಾಜಧಾನಿ ಬೆಂಗಳೂರಿನಷ್ಟೇ ಕಲ್ಯಾಣ ಕರ್ನಾಟಕದ ಅಭಿವೃದ್ಧಿಯೂ ಅವರಿಗೆ ಮುಖ್ಯವಾಗಿ ಕಂಡಿದೆ. ಆದರೆ, ದೂರಗಾಮಿ ಪರಿಣಾಮ ಬೀರುವಂತಹ ದೀರ್ಘಾವಧಿ ಯೋಜನೆಗಳ ಬರ ಬಜೆಟ್‌ನ ಬಹುದೊಡ್ಡ ಕೊರತೆಯಾಗಿ ಪರಿಣಮಿಸಿದೆ. ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರವು ಬಾಕಿ ಉಳಿಸಿರುವ ಕಾಮಗಾರಿಗಳ ಮೊತ್ತ ₹ 2.55 ಲಕ್ಷ ಕೋಟಿಯಷ್ಟು ಇದ್ದು, ಕನಿಷ್ಠ ಆರು ವರ್ಷ ಹೊಸ ಯೋಜನೆಗಳನ್ನು ಹಮ್ಮಿಕೊಳ್ಳುವುದು ಬಹುದೊಡ್ಡ ಸವಾಲು ಎಂದು ಸಿದ್ದರಾಮಯ್ಯ ಅಸಹಾಯಕತೆ ವ್ಯಕ್ತಪಡಿಸಿದ್ದಾರೆ. ಆರ್ಥಿಕ ಶಿಸ್ತಿನ ಬಜೆಟ್‌ಗಳ ಮಂಡನೆಗೆ ಹೆಸರಾಗಿದ್ದ ಅವರು ಈ ಬಾರಿ ₹ 12,500 ಕೋಟಿಗಳಷ್ಟು ವಿತ್ತೀಯ ಕೊರತೆಯ ಆಯವ್ಯಯ ಮಂಡಿಸಿದ್ದಾರೆ. ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಘೋಷಿಸಿದ್ದ ಐದು ಗ್ಯಾರಂಟಿಗಳಿಗೆ ಹಣ ಹೊಂದಿಸಲು ಅವರು ಸಾಹಸಪಟ್ಟಿರುವುದು ಕಾಣುತ್ತದೆ. ನೀರಾವರಿಯಂತಹ ಪ್ರಮುಖ ವಲಯಕ್ಕೆ ಸೂಕ್ತ ಆದ್ಯತೆ ಸಿಕ್ಕಿಲ್ಲ. ಆರೋಗ್ಯ, ಶಿಕ್ಷಣ ವಲಯಕ್ಕೂ ಅನುದಾನದ ಪ್ರಮಾಣ ಕಡಿಮೆಯಾಗಿದೆ. ಮೂಲಸೌಕರ್ಯ ಯೋಜನೆಗಳಿಗೆ ಸಿಕ್ಕ ಒತ್ತು ಕೂಡ ಕಡಿಮೆಯೇ. ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಅನುಷ್ಠಾನಕ್ಕೆ ಬಂದಮೇಲೆ ರಾಜ್ಯ ಸರ್ಕಾರಗಳ ಸಂಪನ್ಮೂಲ ಕ್ರೋಡೀಕರಣಕ್ಕೆ ಇರುವ ಮಾರ್ಗಗಳು ತುಂಬಾ ಕಡಿಮೆ. ಹೀಗಾಗಿ ಸಾಲ ಹೆಚ್ಚು ಮಾಡುವ ದಾರಿಯನ್ನೇ ರಾಜ್ಯ ಸರ್ಕಾರ ಆಯ್ದುಕೊಂಡಿದೆ. ಅಬಕಾರಿ ಸುಂಕ ಹೆಚ್ಚಿಸಲಾಗಿದ್ದು, ನೋಂದಣಿ, ಮುದ್ರಾಂಕ ಶುಲ್ಕ ಹಾಗೂ ವಾಹನ ನೋಂದಣಿ ತೆರಿಗೆಯನ್ನೂ ಪರಿಷ್ಕರಿಸಲು ನಿರ್ಧರಿಸಲಾಗಿದೆ. ಇಷ್ಟಾಗಿಯೂ ಕೊರತೆಯನ್ನು ತುಂಬಿಸಲು ಸಾಧ್ಯವಾಗಿಲ್ಲ. ಮುಂಬರುವ ಲೋಕಸಭಾ ಚುನಾವಣೆಯೂ ಮುಖ್ಯಮಂತ್ರಿ ಮನಸ್ಸಿನಲ್ಲಿ ಇದ್ದಿರಬಹುದಾದರೂ ಕಲ್ಯಾಣ ಕಾರ್ಯಕ್ರಮಗಳ ಜತೆಗೆ ಅಭಿವೃದ್ಧಿ ಯೋಜನೆಗಳ ಕಡೆಗೂ ಗಮನಹರಿಸುವುದು ಅಗತ್ಯವಾಗಿತ್ತು.

ದಿನದ ಟ್ವೀಟ್


ಟೀಕೆಗಳಿಗೆ ಮಿತಿ ಇರಲಿ



ನಾನು ನೋಡಿದ ತಲೆಬರಹವೊಂದು ಹೀಗಿತ್ತು: ‘ಪತಿ ರಣವೀರ್ ಹುಟ್ಟುಹಬ್ಬಕ್ಕೆ ಶುಭಾಶಯ ಕೋರುವ ಪೋಸ್ಟ್ ಹಾಕದ್ದಕ್ಕೆ ಟೀಕೆಗಳನ್ನು ಎದುರಿಸಿದ ದೀಪಿಕಾ ಪಡುಕೋಣೆ’. ಇಂತಹ ಟೀಕೆಗಳನ್ನು ಮಾಡಲು ಇವರೆಲ್ಲಾ ಯಾರು?

ಧನ್ಯಾ ರಾಜೇಂದ್ರನ್, ಪತ್ರಕರ್ತೆ

ಕಿಡಿನುಡಿ



ಎಚ್.ಡಿ.ಕುಮಾರಸ್ವಾಮಿ ಅವರು ಈ ಹಿಂದೆ, ನನ್ನ ಬಳಿ ಸಿ.ಡಿ ಇದೆ, ಸಮಯ ಬಂದಾಗ ಅದನ್ನು ಬಹಿರಂಗ ಪಡಿಸುವೆ ಅನ್ನುತ್ತಿದ್ದರು. ಈಗ ಪೆನ್‌ಡ್ರೈವ್ ಇದೆ ಅನ್ನುತ್ತಾರೆ. ಯಾರೇ ಮಾಡಿದ ಅಪರಾಧದ ಸಾಕ್ಷ್ಯ, ಮಾಹಿತಿ ಸಿಕ್ಕ ತಕ್ಷಣ ಅದನ್ನು ಪೊಲೀಸರಿಗೆ ನೀಡಬೇಕಾದುದು ಓರ್ವ ಜವಾಬ್ದಾರಿಯುತ ನಾಗರಿಕನ ಕರ್ತವ್ಯ. ಅದಕ್ಕೂ ಒಂದು ಸಮಯಕ್ಕಾಗಿ ಕಾಯುವುದು ಅಂದರೆ ಅದು ಕೂಡ ಅಪರಾಧ. ಅಲ್ಲವೇ?

ಅಮೃತ್ ಶೆಣೈ

25 ವರ್ಷಗಳ ಹಿಂದೆ
ಬುಧವಾರ, 8-7-1998

• ಬೆಳೆ ಹಾನಿ ಪರಿಹಾರಕ್ಕೆ ಆಗ್ರಹಿಸಿ ರಾಜ್ಯಸಭೆ ವಿರೋಧಿ ಸಭಾತ್ಯಾಗ

ನವದೆಹಲಿ, ಜುಲೈ 7 (ಪಿಟಿಐ, ಯುಎನ್‌ಐ)– ಕೀಟದಿಂದಾದ ಬೆಳೆ ಹಾನಿಯನ್ನು ನೈಸರ್ಗಿಕ ವೈಪರೀತ್ಯವೆಂದು ಪರಿಗಣಿಸಿ ಪರಿಹಾರ ನೀಡಲಾಗುವುದು ಎಂದು ಸರ್ಕಾರ ಪ್ರಕಟಿಸಿತಾದರೂ ತೃಪ್ತರಾಗದ ರಾಜ್ಯಸಭೆ ಸದಸ್ಯರು ಇಂದು ಸಭಾತ್ಯಾಗ ಮಾಡಿದರು.

‘ಕೀಟಗಳಿಂದ ಬೆಳೆ ಹಾನಿಯಾದಲ್ಲಿ ಅದನ್ನು ನೈಸರ್ಗಿಕ ವಿಕೋಪವೆಂದು ಪರಿಗಣಿಸಲಾಗುವುದು. ಹಾನಿಗೊಳಗಾದ ರೈತರಿಗೆ ನೈಸರ್ಗಿಕ ವಿಕೋಪ ಪರಿಹಾರ ನಿಧಿ ಮತ್ತು ನೈಸರ್ಗಿಕ ವಿಕೋಪ ಪರಿಹಾರ ರಾಷ್ಟ್ರೀಯ ನಿಧಿ ನೆರವಿಗೆ ಬರುತ್ತವೆ’ ಎಂದು ಕೇಂದ್ರ ಕೃಷಿ ಖಾತೆಯ ರಾಜ್ಯ ಸಚಿವ ಸೋಮ್‌ಪಾಲ್ ಅವರು ರಾಜ್ಯಸಭೆಯ ಗಮನಕ್ಕೆ ತಂದರು.

‘ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಪಂಜಾಬ್ ರಾಜ್ಯಗಳಲ್ಲಿ ಬೆಳೆ ಹಾನಿಯಿಂದ ರೈತರ ಆತ್ಮಹತ್ಯೆ ಪ್ರಕರಣಗಳು ನಡೆದಿರುವ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ’ ಎಂದು ಅವರು ಹೇಳಿದರು.

• ಗಂಗೂಲಿ– ಸಚಿನ್ 252 ರನ್ ವಿಶ್ವದಾಖಲೆ ಜೊತೆಯಾಟ: ಭಾರತಕ್ಕೆ ಇಂಡಿಪೆಂಡೆನ್ಸ್ ಕಪ್

ಕೊಲಂಬೊ, ಜುಲೈ 7– ಪ್ರತಿಯೊಂದು ಹಂತದಲ್ಲಿ ಕ್ರಿಕೆಟ್ ಅಭಿಮಾನಿಗಳನ್ನು ತುದಿಗಾಲಲ್ಲಿ ನಿಲ್ಲುವಂತೆ ಮಾಡಿದ ಶ್ರೀಲಂಕಾ ವಿರುದ್ಧದ ‘ಇಂಡಿಪೆಂಡೆನ್ಸ್ ಕಪ್’ ಮೂರು ರಾಷ್ಟ್ರಗಳ ಕ್ರಿಕೆಟ್ ಟೂರ್ನಿ ಫೈನಲ್‌ನಲ್ಲಿ ಭಾರತವು ಮೂರು ಎಸೆತಗಳಿರುವಂತೆ ಆರು ರನ್‌ಗಳ ರೋಮಾಂಚಕ ಗೆಲುವು ಪಡೆಯಿತು.

50 ವರ್ಷಗಳ ಹಿಂದೆ
ಭಾನುವಾರ, 8-7-1973

• ಢಾಕಾದಲ್ಲಿ ಹಕ್ಸರ್ ಯಶಸ್ವಿ ಸಂಧಾನ: ಪಾಕ್ ಜತೆ ಚರ್ಚೆಯಲ್ಲಿ ಜಂಟಿ ತಂತ್ರಕ್ಕೆ ಭಾರತ– ಬಾಂಗ್ಲಾದೇಶ ಒಪ್ಪಂದ

ಢಾಕಾ, ಜುಲೈ 7– ಪಾಕಿಸ್ತಾನಿ ಯುದ್ಧ ಕೈದಿಗಳ ಶೀಘ್ರ ವಾಪಸಾತಿ ಮುಂತಾದ ಯುದ್ಧಾನಂತರದ ಸಮಸ್ಯೆಗಳ ತ್ವರಿತ ಇತ್ಯರ್ಥಕ್ಕಾಗಿ ಭಾರತ– ಪಾಕಿಸ್ತಾನಗಳ ನಡುವೆ ಇಷ್ಟರಲ್ಲಿಯೇ ನಡೆಯಲಿರುವ ಅಧಿಕಾರಿ ಮಟ್ಟದ ಮಾತುಕತೆಯಲ್ಲಿ ಅನುಸರಿಸಬೇಕಾದ ತಂತ್ರದ ಬಗ್ಗೆ ಭಾರತ–ಬಾಂಗ್ಲಾ ದೇಶಗಳು ಇಂದು ಒಪ್ಪಂದ ಮಾಡಿಕೊಂಡವು.

ಉಪಖಂಡದ ಸಮಸ್ಯೆಗಳ ಬಗ್ಗೆ ಭಾರತದ ಮುಖ್ಯ ಸಂಧಾನಕಾರ ಪಿ.ಎನ್. ಹಕ್ಸರ್ ಮತ್ತು ಬಾಂಗ್ಲಾ ವಿದೇಶಾಂಗ ಸಚಿವ ಡಾ. ಕಮಲ್ ಹುಸೇನ್ ಅವರ ನಡುವಣ ಉನ್ನತ ಮಟ್ಟದ ಮಾತುಕತೆ ಇಂದು ಸಂಜೆ ಕೊನೆಗೊಂಡಿತು.

ಎನ್‌ಐಆರ್‌ಎಫ್ ರ್‍ಯಾಂಕಿಂಗ್ ನಮಗೆ ತೋರಿಸುವುದು ಅರ್ಧಸತ್ಯ ಮಾತ್ರ

ಉನ್ನತ ಶಿಕ್ಷಣ: ರ್‍ಯಾಂಕಿಂಗ್‌ಗೆ ಇನ್ನೊಂದು ಮುಖ



ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ

ನಮ್ಮ ದೇಶದ ಉನ್ನತ ಶಿಕ್ಷಣ ಕ್ಷೇತ್ರದ ವಿದ್ಯಾಸಂಸ್ಥೆಗಳಿಗೆ ಇದು ಪ್ರವೇಶಾತಿ ಪ್ರಕ್ರಿಯೆಯ ಸಮಯ. ಕೆಲವು ಪ್ರಸಿದ್ಧ ಮತ್ತು ಪ್ರತಿಷ್ಠಿತ ಸಂಸ್ಥೆಗಳನ್ನು ಹೊರತುಪಡಿಸಿದರೆ ಉಳಿದವು ವಿದ್ಯಾರ್ಥಿಗಳನ್ನು ಆಕರ್ಷಿಸಲು ವರ್ಣರಂಜಿತ ಜಾಹೀರಾತುಗಳನ್ನು ಈ ಸಮಯದಲ್ಲಿ ನೀಡುವುದು ಸಾಮಾನ್ಯ. ಅಂತಹ ಜಾಹೀರಾತುಗಳಲ್ಲಿ ಆ ಸಂಸ್ಥೆಯ ರ್‍ಯಾಂಕಿಂಗ್ ಪ್ರಮುಖವಾಗಿ ಗೋಚರಿಸುತ್ತದೆ.

ದೇಶದಲ್ಲಿ ಮಾಧ್ಯಮ ಸಂಸ್ಥೆಗಳು, ಅಕಡೆಮಿಕ್ ಸಂಘಟನೆಗಳು, ಜಾಲತಾಣದಂತಹವು ರ್‍ಯಾಂಕಿಂಗ್ ನಿಗದಿಪಡಿಸುವ ಕೆಲಸವನ್ನು ಮಾಡುತ್ತಾ ಬಂದಿವೆ. ಆದರೆ ಈ ಬಾರಿಯ ಅನೇಕ ಜಾಹೀರಾತುಗಳಲ್ಲಿ, ಕೇಂದ್ರ ಸರ್ಕಾರದ ಶಿಕ್ಷಣ ಸಚಿವಾಲಯ ನೀಡುತ್ತಿರುವ ಎನ್‌ಐಆರ್‌ಎಫ್ ರ್‍ಯಾಂಕಿಂಗ್ ಎದ್ದು ಕಾಣುತ್ತಿರುವುದು ಒಂದು ವಿಶೇಷ.

ನ್ಯಾಷನಲ್ ಇನ್‌ಸ್ಟಿಟ್ಯೂಷನಲ್ ರ್‍ಯಾಂಕಿಂಗ್ ಫ್ರೇಮ್‌ವರ್ಕ್ (ಎನ್‌ಐಆರ್‌ಎಫ್) ಮೂಲಭೂತವಾಗಿ ದೇಶದ ಉನ್ನತ ಶಿಕ್ಷಣ ಸಂಸ್ಥೆಗಳನ್ನು ನಿರ್ದಿಷ್ಟ ಮಾನದಂಡಗಳ ಬಳಕೆಯಿಂದ ಮೌಲ್ಯಮಾಪನ ಮಾಡಿ, ಶ್ರೇಣೀಕರಿಸಿ, ಮೊದಲ 100 ರ್‍ಯಾಂಕ್‌ಗಳನ್ನು ನಿಗದಿಪಡಿಸುವ ಅನನ್ಯ ವಿಧಾನ. 2015ರಲ್ಲಿ ಕೇಂದ್ರ ಶಿಕ್ಷಣ ಸಚಿವಾಲಯ ರೂಪಿಸಿದ ಈ ವಿಧಾನದಲ್ಲಿ ಬೋಧನೆ- ಕಲಿಕೆ- ಸಂಪನ್ಮೂಲಗಳು, ಸಂಶೋಧನೆ- ವೃತ್ತಿಪರತೆ, ವ್ಯಾಸಂಗ ಮುಗಿಸಿ ಉದ್ಯೋಗ- ಉನ್ನತ ಶಿಕ್ಷಣಕ್ಕೆ ಪ್ರವೇಶಿಸುವ ಸಾಮರ್ಥ್ಯ, ಸಂಸ್ಥೆಯ ಔಟ್‌ರೀಚ್ ಚಟುವಟಿಕೆ ಮತ್ತು ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು, ಮಹಿಳೆಯರಿಗೆ ಒದಗಿಸುವ ವಿಶೇಷ ಅವಕಾಶಗಳು, ವಿದ್ವತ್ ವಲಯದಲ್ಲಿ ವಿದ್ಯಾಸಂಸ್ಥೆಗಿರುವ ಗೌರವ ಮತ್ತು ಮಾನ್ಯತೆಗಳನ್ನು ಐದು ಮುಖ್ಯ ಮಾನದಂಡಗಳಾಗಿ ಪರಿಗಣಿಸಲಾಗಿದೆ. ಅವುಗಳನ್ನು ಮತ್ತೆ ಉಪ ವಿಭಾಗಗಳಾಗಿ ವಿಂಗಡಿಸಿ, ಪ್ರತಿಯೊಂದಕ್ಕೂ ನಿರ್ದಿಷ್ಟ ‘ವೇಟೇಜ್’ ನೀಡಿ, ಒಟ್ಟು ನೂರು ಅಂಕಗಳಿಗೆ, ಸಂಸ್ಥೆ ಪಡೆದ ಅಂಕಗಳನ್ನು ಆಧರಿಸಿ, ರ್‍ಯಾಂಕಿಂಗ್ ನಿರ್ಧರಿಸಲಾಗುತ್ತದೆ. ಇದು, ಕ್ಲಿಷ್ಟಕರವಾದ ಸಂಕೀರ್ಣ ಪ್ರಕ್ರಿಯೆ.

2016ರಲ್ಲಿ ಮೊದಲ ಬಾರಿಗೆ ಪ್ರಕಟವಾದ ಎನ್‌ಐಆರ್‌ಎಫ್ ರ್‍ಯಾಂಕಿಂಗ್‌ನಲ್ಲಿ ವಿಶ್ವವಿದ್ಯಾಲಯ, ಎಂಜಿನಿಯರಿಂಗ್, ಮ್ಯಾನೇಜ್‌ಮೆಂಟ್ ಮತ್ತು ಫಾರ್ಮಸಿ ವಿಭಾಗಗಳ ಅಡಿಯಲ್ಲಿ ಮೌಲ್ಯಮಾಪನ ನಡೆಸಿ, ಸಂಸ್ಥೆಗಳ ರ್‍ಯಾಂಕಿಂಗ್ ಪಟ್ಟಿಯನ್ನು ಬಿಡುಗಡೆ ಮಾಡಲಾಯಿತು. ಕಳೆದ ತಿಂಗಳು ಬಿಡುಗಡೆಯಾದ ಎಂಟನೆಯ ವರ್ಷದ ಪಟ್ಟಿಯಲ್ಲಿ ಮೇಲಿನ ನಾಲ್ಕು ವಿಭಾಗಗಳ ಜೊತೆಗೆ ವೈದ್ಯಕೀಯ, ದಂತ, ಕಾನೂನು, ಕೃಷಿ, ವಾಸ್ತುಶಿಲ್ಪ (ಆರ್ಕಿಟೆಕ್ಚರ್), ಸಂಶೋಧನಾ ವಿಭಾಗಗಳ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಸೇರಿಸಲಾಗಿದೆ. ನಾವೀನ್ಯತೆ ಅಥವಾ ಇನ್ನೋವೇಶನ್‌ಗೆ ಹೆಸರಾದ ಸಂಸ್ಥೆಗಳು ಮತ್ತು ಎಲ್ಲ ದೃಷ್ಟಿಗಳಿಂದಲೂ ಒಟ್ಟಾರೆಯಾಗಿ ಉತ್ತಮವೆನಿಸುವ ಸಂಸ್ಥೆಗಳ ರ್‍ಯಾಂಕಿಂಗ್ ಪಟ್ಟಿಯೂ ಇದೆ. ದೇಶದ ಅತ್ಯುತ್ತಮ ಕಾಲೇಜುಗಳ ಶ್ರೇಣೀಕರಣ ಮಾಹಿತಿಯೂ ಇಲ್ಲಿದೆ. ವಿಶ್ವವಿದ್ಯಾಲಯಗಳ ವಿಭಾಗದಲ್ಲಿ ಭಾರತೀಯ ವಿಜ್ಞಾನ ಸಂಸ್ಥೆ ಮೊದಲ ಸ್ಥಾನದಲ್ಲಿದ್ದರೆ, ಸಮಗ್ರ ದೃಷ್ಟಿಯಿಂದ ಮದ್ರಾಸ್ ಐಐಟಿಗೆ ಪ್ರಥಮ ರ್‍ಯಾಂಕ್, ವೈದ್ಯಕೀಯದಲ್ಲಿ ದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಅಗ್ರ ಸ್ಥಾನ ಲಭಿಸಿದೆ. ಕಾಲೇಜುಗಳ ವರ್ಗದಲ್ಲಿ ದೆಹಲಿಯ ಮಿರಾಂಡ ಹೌಸ್‌ಗೆ ಮೊದಲ ರ್‍ಯಾಂಕ್ ದೊರೆತಿದೆ.

ವಸ್ತುನಿಷ್ಠ ವೈಜ್ಞಾನಿಕ ವಿಧಾನವನ್ನು ಅನುಸರಿಸಿ, ದೇಶದ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ರ್‍ಯಾಂಕಿಂಗ್ ನೀಡುವ ಕೇಂದ್ರ ಸರ್ಕಾರದ ಪ್ರಯತ್ನ ಶ್ಲಾಘನೀಯವೇನೋ ಹೌದು. ಉತ್ತಮ ರ್‍ಯಾಂಕ್ ಪಡೆದ ವಿದ್ಯಾಸಂಸ್ಥೆಗಳು ವಿದ್ಯಾರ್ಥಿಗಳನ್ನು ಸೆಳೆಯುವುದೂ ನಿಜ. ಈ ಕಾರಣಕ್ಕಾಗಿಯೇ ಎನ್‌ಐಆರ್‌ಎಫ್ ರ್‍ಯಾಂಕ್ ಪಡೆಯಲು ಬಯಸುವ ಉನ್ನತ ಶಿಕ್ಷಣ ಸಂಸ್ಥೆಗಳ ಸಂಖ್ಯೆಯು ವರ್ಷಗಳು ಕಳೆದಂತೆ ಹೆಚ್ಚುತ್ತಿದೆ. ಆದರೆ ಎನ್‌ಐಆರ್‌ಎಫ್ ರ್‍ಯಾಂಕಿಂಗ್‌ಗೆ ಮತ್ತೊಂದು ಮುಖವೂ ಇದೆ.

ಎನ್‌ಐಆರ್‌ಎಫ್ ರ್‍ಯಾಂಕಿಂಗ್, ಒಂದು ವಿದ್ಯಾಸಂಸ್ಥೆ ಮತ್ತೊಂದಕ್ಕಿಂತ ಉತ್ತಮವೇ ಅಥವಾ ಇಲ್ಲವೇ ಎಂಬುದನ್ನು ಸೂಚಿಸುವ ಹೋಲಿಕೆಯ ಸೂಚಿ. ವಿದ್ಯಾರ್ಥಿಗಳು ವ್ಯಾಸಂಗಕ್ಕೆ ಕಾಲೇಜುಗಳನ್ನು ಆಯ್ಕೆ ಮಾಡುವಾಗ ಈ ರ್‍ಯಾಂಕಿಂಗ್ ನೆರವಾಗುತ್ತದೆ. ಆದರೆ ಈ ಹೋಲಿಕೆಯನ್ನು ಪರಿಗಣಿಸದೇ, ಯಾವುದೇ ಒಂದು ವಿದ್ಯಾಸಂಸ್ಥೆ ತಾನಾಗಿಯೇ, ಸ್ವತಂತ್ರವಾಗಿ ಯಾವ ಮಟ್ಟದಲ್ಲಿದೆ, ಎಷ್ಟು ಸಮರ್ಥವಾಗಿದೆ ಎಂಬ ಮಾಹಿತಿ ಈ ರ್‍ಯಾಂಕಿಂಗ್‌ನಿಂದ ತಿಳಿಯುವುದಿಲ್ಲ. ಅದನ್ನು ತಿಳಿಯಬೇಕಾದರೆ, ಆ ಸಂಸ್ಥೆಗೆ ದೊರೆತಿರುವ ‘ನಿರಪೇಕ್ಷ ಅಂಕ’ವನ್ನು (ಆ್ಯಬ್ಸಲ್ಯೂಟ್ ಸ್ಕೋರ್) ಹುಡುಕಿ ತೆಗೆದು ಪರಿಶೀಲಿಸಬೇಕು. ಈ ಅಂಕವನ್ನು ಯಾವ ಸಂಸ್ಥೆಯೂ ಜಾಹೀರಾತಿನಲ್ಲಿ ಪ್ರಕಟಿಸುವುದಿಲ್ಲ. ಎನ್‌ಐಆರ್‌ಎಫ್ ರ್‍ಯಾಂಕಿಂಗ್ ನಮಗೆ ತೋರಿಸುವುದು ಅರ್ಧಸತ್ಯ ಮಾತ್ರ.

ಕೇಂದ್ರ ಸರ್ಕಾರ ಜೂನ್ 5ರಂದು ಪ್ರಕಟಿಸಿದ ಎನ್‌ಐಆರ್‌ಎಫ್ ರ್‍ಯಾಂಕಿಂಗ್‌ನಲ್ಲಿ 13 ಶೈಕ್ಷಣಿಕ ಶಿಸ್ತಿಗೆ ಸಂಬಂಧಿಸಿದಂತೆ, ಪ್ರತಿಯೊಂದರಲ್ಲೂ 100 ಉನ್ನತ ಶಿಕ್ಷಣ ಸಂಸ್ಥೆಗಳ ವಿವರಗಳಿವೆ. ಅವು ಪಡೆದಿರುವ ರ್‍ಯಾಂಕ್‌ಗಳ ಜೊತೆಗೆ ನಿರಪೇಕ್ಷ ಅಂಕಗಳ ವಿವರ ಹುಡುಕ ಹೊರಟರೆ ದೊರೆಯುತ್ತದೆ. ಉದಾಹರಣೆಗೆ, ವಿಶ್ವವಿದ್ಯಾಲಯಗಳ ವಿಭಾಗದಲ್ಲಿ ಮೊದಲನೆಯ ಸ್ಥಾನ ಪಡೆದಿರುವ ಭಾರತೀಯ ವಿಜ್ಞಾನ ಸಂಸ್ಥೆಗೆ ದೊರೆತಿರುವ ಅಂಕ 83.16. ಎರಡು ಮತ್ತು ಮೂರನೆಯ ಸ್ಥಾನದಲ್ಲಿರುವ ಜೆಎನ್‌ಯು, ಜಾಮಿಯಾ ಮಿಲಿಯಾ ಇಸ್ಲಾಮಿಯಾಗೆ ದೊರೆತಿರುವ ಅಂಕ 68.92 ಮತ್ತು 67.73. ಕೇಂದ್ರ ಸರ್ಕಾರದ ಶಿಕ್ಷಣ ಸಚಿವಾಲಯದ ಮೂಲದಂತೆ, ದೇಶದಲ್ಲಿ ಸುಮಾರು 56,000 ಉನ್ನತ ಶಿಕ್ಷಣ ಸಂಸ್ಥೆಗಳಿವೆ. ಇವುಗಳಲ್ಲಿ 2023ರ ಎನ್‌ಐಆರ್‌ಎಫ್ ರ್‍ಯಾಂಕಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಿದವುಗಳ ಸಂಖ್ಯೆ 5,550. ಇವುಗಳಲ್ಲಿ ಶೇ 75ರಷ್ಟು ಸಂಸ್ಥೆಗಳಿಗೆ 60ಕ್ಕಿಂತ ಕಡಿಮೆ ಅಂಕ ಬಂದಿದೆ! ವಿಪರ್ಯಾಸವೆಂದರೆ, ಶೇ 50ಕ್ಕಿಂತ ಕಡಿಮೆ ನಿರಪೇಕ್ಷ ಅಂಕ ಪಡೆದ ಸಂಸ್ಥೆಗಳೂ ಮೊದಲ 100 ರ್‍ಯಾಂಕ್ ಪಟ್ಟಿಯಲ್ಲಿರುವುದು! ಒಂದು ಸಂಸ್ಥೆಗೆ ಒಟ್ಟಾರೆಯಾಗಿ 50 ಅಂಕ ಲಭಿಸಿದ್ದರೆ, ಮೌಲ್ಯಮಾಪನಕ್ಕೆ ಬಳಸಿದ 13 ವಿವಿಧ ಮಾನದಂಡಗಳಲ್ಲಿ ಒಟ್ಟಾರೆಯಾಗಿ ಶೇ 50ರಷ್ಟು ಕೊರತೆಯಿದೆ ಎಂದಾಯಿತು!

ರ್‍ಯಾಂಕಿಂಗ್ ಮೌಲ್ಯಮಾಪನದಲ್ಲಿ ಭಾಗವಹಿಸಿದ ಉನ್ನತ ವಿದ್ಯಾಸಂಸ್ಥೆಗಳಲ್ಲಿ 24ಕ್ಕೆ ಮಾತ್ರ 75ಕ್ಕಿಂತ ಹೆಚ್ಚಿನ ಅಂಕ ಬಂದಿದೆ. ಇವುಗಳಲ್ಲಿ ದೆಹಲಿ, ಕರ್ನಾಟಕ, ತಮಿಳುನಾಡಿನಲ್ಲಿ ತಲಾ ನಾಲ್ಕು, ಕೇರಳ, ಪಶ್ಚಿಮ ಬಂಗಾಳ, ಮಹಾರಾಷ್ಟ್ರದಲ್ಲಿ ತಲಾ ಎರಡು, ಚಂಡೀಗಢ, ಉತ್ತರಪ್ರದೇಶ, ರಾಜಸ್ಥಾನ, ತೆಲಂಗಾಣ ಮತ್ತು ಗುಜರಾತ್‌ನಲ್ಲಿ ತಲಾ ಒಂದು ಸಂಸ್ಥೆಗಳಿವೆ. ದೇಶದಲ್ಲಿ ಇನ್‌ಸ್ಟಿಟ್ಯೂಟ್ಸ್ ಆಫ್ ನ್ಯಾಷನಲ್ ಇಂಪಾರ್ಟೆನ್ಸ್ ಪಟ್ಟಿಯಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇನ್‌ಫರ್ಮೇಶನ್ ಟೆಕ್ನಾಲಜಿ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಕೇಂದ್ರೀಯ ವಿಶ್ವವಿದ್ಯಾಲಯ ಮುಂತಾದವುಗಳಲ್ಲಿ ಅನೇಕವು 75ಕ್ಕಿಂತ ಹೆಚ್ಚಿನ ಅಂಕವನ್ನು ಪಡೆದಿಲ್ಲ.

ಎನ್‌ಐಆರ್‌ಎಫ್ ಪ್ರಕಟಿಸಿರುವ ದತ್ತಾಂಶವನ್ನು, ಅದರಲ್ಲೂ ಮುಖ್ಯವಾಗಿ ವಿವಿಧ ಮಾನದಂಡಗಳಿಗೆ ಉನ್ನತ ಶಿಕ್ಷಣ ಸಂಸ್ಥೆಗಳು ಪಡೆದಿರುವ ಅಂಕಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ದೇಶದ ಒಟ್ಟಾರೆ ಉನ್ನತ ಶಿಕ್ಷಣ ಕ್ಷೇತ್ರದ ಕಳವಳಕಾರಿ ಪರಿಸ್ಥಿತಿಯ ಪರಿಚಯವಾಗುತ್ತದೆ. ಬೋಧನೆಯ ಗುಣಮಟ್ಟ, ಪ್ರಾಧ್ಯಾಪಕರ ಅರ್ಹತೆ, ಸಂಶೋಧನಾ ಸಾಮರ್ಥ್ಯ, ಮೂಲ ಸೌಕರ್ಯಗಳು, ಹೊಸತನವನ್ನು ಉತ್ತೇಜಿಸಿ, ಪೋಷಿಸಬಲ್ಲ ಪರಿಸರದಂತಹವುಗಳಿಗೆ ಸಂಬಂಧಿಸಿದಂತೆ ಇರುವ ತೀವ್ರ ಕೊರತೆ ಎದ್ದು ಕಾಣುತ್ತದೆ. ಇದು 2023ರ ಎನ್‌ಐಆರ್‌ಎಫ್ ಪ್ರಕ್ರಿಯೆಯಲ್ಲಿ ಭಾಗವಹಿಸಿದ 5,550 ಉನ್ನತ ಶಿಕ್ಷಣ ಸಂಸ್ಥೆಗಳಿಂದ ದೊರೆತ ಮಾಹಿತಿ. ಇದನ್ನು ಹೊರತುಪಡಿಸಿ ಸುಮಾರು 50,000 ಉನ್ನತ ಶಿಕ್ಷಣ ಸಂಸ್ಥೆಗಳಿವೆ! ಅವುಗಳಲ್ಲಿನ ಪರಿಸ್ಥಿತಿ ಇದಕ್ಕಿಂತ ಉತ್ತಮವಾಗಿರುವ ಸಾಧ್ಯತೆ ಬಹು ಕಡಿಮೆ.

2023ರ ಎನ್‌ಐಆರ್‌ಎಫ್ ಮೌಲ್ಯಮಾಪನದಿಂದ ದೊರೆತಿರುವ ವಿಶ್ವಾಸಾರ್ಹವಾದ ಮಾಹಿತಿ, ನಿರಾಶಾದಾಯಕವಾಗಿರುವ ಉನ್ನತ ಶಿಕ್ಷಣ ಕ್ಷೇತ್ರದ ಪರಿಸ್ಥಿತಿಯನ್ನು ನಿಭಾಯಿಸಲು, ಬದಲಿಸಲು ಮಾರ್ಗದರ್ಶಿ ಆಗಬೇಕೆಂಬುದು ಪರಿಣತರ ಅಭಿಪ್ರಾಯ.

ವಿದ್ಯಾರ್ಥಿಗಳು ಶೈಕ್ಷಣಿಕ ಸಂಸ್ಥೆಗಳ ರ್‍ಯಾಂಕಿಂಗ್ ಗಮನಿಸಲಿ. ಸಂಸ್ಥೆಗಳ ಆಡಳಿತ ವರ್ಗವು ಸಂಸ್ಥೆಗೆ ದೊರೆತಿರುವ ಸ್ಥಾನವನ್ನು ಪ್ರವೇಶಾತಿ ಹೆಚ್ಚಿಸಲು ಸಹ ಬಳಸಲಿ. ಅದರಲ್ಲಿ ಅಂತಹ ತಪ್ಪೇನಿಲ್ಲ. ಆದರೆ ಅವುಗಳ ಜೊತೆಗೆ ಸಂಸ್ಥೆಗೆ ದೊರೆತಿರುವ ನಿರಪೇಕ್ಷ ಅಂಕ ಸೂಚಿಸುವ ಕೊರತೆಯನ್ನು ತುಂಬುವ ದಿಕ್ಕಿನಲ್ಲೂ ಪ್ರಾಮಾಣಿಕ ಪ್ರಯತ್ನ ತೀರಾ ಅಗತ್ಯ.



ಚುರುಮುರಿ



ಬಜೆಟ್ ಕಿ ಬಾತ್

• ಮಣ್ಣೆರಾಜು

‘ಹೆಚ್ಚು ಬಾರಿ ಬಜೆಟ್ ಮಂಡಿಸಿದ ಹೆಚ್ಚುಗಾರಿಕೆ ಸಿದ್ದರಾಮಯ್ಯನವರಿಗೆ ಸಂದಿದೆ. ಗ್ಯಾರಂಟಿ ಯೋಜನೆಗಳನ್ನು ಬಿಟ್ಟ ಭಾಗ್ಯಗಳೆಂದು ಟೀಕಿಸುವವರಿಗೆ ಬಡವರ ಬದುಕಿನ ಕಥೆ ಹೇಳಿ, ಕವನ ಹೇಳಿ ಹೊಸ ಬಜೆಟ್ ಉಣಬಡಿಸಿದರು...’ ಸುಮಿ ಹೇಳಿದಳು.

‘ಬಿಟ್ಟ ಭಾಗ್ಯಗಳಿಂದ ಸರ್ಕಾರದ ಎಕನಾಮಿಕ್ಸ್ ಏರುಪೇರಾಗುತ್ತದೆ ಅಂತ ವಿಪಕ್ಷಗಳು ಟೀಕೆ ಮಾಡಿವೆ’ ಅಂದ ಶಂಕ್ರಿ.

‘ಎಕನಾಮಿಕ್ಸ್‌ನಲ್ಲಿ ರಾಜಕಾರಣ ಮಿಕ್ಸ್ ಮಾಡುವ ವಿಪಕ್ಷದವರ ಟೀಕೆಗೆ ಕಿವಿಗೊಡಬೇಡಿ ಎಂದು ಜನರಿಗೆ ಸಿ.ಎಂ ಮನವಿ ಮಾಡಿದರು. ಈ ಬಜೆಟ್ ಯುಗಾದಿ ಒಬ್ಬಟ್ಟು ಅಂತ ಆಡಳಿತ ಪಕ್ಷದವರು ಬಾಯಿ ಚಪ್ಪರಿಸಿ ಸಂಭ್ರಮಿಸಿದ್ದಾರೆ’.

‘ಒಬ್ಬಟ್ಟಲ್ಲ, ಉಪ್ಪು, ಹುಳಿ, ಖಾರ ಇಲ್ಲದ ಸಪ್ಪೆ ಉಪ್ಪಿಟ್ಟು ಎಂದು ಪ್ರತಿಪಕ್ಷದವರು ಮುಖ ಕಿವುಚಿದ್ದಾರೆ’.

‘ಸೊಸೆಯ ಅಡುಗೆಗೆ ಕೊಂಕು ತೆಗೆಯುವ ಅತ್ತೆ ಇದ್ದಂತೆ ವಿರೋಧ ಪಕ್ಷದವರು. ತಪ್ಪು ಹುಡುಕಿ ಟೀಕಿಸುವುದೇ ಅವರ ಸ್ವಭಾವವಂತೆ’.

‘ಸೊಸೆ ಮಾಡಿದ್ದನ್ನೆಲ್ಲಾ ಪ್ರಶ್ನೆ ಮಾಡದೆ ಸುಮ್ಮನೆ ಒಪ್ಪಿಕೊಂಡರೆ ಅತ್ತೆಯ ಕಿಮ್ಮತ್ತು ಕಮ್ಮಿಯಾಗಲ್ವಾ?’

‘ಸರ್ವಜನರೂ ಸವಿಯುವ ಸಮಪಾಲು- ಸಮಬಾಳು ಬಜೆಟ್. ನಾಡಿನ ಸರ್ವತೋಮುಖ ಬೆಳವಣಿಗೆಗೆ ಪೂರಕವಾದ ಆರೋಗ್ಯಕರ ಬಜೆಟ್ ಎಂಬುದು ಆಡಳಿತ ಪಕ್ಷದವರ ಬಣ್ಣನೆ’.

‘ಸರ್ವಜನರ ಸದಭಿರುಚಿಯ ಬಜೆಟ್ ಇದಲ್ಲ. ಅಶಕ್ತರಿಗೆ, ಅಸಹಾಯಕರಿಗೆ ಶಕ್ತಿ ತುಂಬುವ ಪೌಷ್ಟಿಕಾಂಶಗಳು ಬಜೆಟ್‌ನಲ್ಲಿ ಇಲ್ಲ. ಅಗೆದರೆ ಸವೆಯುವುದಿಲ್ಲ, ನುಂಗಲು ಇಳಿಯುವುದಿಲ್ಲ, ನುಂಗಿದರೂ ಜೀರ್ಣವಾಗುವುದಿಲ್ಲ. ಬೆಲೆ ಏರಿಕೆ ಬಾಧೆಯ ಜನರಿಗೆ ಬಜೆಟ್ ಅನ್ನು ಅರಗಿಸಿಕೊಳ್ಳಲಾಗದು ಎಂಬುದು ಪ್ರತಿಪಕ್ಷದ ಆಕ್ಷೇಪ’.

‘ರಾಜಕೀಯ ಪಕ್ಷಗಳ ನಾಲಿಗೆರುಚಿ ಹೇಗೇ ಇರಲಿ, ನಮಗೆ ಈ ಬಜೆಟ್ ರುಚಿಕಟ್ಟಾಗಿದೆಯೇನ್ರೀ?’

‘ಮಾಡಿದ್ದುಣ್ಣೋ ಮಹರಾಯ ಎನ್ನುವಂತೆ ಸರ್ಕಾರ ಬಡಿಸಿದ ಬಜೆಟ್ ಸ್ವೀಕರಿಸಿ, ಸವಿಯಾಗಿದೆ ಎಂದುಕೊಂಡು ನಾವು ಸಂತಸಪಡಬೇಕಷ್ಟೇ...’ ಎಂದ ಶಂಕ್ರಿ.

ಸಂಗತ

ರಾಜ್ಯ, ರಾಜ್ಯಪಾಲರು ಮತ್ತು ಅಂಕುಶ

ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳನ್ನು ನಿಯಂತ್ರಿಸಲು ರಾಜ್ಯಪಾಲರನ್ನು ಅಂಕುಶದಂತೆ ಬಳಸುವ ಪರಿಪಾಟ ಹೆಚ್ಚುತ್ತಿರುವುದು ಕಳವಳಕಾರಿ

• ಕೆ.ದಿವಾಕರ


ದೇಶದಲ್ಲಿ ಕೇಂದ್ರ- ರಾಜ್ಯಗಳ ನಡುವಿನ ಸಂಬಂಧವು ಸದಾ ಒಂದಲ್ಲ ಒಂದು ವಿವಾದವನ್ನು ಸೃಷ್ಟಿಸುತ್ತಲೇ ಇರುತ್ತದೆ. ಸಂವಿಧಾನದ ಒಂದನೇ ವಿಧಿಯ ಪ್ರಕಾರ, ಭಾರತವು ರಾಜ್ಯಗಳ ಒಕ್ಕೂಟ. ಆದರೆ, ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರವು ಹಿರಿಯಣ್ಣನಂತೆ ವರ್ತಿಸುತ್ತಾ ಕೆಲವು ಬಾರಿ ಜನತಂತ್ರದ ಅತಿರೇಕಕ್ಕೆ ಕಾರಣವಾದ ನಿದರ್ಶನಗಳು ಇವೆ. ರಾಜ್ಯಗಳಲ್ಲಿನ ಚುನಾಯಿತ ಸರ್ಕಾರಗಳನ್ನು, ವಿಧಿ 356ರ ಅನ್ವಯ ಅನೇಕ ಬಾರಿ ವಜಾಗೊಳಿಸಿ ರಾಷ್ಟ್ರಪತಿ ಆಳ್ವಿಕೆ ಹೇರಿದೆ. ಪಕ್ಷ ರಾಜಕಾರಣದ ಮೇಲಾಟದ ಭಾಗವಾಗಿ ಇಂಥ ಕ್ರಮಗಳು ಆಗಿವೆ. ಆದರೆ 1994ರಲ್ಲಿ ಬೊಮ್ಮಾಯಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪು, ಇಂತಹ ವಜಾ ಕ್ರಮಗಳನ್ನು ಕೇಂದ್ರವು ಮನಸೋಇಚ್ಛೆ ಕೈಗೊಳ್ಳದಂತೆ ಮಾಡುವಲ್ಲಿ ಯಶಸ್ವಿಯಾಗಿದೆ.

ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳನ್ನು ನಿಯಂತ್ರಿಸಲು ಬಳಸುವ ಪ್ರಧಾನ ಅಂಕುಶವೆಂದರೆ ರಾಜ್ಯಪಾಲರು. ರಾಜ್ಯಪಾಲರನ್ನು ನೇಮಿಸುವುದಕ್ಕೆ ಮೊದಲು ಕೇಂದ್ರವು ರಾಜ್ಯಗಳೊಡನೆ ಸಮಾಲೋಚಿಸಬೇಕು ಎಂಬ ಅಲಿಖಿತ ಸಂಪ್ರದಾಯ ಇದೆ. ಆದರೆ ಇದು, ಆಯಾ ರಾಜ್ಯದ ಮುಖ್ಯಮಂತ್ರಿಗೆ ನೀಡುವ ಮಾಹಿತಿಯ ರೂಪದಲ್ಲಿ ಇರುತ್ತದೆಯೇ ವಿನಾ ಮುಖ್ಯಮಂತ್ರಿಯ ಸಮ್ಮತಿ ಪಡೆಯುವ ರೂಪದಲ್ಲಿ ಇರುವುದಿಲ್ಲ.

ತಮಿಳುನಾಡಿನ ರಾಜ್ಯಪಾಲ ಆರ್.ಎನ್. ರವಿ ಅವರು ಅಲ್ಲಿನ ಸಚಿವ ಸೆಂಥಿಲ್ ಬಾಲಾಜಿ ಅವರನ್ನು ಸಂಪುಟದಿಂದ ವಜಾ ಮಾಡಿ, ಆನಂತರ ಕೆಲವೇ ತಾಸುಗಳಲ್ಲಿ ಆ ಆದೇಶವನ್ನು ಹಿಂದಕ್ಕೆ ಪಡೆದ ಪ್ರಕರಣವು ರಾಜ್ಯಪಾಲರು ದಾಳವಾಗಿ ಬಳಕೆಯಾದುದರ ಇತ್ತೀಚಿನ ನಿದರ್ಶನ. ಮುಖ್ಯಮಂತ್ರಿಯ ಸಲಹೆ ಮೇರೆಗೆ ರಾಜ್ಯಪಾಲರು ಸಚಿವರನ್ನು ನೇಮಿಸಬೇಕೆಂಬ ಸಂಪ್ರದಾಯದಂತೆಯೇ ಸಚಿವರನ್ನು ವಜಾ ಮಾಡುವುದಕ್ಕೂ ಇದೇ ಮಾರ್ಗವನ್ನುಅನುಸರಿಸಬೇಕು.ಆದರೆಈಪ್ರಕರಣದಲ್ಲಿ ಮುಖ್ಯಮಂತ್ರಿಯವರ ಸಲಹೆ ಇಲ್ಲದೆ ರಾಜ್ಯಪಾಲರು ಸ್ವತಃ ವಜಾ ಆದೇಶ ಹೊರಡಿಸಿದ್ದರು. ವಜಾ ಆದೇಶವನ್ನು ಕೇಂದ್ರ ಗೃಹ ಸಚಿವರ ಸಲಹೆಯಂತೆ ಅಮಾನತಿನಲ್ಲಿ ಇರಿಸಲಾಗಿದೆ. ತಮ್ಮ ಆದೇಶದ ಸಾಧಕ– ಬಾಧಕಗಳ ಕುರಿತು ಅಟಾರ್ನಿ ಜನರಲ್ ಅವರೊಡನೆ ಸಮಾಲೋಚನೆ ನಡೆಸುವುದಾಗಿ ರಾಜ್ಯಪಾಲರು ತಿಳಿಸಿದ್ದಾರೆ. ಇವೆಲ್ಲವೂ ಕೇಂದ್ರ- ರಾಜ್ಯ ಸಂಬಂಧಕ್ಕೆ ಸಂಬಂಧಿಸಿದಂತೆ ಮತ್ತೊಂದು ಹೊಸ ವಿವಾದಕ್ಕೆ ನಾಂದಿ ಹಾಡಿವೆ. ರಾಜ್ಯಪಾಲರ ತೀರ್ಮಾನವು ಸಂವಿಧಾನಕ್ಕೆ ವಿರುದ್ಧವಾದ ಹಾಗೂ ಒಂದು ಅತಿರೇಕದ ನಡೆಯಂತೆ ಕಾಣುತ್ತದೆ. ಸಚಿವರೊಬ್ಬರನ್ನು ವಜಾಗೊಳಿಸುವ ಅಧಿಕಾರವು ರಾಜ್ಯಪಾಲರಿಗೆ ಇಲ್ಲ ಎಂಬುದು ಸಂವಿಧಾನದ ಸ್ಪಷ್ಟೋಕ್ತಿ.

ಮುಖ್ಯಮಂತ್ರಿ ನೇತೃತ್ವದ ಸಚಿವ ಸಂಪುಟದ ನೆರವು ಮತ್ತು ಸಲಹೆಯ ಅನ್ವಯ ರಾಜ್ಯಪಾಲರು ಕಾರ್ಯನಿರ್ವಹಿಸಬೇಕು. ಆದರೆ, ಬಾಲಾಜಿ ಅವರ ವಿಚಾರದಲ್ಲಿ ರಾಜ್ಯಪಾಲರ ಕ್ರಮ ಏಕಪಕ್ಷೀಯ ಹಾಗೂ ಸಂವಿಧಾನದ ಆಶಯಗಳಿಗೆ ವ್ಯತಿರಿಕ್ತವಾದುದು.

ರಾಜ್ಯಪಾಲರಿಗೆ ಕೆಲವು ವಿಚಾರಗಳಲ್ಲಿ ವಿವೇಚನಾ ಅಧಿಕಾರ ಇರುತ್ತದೆ. ಆದರೆ ಅದನ್ನು ಬಳಸುವುದಕ್ಕೆ ಕೆಲವು ಪ್ರಕ್ರಿಯೆಗಳು ಇರುತ್ತವೆ. ಉದಾಹರಣೆಗೆ, ನ್ಯಾಯಾಲಯದಲ್ಲಿ ಶಿಕ್ಷೆಗೆ ಒಳಗಾದವರಿಗೆ ಶಿಕ್ಷೆಯಿಂದ ವಿನಾಯಿತಿ ನೀಡುವುದು ಹಾಗೂ ವಿಶ್ವವಿದ್ಯಾಲಯಗಳ ಕುಲಪತಿಗಳ ನೇಮಕದಂತಹವು ವಿವೇಚನಾ ಅಧಿಕಾರದ ವ್ಯಾಪ್ತಿಗೆ ಒಳಪಡುತ್ತವೆ. ಆದರೆ, ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ ವಿಶ್ವವಿದ್ಯಾಲಯಗಳಲ್ಲಿ ರಾಜ್ಯಪಾಲರ ಮಧ್ಯಪ್ರವೇಶವನ್ನು ತಡೆಯಲು ಇತ್ತೀಚೆಗೆ ಕಾನೂನಿಗೆ ಬದಲಾವಣೆ ತರಲಾಗಿದೆ. ಈ ಬೆಳವಣಿಗೆಗೆ ಕಾರಣವಾಗಿರುವುದು ರಾಜ್ಯ ಸರ್ಕಾರ ಮತ್ತು ರಾಜ್ಯಪಾಲರ ನಡುವಣ ಸಂಘರ್ಷವೇ ಆಗಿದೆ. ಹಾಗೆಯೇ ವಿಧಾನಮಂಡಲದ ಅನುಮೋದನೆ ಪಡೆದ ಕೆಲವು ಮಸೂದೆಗಳಿಗೆ ರಾಜ್ಯಪಾಲರು ಸಹಿ ಹಾಕದೇ ಇರುವುದರಿಂದ ಅವು ತ್ರಿಶಂಕು ಸ್ಥಿತಿಯಲ್ಲಿ ಇರುವಂಥ ಪರಿಸ್ಥಿತಿ ನಿರ್ಮಾಣವಾಗಿದೆ.



ಕೇಂದ್ರೀಯ ತನಿಖಾ ಸಂಸ್ಥೆಗಳ ವಿಶ್ವಾಸಾರ್ಹತೆಯನ್ನು ವಿರೋಧ ಪಕ್ಷಗಳು ಅನೇಕ ಸಂದರ್ಭಗಳಲ್ಲಿ ರಾಜಕೀಯ ಪ್ರತೀಕಾರದ ಕ್ರಮ ಎಂದು ವ್ಯಾಖ್ಯಾನಿಸಿವೆ. ದೆಹಲಿಯಲ್ಲಿ ಅರವಿಂದ ಕೇಜ್ರಿವಾಲ್ ನೇತೃತ್ವದ ಸರ್ಕಾರದಲ್ಲಿ ಸಚಿವರಾಗಿದ್ದ ಸತ್ಯೇಂದ್ರ ಜೈನ್ ಅವರು ಬಂಧನದ ನಂತರವೂ ಆರು ತಿಂಗಳು ಸಚಿವರಾಗಿ ಮುಂದುವರಿದಿದ್ದ ನಿದರ್ಶನ ಇದೆ. ಮತ್ತೊಂದೆಡೆ, ತಮಿಳುನಾಡಿನಲ್ಲಿ ಬಾಲಾಜಿ ಅವರನ್ನು ರಾಜ್ಯಪಾಲರು ವಜಾಗೊಳಿಸಿದ ಏಕಪಕ್ಷೀಯ ನಡೆ ನಮ್ಮ ಎದುರು ಇದೆ.

ಇಪ್ಪತ್ನಾಲ್ಕು ಗಂಟೆ ಬಂಧನಕ್ಕೆ ಒಳಗಾಗುವ ಸರ್ಕಾರಿ ನೌಕರರನ್ನು ನಾಗರಿಕ ಸೇವಾ ನಿಯಮಗಳ ಅಡಿಯಲ್ಲಿ ಅಮಾನತಿನಲ್ಲಿ ಇರಿಸಬೇಕಾಗುತ್ತದೆ. ಸಂಸದರು, ಶಾಸಕರು ಕನಿಷ್ಠ ಎರಡು ವರ್ಷ ಶಿಕ್ಷೆಗೆ ಒಳಗಾದರೆ, ಸದಸ್ಯ ಸ್ಥಾನವನ್ನೇ ಕಳೆದುಕೊಳ್ಳುತ್ತಾರೆ. ಇದಕ್ಕೆ ರಾಹುಲ್ ಗಾಂಧಿ ಪ್ರಕರಣವೇ ಇತ್ತೀಚಿನ ನಿದರ್ಶನ. ಹೀಗಿರುವಾಗ, ಕ್ರಿಮಿನಲ್ ಪ್ರಕರಣಗಳಲ್ಲಿ ಬಂಧಿತರಾಗಿರುವ ಸಚಿವರ ಸ್ಥಾನದ ಸ್ಥಿತಿ ಏನು? ಇವರು ಜೈಲಿನಿಂದಲೇ ಕಾರ್ಯನಿರ್ವಹಣೆ ಮಾಡಬಹುದೇ? ಮುಖ್ಯಮಂತ್ರಿಯಿಂದ ಸಲಹೆ ಪಡೆಯದೇ ಕ್ರಮಕ್ಕೆ ಮುಂದಾದ ರಾಜ್ಯಪಾಲರ ನಡೆ, ಭವಿಷ್ಯದಲ್ಲಿ ಅನೇಕ ಅಪಾಯಗಳನ್ನು ಸೃಷ್ಟಿಸುವ ಸಾಧ್ಯತೆ ಇದೆ.

ಲೇಖಕ: ಹೈಕೋರ್ಟ್‌ನ ಹಿರಿಯ ವಕೀಲ

ವಾಚಕರ ವಾಣಿ

ವರ್ಗಾವಣೆಗೆ ಹೆದರುವುದೇಕೆ?

ಮಂಡ್ಯ ಜಿಲ್ಲೆಯ ನಾಗಮಂಗಲ ಕೆಎಸ್‌ಆರ್‌ಟಿಸಿ ಬಸ್ ಡಿಪೊ ಚಾಲಕ ಜಗದೀಶ್ ಅವರು ತಮ್ಮನ್ನು ಮದ್ದೂರಿಗೆ ವರ್ಗಾವಣೆ ಮಾಡಿದ್ದರಿಂದ ಮನನೊಂದು ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದಾರೆ ಎನ್ನಲಾದ ಸುದ್ದಿ ವಿಧಾನಸಭೆಯಲ್ಲಿ ಕೋಲಾಹಲಕ್ಕೆ ಕಾರಣವಾಗಿದೆ. ಈ ವಿಷಯವಾಗಿ ಇಬ್ಬರು ನಾಯಕರು ಏಕವಚನದಲ್ಲಿ ವೈಯಕ್ತಿಕ ನಿಂದನೆಗೆ ಇಳಿದಿದ್ದು ದುರಂತ. ಜನಪ್ರತಿನಿಧಿಗಳ ದೃಷ್ಟಿಯಲ್ಲಿ ಸದನವು ಬರೀ ವೈಯಕ್ತಿಕ ಕೆಸರೆರಚಾಟ ಮಾಡಲು ಇದ್ದಂತಿದೆ. ಕೋಟ್ಯಂತರ ಜನ ತಮ್ಮನ್ನು ಗಮನಿಸುತ್ತಿದ್ದಾರೆ ಎಂಬ ಸಣ್ಣ ಅರಿವೂ ಇಲ್ಲದಂತೆ ಜಗಳವಾಡುವುದು ದುರದೃಷ್ಟಕರ. ವರ್ಗಾವಣೆ ಎಂಬುದು ಸರ್ಕಾರಿ ನೌಕರರಿಗೆ ಸಾಮಾನ್ಯ ಪ್ರಕ್ರಿಯೆ. ನಿವೃತ್ತಿಯವರೆಗೂ ಒಂದೇ ಕಡೆ ಇರಬೇಕೆಂದು ಬಯಸುವುದು ತಪ್ಪು. ಪ್ರಾಣ ಕಳೆದುಕೊಂಡು ಸಾಧಿಸುವುದಾದರೂ ಏನು? ಕೆಟ್ಟ ಆಲೋಚನೆ ಬಂದಾಗ ಜಗದೀಶ್ ಅವರು ತಮ್ಮ ಸಂಸಾರವನ್ನು ನೆನೆಸಿಕೊಂಡಿದ್ದರೆ, ಇಂತಹ ಪ್ರಯತ್ನಕ್ಕೆ ಅವರು ಕೈಹಾಕುತ್ತಿರಲಿಲ್ಲವೇನೊ.

ಮಲ್ಲತಹಳ್ಳಿ ಡಾ. ಎಚ್.ತುಕಾರಾಂ, ಬೆಂಗಳೂರು

ಇ– ಕಾಮರ್ಸ್: ವಿಮೆ ಸ್ವಾಗತಾರ್ಹ

ಅಮೆಜಾನ್, ಸ್ವಿಗ್ಗಿ, ಜೊಮಾಟೊ, ಫ್ಲಿಪ್‌ಕಾರ್ಟ್‌ನಂತಹ ಇ– ಕಾಮರ್ಸ್ ಸಂಸ್ಥೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಜೀವವಿಮೆ ಹಾಗೂ ಅಪಘಾತ ವಿಮೆಯನ್ನು ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಘೋಷಿಸಿರುವುದು ಬಹಳ ಉತ್ತಮವಾದ ಕಾರ್ಯ. ಏಕೆಂದರೆ, ಗ್ರಾಹಕರ ಒತ್ತಾಯದ ಮೇರೆಗೆ ಅವರು ಆಹಾರ ಸರಬರಾಜು ಮಾಡಲು ಅವಸರದಲ್ಲಿ ಹೋಗುವಾಗ ತೊಂದರೆಗೆ ಒಳಗಾಗುವ ಸಾಧ್ಯತೆ ಹೆಚ್ಚಾಗಿ ಇರುತ್ತದೆ. ಅಂತಹವರ ಕುಟುಂಬಗಳಿಗೆ ಇದರಿಂದ ಸಹಾಯವಾಗಲಿದೆ.

ಮಹೇಶ್ ತೇಲಿ, ಮುಧೋಳ

ಭಾಷಾ ಸೊಗಡೇ ವಿನಾ ದೋಷವಲ್ಲ

ಸಾವಿರ ವರ್ಷಗಳ ಹಿಂದೆಯೇ, ಒಂಬತ್ತನೆಯ ಶತಮಾನದಲ್ಲಿ ಕವಿರಾಜ ಮಾರ್ಗಕಾರ, ಕನ್ನಡ ನಾಡಲ್ಲಿ ಅನೇಕ ಕನ್ನಡಗಳಿವೆ ಎಂದು ಪ್ರಾದೇಶಿಕ ಆಡುನುಡಿಯ ವಿಭಿನ್ನತೆಯನ್ನು ಗೌರವಿಸಿ ಎತ್ತಿ ಹಿಡಿದಿದ್ದಾನೆ. ಭಾಷಾ ವಿಜ್ಞಾನಿಯೂ ಆಗಿದ್ದ ಆತ- ‘ಆಡುಗನ್ನಡದ ಮಾತುಗಳಲ್ಲಿ ದೋಷ ಇರುವುದಿಲ್ಲ’... (ಕವಿರಾಜಮಾರ್ಗ, ಪ್ರಥಮ ಪರಿಚ್ಛೇದ, 46 ಮತ್ತು 52ನೆಯ ನುಡಿ) ಶ್ರೇಷ್ಠ ಕನಿಷ್ಠತೆಯಿಲ್ಲ. ಉಚ್ಚಾರಣೆ ಬಗೆಗೆ ದೋಷ ಶೋಧಿಸಬಾರದೆಂದು ಹೇಳುತ್ತಾನೆ. ಇಂತಹ ನಾಡ ಪರಂಪರೆಗೆ ತದ್ವಿರುದ್ಧವಾಗಿ, ಸದನದಲ್ಲಿ ಭಾಷಾ ಅಜ್ಞಾನದಿಂದ, ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಸಭಾಧ್ಯಕ್ಷ ಯು.ಟಿ.ಖಾದರ್ ಅವರ ಆಡುನುಡಿಯನ್ನು ಅವಹೇಳನ ಮಾಡಿರುವುದು ಖಂಡನೀಯ. ಅವರ ಮಾತುಗಳು ಅರ್ಥವಾಗುವುದಿಲ್ಲ, ಅದಕ್ಕೆಂದು ಆ್ಯಪ್ ಸಿದ್ಧಪಡಿಸಬೇಕು ಎಂದು ವ್ಯಂಗ್ಯವಾಡಿರುವುದು ಒಪ್ಪುವ ಮಾತಲ್ಲ.

ನಮ್ಮ ಪ್ರತಿನಿಧಿಗಳಾದ ಶಾಸಕರಿಗೆ ಭಾಷಾ ಜ್ಞಾನದ ತಿಳಿವಳಿಕೆ ಮಾಡಿಕೊಡುವ ಅಗತ್ಯವಿದೆ. ನಂಜನಗೂಡು ಭಾಷಾ ಸೊಗಡಿನ ದೇವನೂರರ ‘ಒಡಲಾಳ’ ನಾಟಕವನ್ನು ಉತ್ತರ ಕರ್ನಾಟಕದ ರಂಗ ಕಲಾವಿದರು ಅಭಿನಯಿಸಿ ಆಡಿದಾಗ ಪ್ರೇಕ್ಷಕರ ಹೃದಯ ಅರಳುತ್ತದೆ. ಬೆಳಗಾವಿ ಗಡಿಯ ಆಡುಮಾತಿನ ‘ವಖಾರಿಧೂಸ’ ನಾಟಕವನ್ನು ಮೈಸೂರಿನ ಕಲಾವಿದರು ನುಡಿದು ಅಭಿನಯಿಸುವಾಗ ಅಲ್ಲಿಯ ಪ್ರೇಕ್ಷಕರ ಎದೆಯ ಕದವ ಅದು ತಟ್ಟುವುದಿಲ್ಲವೇ? ಈ ಸರಳ ಪ್ರಜ್ಞೆಯ ಅರಿವು ನಮ್ಮನ್ನು ಆಳುವವರಿಗೆ ಇರಬೇಕಾಗುತ್ತದೆ. ಕವಿರಾಜ ಮಾರ್ಗಕಾರ ದೇಸಿ ಪದಗಳನ್ನು ಮಾರ್ಗಕ್ಕೆ ಕೊಂಡೊಯ್ಯಲು ಹೇಳುತ್ತಾನೆ. ಇಲ್ಲಿನ ಸೂಕ್ಷ್ಮತೆಯು ಏನೆಂದರೆ, ಭಾಷಾ ಮಡಿವಂತಿಕೆಯು ತೊಲಗಬೇಕು ಎಂಬುದು. ಮಡಿವಂತಿಕೆಯು ಮತಾಂಧತೆಯಂತೆ ಭಾಷಾಂಧತೆಯನ್ನು ಹುಟ್ಟುಹಾಕುತ್ತದೆ.

ಮುಂಬೈ ಕರ್ನಾಟಕದ ಕನ್ನಡದ ಮೇಲೆ ಮರಾಠಿ, ಹಿಂದಿಯ ಪ್ರಭಾವವಿದೆ. ಹೈದರಾಬಾದ್ ಕರ್ನಾಟಕದ ಕನ್ನಡದಲ್ಲಿ ಉರ್ದು, ಪಾರ್ಸಿ, ಮರಾಠಿ, ತೆಲುಗು ಭಾಷೆಗಳು ಸೇರಿಕೊಂಡಿವೆ. ಹಾಗೆಯೇ ಯು.ಟಿ.ಖಾದರ್ ಅವರ ಆಡುವ ನುಡಿಯ ಕನ್ನಡದ ಮೇಲೆ ದಕ್ಷಿಣ ಕನ್ನಡ ಪ್ರಾಂತ್ಯದ ತುಳು, ಕೊಂಕಣಿ, ಬ್ಯಾರಿಯ ಪ್ರಭಾವ ಇರುವುದು ಸ್ವಾಭಾವಿಕ. ಅದು ಭಾಷಾ ಸೊಗಡಿನ ಸೌಂದರ್ಯವೇ ವಿನಾ ದೋಷ ಅಥವಾ ಅವಹೇಳನಕಾರಿ ಆಗದು. ಭಾಷೆಯೆಂಬುದು ಯಾರ ಸೊತ್ತಲ್ಲ. ಅದು ಜನರ ಸೊತ್ತು.

ಡಾ. ಡಿ.ಎಸ್.ಚೌಗಲೆ, ಬೆಳಗಾವಿ, **ಡಾ. ಶ್ಯಾಮಸುಂದರ ಬಿದರಕುಂದಿ,** ಹುಬ್ಬಳ್ಳಿ

ಪಾದ ತೊಳೆಯುವುದೆಂದರೆ...

ಮಧ್ಯಪ್ರದೇಶದಲ್ಲಿ ಬುಡಕಟ್ಟು ಯುವಕನೊಬ್ಬನ ಮೇಲೆ ವ್ಯಕ್ತಿಯೊಬ್ಬ ಮೂತ್ರ ವಿಸರ್ಜನೆ ಮಾಡಿದ್ದ ಹೇಯಕೃತ್ಯಕ್ಕೆ ಪ್ರಾಯಶ್ಚಿತ್ತವಾಗಿ ಆ ರಾಜ್ಯದ ಮುಖ್ಯಮಂತ್ರಿಯವರು ಸಂತ್ರಸ್ತನ ಪಾದ ತೊಳೆಯುತ್ತಿರುವುದು ಚಿತ್ರಸಹಿತ ವರದಿಯಾಗಿದೆ (ಪ್ರ.ವಾ., ಜುಲೈ 7). ಇದನ್ನು ನೋಡುವಾಗ, ಹಿಂದೆ ನಮ್ಮ ಪ್ರಧಾನಿಯವರು, ಸಫಾಯಿ ಕರ್ಮಚಾರಿಯೊಬ್ಬರ ಪಾದ ತೊಳೆಯುತ್ತಿದ್ದ ಚಿತ್ರ ಕಣ್ಮುಂದೆ ಹಾದು ಹೋಗುತ್ತದೆ. ಯಾವ ಜಾತಿಯ ಜನರನ್ನು ಮುಟ್ಟಬಾರದು, ಮುಟ್ಟಿದರೆ ಮೈಲಿಗೆಯಾಗುತ್ತದೆ ಎಂದು ಭಾವಿಸಿ, ಅವರನ್ನು ಅಮಾನವೀಯವಾಗಿ ನಡೆಸಿಕೊಳ್ಳುವ ಪರಿಪಾಟವನ್ನು ಸಮಾಜ ರೂಢಿಸಿಕೊಂಡಿದೆಯೋ ಅಂಥ ಜನರ ಪಾದ ತೊಳೆಯುವುದರ ಮುಖಾಂತರ, ಆ ಜನಕ್ಕೆ ಅಂಟಿರುವ ಜಾತಿಯ ಕೊಳೆಯನ್ನು ತೊಳೆಯುವ ಮತ್ತು ಪ್ರಬಲ ಜಾತಿಯ ಜನರ ಮೇಲರಿಮೆಯನ್ನು ಕಳೆಯುವ ಭಾಗವಾಗಿ ಈ ಪಾದ ತೊಳೆಯುವುದನ್ನು ಪರಿಗಣಿಸಬೇಕಾಗುತ್ತದೆ.

ಈ ಸಂದರ್ಭದಲ್ಲಿ, ಪ್ರಧಾನಮಂತ್ರಿ ಅಥವಾ ಮುಖ್ಯಮಂತ್ರಿ ವೈಯಕ್ತಿಕ ನೆಲೆಯಲ್ಲಿ ನಿಲ್ಲದೆ, ದೇಶದ ಅಥವಾ ರಾಜ್ಯದ ಸಮಸ್ತ ಜನತೆಯ ಪ್ರತಿನಿಧಿಯಾಗಿ ನಿಲ್ಲುತ್ತಾರೆ. ಪಾದ ತೊಳೆಯುವುದನ್ನು ಎರಡು ನೆಲೆಯಲ್ಲಿ ಗ್ರಹಿಸಬಹುದು. ಒಂದು, ಇವರು ನಮಗಿಂತ ಮೇಲಿನವರು, ಪೂಜನೀಯರು ಎಂದು ಗೌರವ ಭಾವದಲ್ಲಿ ಮಾಡಿದರೆ, ಎರಡು, ನಮಗಿಂತ ಇವರು ಕೀಳಲ್ಲ, ಸಮಾನರು ಎಂಬುದನ್ನು ಹೇಳುವ ಭಾಗವಾಗಿ ಮಾಡುವುದು. ರಾಷ್ಟ್ರಪತಿಯಾಗಿದ್ದ ಬಾಬು ರಾಜೇಂದ್ರ ಪ್ರಸಾದ್ ಅವರು ಕಾಶಿಯಲ್ಲಿ 100 ಜನ ಬ್ರಾಹ್ಮಣರ ಪಾದ ತೊಳೆದದ್ದನ್ನು, ಸ್ವಾಮೀಜಿಗಳ ಪಾದ ತೊಳೆದು ಆ ನೀರನ್ನು ತೀರ್ಥದ ಹಾಗೆ ಸ್ವೀಕರಿಸುವುದನ್ನು ಮೊದಲಿನದಕ್ಕೆ ಉದಾಹರಣೆ ಆಗಿಯೂ, ಪ್ರಧಾನಿ ಮತ್ತು ಮಧ್ಯಪ್ರದೇಶದ ಮುಖ್ಯಮಂತ್ರಿಯವರು ಸಫಾಯಿ ಕರ್ಮಚಾರಿ ಹಾಗೂ ಬುಡಕಟ್ಟು ಸಂತ್ರಸ್ತನ ಪಾದ ತೊಳೆದದ್ದನ್ನು ಎರಡನೆಯದಕ್ಕೆ ಉದಾಹರಣೆಯಾಗಿಯೂ ಹೆಸರಿಸಬಹುದು.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬಜೆಟ್ ಭಾಷಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿ

ಬಿಜೆಪಿ ಹೊರಿಸಿಟ್ಟ ಬಾಕಿ ಕಾಮಗಾರಿ ಭಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲಸಂಪನ್ಮೂಲ, ನಗರಾಭಿವೃದ್ಧಿ, ಲೋಕೋಪಯೋಗಿ ಸೇರಿದಂತೆ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಳೆದ ಮಾರ್ಚ್ ಅಂತ್ಯಕ್ಕೆ ₹ 2,55,102 ಕೋಟಿ ಮೊತ್ತದ ಕಾಮಗಾರಿಗಳು ಬಾಕಿ ಉಳಿದಿವೆ. ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕನಿಷ್ಠ ಆರು ವರ್ಷ ಬೇಕು!

ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಮಂಡಿಸಿದ ಬಜೆಟ್‌ನಲ್ಲೇ ಈ ಸಂಗತಿಯನ್ನು ಬಹಿರಂಗಪಡಿಸಿದರು. '2022ರ ಮಾರ್ಚ್ ಅಂತ್ಯಕ್ಕೆ ₹ 2.005 ಲಕ್ಷದಷ್ಟು ಮೊತ್ತದ ಕಾಮಗಾರಿಗಳು ಬಾಕಿ ಉಳಿದಿದ್ದವು. ಆದರೂ, ಹಿಂದಿನ ಸರ್ಕಾರ ವಿವೇಚನಾರಹಿತವಾಗಿ ₹ 49,116 ಕೋಟಿ ಮೊತ್ತದ ಕಾಮಗಾರಿಗಳನ್ನು ಅನುಮೋದಿಸಿದೆ' ಎಂದು ವಾಗ್ದಾಳಿ ನಡೆಸಿದರು.

ಸಣ್ಣ ನೀರಾವರಿ ಇಲಾಖೆಯಲ್ಲಿ ₹12,729 ಕೋಟಿ ಮೊತ್ತದ ಬಾಕಿ ಕಾಮಗಾರಿಗಳಿವೆ. ₹ 440 ಕೋಟಿ ಬಿಲ್ ಪಾವತಿ ಬಾಕಿ ಇದೆ. ನಗರಾಭಿವೃದ್ಧಿ ಇಲಾಖೆಯಲ್ಲಿ ₹ 45,000 ಕೋಟಿ ಮೊತ್ತದ ಬಾಕಿ ಕಾಮಗಾರಿಗಳ ಹೊರೆ ಇದೆ. ಲೋಕೋಪಯೋಗಿ ಇಲಾಖೆಯಲ್ಲಿ ₹13,418 ಕೋಟಿ ಮೊತ್ತದ ಬಾಕಿ ಕಾಮಗಾರಿಗಳಿವೆ. ₹ 4,437 ಕೋಟಿಯಷ್ಟು ಬಿಲ್ ಪಾವತಿ ಬಾಕಿ ಇದೆ. ಈ ವರ್ಷ ₹ 6,353 ಕೋಟಿ ಮೊತ್ತದ ಕಾಮಗಾರಿಗಳನ್ನು ಅನುಮೋದಿಸಲಾಗಿದೆ ಎಂಬ ಮಾಹಿತಿಯನ್ನು ಬಜೆಟ್ ಮೂಲಕವೇ ಸದನದ ಮುಂದಿಟ್ಟರು.

'ಹಿಂದಿನ ಸರ್ಕಾರ ಅತ್ಯಂತ ವಿವೇಚನಾರಹಿತವಾಗಿ ನಿರ್ಧಾರಗಳನ್ನು ಕೈಗೊಂಡಿದೆ. ಆರ್ಥಿಕ ಶಿಸ್ತು ಉಲ್ಲಂಘಿಸಿ ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದೆ. ಬಾಕಿ ಇರುವ ಕಾಮಗಾರಿಗಳನ್ನು ಪೂರ್ಣಗೊಳಿಸದೇ ಹೊಸ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗದಂತಹ ಪರಿಸ್ಥಿತಿ ನಮ್ಮ ಸರ್ಕಾರಕ್ಕೆ ಎದುರಾಗಿದೆ' ಎಂದು ಮುಖ್ಯಮಂತ್ರಿ ಹೇಳಿದರು.

ಸಾಲವೂ ಹೆಚ್ಚಳ: ಇಂಧನ ಇಲಾಖೆಯ ಅಧೀನದಲ್ಲಿರುವ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳ ಸಾಲದ ಹೊರೆ 2018ರ ಮಾರ್ಚ್ ಅಂತ್ಯಕ್ಕೆ ₹ 51,086 ಕೋಟಿ ಇತ್ತು. ಹಿಂದಿನ ಸರ್ಕಾರದ ಅವಧಿಯಲ್ಲಿ ಈ ಸಾಲದ ಮೊತ್ತ ₹ 91,911 ಕೋಟಿಗೆ ಏರಿಕೆಯಾಗಿದೆ ಎಂದು ತಿಳಿಸಿದರು.



ವಿಧಾನಸೌಧದಲ್ಲಿ ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯ ಬಜೆಟ್ ಮಂಡಿಸಿದ ನಂತರ ಪ್ರೇಕ್ಷಕರ ಗ್ಯಾಲರಿಯೆಡೆಗೆ ಕೈಬೀಸಿದರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇತರರು ಇದ್ದಾರೆ

ಬಹುಜನ ಹಿತ: ತೆರಿಗೆ ಹೊಡೆತ

ಒಂದನೇ ಪುಟದಿಂದ...

ಅಲ್ಲದೇ, ಕೇಂದ್ರದ ಬಿಜೆಪಿ ಸರ್ಕಾರ ಹಾಗೂ ಹಿಂದೆ ಅಧಿಕಾರ ನಡೆಸಿದ ಸರ್ಕಾರದ ವಿರುದ್ಧ ಕಿಡಿ ಕಾರುವ ಮೂಲಕ ಸರ್ಕಾರದ ನಡೆಗೆ ನೀಲನಕ್ಷೆ ಹಾಕುವ ಬಜೆಟ್ ಪುಸ್ತಿಕೆಯಲ್ಲಿ ರಾಜಕೀಯದ ಮಾತುಗಳನ್ನೂ ತುರುಕಿದ್ದಾರೆ.

ಕಾಂಗ್ರೆಸ್ ಪಕ್ಷವು ಚುನಾವಣೆ ಸಂದರ್ಭದಲ್ಲಿ ಘೋಷಿಸಿದ್ದ ಐದು ಗ್ಯಾರಂಟಿಗಳ ಅನುಷ್ಠಾನಕ್ಕಾಗಿ ಈ ವರ್ಷ ಹೊಂದಿಸಬೇಕಾದ ₹ 35,410 ಕೋಟಿಯ ಹೊರೆ ಮತ್ತು ಹಿಂದಿನ ಸರ್ಕಾರ ಉಳಿಸಿಹೋಗಿರುವ ₹ 2.55 ಲಕ್ಷ ಕೋಟಿಗಳಷ್ಟು ಮೊತ್ತದ ಬಾಕಿ ಕಾಮಗಾರಿಗಳ ಹೊರೆಯು ಬಜೆಟ್‌ನಲ್ಲಿ ಹೊಸದಾಗಿ ದೊಡ್ಡ ಯೋಜನೆಗಳನ್ನು ಘೋಷಿಸದಂತೆ ಕೈಕಟ್ಟಿಹಾಕಿದೆ. ಇದನ್ನು ಬಜೆಟ್‌ನಲ್ಲೇ ಪ್ರಕಟಿಸಿರುವ ಮುಖ್ಯಮಂತ್ರಿ, ಆರ್ಥಿಕ ಮಿತಿಗಳ ಮಧ್ಯೆಯೇ ಎಲ್ಲರನ್ನೂ ತಲುಪುವ ಪ್ರಯತ್ನದ ವಾಗ್ದಾನ ನೀಡಿದ್ದಾರೆ.

ಕೃಷಿ ಭಾಗ್ಯ, ಪಶು ಭಾಗ್ಯ, ಅನುಗ್ರಹ, ವಿದ್ಯಾ ಸಿರಿ, ಅರಿವು, ಇಂದಿರಾ ಕ್ಯಾಂಟೀನ್ ಸೇರಿದಂತೆ 2013–2018ರ ಅವಧಿಯಲ್ಲಿ ತಮ್ಮದೇ ಸರ್ಕಾರ ಜಾರಿಗೊಳಿಸಿದ್ದ ಹಲವು ಯೋಜನೆಗಳನ್ನು ಪುನಃ ಅನುಷ್ಠಾನಕ್ಕೆ ತರುವುದಾಗಿ ಪ್ರಕಟಿಸಿದರು.

₹ 3,27,747 ಕೋಟಿ ಗಾತ್ರದ ಬಜೆಟ್ ಮಂಡಿಸಿದ್ದು, ₹ 12,522 ಕೋಟಿಯಷ್ಟು ರಾಜಸ್ವ ಕೊರತೆ ಇದೆ. ₹ 85,818 ಕೋಟಿ ಸಾಲ ಪಡೆಯುವ ಪ್ರಸ್ತಾವ ಪ್ರಕಟಿಸಲಾಗಿದೆ. ಇದರೊಂದಿಗೆ ರಾಜ್ಯ ಸರ್ಕಾರದ ಒಟ್ಟು ಸಾಲದ ಮೊತ್ತ ₹ 5.71 ಲಕ್ಷ ಕೋಟಿ ತಲುಪಲಿದೆ.

ಬೊಮ್ಮಾಯಿ ಸರ್ಕಾರದ ಬಜೆಟ್‌ಗೆ ಹೋಲಿಸಿದರೆ ಜಲ ಸಂಪನ್ಮೂಲ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಆರೋಗ್ಯ, ಕಂದಾಯ, ಕೃಷಿ ಸೇರಿದಂತೆ ಹಲವು ಇಲಾಖೆಗಳಿಗೆ ಅನುದಾನ ಹಂಚಿಕೆ ಕಡಿಮೆಯಾಗಿದೆ. ನೂರು, ಸಾವಿರ ಕೋಟಿ ಅನುದಾನದ ಬೆರಳೆಣಿಕೆ ಯೋಜನೆಗಳಷ್ಟೇ ಈ ಬಜೆಟ್‌ನಲ್ಲಿ ಕಾಣುತ್ತಿವೆ. ಆದರೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಸಾರಿಗೆ, ಇಂಧನ ಸೇರಿದಂತೆ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಹೊಣೆ ಹೊತ್ತಿರುವ ಇಲಾಖೆಗಳಿಗೆ ಅನುದಾನ ಹಂಚಿಕೆಯಲ್ಲಿ ಭಾರಿ ಹೆಚ್ಚಳವಾಗಿದೆ.

ಅಹಿಂದದತ್ತ ನೋಟ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು, ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಪೂರಕವಾಗಿ ಹಲವು ಕ್ರಮಗಳನ್ನು ಘೋಷಿಸಲಾಗಿದೆ. ಹಳೆಯ ಯೋಜನೆಗಳ ಮರು ಜಾರಿ, ಹೊಸ ಕಾರ್ಯಕ್ರಮಗಳ ಘೋಷಣೆಯ ಜತೆಯಲ್ಲೇ ಈ ಮೂರೂ ವರ್ಗಗಳ ಅಭಿವೃದ್ಧಿಗೆ ಕಾನೂನಾತ್ಮಕ ಬಲ ತುಂಬುವ ಪ್ರಯತ್ನಕ್ಕೆ ಬಜೆಟ್‌ನಲ್ಲಿ ಆದ್ಯತೆ ನೀಡಲಾಗಿದೆ.

ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಗೆ (ಟಿಎಸ್‌ಪಿ) ಬೊಮ್ಮಾಯಿ ಸರ್ಕಾರದ ಬಜೆಟ್‌ಗೆ ಹೋಲಿಸಿದರೆ ಈ ಬಾರಿ ₹ 4,079 ಕೋಟಿಯಷ್ಟು ಹೆಚ್ಚುವರಿ ಅನುದಾನ ಒದಗಿಸಲಾಗಿದೆ. ಅದರ ಜತೆಯಲ್ಲೇ, ಈ ಅನುದಾನವನ್ನು ಅನ್ಯ ಉದ್ದೇಶಕ್ಕೆ ವರ್ಗಾಯಿಸಲು ಅವಕಾಶವಿರುವ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಕಾಯ್ದೆಯ ಸೆಕ್ಷನ್ 7–ಡಿ ರದ್ದತಿಯ ಬೇಡಿಕೆಯನ್ನೂ ಈಡೇರಿಸುವುದಾಗಿ ಪ್ರಕಟಿಸಿದ್ದಾರೆ. ಇದು ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುದಾನ ಸಂಪೂರ್ಣವಾಗಿ ನಿಗದಿತ ಉದ್ದೇಶಕ್ಕೆ ಬಳಕೆಯಾಗುವ ಖಾತರಿಯನ್ನು ನೀಡಿದೆ.

ಸೋಲಿಗರು, ಕಾಡು ಕುರುಬರು, ಜೇನು ಕುರುಬರು, ಮಲೆಕುಡಿಯರು, ಸಿದ್ದಿ, ಸೇರಿದಂತೆ ಪರಿಶಿಷ್ಟ ಪಂಗಡ, ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳಿಗೂ ಈ ಬಾರಿ ಬಜೆಟ್‌ನಲ್ಲಿ ಪ್ರಾತಿನಿಧ್ಯ ದೊರಕಿದೆ.



ವಿರೋಧ ಪಕ್ಷದ ಸದಸ್ಯರು ಸದನದಲ್ಲಿ ಬಜೆಟ್ ಪುಸ್ತಕ ಓದಿದರು

ಕೇಂದ್ರಕ್ಕೆ ಸಡ್ಡು: ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಜಾರಿಗೊಳಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಬದಲಿಗೆ ರಾಜ್ಯದಲ್ಲೇ ಪ್ರತ್ಯೇಕ ಶಿಕ್ಷಣ ನೀತಿ ರೂಪಿಸಿ, ಜಾರಿಗೊಳಿಸುವುದಾಗಿ ಸಿದ್ದರಾಮಯ್ಯ ಘೋಷಿಸಿದ್ದಾರೆ. ಎಪಿಎಂಸಿ ಕಾಯ್ದೆಯ ತಿದ್ದುಪಡಿ ರದ್ದತಿ ಸೇರಿದಂತೆ ಕೇಂದ್ರ ಸರ್ಕಾರದ ನಿರ್ಧಾರಗಳಿಗೆ ಸಡ್ಡು ಹೊಡೆಯುವ ಹಲವು ಘೋಷಣೆಗಳು ಬಜೆಟ್‌ನಲ್ಲಿವೆ.

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ₹1 ಕೋಟಿ ಮೊತ್ತದವರೆಗಿನ ಕಾಮಗಾರಿಗಳಲ್ಲಿ ಎಸ್‌ಸಿ/ಎಸ್‌ಟಿ ಗುತ್ತಿಗೆದಾರರಿಗೆ ಇದ್ದ ಮೀಸಲಾತಿಯನ್ನು ಹಿಂದುಳಿದ ವರ್ಗಗಳ ಪ್ರವರ್ಗ 1 ಹಾಗೂ ಪ್ರವರ್ಗ–2ಎ ಗುತ್ತಿಗೆದಾರರಿಗೂ ವಿಸ್ತರಿಸಿದ್ದಾರೆ. ಜತೆಯಲ್ಲೇ ಈ ಎರಡೂ ಪ್ರವರ್ಗಗಳಿಗೆ ಸೇರಿದ ಉದ್ಯಮಿಗಳು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಪಡೆಯುವ ₹ 10 ಕೋಟಿವರೆಗಿನ ಸಾಲಕ್ಕೆ ಶೇ 6ರಷ್ಟು ಬಡ್ಡಿ ಸಹಾಯಧನ ಪ್ರಕಟಿಸಿದ್ದಾರೆ. ಈ ಎರಡೂ ಹಿಂದುಳಿದ ವರ್ಗಗಳನ್ನು ಆರ್ಥಿಕವಾಗಿ ಸಶಕ್ತಗೊಳಿಸುವುದಕ್ಕೆ ಪೂರಕವಾದ ನಡೆ.

ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ನೀಡುವುದನ್ನು ಕೇಂದ್ರ ಸರ್ಕಾರ ಸ್ಥಗಿತಗೊಳಿಸಿದ್ದು, ಅದನ್ನು ರಾಜ್ಯ ಸರ್ಕಾರ ದಿಂದಲೇ ವಿತರಿಸುವ ಘೋಷಣೆ ಬಜೆಟ್‌ನಲ್ಲಿದೆ. ಇದಕ್ಕಾಗಿ ₹ 60 ಕೋಟಿ ಒದಗಿಸಲಾಗಿದೆ. ಮುಸ್ಲಿಮರು, ಕ್ರೈಸ್ತರು, ಜೈನರು, ಸಿಖ್ಖರು ಸೇರಿದಂತೆ ಎಲ್ಲ ಅಲ್ಪಸಂಖ್ಯಾತ ಧರ್ಮೀಯರನ್ನು ತಲುಪುವ ಯತ್ನವನ್ನು ಬಜೆಟ್ ಮಾಡಿದೆ.

ಆಯ್ದ ಜಿಲ್ಲೆಗಳಲ್ಲಿ ವಿಶೇಷ ಯೋಜನೆಗಳು

ವಿಜಯಪುರ
- ಜಿಲ್ಲೆಯಲ್ಲಿ ಉತ್ಪಾದನಾ ಕ್ಲಸ್ಟರ್ ಅಭಿವೃದ್ಧಿ
- ಆನಂದಮಹಲ್ ಕಟ್ಟಡವನ್ನು ವಸ್ತುಸಂಗ್ರಹಾಲಯವನ್ನಾಗಿ ಪರಿವರ್ತನೆ

ಧಾರವಾಡ
- ಕೈಗಾರಿಕಾ ವಸಾಹತು ಸ್ಥಾಪನೆ

ಬೆಳಗಾವಿ
- ಬೆಳಗಾವಿಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಸುಟ್ಟ ಗಾಯಗಳ ಘಟಕ ಸ್ಥಾಪನೆ

ಉತ್ತರ ಕನ್ನಡ
- ಕೇಣಿಯಲ್ಲಿ ಸಾರ್ವಜನಿಕ ಸಹಭಾಗಿತ್ವದಲ್ಲಿ ಸರ್ವ ಋತು ಡೀಪ್‌ವಾಟರ್ ಗ್ರೀನ್‌ಫೀಲ್ಡ್ ಬಂದರು ಅಭಿವೃದ್ಧಿ
- ಉತ್ತರ ಕನ್ನಡದ ಗುಡ್ಡಗಾಡು ಪ್ರದೇಶಗಳ ರೈತರ ಕೃಷಿ ಉತ್ಪನ್ನ ಮತ್ತು ಪರಿಕರಗಳ ಸಾಗಾಣೆಗಾಗಿ ಪಿಕ್‌ಅಪ್ ವ್ಯಾನ್ ಖರೀದಿಗೆ ಶೇ 4ರ ಬಡ್ಡಿದರದಲ್ಲಿ ₹7 ಲಕ್ಷದ ವರೆಗೆ ಸಾಲ
- 'ಆಶಾಕಿರಣ' ಕಾರ್ಯಕ್ರಮದಡಿ 2023–24 ಸಾಲಿನಲ್ಲಿ ಕಣ್ಣಿನ ಶಿಬಿರ, ಕನ್ನಡಕ ವಿತರಣೆ, ಪೊರೆ ಶಸ್ತ್ರ ಚಿಕಿತ್ಸೆ ಚಟುವಟಿಕೆ ಆರಂಭ

ದಕ್ಷಿಣ ಕನ್ನಡ
- ರಫ್ತು ಆಧಾರಿತ ಕೈಗಾರಿಕೆಗಳ ಕ್ಲಸ್ಟರ್ ಅಭಿವೃದ್ಧಿ
- ಸಸಿಹಿತ್ಲು ಕಡಲ ತೀರವನ್ನು ಅಂತರರಾಷ್ಟ್ರೀಯ ಸರ್ಫಿಂಗ್ ತಾಣವಾಗಿ ಅಭಿವೃದ್ಧಿ
- ಧರ್ಮಸ್ಥಳದಲ್ಲಿ ಹೊಸ ಏರ್‌ಸ್ಟ್ರಿಪ್ ಅಭಿವೃದ್ಧಿ
- ದಕ್ಷಿಣ ಕನ್ನಡದ ಗುಡ್ಡಗಾಡು ಪ್ರದೇಶಗಳ ರೈತರ ಕೃಷಿ ಉತ್ಪನ್ನ ಮತ್ತು ಪರಿಕರಗಳ ಸಾಗಾಣೆಗಾಗಿ ಪಿಕ್‌ಅಪ್ ವ್ಯಾನ್ ಖರೀದಿಗೆ ಶೇ 4ರ ಬಡ್ಡಿದರದಲ್ಲಿ ₹7 ಲಕ್ಷದ ವರೆಗೆ ಸಾಲ


ಶಿವಮೊಗ್ಗ
- ಶಿವಮೊಗ್ಗದ ಗುಡ್ಡಗಾಡು ಪ್ರದೇಶಗಳ ರೈತರ ಕೃಷಿ ಉತ್ಪನ್ನ ಮತ್ತು ಪರಿಕರಗಳ ಸಾಗಾಣೆಗಾಗಿ ಪಿಕ್‌ಅಪ್ ವ್ಯಾನ್ ಖರೀದಿಗೆ ಶೇ 4ರ ಬಡ್ಡಿದರದಲ್ಲಿ ₹7 ಲಕ್ಷದ ವರೆಗೆ ಸಾಲ

ಉಡುಪಿ
- ಉಡುಪಿಯ ಗುಡ್ಡಗಾಡು ಪ್ರದೇಶಗಳ ರೈತರ ಕೃಷಿ ಉತ್ಪನ್ನ ಮತ್ತು ಪರಿಕರಗಳ ಸಾಗಾಣೆಗಾಗಿ ಪಿಕ್‌ಅಪ್ ವ್ಯಾನ್ ಖರೀದಿಗೆ ಶೇ 4ರ ಬಡ್ಡಿದರದಲ್ಲಿ ₹7 ಲಕ್ಷದ ವರೆಗೆ ಸಾಲ

ಚಿಕ್ಕಮಗಳೂರು
- ಹೊಸ ಏರ್‌ಸ್ಟ್ರಿಪ್ ಅಭಿವೃದ್ಧಿ

ಕೊಡಗು
- ಕೊಡಗಿನಲ್ಲಿ ಹೊಸ ಏರ್‌ಸ್ಟ್ರಿಪ್ ಅಭಿವೃದ್ಧಿ
- ಕೊಡಗಿನ ಗುಡ್ಡಗಾಡು ಪ್ರದೇಶಗಳ ರೈತರ ಕೃಷಿ ಉತ್ಪನ್ನ ಮತ್ತು ಪರಿಕರಗಳ ಸಾಗಾಣೆಗಾಗಿ ಪಿಕ್‌ಅಪ್ ವ್ಯಾನ್ ಖರೀದಿಗೆ ಶೇ 4ರ ಬಡ್ಡಿದರದಲ್ಲಿ ₹7 ಲಕ್ಷದ ವರೆಗೆ ಸಾಲ

ಬೀದರ್
- ಕೃಷ್ಣಮೃಗಗಳ ಹೆಚ್ಚಾಗಿರುವ ಜಿಲ್ಲೆಯಲ್ಲಿ ಕೃಷ್ಣಮೃಗ ಸಂರಕ್ಷಣಾ ಮೀಸಲು ಪ್ರದೇಶ ಘೋಷಣೆ, ಇದಕ್ಕೆ ₹ 2 ಕೋಟಿ ಮೀಸಲು



ಮೈಸೂರು
- ₹ 10 ಕೋಟಿ ವೆಚ್ಚದಲ್ಲಿ ಸೈಕ್ಲಿಂಗ್ ರೇಸಿಂಗ್ ಟ್ರ್ಯಾಕ್ ಸ್ಥಾಪನೆ
- ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣವನ್ನು ದೆಹಲಿ ಪ್ರಗತಿ ಮೈದಾನದ ಮಾದರಿಯಲ್ಲಿ ಅಭಿವೃದ್ಧಿ

ಮಂಡ್ಯ
- 'ಆಶಾಕಿರಣ' ಕಾರ್ಯಕ್ರಮದಡಿ 2023–24 ಸಾಲಿನಲ್ಲಿ ಕಣ್ಣಿನ ಶಿಬಿರ, ಕನ್ನಡಕ ವಿತರಣೆ, ಪೊರೆ ಶಸ್ತ್ರ ಚಿಕಿತ್ಸೆ ಚಟುವಟಿಕೆ ಆರಂಭ

ರಾಮನಗರ
- ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಿಗಳ ವಿಶ್ವವಿದ್ಯಾಲಯದ ವತಿಯಿಂದ ಜಿಲ್ಲೆಯ ಕನಕಪುರದಲ್ಲಿ ಹೊಸ ವೈದ್ಯಕೀಯ ಕಾಲೇಜು ಸ್ಥಾಪನೆ
- ಶಿಡ್ಲಘಟ್ಟ ರೇಷ್ಮೆಗೂಡಿನ ಮಾರುಕಟ್ಟೆಯನ್ನು ₹75 ಕೋಟಿ ವೆಚ್ಚದಲ್ಲಿ ಹೈಟೆಕ್ ಮಾಡಲು ನಿರ್ಧಾರ
- ಬಿಡದಿಯಲ್ಲಿ ಮಹಿಳಾಯರಿಗಾಗಿ ಪ್ರಾದೇಶಿಕ ವಾಹನ ಚಾಲನಾ ತರಬೇತಿ ಕೇಂದ್ರ ಸ್ಥಾಪನೆ

ಹಾಸನ
- 'ಹಾಸನನದ ಗುಡ್ಡಗಾಡು ಪ್ರದೇಶಗಳ ರೈತರ ಕೃಷಿ ಉತ್ಪನ್ನ ಮತ್ತು ಪರಿಕರಗಳ ಸಾಗಾಣೆಗಾಗಿ ಪಿಕ್‌ಅಪ್ ವ್ಯಾನ್ ಖರೀದಿಗೆ ಶೇ 4ರ ಬಡ್ಡಿದರದಲ್ಲಿ ₹7 ಲಕ್ಷದ ವರೆಗೆ ಸಾಲ

ರಾಯಚೂರು
- ಆಶಾಕಿರಣ' ಕಾರ್ಯಕ್ರಮದಡಿ 2023–24 ಸಾಲಿನಲ್ಲಿ ಕಣ್ಣಿನ ಶಿಬಿರ, ಕನ್ನಡಕ ವಿತರಣೆ, ಪೊರೆ ಶಸ್ತ್ರ ಚಿಕಿತ್ಸೆ ಚಟುವಟಿಕೆ ಆರಂಭ

ಕಲಬುರಗಿ
- ₹70 ಕೋಟಿ ವೆಚ್ಚದಲ್ಲಿ ಗುಲ್ಬರ್ಗಾ ವೈದ್ಯಕೀಯ ವಿಜ್ಞಾನಿಗಳ ಸಂಸ್ಥೆಯಲ್ಲಿ 200 ಹಾಸಿಗೆಯ ಹೊಸ ತಾಯಿ ಮತ್ತು ಮಕ್ಕಳ ಆಸ್ಪತ್ರೆ ನಿರ್ಮಾಣ
- ಕಲಬುರಗಿಯಲ್ಲಿ ಟ್ರಾಮಾ ಕೇರ್ ಸೆಂಟರ್ ಕಾರ್ಯಾಚರಣೆಗೆ ₹30 ಕೋಟಿ
- ಕಲಬುಗರಿಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಸುಟ್ಟ ಗಾಯಗಳ ಘಟಕ ಸ್ಥಾಪನೆ

ಬಳ್ಳಾರಿ
- ವಿಜಯನಗರ ವಿಮಾನ ನಿಲ್ದಾಣದ ಸಿವಿಲ್ ಕಾಮಗಾರಿಗಳನ್ನು ಪೂರ್ಣಗೊಳಿಸಿ ನಿಲ್ದಾಣದ ಕಾರ್ಯಾಚರಣೆಯನ್ನು ಪ್ರಸಕ್ತ ಸಾಲಿನಲ್ಲಿಯೇ ಪ್ರಾರಂಭ

ಯಾದಗಿರಿ
- ಯಾದಗಿರಿಯ ಶಹಪೂರದಲ್ಲಿ ಹಂತ ಹಂತವಾಗಿ ಹೊಸದಾಗಿ ಕೈಗಾರಿಕಾ ವಸಾಹತುಗಳ ಸ್ಥಾಪನೆ

ಗದಗ
- ಮಾಗಡಿ ಪಕ್ಷಿಧಾಮದ ಸಮಗ್ರ ಅಭಿವೃದ್ಧಿ

ಚಿತ್ರದುರ್ಗ
- ಆಶಾಕಿರಣ' ಕಾರ್ಯಕ್ರಮದಡಿ 2023–24 ಸಾಲಿನಲ್ಲಿ ಕಣ್ಣಿನ ಶಿಬಿರ, ಕನ್ನಡಕ ವಿತರಣೆ, ಪೊರೆ ಶಸ್ತ್ರ ಚಿಕಿತ್ಸೆ ಚಟುವಟಿಕೆ ಆರಂಭ

ಕೊಪ್ಪಳ
- ರಾಮನಗರದ ಜಾನಪದ ಲೋಕ ಮಾದರಿಯಲ್ಲಿ ಜಿಲ್ಲೆಯಲ್ಲಿ ಜಾನಪದ ಲೋಕ ಸ್ಥಾಪನೆ

ವಿಜಯನಗರ
- ವಿಮಾನ ನಿಲ್ದಾಣದ ಸಿವಿಲ್ ಕಾಮಗಾರಿ ಪೂರ್ಣಗೊಳಿಸಿ ನಿಲ್ದಾಣದ ಕಾರ್ಯಾಚರಣೆ ಪ್ರಸಕ್ತ ಸಾಲಿನಲ್ಲಿಯೇ ಪ್ರಾರಂಭ

ಬೆಂಗಳೂರು
- ಎಸ್.ಕೆ.ಎಸ್.ಜೆ.ಟಿ.ಐ ಇಂಜಿನಿಯರಿಂಗ್ ಕಾಲೇಜಿನ ಜವಳಿ ತಂತ್ರಜ್ಞಾನ ವಿಭಾಗವನ್ನು 'ಸ್ಮಾರ್ಟ್ ಆ್ಯಂಡ್ ಟೆಕ್ನಿಕಲ್ ಟೆಕ್ಸ್‌ಟೈಲ್ ಸೆಂಟರ್' ಆಗಿ ಉನ್ನತೀಕರಣ
- ವಿಶ್ವೇಶ್ವರಯ್ಯ ಕಾಲೇಜ್ ಆಫ್ ಇಂಜಿನಿಯರಿಂಗ್ ವಿಶ್ವವಿದ್ಯಾಲಯವನ್ನು ಉನ್ನತೀಕರಿಸಲು ₹25 ಕೋಟಿ ಅನುದಾನ
- ಕಾಡುಗೋಡಿಯಲ್ಲಿ 100 ಎಕರೆ ಪ್ರದೇಶದಲ್ಲಿ ಟೆಕ್ನಾಲಜಿ ಇನ್ನೊವೇಷನ್ ಪಾರ್ಕ್ ಅಭಿವೃದ್ಧಿ
- ₹ 10 ಕೋಟಿ ವೆಚ್ಚದಲ್ಲಿ ಬಾಸ್ಕೆಟ್‌ಬಾಲ್ ಪ್ರಾದೇಶಿಕ ತರಬೇತಿ ಕೇಂದ್ರ
- ₹ 5 ಕೋಟಿ ಅನುದಾನದಲ್ಲಿ ಕಂಠೀರವ ಕ್ರೀಡಾಂಗಣದಲ್ಲಿ ಕ್ರೀಡಾ ವಸ್ತು ಸಂಗ್ರಹಾಲಯ ಸ್ಥಾಪನೆ ಜೊತೆಗೆ ₹ 10 ಕೋಟಿ ಅನುದಾನದಲ್ಲಿ ಕ್ರೀಡಾ ವಸತಿ ನಿಲಯ ನಿರ್ಮಾಣ
- ಡಾ. ರಾಜ್‌ಕುಮಾರ್ ಸ್ಮಾರಕದ ಬಳಿ ಕನ್ನಡ ಚಿತ್ರರಂಗ ಬೆಳೆದು ಬಂದ ಇತಿಹಾಸ ದಾಖಲಿಸುವ ವಸ್ತು ಸಂಗ್ರಹಾಲಯ ನಿರ್ಮಾಣ

ಚಾಮರಾಜನಗರ
- 'ಬದನಗುಪ್ಪೆಯಲ್ಲಿ ಹೊಸದಾಗಿ ಕೈಗಾರಿಕಾ ವಸಾಹತು ಸ್ಥಾಪನೆ

ಬೆಂಗಳೂರು ಗ್ರಾಮಾಂತರ
- 'ದೇವನಹಳ್ಳಿ ಏರೋಸ್ಪೇಸ್ ಮತ್ತು ಡಿಫೆನ್ಸ್ ಪಾರ್ಕ್‌ನಲ್ಲಿ ಕರ್ನಾಟಕ ಏರೋಸ್ಪೇಸ್ ತಂತ್ರಜ್ಞಾನ ಕೇಂದ್ರ ಸ್ಥಾಪನೆ

ಕೋಲಾರ
- 'ಜಿಲ್ಲೆಯಲ್ಲಿ ಶಿಲ್ಪಕಲಾ ತರಬೇತಿ ಕೇಂದ್ರ ಪ್ರಾರಂಭ

- ₹ 2 ಕೋಟಿ ವೆಚ್ಚದಲ್ಲಿ 27 ಜಿಲ್ಲೆಗಳಲ್ಲಿ ತಲಾ ಒಂದು ಮೆಟೀರಿಯಲ್ ರಿಕವರಿ ಫೆಸಿಲಿಟಿ ಸ್ಥಾಪನೆ
- ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಡಲ ತೀರದ ಪ್ರವಾಸೋದ್ಯಮ ಅಭಿವೃದ್ಧಿಗೆ ಕರಾವಳಿ ಬೀಚ್ ಪ್ರವಾಸೋದ್ಯಮ ಕಾರ್ಯಪಡೆ ರಚನೆ

ಬಜೆಟ್‌ನುದ್ದಕ್ಕೂ ಕೇಂದ್ರ, ಬಿಜೆಪಿಗೆ ಗುದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುದೀರ್ಘ 2 ಗಂಟೆ 55 ನಿಮಿಷಗಳ ಕಾಲ ಬಜೆಟ್ ಮಂಡಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಹಾಗೂ ರಾಜ್ಯದಲ್ಲಿನ ನಿರ್ಗಮಿತ ಬಿಜೆಪಿ ಸರ್ಕಾರದ ವಿರುದ್ಧ ಹತ್ತಾರು ಬಾರಿ ವಾಗ್ದಾಳಿ ನಡೆಸಿದರು.

ಬಜೆಟ್ ಮಂಡನೆಯ ಆರಂಭವನ್ನೇ ಬಿಜೆಪಿ ವಿರುದ್ಧ ಟೀಕಾಪ್ರಹಾರಕ್ಕೆ ಬಳಸಿಕೊಂಡ ಅವರು, 'ರಾಜ್ಯವು ಅಂಧಕಾರ, ಅನ್ಯಾಯದಿಂದ ತತ್ತರಿಸಿತ್ತು. ಒಂದೆಡೆ ಪಟ್ಟಭದ್ರ ಹಿತಾಸಕ್ತಿಯಿಂದ ಕೂಡಿದ ಬಂಡವಾಳ ಶಾಹಿಗಳು ಮೆರೆದರೆ, ಇನ್ನೊಂದೆಡೆ ಜನಸಾಮಾನ್ಯರು ಮೂಕವೇದನೆ ಅನುಭವಿಸುತ್ತಿದ್ದರು. ಮಾರಕ ಸಾಂಕ್ರಾಮಿಕ ನಮ್ಮನ್ನು ಕಾಡಿದಾಗ ದುರಾಡಳಿತ ಮತ್ತು ಭ್ರಷ್ಟಾಚಾರ ಸಾರ್ವಜನಿಕರಿಗೆ ಎರವಾಯಿತು' ಎಂದರು.

ಕೋವಿಡ್ ಸಂಕಷ್ಟದ ನಿರ್ವಹಣೆ, ನೋಟುಗಳ ಅಮಾನ್ಯೀಕರಣ ವಿಷಯಗಳನ್ನು ಪ್ರಸ್ತಾಪಿಸಿ ಕೇಂದ್ರ ಸರ್ಕಾರದ ನಡೆಯನ್ನು ಟೀಕಿಸಿದರು.

'ನಮ್ಮ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಬಿಟ್ಟಿ ಯೋಜನೆಗಳೆಂದು ಟೀಕಿಸಬೇಡಿ. ಸುಳ್ಳು ಸುದ್ದಿ ಹಬ್ಬಿಸಬೇಡಿ. ನೀವು ವಿರೋಧ ಪಕ್ಷದ ಜವಾಬ್ದಾರಿಯನ್ನು ನಿಭಾಯಿಸಿ; ಆದರೆ ಶ್ರೀಸಾಮಾನ್ಯರ ವಿವೇಚನೆಯನ್ನು ಅಪಮಾನ ಮಾಡಬೇಡಿ' ಎಂದರು.

'ಕೋವಿಡ್‌ನಿಂದ ತತ್ತರಿಸಿದ ರಾಜ್ಯದ ಆರ್ಥಿಕತೆಯನ್ನು ಪುನಶ್ಚೇತನಗೊಳಿಸಲು ಈ ಹಿಂದಿದ್ದ ಸರ್ಕಾರ ವಿಫಲವಾಯಿತು. ಬೆಲೆ ಏರಿಕೆ, ಹಣದುಬ್ಬರವನ್ನು ನಿಯಂತ್ರಿಸಲು ಕೇಂದ್ರ ಸರ್ಕಾರ ವಿಫಲವಾಗಿದೆ ಕೇಂದ್ರ ಸರ್ಕಾರ ತೆರಿಗೆಯಲ್ಲಿ ನ್ಯಾಯಯುತ ಪಾಲನ್ನು ಕರ್ನಾಟಕಕ್ಕೆ ನೀಡುತ್ತಿಲ್ಲ. ಇದರಿಂದ ಮೂರು ವರ್ಷಗಳಲ್ಲಿ ರಾಜ್ಯಕ್ಕೆ ₹ 26,140 ಕೋಟಿಯಷ್ಟು ನಷ್ಟವಾಗಿದೆ. ಆದರೂ, ಈ ಹಿಂದಿನ ಸರ್ಕಾರ ಕೇಂದ್ರದ ಮೇಲೆ ಒತ್ತಡ ತರದೇ ಮೂಕಪ್ರೇಕ್ಷಕನಂತಿತ್ತು' ಎಂದರು.

ರಾಷ್ಟ್ರೀಯ ಶಿಕ್ಷಣ ನೀತಿ, ಕೃಷಿ ಉತ್ಪನ್ನ ಮಾರುಕಟ್ಟೆ ನಿಯಂತ್ರಣ ಸಮಿತಿ ಕಾಯ್ದೆ ತಿದ್ದುಪಡಿ, ರಾಜ್ಯದ ನೀರಾವರಿ ಯೋಜನೆಗಳಿಗೆ ಅನುಮತಿ ನೀಡುವಲ್ಲಿ ವಿಳಂಬ, ಶಾಲಾ ಪಠ್ಯಕ್ರಮ ಪರಿಷ್ಕರಣೆ, ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಸ್ಥಗಿತ, ಭ್ರಷ್ಟಾಚಾರ ನಿಯಂತ್ರಣ ಸೇರಿದಂತೆ ಹಲವು ವಿಚಾರಗಳನ್ನು ಬಿಜೆಪಿ ಹಾಗೂ ಕೇಂದ್ರ ಸರ್ಕಾರದ ವಿರುದ್ಧದ ವಾಗ್ದಾಳಿಗೆ ಬಳಸಿಕೊಂಡರು.

ಡಿಕೆಶಿ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಜೆಟ್ ಮಂಡಿಸುತ್ತಿದ್ದಾಗ ವಿಧಾನಸಭೆಯ ಕಲಾಪ ಚಿತ್ರೀಕರಣದ ದೃಶ್ಯಾವಳಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಬ್ಬರೇ ಕಾಣಿಸುತ್ತಿದ್ದರು. ಸದನದ ಒಳಗಿದ್ದ ಎಲ್‌ಇಡಿ ಪರದೆಯಲ್ಲಿ ಅದನ್ನು ವೀಕ್ಷಿಸಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿಧಾನಸಭೆಯ ಅಧಿಕಾರಿಗಳನ್ನು ಕರೆದು ಮುಖ್ಯಮಂತ್ರಿಯ ಪಕ್ಕದಲ್ಲೇ ಕುಳಿತಿರುವ ತಮ್ಮನ್ನು ತೋರಿಸದೇ ಇರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು.


ವಿಧಾನಸಭೆಯ ಅಧಿಕಾರಿಗಳು ಮತ್ತು ಸಿಬ್ಬಂದಿ, ಮೊದಲ ಮಹಡಿಯಲ್ಲಿ ನಿಂತು ವಿಡಿಯೊ ಚಿತ್ರೀಕರಣ ಮಾಡುತ್ತಿದ್ದವರಿಗೆ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಇಬ್ಬರನ್ನೂ ದೃಶ್ಯಾವಳಿಯಲ್ಲಿ ತೋರಿಸುವಂತೆ ಕೈಸನ್ನೆ ಮಾಡಿದರು. ಆದರೆ, ನಂತರವೂ ಕೆಲಕಾಲ ಮುಖ್ಯಮಂತ್ರಿ ಒಬ್ಬರೇ ವಿಡಿಯೊದಲ್ಲಿ ಕಾಣಿಸುತ್ತಿದ್ದರು. ಬಳಿಕ ಸಿಬ್ಬಂದಿಯೊಬ್ಬರನ್ನು ಮೊದಲ ಮಹಡಿಗೆ ಕಳಿಸಿ ಸಂದೇಶ ತಲುಪಿಸಲಾಯಿತು. ನಂತರ ವಿಡಿಯೊದಲ್ಲಿ ಸಿದ್ದರಾಮಯ್ಯ ಮತ್ತು ಶಿವಕುಮಾರ್ ಇಬ್ಬರೂ ಕಂಡರು.

ಪದಬಂಧ 5373

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಅಂಗಿಯನ್ನು ಅರ್ಧ ಮಾಡಿದಾಗ ಬಂದ ಹೆಂಡತಿ! (3)
3. ದೇವಾಲಯದ ಕಂಬಗಳ ಮೇಲೆಕೆತ್ತಿರುವ ವಿಗ್ರಹ (4)
5. ಕೊನೆಗೆ ಜಾಲ ಬೀಸಿದಾಗಲೇ ಇದು ನಿರಾಯಾಸ (4)
6. ವಟಗುಟ್ಟುವವನ ಹತ್ತಿರವಿರುವ ಬ್ರಹ್ಮಚಾರಿ (2)
7. ಗಮನ ಹರಿಸಿದಾಗ ಕಾಣಿಸಿದ ಆಕಾಶ (3)
9. ಇದು ಹೊಸತು (3)
12. ಪರಾಜಯದಲ್ಲೂ ಗೆಲುವು ನುಸುಳಿದೆಯಲ್ಲಾ! (2)
13. ಮನಸ್ಸಿನ ಕೆಚ್ಚು (4)
15. ಆಸರೆಯ ಮನೆಯಲ್ಲಇದು ಜೈಲು! (2)
16. ಹೊಟ್ಟೆ ಅಥವಾ ಉದರ (3)

ಮೇಲಿಂದ ಕೆಳಕ್ಕೆ
1. ಅತ್ತಿತ್ತ ನೋಡುತ್ತಿರುವವಳು ಮಾವನ ಹೆಂಡತಿ (2)
2. ಗೀಟು ಹಾಕಿದವ ಮಾಡಿದ ಮೆರುಗಿನ ಲೇಪನ (3)
3. ಮಗನಲ್ಲಿ ಅಪಸ್ಮಾರ ರೋಗವೇ! (4)
4. ಕೇರುವ ಸಾಧನ (3)
6. ಆ ವರ್ತಕನೇ ತಿಳಿಸಿಬಿಡುತ್ತಾನೆ ಎಲ್ಲಾ ಸುದ್ದಿ! (4)
8. ನಯದೊಳಗಿರುವುದು ಉದಯದ ಪ್ರಾರಂಭ (4)
10. ಮನೆಯಲ್ಲಿಯ ಹಜಾರ (4)
11. ಹಸೆ ಬರೆಯುವ ಜಾಗದಲ್ಲೇ ಬೆಳೆದ ಪಾಚಿ (3)
12. ಜಲದಲ್ಲಿ ಹುಟ್ಟಿರುವುದು (3)
13. ದುಸ್ತರದಲ್ಲೆ ಮಡಿಕೆಯನ್ನು ಹುಡುಕಿ (2)



5372ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉದಕ 3.ಕನಸು 4.ಮಡಕೆ 6.ಕುಶಲ 7.ವಾಡಿಕೆ 9.ಮರುಕ 11.ನಜರು 13.ದಿವಾನ 15.ಪ್ರವಾದಿ 17.ಲಫಂಗ 18.ವರ್ತಕ 19.ತಿವಸ

ಮೇಲಿಂದ ಕೆಳಕ್ಕೆ:
1.ಉಸುಕು 2.ಕಮಲ 3.ಕರಡಿ 5.ಕೆಸರು 7.ವಾಗ್ದಾನ 8.ಕೆನ್ನೀರು 9.ಮಸೀದಿ 10.ಕದನ 12.ಜಟಿಲ 14.ವಾದಕ 15.ಪ್ರಗತಿ 16.ದಿವಸ

ಸುಡೊಕು 5759


	2			3		4		6
4		1	5		2			
				4			5	1
	9				4	6		
6		2		8				5
		4	2			3		
				2				9
	1	3	8		5		6	
9	4		6		3	8		

5758 ಸುಡೊಕು

5	3	1	4	8	6	2	9	7
7	8	4	2	3	9	1	5	6
2	9	6	1	5	7	8	4	3
8	1	7	5	4	2	3	6	9
3	6	2	9	7	1	5	8	4
9	4	5	8	6	3	7	1	2
1	7	8	3	9	4	6	2	5
4	2	3	6	1	5	9	7	8
6	5	9	7	2	8	4	3	1

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಜುಲೈ 8, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ಷಷ್ಠಿ ಗಂ. 21-52, ನಕ್ಷತ್ರ: ಪೂರ್ವಾಭಾದ್ರ ಗಂ. 20-36 ಯೋಗ: ಸೌಭಾಗ್ಯ ಗಂ. 17-23 ಕರಣ: ಗರ ಗಂ. 11-01, ಮಿಥುನ ಮಾಸದ 23 ನೇ ದಿನ, ಮಳೆನಕ್ಷತ್ರ: ಪುನರ್ವಸು 1. ರಾಹುಕಾಲ : ಬೆಳಿಗ್ಗೆ 09-00 - 10-30, ಸೂರ್ಯೋದಯ : 06-13 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 19 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 2, 3

ಮೇಷ: ವಿದ್ಯಾರ್ಥಿಗಳು ಹೆಚ್ಚಿನ ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಿ, ಜಯ ನಿಮ್ಮದಾಗುತ್ತದೆ, ಆದ್ದರಿಂದ ಧೈರ್ಯಗೆಡುವ ಪ್ರಸಂಗವಿಲ್ಲ. ಕಬ್ಬಿಣ ವ್ಯಾಪಾರಿಗಳಿಗೆ ಉತ್ತಮ ದಿನ. ಗುರು-ಹಿರಿಯರ ಆಶೀರ್ವಾದ ಪಡೆಯಿರಿ.

ವೃಷಭ: ಹಲವು ದಿನದ ಮನಸ್ತಾಪದ ಬಳಿಕ ಮನೆಯಲ್ಲಿ ಮಕ್ಕಳ ಸಂತಸ ಸಡಗರ ಕಂಡು ಮನಸ್ಸಿಗೆ ಸಂತೋಷವಾಗುವುದು. ಆಜ್ಞೆ ಪಾಲಿಸುವ ಜನರು ಗುತ್ತಾರೆ. ಮಕ್ಕಳ ಆರೋಗ್ಯದಲ್ಲಿ ಕೊರತೆ ಇರುವುದಿಲ್ಲ.

ಮಿಥುನ: ಯಾವುದೇ ಪರಿಸ್ಥಿತಿಯಲ್ಲಿಯೂ ನಿಮ್ಮ ಮನಸ್ಸಿನ ಭಾವನೆಗಳಿಗೆ ಮಾನ್ಯತೆ ನೀಡದಿರುವಂತಹ ತೀರ್ಮಾನವನ್ನು ತೆಗೆದುಕೊಳ್ಳಬೇಡಿ. ಉಡುಪು ಮಾರಾಟಗಾರರಿಗೆ ವಿಶೇಷ ದಿನ. ದೇವತಾ ರಾಧನೆ ನಡೆಸಿ.

ಕರ್ಕಾಟಕ: ದೇಹಕ್ಕೆ ಆಯಾಸವಾದಲ್ಲಿ ಸ್ವತಃ ಆರೈಕೆ ಮಾಡಿಕೊಳ್ಳುವುದು ಉತ್ತಮ. ಸಹಚರರಲ್ಲಿ ಸಾಲ ತೆಗೆದುಕೊಳ್ಳುವುದು ಸರಿಯಲ್ಲ. ಸ್ವಪ್ರಯತ್ನದಿಂದ ಕೆಲಸಗಳನ್ನು ಸಾಧಿಸಿಕೊಳ್ಳುವಿರಿ. ಸ್ಪರ್ಧೆಯಲ್ಲಿ ಜಯ.

ಸಿಂಹ: ಯುವ ಕಲಾವಿದರಿಗೆ ಹೆಚ್ಚು ಪ್ರೋತ್ಸಾಹ ಅವಕಾಶಗಳು ಲಭಿಸುವುದು. ವೃತ್ತಿ ತರಬೇತಿ ಹೊಂದಿದ ಕುಶಲಕರ್ಮಿಗಳಿಗೆ ಆದಾಯ ಹೆಚ್ಚಲಿದೆ. ಕೊಡುಕೊಳ್ಳುವಿಕೆಯ ವ್ಯವಹಾರದಿಂದ ಅಧಿಕ ಲಾಭ ಬರಲಿದೆ.

ಕನ್ಯಾ: ಚಾಣಾಕ್ಷತನದ ನಿರ್ಧಾರಗಳು ನಿಮ್ಮನ್ನು ಊರಿನ ತೂಕದ ವ್ಯಕ್ತಿಯನ್ನಾಗಿ ಮಾಡಲಿದೆ. ಲಾಟರಿಯಂತಹ ಯೋಜನೆಗಳು ಕಣ್ಣಾ-ಮುಚ್ಚಾಲೆಯಾಟ ನಡೆಸಲಿದೆ. ಸಂಘ ಸಂಸ್ಥೆಗಳ ಪದಾಧಿಕಾರ ದೊರಕುವುದು.

ತುಲಾ: ಆತ್ಮವಿಶ್ವಾಸ ಮತ್ತು ಕಠಿಣ ಪರಿಶ್ರಮದ ಫಲವನ್ನು ಅನುಭವಿಸುವಿರಿ. ಸತ್ಕಾರ ಸಮಾರಂಭಗಳಲ್ಲಿ ಭಾಗವಹಿಸಬೇಕಾಗುವುದು. ವಿವೇಕರಹಿತ ಕೆಲಸದಲ್ಲಿ ತೊಡಗಿಸಿಕೊಳ್ಳದಿರಿ.

ವೃಶ್ಚಿಕ: ಜೀವನದಲ್ಲಿನ ಪ್ರಮುಖ ಬದಲಾವಣೆಯನ್ನು ಸಮಯದಲ್ಲಿ ಕಾಣಲಿದ್ದೀರಿ. ಸಂಬಂಧಿಕರ ಅತಿ ವಿಶ್ವಾಸ, ಪ್ರೀತಿಯನ್ನು ಕಂಡು ಮರುಳಾಗಬೇಡಿ. ಷೇರು ವ್ಯವಹಾರಗಳಲ್ಲಿ ಯಥಾಸ್ಥಿತಿ ಕಾಪಾಡಿಕೊಳ್ಳಿರಿ.

ಧನು: ತಾತ್ಕಾಲಿಕ ಉದ್ಯೋಗ ದೊರೆತು ಅಲ್ಪ ಪ್ರಮಾಣದ ಸಮಾಧಾನವಾಗುವುದು. ವೈದ್ಯಕೀಯ ವಿದ್ಯಾರ್ಥಿಗಳಿಗೆ ಓದಿನಲ್ಲಿ ಪರಿಶ್ರಮ ಅಗತ್ಯವೆನಿಸಲಿದೆ. ದೇವತಾ ಕಾರ್ಯಗಳಿಗಾಗಿ ಪ್ರಯಾಣ ಮಾಡಲಿದ್ದೀರಿ.

ಮಕರ: ಮನೆಯ ಪಿತ್ರಾರ್ಜಿತ ಆಸ್ತಿಯ ವ್ಯವಹಾರಗಳು ಒಂದು ಹಂತ ತಲುಪಿದ್ದಕ್ಕೆ ಸಮಾಧಾನವಾಗುವುದು. ಕೆಲಸಗಳು ಮಂದಗತಿಯಲ್ಲಿ ಸಾಗುವುದು. ಕಾರ್ಯಕ್ಷೇತ್ರದಲ್ಲಿ ಕೆಲವು ಬದಲಾವಣೆಗಳಾಗುವ ಸಾಧ್ಯತೆ ಇದೆ.

ಕುಂಭ: ಪತಿ ಪತ್ನಿಯರ ಮುಸುಕಿನ ಗುದ್ದಾಟವು ಮೂರನೆ ವ್ಯಕ್ತಿಯ ಸಹಾಯದಿಂದಾಗಿ ನಿವಾರಣೆಯಾಗುತ್ತದೆ. ಮನೆಯ ಪರಿಸ್ಥಿತಿ ಅರಿವಿದ್ದರೂ ಆದರ್ಶ ವೃತ್ತಿಗಾಗಿಯೇ ಹಲವು ದಿನಗಳ ಕಾಯುವಿಕೆ ಸರಿಯಾದುದಲ್ಲ.

ಮೀನ: ಉನ್ನತ ಶಿಕ್ಷಣದ ಮನಸ್ಸಿದ್ದರೂ ನಿಬಂಧನೆಗಳಿಗೆ ಕಟ್ಟುಬಿದ್ದು ವೃತ್ತಿಯನ್ನೇ ಆರಿಸಿಕೊಳ್ಳುವಿರಿ. ಉತ್ತಮ ಯೋಚನಾ ಸಾಮರ್ಥ್ಯವನ್ನು ಹೊಂದಿದ್ದರೂ ಒತ್ತಡದಲ್ಲಿ ನಿರ್ಧಾರ ತೆಗೆದುಕೊಳ್ಳದಿರಿ.



2023-24 ರಾಜ್ಯ ಬಜೆಟ್



₹37,587 ಕೋಟಿ ಶಿಕ್ಷಣ ಕ್ಷೇತ್ರಕ್ಕೆ ಹಂಚಿಕೆಯಾದ ಅನುದಾನ

₹24,166 ಕೋಟಿ ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕೆ ಹಂಚಿಕೆಯಾದ ಅನುದಾನ


₹14,950 ಕೋಟಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣಕ್ಕೆ ಹಂಚಿಕೆಯಾದ ಅನುದಾನ

ಪ್ರತಿಕ್ರಿಯೆಗಳು



ಸರ್ಕಾರ ಸುಳ್ಳು ಭರವಸೆಗಳ ಬಜೆಟ್ ಮಂಡಿಸಿ ಜನರನ್ನು ವಂಚಿಸಲು ಪ್ರಯತ್ನಿಸಿದೆ. ಗ್ಯಾರಂಟಿಗಳ ಜಾರಿಗೆ ₹57,910 ಕೋಟಿ ವೆಚ್ಚ ಎಂದಿದೆ. ಆದಾಯ ಸಂಗ್ರಹದ ಬಗ್ಗೆ ಸ್ಪಷ್ಟತೆ ಇಲ್ಲ.

ನಳಿನ್ ಕುಮಾರ್ ಕಟೀಲ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ



ಎಪಿಎಂಸಿ ತಿದ್ದುಪಡಿ ಕಾಯ್ದೆ ವಾಪಸ್ ಪಡೆದಿದೆ. ಆದರೆ, ಅದೇ ಸಮಯದಲ್ಲಿ ರೈತರ ಪ್ರತಿರೋಧಕ್ಕೆ ಕಾರಣವಾಗಿದ್ದ ಭೂಸುಧಾರಣಾ ಕಾಯ್ದೆಯನ್ನೂ ವಾಪಸ್ ಪಡೆಯಬೇಕಿತ್ತು.

ಬಿ.ಆರ್. ಪಾಟೀಲ, ಕಾಂಗ್ರೆಸ್ ಶಾಸಕ, ಆಳಂದ



ಬಜೆಟ್‌ನಲ್ಲಿ ಆದಾಯ ಕೊರತೆ ಶೇ 109ರಷ್ಟು ಹೆಚ್ಚಳವಾಗಿದೆ. ಒಂದು ಕೈಯಲ್ಲಿ ಕೊಟ್ಟು ಎರಡು ಕೈಯಿಂದ ತೆಗೆದುಕೊಳ್ಳುತ್ತಿದೆ. ಕೃಷಿ, ತೋಟಗಾರಿಕೆ, ಸಹಕಾರ, ಸಹಿತ ಎಲ್ಲ ಕ್ಷೇತ್ರಗಳ ಸಬ್ಸಿಡಿ ಕಡಿತಗೊಳಿಸಲಾಗಿದೆ

ಪೃಥ್ವಿ ರೆಡ್ಡಿ, ರಾಜ್ಯಾಧ್ಯಕ್ಷ, ಎಎಪಿ



ಗ್ಯಾರಂಟಿಗಳ ಸುತ್ತ ಗಿರಕಿ ಹೊಡೆಯುತ್ತಿರುವ ಸಾಮಾನ್ಯ ಬಜೆಟ್ ಇದಾಗಿದೆ. ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ಕೈಗೊಳ್ಳಬೇಕಾದ ಇತರೆ ಯೋಜನೆಗಳು ಮತ್ತು ಕಾರ್ಯಕ್ರಮಗಳ ಜಾರಿಗೆ ಸಂಪನ್ಮೂಲದ ಕೊರತೆ ಎದ್ದು ಕಾಣುತ್ತಿದೆ.

ರವಿಕೃಷ್ಣಾ ರೆಡ್ಡಿ, ಅಧ್ಯಕ್ಷ, ಕೆಆರ್‌ಎಸ್ ಪಕ್ಷ

ತಜ್ಞರ ಅಭಿಪ್ರಾಯ

ಶಿಕ್ಷಣ ಕ್ಷೇತ್ರ ಸುಧಾರಣೆಗೆ ಒತ್ತು

ಗ್ಯಾರಂಟಿಗಳಿಗೆ ಹಣ ಹೊಂದಿಸುವ ಕಸರತ್ತಿನಲ್ಲಿ ಸರ್ಕಾರ ಶಿಕ್ಷಣ ಕ್ಷೇತ್ರವನ್ನು ಎಲ್ಲಿ ಕಡೆಗಣಿಸುತ್ತದೆಯೋ ಎಂಬ ಆತಂಕ ಕಾಡುತ್ತಿತ್ತು. ಆದರೆ ಹಾಗಾಗಿಲ್ಲ. ಶಿಕ್ಷಣ ಕ್ಷೇತ್ರದಲ್ಲಿ ಹೊಸ ಕಾರ್ಯಕ್ರಮಗಳ ಘೋಷಿಸುವುದರ ಜತೆಗೆ ಕ್ಷೇತ್ರದ ಸುಧಾರಣೆಗೂ ಸರ್ಕಾರ ಬಜೆಟ್‌ನಲ್ಲಿ ಬದ್ಧತೆ ತೋರಿದೆ.

ಶಾಲಾ– ಕಾಲೇಜುಗಳ ಕೊಠಡಿಗಳ ನಿರ್ಮಾಣ, ಶೌಚಾಲಯ ನಿರ್ಮಾಣ ಹಾಗೂ ನವೀಕರಣಕ್ಕೆ ಹೆಚ್ಚು ಆದ್ಯತೆ ನೀಡಿರುವುದು ಸ್ವಾಗತಾರ್ಹ. ಕಲಿಕೆಯ ನ್ಯೂನತೆಯನ್ನು ಸರಿಪಡಿಸಲು ‘ಮರು ಸಿಂಚನ’ ಕಾರ್ಯಕ್ರಮ, ಪರಿಸರ ಸಂರಕ್ಷಣೆ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸಲು ಅರಣ್ಯ ಇಲಾಖೆ ಸಂಯೋಜನೆಯಲ್ಲಿ ‘ಸಸ್ಯ ಶ್ಯಾಮಲ’ ಕಾರ್ಯಕ್ರಮ ರೂಪಿಸಿರುವುದು ಅಭಿನಂದನಾರ್ಹ. ರಾಷ್ಟ್ರೀಯ ಶಿಕ್ಷಣ ನೀತಿಯ (2020) ಅಂಶಗಳು ದೇಶದ ಬಹುಭಾಷಾ, ಬಹು ಸಂಸ್ಕೃತಿ ಸ್ವರೂಪಕ್ಕೆ ಪೂರಕವಾಗಿರಲಿಲ್ಲ. ಇದಕ್ಕೆ ಬದಲಿಯಾಗಿ ರಾಜ್ಯಕ್ಕೆ ಹೊಂದುವಂತಹ ಹೊಸ ಶಿಕ್ಷಣ ನೀತಿ ರೂಪಿಸುವುದಾಗಿ ಘೋಷಿಸಿರುವುದು ಒಳ್ಳೆಯ ಬೆಳವಣಿಗೆ. ಇದರಿಂದ ಕರ್ನಾಟಕದ ಅಸ್ಮಿತೆ ಉಳಿಯುತ್ತದೆ.



ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ತೋಟಗಾರಿಕೆ ಶಿಕ್ಷಣ ನೀಡುವ ಕಾರ್ಯಕ್ರಮವೂ ಮಹತ್ವಪೂರ್ಣದ್ದಾಗಿದ್ದು, ರೈತಪರ ಕಾಳಜಿ ತೋರುತ್ತದೆ. ಸರ್ಕಾರಿ ಶಾಲೆಗಳ ನಿರ್ವಹಣೆಗೆ ನೀಡಲಾಗುತ್ತಿದ್ದ ₹ 20,000 ಅನ್ನು ₹ 45,000ಕ್ಕೆ ಹೆಚ್ಚಿಸಿರುವುದು ಶಾಲೆಗಳ ಬಲವರ್ಧನೆಗೆ ಪೂರಕವಾಗುತ್ತದೆ. ಒಟ್ಟಾರೆ ಶಿಕ್ಷಣ ಕ್ಷೇತ್ರದಲ್ಲಿ ಮಹತ್ತ್ವದ ಕ್ರಾಂತಿಗೆ ಈ ಬಜೆಟ್ ನಾಂದಿಯಾಡುತ್ತದೆ.

ರವೀಶ್ ಕುಮಾರ್ ಬಿ., ಶಿಕ್ಷಣ ತಜ್ಞ, ಮೈಸೂರು

ಆರೋಗ್ಯ: ಹಿಂದುಳಿದ ಜಿಲ್ಲೆಗಳಿಗೆ ನಿರಾಸೆ

ಆರೋಗ್ಯ ಕ್ಷೇತ್ರ ಸಂಬಂಧಿಸಿದಂತೆ ಬೆಂಗಳೂರು ಮತ್ತು ಕಲಬುರಗಿಗೆ ಮಹತ್ವದ ಯೋಜನೆಗಳನ್ನು ಘೋಷಿಸಲಾಗಿದ್ದು, ಹಿಂದುಳಿದ ಜಿಲ್ಲೆಗಳಿಗೆ ನಿರಾಸೆಯಾಗಿದೆ. ಕಿತ್ತೂರು ಕರ್ನಾಟಕ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೂಲಿಗಾಗಿ ವಲಸೆ ಹೋಗುವ ಜನರ ಆರೋಗ್ಯ ಸುಧಾರಣೆಗೆ ಮಹತ್ವದ ಯೋಜನೆ ಘೋಷಿಸಬೇಕಿತ್ತು.

ವಿಜಯಪುರ, ಬಾಗಲಕೋಟೆ, ಹುಬ್ಬಳ್ಳಿ– ಧಾರವಾಡ, ಗದಗ, ಹಾವೇರಿ, ಬಳ್ಳಾರಿ ಸೇರಿ ಇತರ ಜಿಲ್ಲೆಗಳನ್ನು ಗಮನದಲ್ಲಿರಿಸಿ ಹೆಚ್ಚಿನ ಕೊಡುಗೆ ಅಗತ್ಯವಿತ್ತು. ಬಳ್ಳಾರಿಯ ವೈದ್ಯಕೀಯ ಮಹಾವಿದ್ಯಾಲಯದ ಪುನಶ್ಚೇತನಕ್ಕೆ ಅನುದಾನ ಅಗತ್ಯವಿತ್ತು.



ಅಂಗಾಂಗ ಜೋಡಣೆಗೆ ಸಂಬಂಧಿಸಿದ ಆಸ್ಪತ್ರೆ ಮತ್ತು ಕರ್ನಾಟಕ ಆರೋಗ್ಯ ತಂತ್ರಜ್ಞಾನ ಪ್ರಯೋಗಾಲಯವನ್ನು ಬೆಂಗಳೂರು ಬದಲು ಕಿತ್ತೂರು ಕರ್ನಾಟಕಕ್ಕೆ ಕೊಡಬೇಕಿತ್ತು.

ಕ್ಷಯ ರೋಗ ಪತ್ತೆಗೆ ಕೈಚಾಲಿತ ಕ್ಷ–ಕಿರಣ ಉಪಕರಣ ಒದಗಿಸಲು ಅನುದಾನ ನೀಡಿರುವುದು, ಮನೆ ಬಾಗಿಲಿಗೆ ಔಷಧ ವಿತರಣೆ, ಎಲ್ಲ ಜಿಲ್ಲೆಗಳಲ್ಲಿ ಸಿಟಿ ಸ್ಕ್ಯಾನಿಂಗ್, ಎಂಆರ್‌ಐ ಸ್ಕ್ಯಾನಿಂಗ್ ಸೌಲಭ್ಯ ನೀಡಿದ್ದು ಒಳ್ಳೆಯದು. ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆಗಳ ಆರಂಭಕ್ಕೆ ಅನುದಾನ ಒದಗಿಸಿದ್ದು ಸ್ವಾಗತಾರ್ಹ. ಆದರೆ, ಬುದ್ಧಿಮಾಂದ್ಯ ಪದದ ಬದಲು ಬೌದ್ಧಿಕ ಅಸಾಮರ್ಥ್ಯ ಮಕ್ಕಳ ವಸತಿ ಶಾಲೆ ಎಂದು ಹೆಸರಿಸಬೇಕಿತ್ತು.

ಕನಕಪುರ ತಾಲ್ಲೂಕಿಗೆ ವೈದ್ಯಕೀಯ ಕಾಲೇಜು ಮಂಜೂರಾಗಿದೆ. ಅದಕ್ಕೆ ಯಾವ ಇಲಾಖೆಯಿಂದ ಅನುದಾನ ಒದಗಿಸಲಾಗುತ್ತದೆ ಎಂದು ಹೇಳಬೇಕಿತ್ತು. ಒಟ್ಟಾರೆ ಬಡವರು, ಅಲ್ಪಸಂಖ್ಯಾತರು, ಮಹಿಳೆಯರ ಕಾಳಜಿ ಗಮನದಲ್ಲಿ ಇಟ್ಟುಕೊಂಡು ಉತ್ತಮ ಯೋಜನೆಗಳನ್ನು ನೀಡಿರುವುದು ಸ್ವಾಗತಾರ್ಹ.

ಡಾ.ವೈ.ಸಿ.ಯೋಗಾನಂದರೆಡ್ಡಿ, ಮಕ್ಕಳ ತಜ್ಞ, ಬಳ್ಳಾರಿ

ಸ್ತ್ರೀ ಕೇಂದ್ರಿತ ಆರ್ಥಿಕ ಅಭಿವೃದ್ಧಿ

ಮಹಿಳಾ ಕೇಂದ್ರಿತ ಯೋಜನೆಗಳಿಗಾಗಿ ಶೇ 22ರಷ್ಟು ಮತ್ತು ಮಕ್ಕಳ ಯೋಜನೆಗಳಿಗಾಗಿ ಶೇ 16ರಷ್ಟು ಪಾಲನ್ನು ಈ ಬಜೆಟ್‌ನಲ್ಲಿ ಮೀಸಲಿಡಲಾಗಿದೆ. ಇದೊಂದು ಆಶಾದಾಯಕ ಬೆಳವಣಿಗೆ.

ಮಹಿಳಾ ಉದ್ಯಮದಾರರಿಗೆ ಶೇ 4ರಷ್ಟು ಬಡ್ಡಿ ದರದಲ್ಲಿ ಸಾಲ ನೀಡಲು ಉದ್ದೇಶಿಸಿರುವುದು ಆರ್ಥಿಕತೆಗೆ ಬಹು ದೊಡ್ಡ ಮಟ್ಟದಲ್ಲಿ ಸಹಾಯ ಮಾಡುತ್ತದೆ. ಇದರಿಂದ ಹೆಚ್ಚು ಸಂಖ್ಯೆಯ ಮಹಿಳೆಯರನ್ನು ಮುಖ್ಯವಾಹಿನಿಗೆ ತರುವ ಕೆಲಸವಾಗುತ್ತದೆ. ಜೊತೆಗೆ ಉದ್ದಿಮೆದಾರರನ್ನು ಬೆಳೆಸಿದಂತಾಗುತ್ತದೆ.



ಬಡವರ ವೆಚ್ಚ ಕಡಿಮೆ ಆಗಿದೆ ಎನ್ನುವ ವಿಷಯವು ಅಂಕಿ ಅಂಶಗಳಿಂದ ತಿಳಿದುಬಂದಿದೆ. ಈ ಹಿನ್ನೆಲೆಯಲ್ಲಿ ಪ್ರತಿ ಮಹಿಳೆಗೂ ಪ್ರತಿ ತಿಂಗಳು ₹2 ಸಾವಿರ ನೀಡುವ ‘ಗೃಹಲಕ್ಷ್ಮಿ’ ಯೋಜನೆಯು ತಳಮಟ್ಟದ ಹಣವನ್ನು ಆರ್ಥಿಕತೆಗೆ ಹಿಂದಿರುಗಿಸುವಂಥ ಕೆಲಸ ಮಾಡುತ್ತದೆ. ಆ್ಯಸಿಡ್ ಸಂತ್ರಸ್ತರಿಗೆ ಬಡ್ಡಿ ರಹಿತವಾಗಿ ₹5 ಲಕ್ಷ ಸಹಾಯಧನ ನೀಡುವ ಯೋಜನೆಯೂ ಬಹಳ ಒಳ್ಳೆಯ ಯೋಜನೆಯಾಗಿದೆ.

ಮಹಿಳೆಯರ, ಮಕ್ಕಳ ಪರ ಇರುವ ತನ್ನ ಬದ್ಧತೆಯನ್ನು ಈ ಸರ್ಕಾರವು ತನ್ನ ಬಜೆಟ್ ಮೂಲಕ ತೋರ್ಪಡಿಸಿದೆ. ಸಮಾಜದ ಸರಿಸುಮಾರು ಅರ್ಧದಷ್ಟಿರುವಂಥ ಹೆಣ್ಣುಮಕ್ಕಳ ಕಡೆಗೆ ಇಷ್ಟರ ಮಟ್ಟಿನ ಕಾಳಜಿಯನ್ನು ತೋರುತ್ತಿರುವ ಸರ್ಕಾರದ ನಡೆ ನಿಜಕ್ಕೂ ಸ್ವಾಗತಾರ್ಹ. ಒಟ್ಟಿನಲ್ಲಿ ಇದು ಮಹಿಳಾ ಕಲ್ಯಾಣ ಮತ್ತು ಆರ್ಥಿಕ ಕಲ್ಯಾಣದ ಬಜೆಟ್ ಆಗಿದೆ.

ಸಂಜ್ಯೋತಿ, ಸಾಮಾಜಿಕ ಕಾರ್ಯಕರ್ತೆ



ಶಿಕ್ಷಣ ಕ್ಷೇತ್ರದ ಅನುದಾನ ಕಡಿತ

ಹೊಸತು ಕಡಿಮೆ: ಹಳೇ ಯೋಜನೆಗಳಿಗೆ ಮರುಜೀವ

• ಎಸ್‌. ರವಿಪ್ರಕಾಶ್

ಪ್ರಗತಿಶೀಲ ರಾಜ್ಯವೊಂದರಲ್ಲಿ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಿಗೆ ಆದ್ಯತೆ ಹಾಗೂ ಅನುದಾನ ನೀಡಿಕೆ ಗಣನೀಯ ಪ್ರಮಾಣದಲ್ಲಿರಬೇಕು. ಹಾಗೆಯೇ, ಬದಲಾದ ಕಾಲಕ್ಕೆ ತಕ್ಕಂತೆ ಈ ಎರಡೂ ಕ್ಷೇತ್ರಗಳನ್ನು ಉನ್ನತೀಕರಿಸಿ, ಆಧುನಿಕ ಮತ್ತು ಸಮಕಾಲೀನ ವಿಚಾರ, ತಂತ್ರಜ್ಞಾನಗಳ ಅಳವಡಿಕೆ ಮತ್ತು ಅದಕ್ಕೆ ಪೂರಕವಾಗಿ ಕಾರ್ಯಕ್ರಮಗಳನ್ನು ರೂಪಿಸಬೇಕು. ಆದರೆ, ಪ್ರತಿ ಬಾರಿ ಮಂಡಿಸಲ್ಪಡುವ ಬಜೆಟ್‌ಗಳು ಆಯಾ ಸರ್ಕಾರಗಳು ತಮ್ಮ ಸೈದ್ಧಾಂತಿಕ ಮತ್ತು ಚುನಾವಣಾ ಭರವಸೆಗಳಿಗೆ ಅಂಟಿಕೊಳ್ಳುತ್ತವೆ. ಅದಕ್ಕೆ ತಕ್ಕಂತೆ ಸಿದ್ಧ ಸೂತ್ರ ಹಾಗೂ ಪಾರಂಪರಿಕ ಚೌಕಟ್ಟನ್ನು ಮೀರಿ ಹೊಸ ಪರಂಪರೆಯನ್ನು ಸೃಷ್ಟಿಸುವುದು ತೀರಾ ಅಪರೂಪ. ಈ ಬಾರಿಯ ಬಜೆಟ್ ಕೂಡ ಭಿನ್ನವಾಗಿಲ್ಲ.

ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಿಗೆ ಅನುದಾನ ನೀಡಿಕೆಯಲ್ಲಿ ಹಿಂದಿನ ವರ್ಷಕ್ಕಿಂತ ತಲಾ ಶೇ 1 ರಷ್ಟು ಕಡಿತಗೊಳಿಸಲಾಗಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕ್ಷೇತ್ರಕ್ಕೆ ಶೇ 2 ರಿಂದ ಶೇ 7ಕ್ಕೆ ಹೆಚ್ಚಿಸಲಾಗಿದೆ. ಪ್ರಾಯಶಃ ಈ ಏರಿಕೆ ಗೃಹಲಕ್ಷ್ಮಿ, ಶಕ್ತಿಯಂತಹ ಮಹಿಳಾ ಕೇಂದ್ರಿತ ‘ಗ್ಯಾರಂಟಿ’ ಯೋಜನೆಗಳ ಹಣ ಹೊಂದಾಣಿಕೆಗೆ ಎಂಬುದು ಸ್ಪಷ್ಟ. ಏಕೆಂದರೆ ಮಹಿಳೆಯರಿಗೆ ಚಾಲ್ತಿಯಲ್ಲಿರುವ ಕೆಲವು ಯೋಜನೆಗಳಿಗೆ ಅಲ್ಪಪ್ರಮಾಣದಲ್ಲಿ ಅನುದಾನ ಹೆಚ್ಚಿಸಿರುವುದು ಮತ್ತು ಬೆರಳೆಣಿಕೆಯ ಹೊಸ ಯೋಜನೆಗಳನ್ನು ಪ್ರಕಟಿಸಿರುವುದು ಬಿಟ್ಟರೆ ಉಳಿದಂತೆ ಗಮನಾರ್ಹ ಅಂಶಗಳಿಲ್ಲ. ಬುದ್ಧಿಮಾಂದ್ಯ ಮಕ್ಕಳಿಗಾಗಿ ಈ ಸಾಲಿನಲ್ಲಿ ಏಳು ಜಿಲ್ಲೆಗಳಲ್ಲಿ 10 ವಸತಿ ಶಾಲೆಗಳನ್ನು ಆರಂಭಿಸಲು ₹2 ಕೋಟಿ ನಿಗದಿ ಮಾಡಲಾಗಿದೆ. ಇವುಗಳನ್ನು ಎನ್‌ಜಿಒಗಳ ಮೂಲಕ ನಡೆಸಲಾಗುವುದು ಎಂದು ಪ್ರಕಟಿಸಲಾಗಿದೆ.

ನಿರೀಕ್ಷೆಯಂತೆ ಉನ್ನತ ಶಿಕ್ಷಣದಲ್ಲಿ ಜಾರಿ ಆಗಿದ್ದ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ)ಯನ್ನು ಕೈಬಿಟ್ಟಿದೆ. ಬದಲಿಗೆ ಹೊಸ ನೀತಿ ರೂಪಿಸುವುದಾಗಿ ಹೇಳಿದೆ. ಎನ್‌ಇಪಿ ಕೈಬಿಡಲು ಕೊಟ್ಟ ಕಾರಣಗಳು ಹೀಗಿವೆ– ‘ರಾಷ್ಟ್ರೀಯ ಶಿಕ್ಷಣ ನೀತಿಯು ಒಕ್ಕೂಟ ವ್ಯವಸ್ಥೆಗೆ ಮಾರಕ, ಸಂವಿಧಾನ ಮತ್ತು ಪ್ರಜಾಪ್ರಭುತ್ವಕ್ಕೆ ವಿರುದ್ಧವಾದ ಅವೈಜ್ಞಾನಿಕ ಅಂಶಗಳನ್ನು ಒಳಗೊಂಡಿವೆ’. ಇಸ್ರೋ ಮಾಜಿ ಅಧ್ಯಕ್ಷ ಡಾ.ಕೆ.ಕಸ್ತೂರಿರಂಗನ್ ಅಧ್ಯಕ್ಷತೆಯ ಕರಡು ಸಮಿತಿಯಲ್ಲಿ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ತಜ್ಞರು ಇದ್ದರು. ಅತ್ಯುತ್ತಮ ಶಿಕ್ಷಣ ನೀತಿಯನ್ನು ರಾಜಕೀಯ ಕಾರಣಕ್ಕಾಗಿಯೇ ಇದನ್ನು ಕೈಬಿಟ್ಟಿದ್ದಾರೆ ಎಂಬುದಾಗಿ ಬಿಜೆಪಿ ನಾಯಕರು ದೂರಿದ್ದಾರೆ. ಕನಕಪುರಕ್ಕೊಂದು ವೈದ್ಯಕೀಯ ಕಾಲೇಜು ಬೇಕು ಎಂಬ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಹು ದಿನಗಳ ಬೇಡಿಕೆಯನ್ನು ಈಡೇರಿಸಲಾಗಿದೆ.


ವಿಶ್ವವಿದ್ಯಾಲಯಗಳಲ್ಲಿ ಪಿಎಚ್‌.ಡಿ ಪ್ರವೇಶಕ್ಕಾಗಿ ಹೊಸ ವ್ಯವಸ್ಥೆ ಆರಂಭಿಸಲಾಗಿದೆ. ಅದರ ಪ್ರಕಾರ ಎಲ್ಲ ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಮತ್ತು ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಶೇ 40 ಸೀಟುಗಳ ಭರ್ತಿಗೆ ಕೌನ್ಸೆಲಿಂಗ್ ನಡೆಸಲಾಗುವುದು. ವಿಶ್ವವಿದ್ಯಾಲಯಗಳಲ್ಲಿ ಈವರೆಗೆ ಆಯಾ ವಿಭಾಗಗಳೇ ಪಿಎಚ್‌.ಡಿ ಪ್ರವೇಶ ಪ್ರಕ್ರಿಯೆ ನಡೆಸುತ್ತಿದ್ದವು. ಇದರಲ್ಲಿ ಸ್ವಜನ ಪಕ್ಷಪಾತ ಮತ್ತು ಭ್ರಷ್ಟಾಚಾರದ ವ್ಯಾಪಕ ಆರೋಪಗಳು ಕೇಳಿ ಬಂದಿದ್ದವು. ಹೊಸ ವ್ಯವಸ್ಥೆ ಅದಕ್ಕೆ ಕಡಿವಾಣ ಹಾಕಲಿದೆಯೇ ಎಂಬುದನ್ನು ಕಾದು ನೋಡಬೇಕು.

ಇನ್ನು ಮುಂದೆ 9 ಮತ್ತು 10 ನೇ ತರಗತಿ ವಿದ್ಯಾರ್ಥಿಗಳಿಗೂ ಚಿಕ್ಕಿ, ಮೊಟ್ಟೆ, ಹಾಲು ವಿತರಣೆ ಮಾಡಲಾಗುವುದು. ಅಲ್ಲದೇ, 1 ರಿಂದ 8 ನೇ ತರಗತಿ ವಿದ್ಯಾರ್ಥಿಗಳಿಗೆ ವಾರದಲ್ಲಿ ಎರಡು ಬಾರಿ ವಿತರಿಸಲು ನಿರ್ಧರಿಸಲಾಗಿದೆ. 5,775 ಶಾಲೆಗಳು ಮತ್ತು 150 ಕಾಲೇಜುಗಳಲ್ಲಿ ಶೌಚಾಲಯಗಳನ್ನು ನರೇಗಾ ಯೋಜನೆಯಡಿ ₹200 ಕೋಟಿಯಲ್ಲಿ ನಿರ್ಮಾಣ ಮತ್ತು ಶಾಲಾ ಕೊಠಡಿಗಳ ನಿರ್ಮಾಣ ಹಿಂದಿನ ಸರ್ಕಾರದ ಮುಂದುವರಿದ ಕಾಮಗಾರಿಗಳಿಗೆ ಅನುದಾನ ನೀಡಲಾಗಿದೆ.

ಮಾಧ್ಯಮಿಕ ಮತ್ತು ಪಿಯು ಕಾಲೇಜುಗಳಲ್ಲಿ ಇನ್ನೋವೇಶನ್ ಲ್ಯಾಬ್ ಸ್ಥಾಪಿಸಲಾಗುವುದು. ಇದು ವಿದ್ಯಾರ್ಥಿಗಳ ವಿನೂತನ ಆಲೋಚನೆಗಳು ಕನಸುಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಉತ್ತಮ ವೇದಿಕೆ ಆಗಲಿದೆ. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕೆ ಉತ್ತೇಜನ ನೀಡಲು 24 ಲಕ್ಷ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಪುನರಾರಂಭಿಸಲಾಗುವುದು.

ಎಸ್‌ಸಿ, ಎಸ್‌ಟಿ, ಒಬಿಸಿ ಮತ್ತು ಅಲ್ಪಸಂಖ್ಯಾತರಿಗೆ ವಿದೇಶಗಳಲ್ಲಿ ಉನ್ನತ ಶಿಕ್ಷಣ ಪಡೆಯಲು ಶೂನ್ಯ ಬಡ್ಡಿ ದರದಲ್ಲಿ ₹20ಲಕ್ಷ ಸಾಲ ಸೌಲಭ್ಯ ಮುಂದುವರಿಕೆ, ಐಸೆಕ್‌ನಲ್ಲಿ ಪಿಎಚ್‌.ಡಿ ಪಡೆಯುವ ಎಸ್‌ಸಿ, ಎಸ್‌ಟಿ ವಿದ್ಯಾರ್ಥಿಗಳಿಗೆ ಡಾ. ಅಂಬೇಡ್ಕರ್ ಹೆಸರಲ್ಲಿ ಫೆಲೋಶಿಪ್ ನೀಡಲು ₹2 ಕೋಟಿ ಕಾಪು ನಿಧಿ ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ. ಹಿಂದಿನ ಸರ್ಕಾರ ಜಾರಿ ಮಾಡಿದ್ದ ರೈತವಿದ್ಯಾನಿಧಿ, ಮುಖ್ಯಮಂತ್ರಿ ವಿದ್ಯಾನಿಧಿ, ಎಲ್ಲರಿಗೂ ಉಚಿತ ಶಿಕ್ಷಣ ನೀಡುವ ಕಾರ್ಯಕ್ರಮಗಳೂ ಸೇರಿ ಶಾಲಾ– ಕಾಲೇಜು ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಹಲವು ಯೋಜನೆಗಳ ಪ್ರಸ್ತಾಪವಿಲ್ಲ. ಅಹಿಂದ ವರ್ಗಕ್ಕೆ ಈ ಹಿಂದೆ ತಮ್ಮ ಸರ್ಕಾರದ ಅವಧಿಯಲ್ಲಿ ಜಾರಿ ಮಾಡಿದ್ದ ಎಲ್ಲ ಕಾರ್ಯಕ್ರಮಗಳನ್ನೂ ಮತ್ತೆ ಜಾರಿ ಮಾಡಿದ್ದಾರೆ. ಆರೋಗ್ಯ ಕ್ಷೇತ್ರದಲ್ಲಿ ಮಧುಮೇಹ, ರಕ್ತದೊತ್ತಡದಿಂದ ಬಳಲುವ ರೋಗಿಗಳ ಮನೆಗೆ ಔಷಧಿ ತಲುಪಿಸುವ ಯೋಜನೆ ಪ್ರಾಯೋಗಿಕವಾಗಿ ನಡೆಸಲು ತೀರ್ಮಾನ. ಹಠಾತ್ ಹೃದಯಸ್ತಂಭನ ಆದವರಿಗೆ ತುರ್ತು ಚಿಕಿತ್ಸೆ ನೀಡಲು ಪುನೀತ್‌ರಾಜ್‌ಕುಮಾರ್ ಹೆಸರಿನಲ್ಲಿ ಎಇಡಿ ಎಂಬ ವ್ಯವಸ್ಥೆಯನ್ನು ಜಿಲ್ಲಾ ಆಸ್ಪತ್ರೆಗಳಲ್ಲಿ ಆರಂಭಿಸಲು ಪ್ರಸ್ತಾಪಿಸಲಾಗಿದೆ. ಹಿಂದಿನ ಸರ್ಕಾರ ಆರಂಭಿಸಿದ್ದ ನಮ್ಮ ಕ್ಲಿನಿಕ್ ಸೇರಿ ಹಲವು ಯೋಜನೆಗಳ ಪ್ರಸ್ತಾಪವೇ ಇಲ್ಲ.

ಸಹಾಯಧನದಲ್ಲಿ ಇಂಧನಕ್ಕೇ ಸಿಂಹಪಾಲು



ನವೋದ್ಯಮಕ್ಕೆ ವಿಶ್ವದರ್ಜೆ ಕೇಂದ್ರ ‘ಇನ್ನೊವೇಸ್ರ್’

ಬೆಂಗಳೂರು: ನವೋದ್ಯಮಿಗಳಿಗೆ ಅತ್ಯಾಧುನಿಕ ಸೌಲಭ್ಯವುಳ್ಳ ವಿಶ್ವದರ್ಜೆಯ ಪರಿಪೋಷಣ ಕೇಂದ್ರ ‘ಇನ್ನೊವೇಸ್ರ್’ ಅನ್ನು ₹50 ಕೋಟಿ ವೆಚ್ಚದಲ್ಲಿ ಸ್ಥಾಪಿಸುವುದಾಗಿ ಸರ್ಕಾರ ಘೋಷಿಸಿದ್ದು, ಈ ಕೇಂದ್ರಕ್ಕೆ ಪ್ರಸಕ್ತ ಸಾಲಿನಲ್ಲಿ ₹ 10 ಕೋಟಿ ಅನುದಾನ ಒದಗಿಸಲಾಗಿದೆ.

‘ನ್ಯೂ ಏಜ್ ಇನ್ಕ್ಯುಬೇಷನ್ ನೆಟ್‌ವರ್ಕ್’ ಕೇಂದ್ರಗಳನ್ನು ಬೆಂಬಲಿಸಲು ತಂತ್ರಜ್ಞಾನ ವರ್ಗಾವಣೆ ಸಂಸ್ಥೆಯನ್ನು ₹ 4 ಕೋಟಿ ವೆಚ್ಚದಲ್ಲಿ ಸ್ಥಾಪಿಸುವುದಾಗಿ ಘೋಷಿಸಲಾಗಿದೆ. ಇದಕ್ಕೆ ಪ್ರಸಕ್ತ ಸಾಲಿನಲ್ಲಿ ₹ 2 ಕೋಟಿ ಅನುದಾನ ನಿಗದಿಪಡಿಸಲಾಗಿದೆ. ‘ಹೆಲ್ತ್-ಟೆಕ್’ ಮತ್ತು ‘ಮೆಡ್-ಟೆಕ್’ನಲ್ಲಿ ‘ಸೆಂಟರ್ ಆಫ್ ಎಕ್ಸಲೆನ್ಸ್’ ಕೇಂದ್ರವನ್ನು ₹ 50 ಕೋಟಿ ವೆಚ್ಚದಲ್ಲಿ ಸ್ಥಾಪಿಸಲಾಗುವುದು, ಇದಕ್ಕಾಗಿ ಪ್ರಸಕ್ತ ಸಾಲಿನಲ್ಲಿ ₹ 10 ಕೋಟಿ ಅನುದಾನ ಒದಗಿಸಲಾಗುವುದು ಎಂದು ಘೋಷಿಸಲಾಗಿದೆ. ಜೈವಿಕ-ಬ್ಯಾಂಕ್ ಅನ್ನು ₹ 5 ಕೋಟಿ ವೆಚ್ಚದಲ್ಲಿ ಸ್ಥಾಪಿಸುವುದಾಗಿ ತಿಳಿಸಲಾಗಿದ್ದು, ಪ್ರಸಕ್ತ ಸಾಲಿನಲ್ಲಿ ₹ 2 ಕೋಟಿ ಅನುದಾನ ನಿಗದಿಪಡಿಸಲಾಗಿದೆ.

‘ಸೆಂಟರ್ ಆಫ್ ಎಕ್ಸಲೆನ್ಸ್ ಇನ್ ಡಿಸೈನ್’ ಕೇಂದ್ರವನ್ನು ₹ 20 ಕೋಟಿ ವೆಚ್ಚದಲ್ಲಿ ಸ್ಥಾಪಿಸುವುದಾಗಿ ಘೋಷಿಸಿದ್ದು, ಪ್ರಸಕ್ತ ಸಾಲಿನಲ್ಲಿ ₹ 8 ಕೋಟಿ ಅನುದಾನ ನಿಗದಿಪಡಿಸಲಾಗಿದೆ. ರಾಜ್ಯದ ವಿಜ್ಞಾನ ಕೇಂದ್ರಗಳ ಮೂಲಸೌಲಭ್ಯಗಳನ್ನು ಬಲಪಡಿಸಲು ಎರಡು ಪ್ರಾದೇಶಿಕ ವಿಜ್ಞಾನ ಕೇಂದ್ರಗಳನ್ನು ತಲಾ ₹ 50 ಲಕ್ಷ ವೆಚ್ಚದಲ್ಲಿ, ನಾಲ್ಕು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರಗಳನ್ನು ತಲಾ ₹ 30 ಲಕ್ಷ ವೆಚ್ಚದಲ್ಲಿ ಉನ್ನತೀಕರಿಸುವುದಾಗಿ ಘೋಷಿಸಲಾಗಿದೆ.

ಸಂಶೋಧನೆ ಮತ್ತು ನಾವೀನ್ಯತೆ ವ್ಯವಸ್ಥೆಯ ಉದ್ಯಮಗಳು, ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳು ಹಾಗೂ ಸರ್ಕಾರ ಸೇರಿ ಎಲ್ಲಾ ಭಾಗೀದಾರರನ್ನು ಒಟ್ಟುಗೂಡಿಸಲು, ಅವರ ನಡುವೆ ಸಮನ್ವಯತೆ ಸಾಧಿಸಲು ‘ಇ-ಪ್ಲಾಟ್‌ಫಾರ್ಮ್’ ರಚಿಸಲಾಗುವುದು ಎನ್ನಲಾಗಿದೆ.



ಶಾಲೆಗಳ ಸುತ್ತಮುತ್ತ ಒಂದು ವರ್ಷದ ಕಾಲಾವಧಿಯಲ್ಲಿ 50 ಲಕ್ಷ ಸಸಿಗಳನ್ನು ನೆಡುವ ‘ಸಸ್ಯ ಶ್ಯಾಮಲ’ ಕಾರ್ಯಕ್ರಮ ಜಾರಿ. • ಗುಲ್ಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ₹70 ಕೋಟಿ ವೆಚ್ಚದಲ್ಲಿ 200 ಹಾಸಿಗೆಗಳ ತಾಯಿ ಮತ್ತು ಮಕ್ಕಳ ಆಸ್ಪತ್ರೆ • ರಾಜ್ಯದಲ್ಲಿ ಡಯಾಲಿಸಿಸ್ ಕೇಂದ್ರಗಳನ್ನು 219ಕ್ಕೆ ಹೆಚ್ಚಿಸಲು ₹92 ಕೋಟಿ ಅನುದಾನ

ಸಾರ್ವಜನಿಕ ಗ್ರಂಥಾಲಯಗಳಿಗೆ ಪುಸ್ತಕಗಳ ಖರೀದಿಗೆ ₹ 10 ಕೋಟಿ ಅನುದಾನ ಘೋಷಣೆ.

ರಾಮನಗರ ಜಿಲ್ಲೆಯ ಜಾನಪದ ಲೋಕಕ್ಕೆ ₹ 2 ಕೋಟಿ ಅನುದಾನ ಘೋಷಣೆ. ಕಲ್ಯಾಣ ಕರ್ನಾಟಕ ಭಾಗದ ಕೊಪ್ಪಳ ಜಿಲ್ಲೆಯಲ್ಲಿ ಜಾನಪದ ಲೋಕ ಸ್ಥಾಪನೆ.





ಕರ್ನಾಟಕದ ಬುಡಕಟ್ಟು ಸಮುದಾಯ ಜನರ ಕಲಾ ಪ್ರತಿಭೆಯನ್ನು ಪರಿಚಯಿಸುವ ದೃಷ್ಟಿಯಿಂದ ಮತ್ತು ಅವರ ಸಂಸ್ಕೃತಿ, ಜಾನಪದ ವೈದ್ಯ ಪದ್ಧತಿ, ಜಾನಪದ ಕಲೆಗಳ ಪ್ರದರ್ಶನ, ಕರಕುಶಲ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು ಬುಡಕಟ್ಟು ಜನಾಂಗ ಕಲಾವಿದರ ಸಮಾವೇಶ ಆಯೋಜನೆ.

ಬಂಜಾರ ಸಮುದಾಯದ ಸಾಂಸ್ಕೃತಿಕ ಮತ್ತು ಜಾನಪದ ನೃತ್ಯ ಕಲೆಗಳು ನಶಿಸಿ ಹೋಗುತ್ತಿರುವ ಕಾರಣ, ಅವರ ಸಂಸ್ಕೃತಿಯನ್ನು ಬೆಳೆಸುವ ಹಾಗೂ ಉಳಿಸುವ ನಿಟ್ಟಿನಲ್ಲಿ ವಿನೂತನ ಕಾರ್ಯಕ್ರಮ ಆಯೋಜನೆ.

ನಕಲಿ ಅಂಕಪಟ್ಟಿ ಹಾವಳಿ ತಪ್ಪಿಸಲು ರಾಜ್ಯದ ಎಲ್ಲ ಉನ್ನತ ಶಿಕ್ಷಣದ ವಿದ್ಯಾರ್ಥಿಗಳು ಅಕಾಡೆಮಿಕ್ ಬ್ಯಾಂಕ್ ಆಫ್ ಕ್ರೆಡಿಟ್ಸ್ ನಲ್ಲಿ ನೋಂದಾಯಿಸಿಕೊಳ್ಳಬೇಕು ಮತ್ತು ನೇಮಕಾತಿಯಲ್ಲಿ ಎನ್‌ಎಡಿ/ಡಿಜಿಲಾಕರ್‌ನಲ್ಲಿ ಅಂಕಪಟ್ಟಿ ಮತ್ತು ಪ್ರಮಾಣ ಪತ್ರವನ್ನು ಕಡ್ಡಾಯಗೊಳಿಸಲು ಕ್ರಮ.

ನಿಮ್ಹಾನ್ಸ್‌ನಲ್ಲಿ ₹146 ಕೋಟಿ ವೆಚ್ಚದಲ್ಲಿ ಅಂಗಾಂಗ ಜೋಡಣೆಗೆ ಮೀಸಲಾದ ದೇಶದ ಪ್ರಥಮ ಸಾರ್ವಜನಿಕ ಆಸ್ಪತ್ರೆ ಸ್ಥಾಪಿಸಲಾಗುವುದು. ಅಲ್ಲದೇ, ನಾನ್ ಆಲ್ಕೋಹಾಲಿಕ್ ಫ್ಯಾಟಿ ಲಿವರ್ ರೋಗಿಗಳಲ್ಲಿ ಸಿರೋಸಿಸ್ ಮತ್ತು ಕ್ಯಾನ್ಸರ್ ಪತ್ತೆ ಹಚ್ಚಲು ಒಂದು ಫೈಬ್ರೊಸ್ಕ್ಯಾನ್ ಒದಗಿಸಲಾಗುವುದು.

ದುರ್ಬಲ ವರ್ಗಗಳಲ್ಲಿ ಕ್ಷಯ ರೋಗವನ್ನು ಆರಂಭಿಕ ಹಂತದಲ್ಲೇ ಪತ್ತೆ ಮಾಡಲು ಎಂಟು ಜಿಲ್ಲೆಗಳಲ್ಲಿ ಕೈಚಾಲಿತ ಕ್ಷ–ಕಿರಣ ಉಪಕರಣ ಒದಗಿಸಲಾಗುವುದು. ಪ್ರತಿ ಯಂತ್ರಕ್ಕೆ ₹20 ಲಕ್ಷದಂತೆ ₹3ಕೋಟಿ ಒದಗಿಸಲು ತೀರ್ಮಾನ.

ಸಿನಿಮಾಕ್ಕೆ ಸಹಾಯಧನ, ಸಾಂಸ್ಕೃತಿಕ ಕ್ಷೇತ್ರಕ್ಕಿಲ್ಲ ಧನ

• ವರುಣ ಹೆಗಡೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಕ್ಷೇತ್ರವು ಈ ಬಾರಿಯ ಬಜೆಟ್‌ನಲ್ಲಿಯೂ ಕಡೆಗಣಿಸಲ್ಪಟ್ಟಿದ್ದು, ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬೆರಳಣಿಕೆಯಷ್ಟು ಕಾರ್ಯಕ್ರಮಗಳನ್ನು ಮಾತ್ರ ಸರ್ಕಾರ ರೂಪಿಸಿದೆ. ಸಿನಿಮಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕನ್ನಡದ ಗುಣಾತ್ಮಕ ಚಿತ್ರಗಳಿಗೆ ಸಹಾಯಧನ ನೀಡುವ ಯೋಜನೆಯನ್ನು ಪುನರಾರಂಭಿಸುವುದಾಗಿ ಘೋಷಿಸಲಾಗಿದೆ.

ಈ ಯೋಜನೆಯು ಮೂರು ವರ್ಷಗಳ ಹಿಂದೆ ಸ್ಥಗಿತಗೊಂಡಿತ್ತು. ಗುಣಾತ್ಮಕ ಚಿತ್ರಗಳಿಗೆ ಸಹಾಯಧನ ನೀಡಲು ಆಯ್ಕೆ ಸಮಿತಿಗಳನ್ನು ರಚಿಸಿ, ಸಹಾಯಧನ ನೀಡಲು ಕ್ರಮ ಕೈಗೊಳ್ಳಲಾಗುವುದು ಎನ್ನಲಾಗಿದೆ. ಬೆಂಗಳೂರಿನಲ್ಲಿರುವ ಡಾ.ರಾಜ್‌ಕುಮಾರ್ ಸ್ಮಾರಕದ ಬಳಿ ಕನ್ನಡ ಚಿತ್ರರಂಗ ಬೆಳೆದು ಬಂದ ಇತಿಹಾಸ ದಾಖಲಿಸುವ ವಸ್ತು ಸಂಗ್ರಹಾಲಯವನ್ನು ನಿರ್ಮಿಸಲಾಗುತ್ತದೆ ಎಂದು ಪ್ರಕಟಿಸಿದರು.

2015–16ನೇ ಸಾಲಿನಲ್ಲಿ ಮೈಸೂರು ಜಿಲ್ಲೆಯಲ್ಲಿ



ಚಿತ್ರನಗರಿ ಸ್ಥಾಪಿಸುವುದಾಗಿ ಸರ್ಕಾರ ಘೋಷಿಸಿತ್ತು. ಬಳಿಕ ಚಿತ್ರನಗರಿಯನ್ನು ಬೆಂಗಳೂರಿಗೆ ಸ್ಥಳಾಂತರಿಸಲು ಉದ್ದೇಶಿಸಲಾಗಿತ್ತು. ಚಿತ್ರನಗರಿಯನ್ನು ಎಲ್ಲಿ ಸ್ಥಾಪಿಸಬೇಕೆಂಬ ಚರ್ಚೆ ಚಿತ್ರರಂಗದಲ್ಲಿ ಹಲವು ವರ್ಷಗಳಿಂದ ನಡೆದಿದ್ದು, ಬೆಂಗಳೂರು, ಮೈಸೂರು, ಹೆಸರಘಟ್ಟ ನಂತರ ರಾಮನಗರದ ಪ್ರಸ್ತಾಪವೂ ಬಂದಿತ್ತು. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾದ ಬಳಿಕ ಚಿತ್ರನಗರಿಯನ್ನು ಮೈಸೂರಿನಲ್ಲೇ ಸ್ಥಾಪಿಸಬೇಕೆಂಬ ಬೇಡಿಕೆ ಮತ್ತೆ ಮುನ್ನೆಲೆಗೆ ಬಂದಿತ್ತು. ನಿರ್ದೇಶಕ ಹಾಗೂ ನಿರ್ಮಾಪಕ ಎಸ್‌.ವಿ. ರಾಜೇಂದ್ರಸಿಂಗ್ ಬಾಬು ನೇತೃತ್ವದ ನಿಯೋಗ ಈ ಬಗ್ಗೆ ಸರ್ಕಾರಕ್ಕೆ ಮನವಿಯನ್ನೂ ಸಲ್ಲಿಸಿತ್ತು. ಅದರಂತೆ ಮೈಸೂರು ಜಿಲ್ಲೆಯಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಚಿತ್ರನಗರಿ ನಿರ್ಮಿಸಲಾಗುವುದು.

ಮೈಸೂರು ರಾಜ್ಯವು ‘ಕರ್ನಾಟಕ’ ಎಂದು ಮರುನಾಮಕರಣವಾಗಿ 2023ರ ನ.1ಕ್ಕೆ 50 ವರ್ಷ ಪೂರ್ಣಗೊಳ್ಳಲಿದೆ. ಹೀಗಾಗಿ, ‘ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ’ ಎಂಬ ಯೋಜನೆ ರೂಪಿಸಲಾಗಿದೆ. ಈ ಯೋಜನೆಯಡಿ ಇಡೀ ವರ್ಷ ಕರ್ನಾಟಕದ ಇತಿಹಾಸ, ಕಲೆ, ಸಾಹಿತ್ಯ, ಸಂಸ್ಕೃತಿ, ಹಾಗೂ ನಾಡು-ನುಡಿಗೆ ಸಂಬಂಧಿಸಿದಂತೆ ಮತ್ತು ಯುವಜನರಲ್ಲಿ ಕನ್ನಡ-ಕನ್ನಡಿಗ-ಕರ್ನಾಟಕದ ಅರಿವು ಮೂಡಿಸುವ ಯೋಜನೆ ಇದಾಗಿದೆ ಎಂದು ಹೇಳಾಗಿದೆ. ಆದರೆ, ಈ ಯೋಜನೆಗೆ ಸರ್ಕಾರವು ನಿಗದಿತ ಅನುದಾನ ಘೋಷಿಸಿಲ್ಲ.

ಎಂ.ಎಂ. ಕಲಬುರಗಿ ಹೆಸರಲ್ಲಿ ಟ್ರಸ್ಟ್: ಸಾಹಿತಿ ಎಂ.ಎಂ. ಕಲಬುರಗಿ ಅವರ ಹೆಸರಿನಲ್ಲಿ ಟ್ರಸ್ಟ್ ಸ್ಥಾಪಿಸುವುದಾಗಿ ಘೋಷಿಸಲಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಡಿ ಈಗಾಗಲೇ 24 ಟ್ರಸ್ಟ್, ಪ್ರತಿಷ್ಠಾನಗಳು ಕಾರ್ಯನಿರ್ವಹಿಸುತ್ತಿವೆ. ಸಾಹಿತಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಸಾಹಿತ್ಯ ಹಾಗೂ ಪರಿಸರ ಸಂರಕ್ಷಣೆಯ ಚಿಂತನೆಗಳನ್ನು ಯುವಜನಾಂಗಕ್ಕೆ ಪರಿಚಯಿಸುವ ಚಟುವಟಿಕೆಗಳಿಗೆ ಅವರ ಹೆಸರಿನಲ್ಲಿರುವ ಟ್ರಸ್ಟ್‌ಗೆ ₹ 2 ಕೋಟಿ ಘೋಷಿಸಲಾಗಿದೆ.

ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಮುಂಬರುವ ಬಜೆಟ್‌ನಲ್ಲಿಯೇ ₹ 25 ಕೋಟಿ ಅನುದಾನ ಘೋಷಿಸಬೇಕೆಂದು ಸರ್ಕಾರಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಮನವಿ ಮಾಡಿಕೊಂಡಿದ್ದರು. ಆದರೆ, ಬಜೆಟ್‌ನಲ್ಲಿ ಈ ಬಗ್ಗೆ ಪ್ರಸ್ತಾಪಿಸಿಲ್ಲ. ಹಾವೇರಿಯಲ್ಲಿ ನಡೆದ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬಜೆಟ್‌ನಲ್ಲಿಯೇ ₹ 20 ಕೋಟಿ ಅನುದಾನ ಘೋಷಿಸಲಾಗಿತ್ತು.

ಬೆಂಗಳೂರಿನ ಮಲ್ಲತ್ತಹಳ್ಳಿಯಲ್ಲಿರುವ ಕಲಾಗ್ರಾಮವನ್ನು ಥೀಮ್ ಪಾರ್ಕ್ ಆಗಿ ಅಭಿವೃದ್ಧಿ, ವಿಶ್ವ ಕನ್ನಡ ಸಮ್ಮೇಳನ ಸೇರಿ ವಿವಿಧ ಉತ್ಸವ, ಆಚರಣೆಗಳ ಬಗ್ಗೆ ಪ್ರಸ್ತಾಪಿಸಿಲ್ಲ.

ರಾಜ್ಯ ಬಜೆಟ್ 2023-24



₹5,860 ಕೋಟಿ
ಕೃಷಿ ಹಾಗೂ ತೋಟಗಾರಿಕೆ ಇಲಾಖೆ

ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
₹18,038 ಕೋಟಿ

₹19,044 ಕೋಟಿ
ನೀರಾವರಿ ಇಲಾಖೆಗೆ ನಿಗದಿ ಪಡಿಸಿರುವ ಅನುದಾನ



‘ಇ-ಕಾಮರ್ಸ್’ ಕಾರ್ಮಿಕರಿಗೆ ₹ 4 ಲಕ್ಷದ ವಿಮಾ ಭದ್ರತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್‌ನಲ್ಲಿ ಅಸಂಘಟಿತ ವಲಯದ ಕಾರ್ಮಿಕರಿಗೆ ಆರೋಗ್ಯ ಸೌಲಭ್ಯ ಹಾಗೂ ವಿಮಾ ಆಸ್ಪತ್ರೆಗಳ ಉನ್ನತೀಕರಣಕ್ಕೆ ಯೋಜನೆಗಳನ್ನು ಘೋಷಿಸಿದ್ದಾರೆ. ‘ರಾಜ್ಯದಲ್ಲಿ ಕಾರ್ಮಿಕ ಸ್ನೇಹಿ ವಾತಾವರಣ ನಿರ್ಮಿಸಿ, ಅವರ ಆರೋಗ್ಯ ರಕ್ಷಣೆ ಹಾಗೂ ಕ್ಷೇಮಾಭಿವೃದ್ಧಿಗೆ ಒತ್ತು ನೀಡಲಾಗುವುದು’ ಎಂದೂ ಅಭಯ ನೀಡಿದ್ದಾರೆ.

ಸ್ವಿಗ್ಗಿ, ಜೊಮ್ಯಾಟೊ, ಅಮೆಜಾನ್ ಸೇರಿದಂತೆ ‘ಇ-ಕಾಮರ್ಸ್’ ಸಂಸ್ಥೆಗಳ ಕಾರ್ಮಿಕರಿಗೆ ₹ 2 ಲಕ್ಷ ಜೀವ ವಿಮೆ ಸೌಲಭ್ಯ, ₹ 2 ಲಕ್ಷ ಅಪಘಾತ ವಿಮೆ ಸೌಲಭ್ಯ ಸೇರಿ ಒಟ್ಟು ₹ 4 ಲಕ್ಷ ವಿಮೆ ಭದ್ರತೆ ಕಲ್ಪಿಸಲಾಗುವುದು. ಇದರ ಸಂಪೂರ್ಣ ಕಂತು ಸರ್ಕಾರವೇ ಭರಿಸಲು ತೀರ್ಮಾನಿಸಿದೆ.

ಕಾರ್ಖಾನೆಗಳು, ಬಾಯ್ಲರ್‌ಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯಲ್ಲಿನ ವ್ಯವಹಾರ ಸರಳೀಕರಣಗೊಳಿಸುವ ಕ್ರಮವಾಗಿ ಎಲ್ಲ ಸೇವೆಗಳನ್ನು ಆನ್‌ಲೈನ್ ಮೂಲಕವೇ ನಡೆಸಲಾಗುವುದು ಎಂದು ಹೇಳಿದ್ದಾರೆ.

ಆರು ಕಾರ್ಮಿಕ ರಾಜ್ಯ ವಿಮಾ ಆಸ್ಪತ್ರೆಗಳಲ್ಲಿ 35 ಹಾಸಿಗೆ ಸಾಮರ್ಥ್ಯದ ಐಸಿಯು ಹಾಗೂ ಎಂಐಸಿಯು ನಿರ್ಮಿಸಲು ₹ 13 ಕೋಟಿ, ಆರು ಆಸ್ಪತ್ರೆಗಳಲ್ಲಿ 25 ಡಯಾಲಿಸಿಸ್ ಘಟಕ ಆರಂಭಿಸಲು ₹ 5 ಕೋಟಿ, ಎರಡು ಆಸ್ಪತ್ರೆಗಳಲ್ಲಿ ‘ಟ್ರಾಮಾ ಕೇರ್ ಸೆಂಟರ್’ಗೆ ₹ 24 ಕೋಟಿ, 4 ಆಸ್ಪತ್ರೆಗಳಲ್ಲಿ ಮಾಡ್ಯುಲಾರ್ ಒಟಿ ನಿರ್ಮಾಣಕ್ಕೆ ₹ 8 ಕೋಟಿ ಸೇರಿ ಒಟ್ಟು ₹ 85 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಗೆ ತೀರ್ಮಾನಿಸಲಾಗಿದೆ. ಕಾರ್ಮಿಕ ವಿಮಾ ಆಸ್ಪತ್ರೆಗಳಲ್ಲಿ‘ಆಯುಷ್ ವಿಭಾಗ’ ತೆರೆಯಲು ₹ 3 ಕೋಟಿ ವೆಚ್ಚ ಮಾಡಲಾಗುವುದು ಎಂದು ಪ್ರಸ್ತಾಪಿಸಿದ್ದಾರೆ.

ಸಹಾಯಧನ ಭಾರಿ ಏರಿಕೆ

ರಾಜ್ಯ ಸರ್ಕಾರವು 15 ವಿವಿಧ ಇಲಾಖೆಗಳ ಮೂಲಕ ನೀಡುವ ಹಲವು ಸಹಾಯಧನಗಳ ಮೊತ್ತವು ಈ ಬಜೆಟ್‌ನಲ್ಲಿ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ

ವರ್ಷ	ಮೊತ್ತ
2020-21	₹25,765 ಕೋಟಿ
2021-22	₹36,306 ಕೋಟಿ
2022-23	₹30,803 ಕೋಟಿ
2023-24 (ಬಸವರಾಜ ಬೊಮ್ಮಾಯಿ ಬಜೆಟ್)	₹31,367 ಕೋಟಿ
2023-24	₹45,401 ಕೋಟಿ

ಸಿ.ಎಂ ಫೆಲೋಶಿಪ್‌ಗೆ ₹ 10 ಕೋಟಿ

ಬೆಂಗಳೂರು: ‘ಕಲ್ಯಾಣ ಕರ್ನಾಟಕ ಪ್ರದೇಶ’ದಲ್ಲಿ ಸ್ಥಳೀಯ ಆಡಳಿತ ಬಲಪಡಿಸಲು ಪ್ರತಿ ತಾಲ್ಲೂಕಿನಲ್ಲಿ ಯುವ ಪದವೀಧರರನ್ನು ಎರಡು ವರ್ಷದ ಅವಧಿಗೆ ಮುಖ್ಯಮಂತ್ರಿ ಫೆಲೋಶಿಪ್‌ಗೆ ಆಯ್ಕೆ ಮಾಡಲಾಗುವುದು. ಇದಕ್ಕೆ ₹ 10 ಕೋಟಿ ಅನುದಾನ ನಿಗದಿಪಡಿಸಲಾಗಿದೆ.

‘ನರೇಗಾ’ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲಾಗುವುದು. ಈ ಯೋಜನೆ ಅಡಿ 5 ಸಾವಿರ ಗೋಮಾಳ ಪ್ರದೇಶ, 50 ಸಾವಿರ ಎಕರೆ ಹುಲ್ಲುಗಾವಲು ಪ್ರದೇಶ, 2 ಲಕ್ಷ ಬರ ಪರಿಹಾರ ಕಾಮಗಾರಿ, 81 ಸಾವಿರ ಪ್ರವಾಹ ನಿಯಂತ್ರಣ ಕಾಮಗಾರಿ, 4,268 ಭೂಕುಸಿತ ತಡೆ ಕಾಮಗಾರಿ, 27,903 ಗ್ರಾಮಗಳಲ್ಲಿ ಶಾಂತಿಧಾಮವಾಗಿ ಸ್ಮಶಾನ ಭೂಮಿ ಅಭಿವೃದ್ಧಿ ಪಡಿಸಲಾಗುವುದು. ಜತೆಗೆ, 5 ಸಾವಿರ ಶಾಲಾ ಆವರಣಗಳನ್ನು ವಿದ್ಯಾಧಾಮಗಳಾಗಿ, 750 ಗ್ರಾಮೀಣ ಸಂತೆ, 27 ಸಾವಿರ ಕೊಳವೆಬಾವಿ ಮರು ಪೂರಣ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಜೆಟ್‌ನಲ್ಲಿ ಪ್ರಕಟಿಸಿದರು.

ಗ್ರಾಮ ಪಂಚಾಯಿತಿಗಳ ಗ್ರಂಥಾಲಯಗಳನ್ನು ಅರಿವು ಕೇಂದ್ರ’ಗಳಾಗಿ ಮೇಲ್ದರ್ಜೆಗೇರಿಸಿ ವಾರಾಂತ್ಯದಲ್ಲಿಯೂ ಗ್ರಂಥಾಲಯವನ್ನು ತೆರೆಯಲು ಕ್ರಮವಹಿಸಲಾಗುವುದು ಎಂದು ಪ್ರಕಟಿಸಿದರು.



ವಿಶ್ಲೇಷಣೆ

ರೈತರ ಉತ್ಪನ್ನಗಳಿಗೆ ಬ್ರ್ಯಾಂಡಿಂಗ್ ಕೃಷಿ ಭಾಗ್ಯಕ್ಕೆ ಚೈತನ್ಯ

● ಸಚ್ಚಿದಾನಂದ ಕುರಗುಂದ

ಬೆಂಗಳೂರು: ಕೃಷಿ ವಲಯದ ಅನುದಾನದಲ್ಲಿ ಕಡಿತಗೊಳಿಸಿದ್ದರೂ ಹಳೆಯ ಯೋಜನೆಗಳನ್ನು ಜಾರಿಗೊಳಿಸಿ ಸಂಕಷ್ಟದಲ್ಲಿರುವ ರೈತರ ನಿರೀಕ್ಷೆಗಳನ್ನು ಈಡೇರಿಸುವ ಪ್ರಯತ್ನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹರಸಾಹಸ ಮಾಡಿದ್ದಾರೆ. ಕೃಷಿ ವಲಯಕ್ಕೆ ಉದ್ಯಮದ ಸ್ಪರ್ಶ ನೀಡುವ ನಿಟ್ಟಿನಲ್ಲಿ ಹಲವು ಹೊಸ ಯೋಜನೆಗಳನ್ನು ಸಹ ಘೋಷಿಸಲಾಗಿದೆ. ಕೃಷಿ ಉತ್ಪನ್ನ ಮಾರುಕಟ್ಟೆಗಳನ್ನು ಬಲವರ್ಧನೆಗೊಳಿಸುವುದು, ಕೃಷಿ ಭಾಗ್ಯ ಯೋಜನೆಗೆ ಮರು ಚೈತನ್ಯ, ಕೃಷಿ ಉತ್ಪನ್ನಗಳಿಗೆ ಬ್ರ್ಯಾಂಡಿಂಗ್ ಪರಿಕಲ್ಪನೆ ಹಾಗೂ ನವೋದ್ಯಮಗಳಿಗೆ ಉತ್ತೇಜನ ನೀಡುವ ಆಶಯವನ್ನು ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಆದರೆ, ಸಿರಿಧಾನ್ಯಗಳು, ಸಾವಯವ ಕೃಷಿ ಮತ್ತು ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿ ಪದ್ಧತಿಗೆ ಆದ್ಯತೆ ನೀಡುವ ಬಗ್ಗೆ ಉಲ್ಲೇಖವೇ ಇಲ್ಲ. ಈ ಬಾರಿಯೂ ಕೃಷಿ ಉತ್ಪನ್ನಗಳಿಗೆ ಖಚಿತ ಮತ್ತು ನಿಶ್ಚಿತವಾದ ಬೆಲೆ ನಿಗದಿಪಡಿಸುವ ಮಾರುಕಟ್ಟೆ ನೀತಿ ಪ್ರಕಟಿಸಿಲ್ಲ. ರೈತರ ಸಂತೆಗಳಿಗೆ ಕಾಯಕಲ್ಪ ನೀಡುವ ಬಗ್ಗೆಯೂ ಯೋಚಿಸಿಲ್ಲ.

ಕೃಷಿ ಮತ್ತು ತೋಟಗಾರಿಕೆ ವಲಯಕ್ಕೆ ಬಸವರಾಜ ಬೊಮ್ಮಾಯಿ ಅವರು 2022ರ ಮಾರ್ಚ್ 4ರಂದು ಮಂಡಿಸಿದ್ದ ಬಜೆಟ್‌ನಲ್ಲಿ 8457 (ಒಟ್ಟು ಹಂಚಿಕೆಯ ಶೇ 3) ನಿಗದಿಪಡಿಸಿದ್ದರು. ನಂತರ, ಫೆಬ್ರುವರಿಯಲ್ಲಿ ಮಂಡಿಸಿದ್ದ ಬಜೆಟ್‌ನಲ್ಲಿ ₹9456 ಕೋಟಿ (ಒಟ್ಟಾರೆ ಹಂಚಿಕೆಯ ಶೇ 2) ಅನುದಾನ ಮೀಸಲಿಟ್ಟಿದ್ದರು. ಆದರೆ, ಪ್ರಸಕ್ತ ಬಜೆಟ್‌ನಲ್ಲಿ ₹ 5860 ಕೋಟಿ (ಶೇ 2ರಷ್ಟು) ನಿಗದಿಪಡಿಸಲಾಗಿದೆ. ಕೃಷಿ ಉತ್ಪನ್ನಗಳಿಗೆ ಬ್ರ್ಯಾಂಡಿಂಗ್ ಪರಿಕಲ್ಪನೆ ಮತ್ತು ನವೋದ್ಯಮಗಳಿಗೆ ಉತ್ತೇಜನ ನೀಡುವ ಯೋಜನೆಗಳಿಂದ ಯುವಕರನ್ನು ಕೃಷಿ ವಲಯಕ್ಕೆ ಆಕರ್ಷಿಸುವ ಯತ್ನವಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

> ಬಿಜೆಪಿ ಸರ್ಕಾರವು ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ತಂದು ಸದೃಢ ಮಾರುಕಟ್ಟೆ ಜಾಲವನ್ನು ದುರ್ಬಲಗೊಳಿಸಿತ್ತು. ಕಾಯ್ದೆ ತಿದ್ದುಪಡಿಗೆ ಮೊದಲು, 2018-19ರಲ್ಲಿ ರಾಜ್ಯದ 167 ಎಪಿಎಂಸಿಗಳ ಒಟ್ಟು ಆದಾಯ ₹570 ರಿಂದ ₹ 600 ಕೋಟಿ ಇತ್ತು. ಈಗ 2022-23ರಲ್ಲಿ ಆದಾಯ ₹193 ಕೋಟಿಗೆ ಕುಸಿದಿದೆ. ರೈತರು ಶೋಷಣೆಗೆ ಒಳಗಾದ ನಿದರ್ಶನಗಳಿವೆ. ಹೀಗಾಗಿ, ಈ ಕಾಯ್ದೆ ಹಿಂಪಡೆಯಲು ನಿರ್ಧರಿಸಲಾಗಿದೆ.
> ಸಿದ್ದರಾಮಯ್ಯ ಮುಖ್ಯಮಂತ್ರಿ

ಕಾಂಗ್ರೆಸ್ ಸರ್ಕಾರ ಹಿಂದೆ ಜಾರಿಗೊಳಿಸಿದ್ದ ಕೃಷಿ ಭಾಗ್ಯ ಯೋಜನೆಯನ್ನು ಉದ್ಯೋಗ ಖಾತರಿ ಯೋಜನೆಯೊಂದಿಗೆ ಸಂಯೋಜಿಸಿ ₹100 ಕೋಟಿ ವೆಚ್ಚದಲ್ಲಿ ಮರು ಜಾರಿಗೊಳಿಸಲು ಉದ್ದೇಶಿಸಿರುವುದು ಉತ್ತಮ ಹೆಜ್ಜೆಯಾಗಿದೆ ಎನ್ನುವುದು ರೈತರ ವಲಯದ ಅಭಿಮತ. ಕೃಷಿ ಉದ್ಯಮಗಳಿಗೆ ಉತ್ತೇಜನ ನೀಡಲು ನವೋದ್ಯಮ ಎನ್ನುವ ಹೊಸ ಯೋಜನೆಯಡಿ ₹10 ಕೋಟಿ ಒದಗಿಸಲು ಉದ್ದೇಶಿಸಲಾಗಿದೆ. ಜತೆಗೆ, ರೈತರು ಬೆಳೆದ ಉತ್ಪನ್ನಗಳನ್ನು ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಅನುಕೂಲವಾಗುವಂತೆ ನಂದಿನಿ ಮಾದರಿಯಲ್ಲಿ ರೈತ ಉತ್ಪನ್ನಗಳಿಗೆ ಏಕೀಕೃತ ಬ್ರ್ಯಾಂಡಿಂಗ್ ವ್ಯವಸ್ಥೆ ರೂಪಿಸಲು ₹10 ಕೋಟಿ ಒದಗಿಸಲು ಉದ್ದೇಶಿಸಲಾಗಿದೆ.

ಹಿಂದುಳಿದ ತಾಲ್ಲೂಕುಗಳ 100 ರೈತ ಉತ್ಪಾದಕ ಸಂಸ್ಥೆಗಳಿಗೆ ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕ್‌ಗಳು ನೀಡುವ ತಲಾ ₹20 ಲಕ್ಷವರೆಗಿನ ಸಾಲಕ್ಕೆ ಶೇ 4ರ ಬಡ್ಡಿ ಸಹಾಯಧನ ನೀಡುವುದನ್ನು ಪ್ರಸ್ತಾಪಿಸಲಾಗಿದೆ. ಹಿಂದಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದಲ್ಲಿ ಒದಗಿಸುವ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಸ್ಥಾಪಿಸಲಾಗಿತ್ತು. ಈ ಕೇಂದ್ರಗಳನ್ನು ಇನ್ನಷ್ಟು ಬಲಪಡಿಸಿ, 300 ಹೈಟೆಕ್ ಹಾರ್ವೆಸ್ಟರ್ ಹಬ್‌ಗಳನ್ನು ಹಂತ ಹಂತವಾಗಿ ಸ್ಥಾಪಿಸಲು ಉದ್ದೇಶಿಸಲಾಗಿದೆ. 2023-24ನೇ ಸಾಲಿನಲ್ಲಿ 100 ಹಬ್‌ಗಳನ್ನು ಸ್ಥಾಪಿಸಲು ₹50 ಕೋಟಿ ಒದಗಿಸಲು ಪ್ರಸ್ತಾಪಿಸಲಾಗಿದೆ.

ತೋಟಗಾರಿಕೆಗೆ ಸಂಬಂಧಿಸಿ ಹಲವು ಯೋಜನೆಗಳನ್ನು ಪ್ರಕಟಿಸಿದ್ದರೂ ಅನುದಾನ ಮೀಸಲು ಕುರಿತು ಪ್ರಸ್ತಾಪಿಸಿಲ್ಲ. ತೆಂಗು, ಅಡಿಕೆ, ದ್ರಾಕ್ಷಿ, ದಾಳಿಂಬೆ, ಮಾವು ಮತ್ತಿತರ ಹಣ್ಣು, ತರಕಾರಿ, ಹೂವುಗಳು ಸೇರಿದಂತೆ ತೋಟಗಾರಿಕಾ ಬೆಳೆಗಳ ಉತ್ಪಾದನೆ, ಸಂಸ್ಕರಣೆ, ಬ್ರ್ಯಾಂಡಿಂಗ್ ಮತ್ತು ರಫ್ತಿಗೆ ಹೆಚ್ಚಿನ ಒತ್ತು ನೀಡಲಾಗುವುದು ಎನ್ನುವುದನ್ನು ಮಾತ್ರ ಪ್ರಸ್ತಾಪಿಸಲಾಗಿದೆ. ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ತೋಟಗಾರಿಕಾ ಕ್ಷೇತ್ರದ ಪ್ರಾಯೋಗಿಕ ಅರಿವು ಮೂಡಿಸಲು ವಿದ್ಯಾರ್ಥಿಗಳಿಗಾಗಿ ತೋಟಗಾರಿಕೆ ಯೋಜನೆಯನ್ನು ಜಾರಿಗೊಳಿಸಲು ಉದ್ದೇಶಿಸಲಾಗಿದೆ.

ರೈತರಿಗೆ ಶೂನ್ಯ ಬಡ್ಡಿದರದಲ್ಲಿ ನೀಡುತ್ತಿರುವ ಅಲ್ಪಾವಧಿ ಸಾಲದ ಮಿತಿಯನ್ನು ₹3 ಲಕ್ಷಗಳಿಂದ ₹5 ಲಕ್ಷಗಳಿಗೆ ಹೆಚ್ಚಿಸಲು, ಶೇ 3ರ ಬಡ್ಡಿದರದಲ್ಲಿ ನೀಡುವ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲದ ಮಿತಿಯನ್ನು ₹10 ಲಕ್ಷಗಳಿಂದ ₹15 ಲಕ್ಷಗಳಿಗೆ ಹೆಚ್ಚಿಸಲಾಗುತ್ತದೆ. ಪ್ರಸಕ್ತ ವರ್ಷ 35 ಲಕ್ಷಕ್ಕಿಂತ ಹೆಚ್ಚಿನ ರೈತರಿಗೆ 25 ಸಾವಿರ ಕೋಟಿಗಳಷ್ಟು ಸಾಲ ವಿತರಿಸುವ ಗುರಿ ಹೊಂದಲಾಗಿದೆ. ಇದರಿಂದ, ಕೃಷಿಕರ ಆರ್ಥಿಕತೆ ಹೆಚ್ಚಿಸುವ ಕ್ರಮವಾಗಿದೆ ಎಂದು ವಿಶ್ಲೇಷಿಸಲಾಗಿದೆ. ಜಾನುವಾರುಗಳ ಆಕಸ್ಮಿಕ ಸಾವಿನ ಸಂದರ್ಭದಲ್ಲಿ ರೈತರು ಅನುಭವಿಸುವ ಸಂಕಷ್ಟ ನಿವಾರಣೆಗೆ ಅನುಗ್ರಹ ಯೋಜನೆಯನ್ನು ಮತ್ತೆ ಆರಂಭಿಸಿ ಕುರಿ ಮತ್ತು ಮೇಕೆಗಳಿಗೆ ₹5 ಸಾವಿರ ಹಾಗೂ ಹಸು, ಎಮ್ಮೆ ಮತ್ತು ಎತ್ತುಗಳಿಗೆ ₹10 ಸಾವಿರ ಪರಿಹಾರ ಒದಗಿಸುವುದನ್ನು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

ರೇಷ್ಮೆ ಬೆಳೆಗಾರರಿಗೆ ಆರ್ಥಿಕ ಚೈತನ್ಯ ನೀಡಲು ಶಿಡ್ಲಘಟ್ಟದಲ್ಲಿ ₹75 ಕೋಟಿ ವೆಚ್ಚದಲ್ಲಿ ಹೈಟೆಕ್ ರೇಷ್ಮೆ ಗೂಡು ಮಾರುಕಟ್ಟೆಯಾಗಿ ಅಭಿವೃದ್ಧಿಪಡಿಸಲು ಪ್ರಸ್ತಾಪಿಸಲಾಗಿದೆ. ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ಸುಲಭವಾಗಿ ದುಡಿಯುವ ಬಂಡವಾಳವನ್ನು ಒದಗಿಸಲು ಮತ್ತು ರೇಷ್ಮೆಗೂಡಿನ ಖರೀದಿಯಲ್ಲಿ ಸಕ್ರಿಯವಾಗಿ ಭಾಗವಹಿಸಲು ₹5 ಲಕ್ಷವರೆಗೆ ಶೂನ್ಯ ಬಡ್ಡಿದರದಲ್ಲಿ ಸಾಲ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದೆ.

ಪ್ರತಿಕ್ರಿಯೆಗಳು



ರಾಜ್ಯದ ಸಮಗ್ರ ಅಭಿವೃದ್ಧಿಯ ಕಲ್ಪನೆ ಇರದ, ಜನಸಾಮಾನ್ಯರ ಮೇಲೆ ತೆರಿಗೆ ಹೊರೆ ಹೊರಿಸುವ ಬಜೆಟ್. ₹85,818 ಕೋಟಿ ಸಾಲ ಮಾಡುವುದಾಗಿ ಹೇಳಿದ್ದು, ಈ ಹೊರೆ ಜನರ ಮೇಲೆ ಬೀಳಲಿದೆ

ಬಿ.ಎಸ್. ಯಡಿಯೂರಪ್ಪ,
ಬಿಜೆಪಿ ಸಂಸದೀಯ ಮಂಡಳಿ ಸದಸ್ಯ



ರಾಜ್ಯದ ಎಲ್ಲ ವರ್ಗಗಳ ಜನರ ಸರ್ವಾಂಗೀಣ ಏಳಿಗೆಗೆ ಪೂರಕವಾದ ಬಜೆಟ್ ಇದಾಗಿದೆ. ರಾಜ್ಯದ ಅರ್ಥ ವ್ಯವಸ್ಥೆಯು ಹಿಂದಿನ ಸರ್ಕಾರ ಅವಧಿಯಲ್ಲಿ ಹದಗೆಟ್ಟಿತ್ತು. ಅದನ್ನು ಸರಿಪಡಿಸುವ ನಿಟ್ಟಿನ ಹೆಜ್ಜೆ ಇದಾಗಿದೆ

ಜಗದೀಶ ಶೆಟ್ಟರ್,
ಕಾಂಗ್ರೆಸ್ ವಿಧಾನಪರಿಷತ್ ಸದಸ್ಯ



ಸಮಾಜ ಕಲ್ಯಾಣ ಇಲಾಖೆಯಲ್ಲಿ ಪರಿಶಿಷ್ಟರ ಅಭಿವೃದ್ಧಿಗಾಗಿ ಸಾವಿರಾರು ಕೋಟಿ ರೂಪಾಯಿ ಅನುದಾನ ನೀಡಿದರೂ 7(ಡಿ) ಕಲಂನಿಂದಾಗಿ ಹಣ ದುರುಪಯೋಗ ಆಗುತ್ತಿತ್ತು. 7(ಡಿ) ಕಲಂ ರದ್ದು ಮಾಡಿರುವುದು ಸ್ವಾಗತಾರ್ಹ

ಮಾವಳ್ಳಿ ಶಂಕರ್,
ಪ್ರಧಾನ ಸಂಚಾಲಕ, ದಸಂಸ (ಅಂಬೇಡ್ಕರ್ ವಾದ)



ಶಿಕ್ಷಣ, ಆರೋಗ್ಯ, ಕೃಷಿ ಕ್ಷೇತ್ರಗಳಲ್ಲಿ ಸುಧಾರಣೆ ಇದೆ. ಆದರೆ, ಕೃಷಿ, ಎಪಿಎಂಸಿ, ಫ್ಯಾಕ್ಟರಿ ಮುಂತಾದ ತಿದ್ದುಪಡಿ ಕಾಯ್ದೆಗಳ ವಾಪಸಾತಿಯಂಥ ಬದಲಾವಣೆಗಳಿಲ್ಲ. ಯೋಜನಾ ಕಾರ್ಯಕರ್ತೆಯರ ಗೌರವಧನ ಹೆಚ್ಚಿಸಿಲ್ಲ

ಸಾತಿ ಸುಂದರೇಶ್,
ಕಾರ್ಯದರ್ಶಿ, ಸಿಪಿಐ ರಾಜ್ಯ ಮಂಡಳಿ

ಬಜೆಟ್: ನಾ ಕಂಡಂತೆ

ನರೇಗಾ ಬೆನ್ನೇರಿದ ಗ್ರಾಮೀಣಾಭಿವೃದ್ಧಿ

ಕೃಷಿ ಭಾಗ್ಯ ಮತ್ತು ಶಾಲಾ/ ಕಾಲೇಜುಗಳಲ್ಲಿ ಶೌಚಾಲಯ ನಿರ್ಮಾಣದ ₹ 100 ಕೋಟಿ ಮೊತ್ತದ ಯೋಜನೆಯನ್ನೂ ಉದ್ಯೋಗ ಖಾತರಿ ಯೋಜನೆಯಡಿ ಜಾರಿಗೊಳಿಸುವ ಘೋಷಣೆ ಬಜೆಟ್‌ನಲ್ಲಿದೆ.

ಕೃಷಿ ಜಮೀನು/ ಕೆರೆ ಅಭಿವೃದ್ಧಿಯೊಂದಿಗೆ ಒಟ್ಟು 5 ಸಾವಿರ ಗೋಮಾಳ ಮತ್ತು 50 ಸಾವಿರ ಹುಲ್ಲುಗಾವಲುಗಳ ಅಭಿವೃದ್ಧಿಯು ನೇರವಾಗಿ ಗ್ರಾಮಗಳ ಪ್ರಾಕೃತಿಕ ಸಂಪನ್ಮೂಲಗಳ ಅಭಿವೃದ್ಧಿ/ ಪುನಶ್ಚೇತನದ ಗುರಿಯನ್ನು ಹೊಂದಿದೆ.



ಆದರೆ ಒಟ್ಟು 2 ಲಕ್ಷ ಬರ ಪರಿಹಾರ ಕಾಮಗಾರಿ, 81 ಸಾವಿರ ಪ್ರವಾಹ ನಿಯಂತ್ರಣ ಕಾಮಗಾರಿ, 4,268 ಭೂಕುಸಿತ ತಡೆ ಕಾಮಗಾರಿಗಳೂ ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳೇ.

ಶಾಲಾ ಅವರಣ ಅಭಿವೃದ್ಧಿ, ಶೌಚಾಲಯ ನಿರ್ಮಾಣವೂ ಶಿಕ್ಷಣ ಇಲಾಖೆಯ ಸಂಯೋಜನಾ ಕಾಮಗಾರಿಗಳೇ. 750 ಗ್ರಾಮೀಣ ಸಂತೆ, ಸ್ಮಶಾನ ಅಭಿವೃದ್ಧಿ ಅಗತ್ಯ ಕಾಮಗಾರಿಗಳು. 27 ಸಾವಿರ ಕೊಳವೆಬಾವಿ ಮರುಪೂರಣ ಗುರಿ ಏನೇನೂ ಸಾಲದು. ಜಲ ಜೀವನ ಮಿಷನ್‌ನ ನೀರು ಪೂರೈಕೆಯನ್ನು ಆಧರಿಸಿರುವ ಕೊಳವೆಬಾವಿಗಳನ್ನು ಲೆಕ್ಕಕ್ಕಿಟ್ಟರೆ ಈ ಸಂಖ್ಯೆ ಇನ್ನು ಹೆಚ್ಚುತ್ತದೆ.

ಉದ್ಯೋಗ ಖಾತರಿ ಯೋಜನೆಯನ್ನು ಅವಲಂಬಿಸುವ ಸಮಸ್ಯೆ ಎಂದರೆ ಕಾರ್ಮಿಕರ ಕೊರತೆ. ಹಾಗೇ ಕಾಮಗಾರಿಗಳನ್ನು ಮುಗಿಸಲು ಇರುವ ತಾಂತ್ರಿಕ ತೊಡಕು. ಕೇಂದ್ರ ಸರ್ಕಾರ ಈಗಾಗಲೇ ಈ ಯೋಜನೆಯಡಿ ₹ 1,500 ಕೋಟಿ ಬಾಕಿ ಉಳಿಸಿಕೊಂಡಿದೆ. ಈ ವರ್ಷವು ಅನುದಾನ ಬಿಡುಗಡೆ ವಿಳಂಬ ಈ ಕಾಮಗಾರಿಗಳನ್ನೂ ಕಾಡಿದರೆ ಹೇಗೆಂಬುದೇ ಈಗಿನ ಪ್ರಶ್ನೆಯಾಗಿದೆ.

ಕೆ.ಪಿ.ಸುರೇಶ್,
ಗ್ರಾಮೀಣಾಭಿವೃದ್ಧಿ ತಜ್ಞರು, ಲೇಖಕರು

ಯೋಜನೆಗಳಿಗೆ ಕತ್ತರಿ, ಉತ್ತೇಜನ ಕೊರತೆ

ಕಾಂಗ್ರೆಸ್ ನೇತೃತ್ವ ಸರ್ಕಾರ ತನ್ನ ಐದು ಗ್ಯಾರಂಟಿಗಳಿಗೆ ಹಣ ಕ್ರೋಢೀಕರಿಸುವ ಪ್ರಯತ್ನದಲ್ಲಿ ಕೃಷಿ ಇಲಾಖೆಯು ಸೇರಿ ಎಲ್ಲ ಇಲಾಖೆಗಳ ಯೋಜನೆಗಳಿಗೆ ಕತ್ತರಿ ಹಾಕಿದೆ. ರೈತಸಿರಿ ಯೋಜನೆಯಡಿ ಸಿರಿಧಾನ್ಯವನ್ನು ಬೆಳೆಯಲು ಒಂದು ಹೆಕ್ಟೇರ್‌ಗೆ ₹ 10 ಸಾವಿರ ಪ್ರೋತ್ಸಾಹ ಧನ, ಬೆಂಬಲ ಬೆಲೆಯ ಆವರ್ತ ನಿಧಿ, ಬೆಳೆ ನಷ್ಟ ಪರಿಹಾರ ಅಂಶಗಳ ಪ್ರಸ್ತಾಪವಿಲ್ಲ.



ಫೆಬ್ರುವರಿಯಲ್ಲಿ ಬಿಜೆಪಿ ಸರ್ಕಾರ ಮಂಡಿಸಿದ್ದ ಬಜೆಟ್‌ನಲ್ಲಿ ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಿಗೆ ₹ 39,031 ಕೋಟಿ ಅನುದಾನ ಮೀಸಲಿಟ್ಟಿತ್ತು. ಅದರಲ್ಲಿ ಇದುವರೆವಿಗೂ ಎಷ್ಟು ಬಳಕೆಯಾಗಿದೆ ಎನ್ನುವುದರ ವಿವರಗಳು ಇಲ್ಲ.

ಕೃಷಿಭಾಗ್ಯ ಯೋಜನೆಯನ್ನು ಉದ್ಯೋಗ ಖಾತರಿ ಯೋಜನೆಗೆ ಸಂಯೋಜಿಸಲಾಗಿದೆ. ಆದರೆ, ಇದು ಈಗಾಗಲೇ ಜಲನಿಧಿ ಯೋಜನೆಯಡಿ ಜಾರಿಯಲ್ಲಿದೆ ಎಂಬುದನ್ನು ಗಮನಿಸಬೇಕಿತ್ತು. 2004ರಲ್ಲಿ ಸಾವಯವ ಕೃಷಿಗೆ ಉತ್ತೇಜನ ನೀಡಲು ಕಾಂಗ್ರೆಸ್ ಸರ್ಕಾರವೇ ಜಾರಿಗೊಳಿಸಿದ್ದ ‘ಸಾವಯವ ಕೃಷಿ ನೀತಿ’ಯನ್ನು ತಂದಿರುವುದನ್ನು ಈಗ ಮರೆತಂತಿದೆ.

ರಾಜ್ಯದಲ್ಲಿ ಅನ್ನಭಾಗ್ಯಕ್ಕೆ ಅಕ್ಕಿ ಕೊರತೆ ಎದುರಾಗಿದೆ. ಪಡಿತರ ವ್ಯವಸ್ಥೆಯಡಿ ರಾಗಿ, ಜೋಳದ ಪ್ರಮಾಣ ಹೆಚ್ಚಿಸುವ ಬಗ್ಗೆ ಅಭಿಪ್ರಾಯ ಮೂಡಿಬಂದಿದೆ. ರಾಜ್ಯದಲ್ಲಿ ಮುಂದಿನ ತಿಂಗಳು ರಾಗಿ, ಜೋಳ ಬೆಳೆ ಬಿತ್ತನೆಯಾಗಲಿದೆ. ಕೇಂದ್ರದ ಬೆಂಬಲ ಬೆಲೆ ಜೊತೆಗೆ ಉತ್ತಮ ಪ್ರೋತ್ಸಾಹ ಧನವನ್ನು ಬಜೆಟ್‌ನಲ್ಲಿ ಘೋಷಿಸಬೇಕಿತ್ತು. ಈ ವರ್ಷ ಮುಂಗಾರು ತಡವಾಗಿದೆ. ರೈತರಿಗಾಗುವ ನಷ್ಟಕ್ಕೆ ಪರಿಹಾರದ ಬಗ್ಗೆಯೂ ಪ್ರಸ್ತಾಪವಿಲ್ಲ.

ವಿ.ಗಾಯತ್ರಿ,
‘ನಮ್ಮೂರು ಭೂಮಿ ನಮಗಿರಲಿ’ ಆಂದೋಲನ, ಬೆಂಗಳೂರು

ಜಲಸಂಪನ್ಮೂಲಕ್ಕೆ ಸಿಗದ ಒತ್ತು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿರುವ ಈ ಸಾಲಿನ ಬಜೆಟ್‌ನಲ್ಲಿ ಜಲಸಂಪನ್ಮೂಲ ಯೋಜನೆಗಳು ಹಾಗೂ ಇಲಾಖೆಗೆ ಸರಿಯಾದ ಪ್ರಾಮುಖ್ಯತೆ ದೊರೆತಿಲ್ಲ. ಎತ್ತಿನ ಹೊಳೆ ಬಿಟ್ಟು ಉಳಿದ ಯಾವುದೇ ಯೋಜನೆಗಳಿಗೆ ಅಗತ್ಯ ಅನುದಾನ ಇಟ್ಟಿಲ್ಲ. ಮಹದಾಯಿ, ಕಳಸಾ ಬಂಡೂರಿ, ಕೃಷ್ಣಾ ಮೇಲ್ದಂಡೆ 3ನೇ ಹಂತ, ಮೇಕೆದಾಟು ಯೋಜನೆಗಳಿಗೆ ಅನುದಾನ ನೀಡಿಲ್ಲ. ಎತ್ತಿನಹೊಳೆ ಯೋಜನೆಗೆ ಮಾತ್ರ ಅದರ ಯೋಜನಾ ಮೊತ್ತ ಪರಿಷ್ಕರಿಸಿ ₹ 23,252 ಕೋಟಿ ನಿಗದಿಮಾಡಿದೆ.



ಈಗಾಗಲೇ ಕರೆದಿರುವ ಟೆಂಡರ್‌ಗಳಿಗೆ ಹಾಗೂ ಬಾಕಿ ಇರುವ ಬಿಲ್‌ಗಳ ಪಾವತಿಗೆ ಯಾವುದೇ ಕ್ರಮಗಳನ್ನು ಬಜೆಟ್‌ನಲ್ಲಿ ಉಲ್ಲೇಖಿಸಿಲ್ಲ. ಅಣೆಕಟ್ಟುಗಳ ನಿರ್ಮಾಣ ಮತ್ತು ಸಂರಕ್ಷಣೆಗೆ ಅನುದಾನ ನಿಗದಿಪಡಿಸಿಲ್ಲ. ಕಾಲುವೆಗಳ ಆಧುನೀಕರಣ ಮತ್ತು ಇತರ ಕಾಮಗಾರಿಗಳಿಗೂ ಒತ್ತು ನೀಡಿಲ್ಲ. ಈ ಎಲ್ಲವನ್ನು ಗಮನಿಸಿದರೆ ನೀರಾವರಿ ಕ್ಷೇತ್ರದ ಮಟ್ಟಿಗೆ ಇದು ನಿರಾಶದಾಯಕವಾದ ಬಜೆಟ್ ಆಗಿದೆ. ಹಿಂದಿನ ಸರ್ಕಾರವು ಬಜೆಟ್‌ನಲ್ಲಿ ನಿಗದಿಪಡಿಸಿದ್ದ ಮೊತ್ತವನ್ನು ಮೀರಿ ಅದರ ಐದು ಪಟ್ಟುಗಳಷ್ಟು ಕಾಮಗಾರಿಗಳನ್ನು ಕೈಗೊಂಡಿರುವುದು ಈ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಯಾವುದೇ ಹೊಸ ಯೋಜನೆಯನ್ನು ಘೋಷಣೆ ಮಾಡದಿರಲು ಇದು ಕಾರಣವಾಗಿದೆ. ತುಂಗಭದ್ರಾ ಜಲಾಯಶದಲ್ಲಿ ಸದ್ಯ ಅಂದಾಜು 33 ಟಿಎಂಸಿ ಅಡಿ ಹೂಳು ತುಂಬಿದೆ. ಅದರ ತೆರವಿಗೆ ಕ್ರಮ ಕೈಗೊಳ್ಳಬೇಕಿತ್ತು. ಆದರೆ, ಈ ಬಗ್ಗೆ ಸಮಾಲೋಚಿಸುತ್ತೇವೆ, ಸಹಮತ ಪಡೆಯುತ್ತೇವೆ ಎಂದು ಹೇಳಿದ್ದಾರೆಯೇ ಹೊರತು ಇದಕ್ಕೆ ಬೇಕಾದ ಅನುದಾನವನ್ನು ಇಟ್ಟಿಲ್ಲ. ಈ ಬಜೆಟ್‌ನಲ್ಲಿ ನೀರಾವರಿ ನಿರ್ಲಕ್ಷಕ್ಕೆ ಒಳಗಾಗಿದೆ.

ಕೃಷ್ಣಮೂರ್ತಿ ಕೆ.,
ನಿವೃತ್ತ ಕಾರ್ಯಪಾಲಕ ಎಂಜಿನಿಯರ್, ಜಲಸಂಪನ್ಮೂಲ ಇಲಾಖೆ

ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಹಾಸನ, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳ ಗುಡ್ಡಗಾಡು ಪ್ರದೇಶಗಳಲ್ಲಿ ಕೃಷಿ ಉತ್ಪನ್ನ, ಪರಿಕರಗಳ ಸಾಗಣೆಗೆ ನಾಲ್ಕು ಚಕ್ರದ ಪಿಕ್‌ಅಪ್ ವ್ಯಾನ್ ಖರೀದಿಗೆ ₹7 ಲಕ್ಷದವರೆಗಿನ ಶೇ 4ರ ಬಡ್ಡಿಯಲ್ಲಿ ಸಾಲ ವಿತರಣೆ.

- ಮೀನುಗಾರ ಮಹಿಳೆಯರಿಗೆ ಬ್ಯಾಂಕ್‌ಗಳಲ್ಲಿ ಬಡ್ಡಿರಹಿತ ನೀಡುವ ಸಾಲದ ಮಿತಿಯನ್ನು ₹50 ಸಾವಿರಗಳಿಂದ ₹3 ಲಕ್ಷಗಳಿಗೆ ಹೆಚ್ಚಿಸಲು ಉದ್ದೇಶಿಸಲಾಗಿದೆ.
- ಗ್ರಾಹಕರಿಗೆ ಅಗ್ಗದ ದರದಲ್ಲಿ ಗುಣಮಟ್ಟದ ಪ್ರೋಟಿನ್‌ಯುಕ್ತ ಮಾಂಸ ಮತ್ತು ಮೊಟ್ಟೆ ಪೂರೈಕೆಗೆ ಅವಕಾಶ ಕಲ್ಪಿಸಲು ಖಾಸಗಿ ಸಹಭಾಗಿತ್ವದಲ್ಲಿ ಜಾನುವಾರು ಉತ್ಪನ್ನಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಘಟಕಗಳು ಹಾಗೂ ಉತ್ತಮವಾದ ಮಾರುಕಟ್ಟೆ ಅಭಿವೃದ್ಧಿ.
- ಕಾಯಕ ನಿಧಿ ಯೋಜನೆಯಡಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಮಾಲರು ಮರಣ ಹೊಂದಿದಲ್ಲಿ ಅವರ ಶವಸಂಸ್ಕಾರಕ್ಕಾಗಿ ನೀಡುವ ಮೊತ್ತವನ್ನು ₹10 ಸಾವಿರಗಳಿಂದ ₹25 ಸಾವಿರಕ್ಕೆ ಹೆಚ್ಚಳ.
- ರೈತರು ತಮ್ಮ ಹಾಗೂ ನೆರೆಹೊರೆಯವರ ಕೃಷಿ ಉತ್ಪನ್ನಗಳನ್ನು ಸಂಗ್ರಹಿಸಲು ಅನುವಾಗುವಂತೆ ಗೋದಾಮು ನಿರ್ಮಿಸಲು ಬ್ಯಾಂಕ್‌ಗಳು ನೀಡುವ ₹20 ಲಕ್ಷವರೆಗಿನ ಸಾಲಕ್ಕೆ ರಾಜ್ಯ ಸರ್ಕಾರವು ಶೇ7ರಷ್ಟು ಬಡ್ಡಿ ಸಹಾಯಧನ ನೀಡಲಿದೆ.
- ಶೀಘ್ರ ಹಾಳಾಗುವ ಹಣ್ಣು, ಹೂವು, ತರಕಾರಿಗಳ ಬೆಲೆ ಕುಸಿತದಿಂದ ಸಂದರ್ಭದಲ್ಲಿ ಕೃಷಿಕರಿಗೆ ನಷ್ಟವಾಗುವುದನ್ನು ತಪ್ಪಿಸಲು ರಾಜ್ಯದ ಆಯ್ದ 50 ತರಕಾರಿ ಮಾರುಕಟ್ಟೆಗಳಲ್ಲಿ ಕೆಎಪಿಇಸಿ ಸಹಯೋಗದಲ್ಲಿ ಮಿನಿ ಶೀತಲ ಗೃಹಗಳ ಸ್ಥಾಪನೆಗೆ ಕ್ರಮ.
- ಮೀನುಗಾರರ ದೋಣಿಗಳಿಗೆ ರಿಯಾಯಿತಿ ದರದಲ್ಲಿ ನೀಡುತ್ತಿರುವ ಡೀಸೆಲ್ ಮಿತಿಯನ್ನು ಒಂದೂವರೆ ಲಕ್ಷ ಕಿಲೋ ಲೀಟರ್‌ನಿಂದ ಎರಡು ಲಕ್ಷ ಕಿಲೋ ಲೀಟರ್‌ಗಳವರೆಗೆ ಹೆಚ್ಚಿಸಲಾಗುವುದು. ಇದರಿಂದ ಮೀನುಗಾರರಿಗೆ ಸರ್ಕಾರದಿಂದ ₹250 ಕೋಟಿಗಳಷ್ಟು ನೆರವಾಗಲಿದೆ.

ಗ್ರಾಮೀಣಾಭಿವೃದ್ಧಿಗೆ ಏನು?

4 ಸಾವಿರ ಗ್ರಾಮ ಪಂಚಾಯಿತಿ
‘ಕೂಸಿನ ಮನೆ’ ಹೆಸರಿನಲ್ಲಿ ಶಿಶುಪಾಲನಾ ಕೇಂದ್ರ ಆರಂಭ.

400 ಸಮುದಾಯ ಶೌಚಾಲಯ ಸಂಕೀರ್ಣ
ಕಲ್ಯಾಣ ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ ₹ 100 ಕೋಟಿ ಅನುದಾನದಲ್ಲಿ ಸಂಕೀರ್ಣ ನಿರ್ಮಾಣ.

₹ 22 ಕೋಟಿ
27 ಜಿಲ್ಲೆಗಳಲ್ಲಿ ಒಣ ತ್ಯಾಜ್ಯದ ವೈಜ್ಞಾನಿಕ ವಿಲೇವಾರಿಗೆ ‘ಮೆಟೀರಿಯಲ್ ರಿಕವರಿ ಫೆಸಿಲಿಟಿ’ (ಎಂಆರ್‌ಎಫ್) ನಿರ್ಮಾಣ.

₹ 5 ಸಾವಿರ ಕೋಟಿ
ಕಲ್ಯಾಣ ಕರ್ನಾಟಕದ ಪ್ರದೇಶದ ಸಮಗ್ರ ಅಭಿವೃದ್ಧಿಗೆ ಅನುದಾನ.

₹ 3 ಸಾವಿರ ಕೋಟಿ
ಅಭಿವೃದ್ಧಿ ಆಕಾಂಕ್ಷಿ ತಾಲ್ಲೂಕುಗಳಲ್ಲಿ ಅಭಿವೃದ್ಧಿಯ ಬಹು ಆಯಾಮ ಸೂಚ್ಯಂಕ ಸುಧಾರಣೆಗೆ ಅನುದಾನ.

25 ಲಕ್ಷ ಮನೆಗಳಿಗೆ ನಳ ಸಂಪರ್ಕ
ಜಲಜೀವನ್ ಮಿಷನ್ ಯೋಜನೆ ಅಡಿ ಸುಸ್ಥಿರ ಜಲಮೂಲ ಆಧರಿಸಿ 118 ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಅನುಷ್ಠಾನ.

ನೀರಾವರಿಗೆ ಸಿಗದ ಆರ್ಥಿಕ ಬಲ

● ಆದಿತ್ಯ ಕೆ.ಎ

ಬೆಂಗಳೂರು: ‘ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರದ ವಿವೇಚನಾ ರಹಿತ ಕ್ರಮಗಳಿಂದಾಗಿ ಜಲಸಂಪನ್ಮೂಲ ಇಲಾಖೆಯಲ್ಲಿ ಈ ಬಾರಿ ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಅವಕಾಶ ಇಲ್ಲ’. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್‌ನಲ್ಲಿ ಹಿಂದಿನ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ ಪರಿ ಇದು.

‘ಈ ಇಲಾಖೆಗೆ ಆಯವ್ಯಯ ಹಂಚಿಕೆಯು ವಾರ್ಷಿಕವಾಗಿ ಸರಾಸರಿ ₹ 20 ಸಾವಿರ ಕೋಟಿ ಇದ್ದು, ಅನುಮೋದಿಸಿರುವ ಯೋಜನೆಗಳ ಅಂದಾಜು ಮೊತ್ತ ಐದು ಪಟ್ಟು ಹೆಚ್ಚಳವಾಗಿದೆ. ಇದು, ವಿತ್ತೀಯ ಶಿಸ್ತಿನ ಉಲ್ಲಂಘನೆಗೆ ಸ್ಪಷ್ಟ ನಿದರ್ಶನವಾಗಿದೆ. ಆರು ತಿಂಗಳ ಅವಧಿಯಲ್ಲಿ ಹೆಚ್ಚಿನ ಮೊತ್ತದ ಕಾಮಗಾರಿಗಳಿಗೆ ಚಾಲನೆ ನೀಡಿರುವುದು ವಿತ್ತೀಯ ಅಶಿಸ್ತಿನ ಪರಮಾವಧಿ ಅಲ್ಲದೇ ಇನ್ನೇನು’ ಎಂದು ಸಿ.ಎಂ ಪ್ರಶ್ನಿಸಿದ್ದಾರೆ.

ಆ ಮೂಲಕ ಜಲಸಂಪನ್ಮೂಲ ಇಲಾಖೆಗೆ ಹೆಚ್ಚು ಅನುದಾನ ನೀಡದೇ ಸಿದ್ದರಾಮಯ್ಯ ಅವರೂ ನಿರಾಸೆಗೊಳಿಸಿದ್ದಾರೆ. ಇದಕ್ಕೆ ‘ವಿತ್ತೀಯ ಅಶಿಸ್ತಿನ ಪರಮಾವಧಿ’ ಕಾರಣವನ್ನೂ ನೀಡಿರುವ ಅವರು ಜಲಸಂಪನ್ಮೂಲ, ಸಣ್ಣ ನೀರಾವರಿ ಇಲಾಖೆಗೆ ‘ದೊಡ್ಡ ಕೊಡುಗೆ’ಯನ್ನು ಅವರು ಘೋಷಿಸಿಲ್ಲ. ಏಪ್ರಿಲ್ 1ರ ವರೆಗೆ ಅನುಮೋದಿಸಿರುವ ಯೋಜನೆಗಳಿಗೆ ಒಂದು ಲಕ್ಷ ಕೋಟಿ ರೂಪಾಯಿ ಅವಶ್ಯಕತೆ ಇದೆ. ಈ ಯೋಜನೆಗಳ ವೆಚ್ಚವು ಕಾಮಗಾರಿ, ಭೂಸ್ವಾಧೀನ ವೆಚ್ಚ ಹೆಚ್ಚಳದ ಕಾರಣ ₹ 25 ಸಾವಿರ ಕೋಟಿಯಿಂದ ₹ 40 ಸಾವಿರ ಕೋಟಿಗೆ ಹೆಚ್ಚಳವಾಗುವ ಸಾಧ್ಯತೆ ಇದೆ. 6 ತಿಂಗಳಲ್ಲಿ ₹ 25,548 ಕೋಟಿ ಅಂದಾಜು ವೆಚ್ಚದ 1,274 ಕಾಮಗಾರಿ ಕೈಗೆತ್ತಿಕೊಳ್ಳಲು ಚಾಲನೆ ನೀಡಲಾಗಿದೆ ಎಂದು ಉಲ್ಲೇಖಿಸಿದ್ದಾರೆ.

₹ 770 ಕೋಟಿ ವೆಚ್ಚದಲ್ಲಿ ಬೆಳಗಾವಿ, ದಾವಣಗೆರೆ, ಬಳ್ಳಾರಿ, ಹಾವೇರಿ, ಗದಗ, ಬೀದರ್, ಉತ್ತರ ಕನ್ನಡ, ವಿಜಯನಗರ, ಕೊಪ್ಪಳ, ಕಲಬುರಗಿ, ಯಾದಗಿರಿ ಜಿಲ್ಲೆಗಳ ಒಟ್ಟು 899 ಕೆರೆಗಳಿಗೆ ನೀರು ತುಂಬಿಸಲಾಗುವುದು ಎಂದು ಅಭಯ ನೀಡಿದ್ದಾರೆ. ಎತ್ತಿನಹೊಳೆ ಯೋಜನೆಯ ಅಂದಾಜು ವೆಚ್ಚ ₹ 12,912 ಕೋಟಿಯಿಂದ ₹ 23,252 ಕೋಟಿಗೆ ಪರಿಷ್ಕೃತಗೊಂಡಿದೆ. ಹಿಂದಿನ ಸರ್ಕಾರ ಸಕಾಲದಲ್ಲಿ ಯೋಜನೆ ಪೂರ್ಣಗೊಳಿಸದಿರುವುದು ಇದಕ್ಕೆ ಕಾರಣ ಎಂದಿದ್ದಾರೆ. ಯೋಜನೆ ಪೂರ್ಣಕ್ಕೆ ಆದ್ಯತೆ ಕೊಡುವುದಾಗಿ ಘೋಷಿಸಿದ್ದಾರೆ.

ಮೇಕೆದಾಟು ಯೋಜನೆಗೆ ಅರಣ್ಯ ಭೂಮಿ ಸ್ವಾಧೀನ ಹಾಗೂ ಭೂಸ್ವಾಧೀನಕ್ಕೆ ಕ್ರಮ ಕೈಗೊಳ್ಳುತ್ತೇವೆ ಎಂದು ಪ್ರಸ್ತಾಪಿಸಿದ್ದಾರೆ. ಆದರೆ, ಅನುದಾನ ಬಗ್ಗೆ ಪ್ರಸ್ತಾಪಿಸಿಲ್ಲ.

ಯಾವುದಕ್ಕೆ ಉತ್ತೇಜನ...

- ಕೆಸಿ ವ್ಯಾಲಿ ಮತ್ತು ಎಚ್‌ಎನ್ ವ್ಯಾಲಿ ಯೋಜನೆಗಳ ಎರಡನೇ ಹಂತದಲ್ಲಿ ₹ 529 ಕೋಟಿ ಅನುದಾನದಲ್ಲಿ ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಯ 296 ಕೆರೆ ತುಂಬಿಸಲಾಗುವುದು.
- ಮಂದಗತಿಯಲ್ಲಿ ಸಾಗುತ್ತಿರುವ ₹ 940 ಕೋಟಿ ಬಾಕಿ ಮೊತ್ತದ ರಾಜ್ಯದ 10 ನೀರಾವರಿ ಯೋಜನೆ ಪೂರ್ಣಗೊಳಿಸಲು ಆದ್ಯತೆ ನೀಡಲಾಗುವುದು. ಇದರಿಂದ 25,948 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರೆಯಲಿದೆ.
- ಕುಲಹಳ್ಳಿ- ಹನ್ನೂರು, ತಿಮ್ಮಾಪುರ, ಸಸಾಲಟ್ಟಿ- ಶಿವಲಿಂಗೇಶ್ವರ ಮತ್ತು ಮಂಟೂರು ಮಹಾಲಕ್ಷ್ಮಿ ಏತ ನೀರಾವರಿ ಯೋಜನೆ ಪೂರ್ಣಕ್ಕೆ ಕ್ರಮ.



‘ಗೃಹಲಕ್ಷ್ಮಿ’ ಯೋಜನೆ ಜತೆಗೆ ಗೃಹ ಕೈಗಾರಿಕೆ ನಡೆಸುವ ಮಹಿಳೆಯರಿಗೆ ಹೆಚ್ಚಿನ ಅನುದಾನ ಬೇಕಿತ್ತು. ಮಹಿಳಾ ಉದ್ಯಮಿಗಳಿಗೆ ಸಾಲದ ಮಿತಿ ₹5 ಕೋಟಿಗೆ ಹೆಚ್ಚಿಸಿದ್ದು ಒಳ್ಳೆಯದು


ನೈನಾ ಕುಲಕರ್ಣಿ, ಶಿಕ್ಷಕಿ, ಹುಬ್ಬಳ್ಳಿ



ನಗರಾಭಿವೃದ್ಧಿಗೆ ಸಂಬಂಧಿಸಿದಂತೆ ಹಲವು ಯೋಜನೆಗಳನ್ನು ಘೋಷಿಸಿರುವುದು, ಹೊಸ ಕೈಗಾರಿಕೆಗಳ ಸ್ಥಾಪನೆಗೂ ಕ್ರಮ ವಹಿಸಿರುವುದು ಒಳ್ಳೆಯ ಬೆಳವಣಿಗೆ

ಕೆ.ಬಿ.ಲಿಂಗರಾಜು, ಮೈಸೂರು





ತಜ್ಞರ ಅಭಿಪ್ರಾಯ

‘ಒಂದಿಷ್ಟು ಭರವಸೆಗಳು ಇವೆ’



ಎರಡು ಎಕರೆವರೆಗಿನ ಕೃಷಿ ಜಮೀನಿಗೆ ಪರಿವರ್ತನೆಯ ಪ್ರಕ್ರಿಯೆಗಳಿಂದ ವಿನಾಯಿತಿ ನೀಡುವ ಪ್ರಸ್ತಾವನೆಯು ಕೈಗಾರಿಕಾ ಉದ್ದೇಶಕ್ಕೆ ಜಮೀನು ಲಭ್ಯತೆಯನ್ನು ಸುಧಾರಿಸುತ್ತದೆ. ಆದರೆ ಎರಡು ಎಕರೆಯು ಬೃಹತ್ ಪ್ರಮಾಣದ ಉದ್ದಿಮೆಗಳಿಗೆ ಸಾಕಾಗಲಿಕ್ಕಿಲ್ಲ. ಜಮೀನು ಪರಿವರ್ತನೆ ಪ್ರಕ್ರಿಯೆಯನ್ನು ಇನ್ನಷ್ಟು ಸುಧಾರಿಸಲು ಅವಕಾಶವಿದೆ. ರೈಲ್ವೆ ಸೌಲಭ್ಯ ಹೆಚ್ಚಿಸಲು ಬಜೆಟ್ ಆದ್ಯತೆ ನೀಡಿದ್ದರೂ, ಬಂದರು, ರಸ್ತೆ, ಸೇತುವೆ, ರಸ್ತೆ ಸಾರಿಗೆ ಮೇಲಿನ ಬಂಡವಾಳ ನಿಗದಿ ಕಡಿಮೆ ಮಾಡಿರುವುದು ಕಳವಳಕಾರಿ.

ರಾಜ್ಯದ ವೈಮಾನಿಕ ವಲಯವನ್ನು ಅಭಿವೃದ್ಧಿಪಡಿಸಲು ಘೋಷಿಸಿರುವ ಹೊಸ ನಾಗರಿಕ ವಿಮಾನಯಾನ ನೀತಿಯು ವಿಮಾನಗಳ ಮೂಲಕ ಸರಕು ಸಾಗಣೆಗೆ ಆದ್ಯತೆ ನೀಡಬೇಕು. ಆಗ ಸೆಮಿಕಂಡಕ್ಟರ್, ಜೈವಿಕ ತಂತ್ರಜ್ಞಾನ ಕ್ಷೇತ್ರಗಳ ನವೋದ್ಯಮಗಳಿಗೆ ನೆರವು ಸಿಗುತ್ತದೆ. ಸೆಮಿಕಂಡಕ್ಟರ್‌ಗೆ ಪೂರಕವಾದ ವ್ಯವಸ್ಥೆಯನ್ನು ಪೋಷಿಸುವುದಕ್ಕೆ ತಂತ್ರಜ್ಞಾನ ಅನ್ವೇಷಣ ಪಾರ್ಕ್ ನಿರ್ಮಾಣ, ಚೆನ್ನೈ–ಬೆಂಗಳೂರು ಕೈಗಾರಿಕಾ ಕಾರಿಡಾರ್‌ನಲ್ಲಿ ಬೃಹತ್ ಕೈಗಾರಿಕಾ ಟೌನ್‌ಶಿಪ್ ಅಭಿವೃದ್ಧಿ, ವಿಜಯಪುರ ಹಾಗೂ ದಕ್ಷಿಣ ಕನ್ನಡದಲ್ಲಿ ತಯಾರಿಕೆ ಮತ್ತು ರಫ್ತು ಉದ್ದೇಶದ ಕೈಗಾರಿಕಾ ಕ್ಲಸ್ಟರ್ ನಿರ್ಮಾಣದ ಘೋಷಣೆಗಳು ಭರವಸೆ ಮೂಡಿಸುವಂಥವು.

ಸಾರ್ಥಕ್ ಪ್ರಧಾನ್
ಸಹಾಯಕ ಪ್ರಾಧ್ಯಾಪಕ, ತಕ್ಷಶಿಲಾ ಇನ್‌ಸ್ಟಿಟ್ಯೂಷನ್, ಬೆಂಗಳೂರು

‘ವೆಚ್ಚ ತಗ್ಗಿಸುವುದೇ ಪರಿಹಾರ’



ಬಡ, ಮಧ್ಯಮ ವರ್ಗದ ಜನರಿಗಾಗಿ ಜನಪ್ರಿಯ ಯೋಜನೆಗಳ ಜಾರಿ ಅನಿವಾರ್ಯವಾಗಿರುವ ಇಂತಹ ಸಮಯದಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿ ಕುಂಠಿತವಾಗಬಾರದು. ಅದಕ್ಕಾಗಿ ಬಜೆಟ್‌ನಲ್ಲಿ ಸಾಕಷ್ಟು ಸಾಧ್ಯತೆಗಳನ್ನು ತೆರೆದಿಡಲಾಗಿದೆ.

ಲೋಕೋಪಯೋಗಿ ಇಲಾಖೆ ಮೂಲಕ ರಾಜ್ಯದ ರಸ್ತೆಗಳ ಅಭಿವೃದ್ಧಿಗೆ ₹ 4 ಸಾವಿರ ಕೋಟಿ ಮೀಸಲಿಟ್ಟಿದ್ದರೆ, ದೇವನಹಳ್ಳಿಯಿಂದ ವಿಜಯಪುರ ಮೇಮಗಲ್, ಮಾಲೂರು ಮೂಲಕ ತಮಿಳುನಾಡು ಗಡಿಯವರೆಗಿನ 123 ಕಿ.ಮೀ ರಸ್ತೆ ಹಾಗೂ ರಾಯಚೂರು ಕಲ್ಮಲಾ ವೃತ್ತದಿಂದ ಲಿಂಗಸೂರು ವೃತ್ತದವರೆಗೆ 78 ಕಿ.ಮೀ ರಸ್ತೆಯನ್ನು ₹ 3,522 ಕೋಟಿ ವೆಚ್ಚದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸುತ್ತಿರುವುದು ಇಂದಿನ ಅಗತ್ಯವೂ ಹೌದು.

ಹಾಗೆಯೇ, ನಿರ್ಮಾಣ ವೆಚ್ಚ, ಖರ್ಚನ್ನು ಕಡಿಮೆ ಮಾಡಬೇಕು. ರಸ್ತೆ ನಿರ್ಮಾಣದಲ್ಲಿ ಈಗಲೂ ಹಳೇ ಪದ್ಧತಿ ಅನುಸರಿಸಲಾಗುತ್ತದೆ. ಒಂದು ಕಿ.ಮೀ ರಸ್ತೆಗೆ ಸರಾಸರಿ ₹ 1 ಕೋಟಿ ಖರ್ಚಾಗುತ್ತಿದೆ. ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡರೆ ಅದೇ ವೆಚ್ಚದಲ್ಲಿ ಎರಡು ಕಿ.ಮೀ ರಸ್ತೆ ಅಭಿವೃದ್ಧಿಪಡಿಸಬಹುದು. ಅನಗತ್ಯ ವೆಚ್ಚಕ್ಕೆ ಕಡಿವಾಣ ಹಾಕಿದರೆ ₹ 15 ಸಾವಿರ ಕೋಟಿ ಉಳಿತಾಯವಾಗುತ್ತದೆ. ಈ ಕುರಿತು ವರದಿಯನ್ನೇ ಸರ್ಕಾರಕ್ಕೆ ಈಚೆಗೆ ಕೊಟ್ಟಿದ್ದೇನೆ.

ಬಾಲಕೃಷ್ಣ ಬಿ.ಎಸ್
ನಿವೃತ್ತ ಸೂಪರಿಟೆಂಡೆಂಟ್ ಎಂಜಿನಿಯರ್, ಪಿಡಬ್ಲ್ಯುಡಿ

‘ಶಕ್ತಿ’ಯನ್ನು ಸಶಕ್ತಗೊಳಿಸುತ್ತದೆಯೇ?’



ಮಹಿಳೆಯರಿಗೆ ಸ್ವಾತಂತ್ರ್ಯ ನೀಡಿದ, ಸಾರಿಗೆ ನಿಗಮಗಳಿಗೆ ಬಲ ತಂದ ಶಕ್ತಿ ಯೋಜನೆಗಾಗಿ ಬಜೆಟ್‌ನಲ್ಲಿ ₹ 2,800 ಕೋಟಿ ನೀಡಿರುವುದು ಸ್ವಾಗತಾರ್ಹ. ಜೊತೆಗೆ ಈ ಹಣವನ್ನು ಸರ್ಕಾರ ಪ್ರತಿ ತಿಂಗಳು ಸಾರಿಗೆ ನಿಗಮಗಳಿಗೆ ನೀಡುವಂತೆ ಒಂದು ರಚಾನಾತ್ಮಕ ವ್ಯವಸ್ಥೆ ಮಾಡುವುದು ಅತಿಅಗತ್ಯ

‘ಶಕ್ತಿ’ ಯೋಜನೆಯ ಸಂಪೂರ್ಣ ಫಲ ದೊರಕಲು ಹೆಚ್ಚಿನ ಬಸ್‌ಗಳು ಬೇಕಾಗಿವೆ ಹಾಗೂ ಹೊಸ ಸಿಬ್ಬಂದಿ ನೇಮಕಾತಿ ಆಗಬೇಕಿದೆ. 4 ಸಾರಿಗೆ ನಿಗಮಗಳು 4000 ಬಸ್‌ಗಳನ್ನೂ 9000 ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಸರ್ಕಾರದ ಅನುಮತಿ ಕೋರಿದ್ದವು. ಆದರೆ, ಇಂದಿನ ಬಜೆಟ್ ಭಾಷಣದಲ್ಲಿ ಇದರ ಪ್ರಸ್ತಾಪವಿಲ್ಲ. ಬಜೆಟ್‌ನ ಮುಖ್ಯಾಂಶಗಳಲ್ಲಿ 3 ನಿಗಮಗಳಿಗೆ ಒಟ್ಟಾರೆ ₹ 600ಕೋಟಿ ಅನುದಾನ ಕೊಡುವುದಾಗಿ ಇದೆ. ಆದರೆ, ಬಜೆಟ್ ಭಾಷಣದಲ್ಲಿ ಇದು ಇಲ್ಲದ ಕಾರಣ, ನಿಗಮಗಳಿಗೆ ಈ ಹಣ ಬರುತ್ತದೆಯೇ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ. ಬರುವುದಾದರೂ ₹ 600 ಕೋಟಿಯಷ್ಟು ಮೊತ್ತ ಹೊಸ ಬಸ್‌ಗಳನ್ನು ಖರೀದಿಸಲು, ನೂತನ ಸಿಬ್ಬಂದಿ ವೇತನಕ್ಕೆ ಸಾಕಾಗುವುದೋ ಗೊತ್ತಿಲ್ಲ. ಈ ಮೊತ್ತದಲ್ಲಿ ಬಿಎಂಟಿಸಿಯ ಪಾಲೇ ಇಲ್ಲ. ರಾಜ್ಯದೆಲ್ಲೆಡೆ ಹೊಸ ಬಸ್‌ಗಳಿಗೆ ₹ 600 ಕೋಟಿ ಹಾಗೂ ಬೆಂಗಳೂರು ನಗರದ ಮೆಟ್ರೊ ರೈಲಿಗೆ ₹3,275ಕೋಟಿ ಅನುದಾನ ನೀಡಲಾಗಿದೆ. ಇತರ ಜಿಲ್ಲೆಗಳಿಗೆ ಮೋಸ ಮಾಡಿದಂತಾಯಿತಲ್ಲವೇ? ಈ ತರಹದ ಬೆಂಗಳೂರು ಕೇಂದ್ರಿತ ಅಭಿವೃದ್ಧಿ ಒಳ್ಳೆಯದಲ್ಲ.

ವಿನಯ್ ಶ್ರೀನಿವಾಸ್
ಸದಸ್ಯ, ಬೆಂಗಳೂರು ಬಸ್ ಪ್ರಯಾಣಿಕರ ವೇದಿಕೆ

ಆದಾಯಕ್ಕೆ ಆಸ್ತಿ ಮಾರಾಟ

ಲೋಕೋಪಯೋಗಿ, ನಗರಾಭಿವೃದ್ಧಿ, ಕೈಗಾರಿಕಾ ಚಟುವಟಿಕೆಗಳಿಗೆ ಉತ್ತೇಜನ

• ಚಂದ್ರಹಾಸ ಹಿರೇಮಳಲಿ



ಐದು ಗ್ಯಾರಂಟಿ ಯೋಜನೆಗಳಿಗಾಗಿ ₹ 35 ಸಾವಿರ ಕೋಟಿ ಹೊಂದಾಣಿಕೆಯ ಸವಾಲುಗಳ ಮಧ್ಯೆಯೂ ರಾಜ್ಯದ ಮೂಲ ಸೌಕರ್ಯಗಳಿಗೆ ಬಜೆಟ್‌ನಲ್ಲಿ ಹೆಚ್ಚಿನ ಆದ್ಯತೆ ನೀಡಲಾಗಿದೆ. ಆದರೆ, ಅಭಿವೃದ್ಧಿ ಕಾರ್ಯಗಳ ಅನುಷ್ಠಾನಕ್ಕೆ ಅಗತ್ಯವಾದ ಹಣಕ್ಕಾಗಿ ಸರ್ಕಾರದ ಆಸ್ತಿಗಳನ್ನೇ ಮಾರಾಟ ಮಾಡಲು ಮುಂದಾಗಿರುವುದು ಕೇಂದ್ರದ ಮಾದರಿಯತ್ತ ರಾಜ್ಯವೂ ಸಾಗುತ್ತಿರುವುದರ ಮುನ್ಸೂಚನೆಯಂತೆ ಕಾಣುತ್ತಿದೆ.

ಅಭಿವೃದ್ಧಿ ಕಾರ್ಯಗಳಿಗೆ ಹಣ ಹೊಂದಾಣಿಕೆ ಮಾಡಲು ಸರ್ಕಾರ ಇಂತಹ ಕಾರ್ಯತಂತ್ರ ರೂಪಿಸಿರಬಹುದು. ಅದಕ್ಕಾಗಿ ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿರುವ ಖಾಲಿ ನಿವೇಶನಗಳು, ಕಟ್ಟಡಗಳನ್ನು ಮಾರಾಟ ಮಾಡಿ ಆದಾಯ ಗಳಿಸಲು ಬಜೆಟ್‌ನಲ್ಲೇ ಅವಕಾಶ ಕಲ್ಪಿಸಿರುವುದು ರಾಜ್ಯ ಎದುರಿಸುತ್ತಿರುವ ಆರ್ಥಿಕ ಸಂಕಷ್ಟದ ಮುನ್ಸೂಚನೆಯೂ ಇರಬಹುದು. ಕೇಂದ್ರ ಸರ್ಕಾರವೂ ಹಿಂದೆ ಹಲವು ಸಮಯದಲ್ಲಿ ಆದಾಯ ಗಳಿಕೆಗಾಗಿ ಸರ್ಕಾರಿ ಆಸ್ತಿಗಳನ್ನು ಮಾರಾಟ ಮಾಡುವ ಸಂಪ್ರದಾಯಕ್ಕೆ ನಾಂದಿಯಾಡಿತ್ತು.

ಸಾರ್ವಜನಿಕ ಸಂಚಾರ ಮತ್ತು ವಾಣಿಜ್ಯ ಚಟುವಟಿಕೆಗಳ ಉತ್ತೇಜನಕ್ಕೆ ಹಣಕಾಸು ಸಚಿವರೂ ಆದ ಮುಖ್ಯಮಂತ್ರಿ ಸಿದ್ದರಾಮಯ್ಯ ಒತ್ತು ನೀಡಿದ್ದಾರೆ. 4,400 ಕಿ.ಮೀ ಜಿಲ್ಲಾ ಮತ್ತು ರಾಜ್ಯ ಹೆದ್ದಾರಿಗಳ ಅಭಿವೃದ್ಧಿಗೆ ಹಣ ಮೀಸಲಿಡಲಾಗಿದೆ. ಎರಡು ಪ್ರಮುಖ ರಾಜ್ಯ ಹಾದ್ದಾರಿಗಳನ್ನು ಸರ್ಕಾರಿ-ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲು ಮುಂದಾಗಿದ್ದಾರೆ. ರೈಲ್ವೆ ಜಾಲವನ್ನು ವಿಸ್ತರಿಸಲು ಒಲವು ತೋರಲಾಗಿದ್ದು, ರಾಜ್ಯದ ಎಲ್ಲ ಭಾಗಗಳಿಗೂ ಸಂಪರ್ಕ ಕಲ್ಪಿಸಲು 1,110 ಕಿ.ಮೀ ಉದ್ದದ ಒಂಬತ್ತು ರೈಲ್ವೆ ಯೋಜನಾ ಕಾಮಗಾರಿಗಳನ್ನು ಆದ್ಯತೆಯ ಮೇಲೆ ಪೂರ್ಣಗೊಳಿಸುವ ಆಶ್ವಾಸನೆ ನೀಡಿದ್ದಾರೆ. ರೈಲು ಹಳಿಗಳು ಹಾದುಹೋಗಿರುವ ರಸ್ತೆ ಮಾರ್ಗದಲ್ಲಿ ಸೇತುವೆಗಳನ್ನು ನಿರ್ಮಿಸಲು ₹ 803 ಕೋಟಿ ಮೀಸಲಿಟ್ಟಿರುವುದು ವಾಹನಗಳ ದಟ್ಟಣೆ ನಿಯಂತ್ರಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವ ನಿರ್ಧಾರವಾದರೂ, ಹಿಂದಿನ ಸರ್ಕಾರದ ಅವಧಿಯಲ್ಲಿ ಘೋಷಿಸಿದ್ದ ಕಾವಲುಗಾರ ರಹಿತ ಕ್ರಾಸಿಂಗ್ ಘೋಷಣೆ ಅನುಷ್ಠಾನಕ್ಕೆ ಇನ್ನಷ್ಟು ಅನುದಾನ ಮೀಸಲಿಡಬೇಕಿತ್ತು.

ರಾಜ್ಯದಲ್ಲಿ ಅನುಷ್ಠಾನದ ಹಂತದಲ್ಲಿರುವ ವಿಮಾನ ನಿಲ್ದಾಣಗಳನ್ನು ಪೂರ್ಣಗೊಳಿಸುವ ಜವಾಬ್ದಾರಿ ಜತೆಗೆ, ಧರ್ಮಸ್ಥಳ, ಕೊಡಗು, ಚಿಕ್ಕಮಗಳೂರಿನಲ್ಲಿ ‘ಏರ್‌ಸ್ಟ್ರಿಪ್’ಗಳನ್ನು ಅಭಿವೃದ್ಧಿಪಡಿಸಲು ಮುಂದಾಗಿರುವುದು ಮಲೆನಾಡು, ಕರಾವಳಿ ಭಾಗದ ಪ್ರವಾಸೋದ್ಯಮ ಬೆಳವಣಿಗೆಗೆ ಪೂರಕವಾಗಿದೆ. ವಿಜಯಪುರ ವಿಮಾನನಿ ಲ್ದಾಣದಿಂದ ಈ ವರ್ಷದಲ್ಲೇ ವಿಮಾನ ಸಂಚಾರ ಆರಂಭಿಸುವ ಭರವಸೆಯೂ ದೊರೆತಿದೆ. ಬಂದರು ಅವಲಂಬಿತ ಕೈಗಾರಿಕೆಗಳಿಗೆ ಉತ್ತೇಜನ ನೀಡಲು ಉತ್ತರ ಕನ್ನಡ ಜಿಲ್ಲೆಯ ಕೇಣಿಯಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಸರ್ವಋತು ಆಳನೀರಿನ ‘ಗ್ರೀನ್‌ಫೀಲ್ಡ್’ ಬಂದರು ಸ್ಥಾಪನೆ, ರಾಜ್ಯದ ಕಿರು ಬಂದರುಗಳ ಅಭಿವೃದ್ಧಿಗೆ ಮುಂದಾಗಿರುವುದು ಕರಾವಳಿ ತೀರದ ವಾಣಿಜ್ಯ ಚಟುವಟಿಕೆಗಳಿಗೆ ಉತ್ತೇಜನಕಾರಿಯಾಗಿವೆ.

ಮುಖ್ಯಾಂಶಗಳು

- **ಲೋಕೋಪಯೋಗಿ ಇಲಾಖೆಯ ಖಾಲಿ ನಿವೇಶನಗಳು, ಕಟ್ಟಡಗಳ ಮಾರಾಟ**
- **ಕೇಂದ್ರದ ಮಾದರಿ ಅನುಸರಿಸಲು ಮುಂದಾದ ರಾಜ್ಯ ಸರ್ಕಾರ**
- **ಸರ್ಕಾರಿ-ಖಾಸಗಿ ಸಹಭಾಗಿತ್ವದಲ್ಲಿ ಎರಡು ರಾಜ್ಯ ಹೆದ್ದಾರಿ ಅಭಿವೃದ್ಧಿ**

ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದಾಗುವ ನವೋದ್ಯಮಿಗಳಿಗೆ ಪ್ರೋತ್ಸಾಹದಾಯಕ ಕ್ರಮಗಳನ್ನು ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಕೈಗಾರಿಕೆಗಳ ಸ್ಥಾಪನೆಗೆ ಎರಡು ಎಕರೆವರೆಗಿನ ಕೃಷಿಭೂಮಿಯನ್ನು ಭೂಪರಿವರ್ತನೆಯ ಅಗತ್ಯವಿಲ್ಲದೇ ಬಳಸಿಕೊಳ್ಳಲು ಅನುಕೂಲವಾಗುವಂತೆ ಭೂ ಕಂದಾಯ ಕಾಯ್ದೆಗೆ ತಿದ್ದುಪಡಿ ತರುತ್ತಿರುವುದು ಮಹತ್ವದ ನಿರ್ಧಾರ. ಕೈಗಾರಿಕೆಗಳ ಸ್ಥಾಪನೆಗೆ ಪರವಾನಗಿ ಪಡೆಯಲು ಒಂದೇ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸುವ ಮೂಲಕ ಸಮಯ ವ್ಯರ್ಥ, ಅನಗತ್ಯ ಅಲೆದಾಟ ತಪ್ಪಿಸಲಾಗುತ್ತಿದೆ. ಕೃಷಿ ಉತ್ಪನ್ನ ಆಧಾರಿತ ಕೈಗಾರಿಕೆಗಳ ಸ್ಥಾಪನೆಗೆ ಹೊಸ ನೀತಿ ರೂಪಿಸಲು ಮುಂದಾಗಿರುವುದು. ಕೈಗಾರಿಕೆಗಳ ಜತೆಗೆ ಕೃಷಿ ವಲಯಕ್ಕೂ ಅನುಕೂಲವಾಗಲಿದೆ.

ರಾಜ್ಯದ ಸೇವಾವಲಯದಲ್ಲಿ ಇರುವ ವಿಪುಲ ಅವಕಾಶಗಳನ್ನು ಪ್ರವರ್ಗ 1 ಹಾಗೂ ‘2 ಎ’ ಹಿಂದುಳಿದ ವರ್ಗಗಳಿಗೆ ಸೇರಿದ ಜಾತಿಗಳ ಉದ್ಯಮಿಗಳು ಸದ್ಬಳಕೆ ಮಾಡಿಕೊಳ್ಳಲು ಇದೇ ಮೊದಲ ಬಾರಿ ಅವಕಾಶ ಕಲ್ಪಿಸಲಾಗಿದ್ದು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಪಡೆಯುವ ₹ 10 ಕೋಟಿವರೆಗಿನ ಸಾಲಕ್ಕೆ ಶೇ 6ರಷ್ಟು ಬಡ್ಡಿ ಸಹಾಯಧನ ನೀಡುತ್ತಿರುವುದು ಕಾಂಗ್ರೆಸ್ ವೋಟ್ ಬ್ಯಾಂಕ್ ಆಗಿರುವ ಹಿಂದುಳಿದ ವರ್ಗಗಳಿಗೆ ಸರ್ಕಾರ ನೀಡುತ್ತಿರುವ ಕೊಡುಗೆ ಎನ್ನಬಹುದು.

ಕೈಗಾರಿಕೆ, ಮೂಲ ಸೌಕರ್ಯ ಅಭಿವೃದ್ಧಿಗೆ ಸಾಕಷ್ಟು ಒತ್ತು ನೀಡಿದ್ದರೂ, ಹಿಂದಿನ ಬಿಜೆಪಿ ಸರ್ಕಾರ ಘೋಷಿಸಿದ್ದ ₹ 13,418 ಕೋಟಿ ಮೊತ್ತದ ಕಾಮಗಾರಿಗಳು ಇನ್ನೂ ಆರಂಭವಾಗಿಲ್ಲ. ಆ ಎಲ್ಲ ಕಾಮಗಾರಿಗಳ ಕಾರ್ಯಭಾರ ನಮ್ಮ ಸರ್ಕಾರದ ಮೇಲಿದೆ. ಅಲ್ಲದೇ, ಗುತ್ತಿಗೆದಾರರಿಗೆ ನೀಡಬೇಕಿದ್ದ ₹ 4,437 ಕೋಟಿ ಮೊತ್ತದ ಬಿಲ್‌ಗಳು ಬಾಕಿ ಉಳಿದುಕೊಂಡಿವೆ. ಅನುದಾನದ ಲಭ್ಯತೆಯನ್ನು ಪರಿಗಣಿಸದೇ ಕಳೆದ ಆರ್ಥಿಕ ವರ್ಷದಲ್ಲಿ ₹ 6,353 ಕೋಟಿ ಮೊತ್ತದ ಕಾಮಗಾರಿಗಳಿಗೆ ಅನುಮೋದಿಸಿದ್ದೇ ಇದಕ್ಕೆ ಕಾರಣ ಎಂದು ಬಜೆಟ್‌ನಲ್ಲೇ ಪ್ರಸ್ತಾಪಿಸುವ ಮೂಲಕ ಬಾಕಿ ತೀರುವಳಿ ಸಂಕಷ್ಟವನ್ನೂ ಸಿದ್ದರಾಮಯ್ಯ ಅನಾವರಣಗೊಳಿಸಿದ್ದಾರೆ.

ಹೊಸ ಯೋಜನೆಗಳು ಏನೇನು?






- ವಾಯುಯಾನ ಅಭಿವೃದ್ಧಿಗೆ ರಾಜ್ಯದಲ್ಲೂ ನಾಗರಿಕ ವಿಮಾನಯಾನ ನೀತಿ
- ಉತ್ತರ ಕನ್ನಡ ಜಿಲ್ಲೆಯ ಮಂಕಿಯಲ್ಲಿ ಬಹುಪಯೋಗಿ ಬಂದರು ಸ್ಥಾಪನೆ
- ಬೆಂಗಳೂರಿನ ಕಾಡುಗೋಡಿಯ 100 ಎಕರೆಯಲ್ಲಿ ಸೆಮಿಕಂಡಕ್ಟರ್ ವಲಯ ಸ್ಥಾಪನೆ
- ಚನ್ನೈ-ಬೆಂಗಳೂರು ಕಾರಿಡಾರ್‌ನಲ್ಲಿ ಬೃಹತ್ ಕೈಗಾರಿಕಾ ಟೌನ್‌ಶಿಪ್
- ಸುಸ್ಥಿರ ಉದ್ಯೋಗಕ್ಕಾಗಿ ಮಹಾತ್ಮಗಾಂಧಿ ವಸ್ತ್ರೋದ್ಯಮ ಕೋಶ ಸ್ಥಾಪನೆ
- ನೈಸರ್ಗಿಕ ಅನಿಲ ಜಾಲ ವಿಸ್ತರಣೆ, ನಗರ ಅನಿಲ ವಿತರಣಾ ನೀತಿ ರಚನೆ
- ದೋಣಿ ಜೆಟ್ಟಿಗಳು, ಬಂದರುಗಳಲ್ಲಿ ಪ್ರತಿ ಎರಡು ವರ್ಷಕ್ಕೆ ಹೂಳು ತೆಗೆಯುವ ಕಾರ್ಯ
- ಸಮಗ್ರ ಕರಾವಳಿ ನಿರ್ವಹಣಾ ಸಮಿತಿಯ ಸಬಲೀಕರಣ
- ವಿಜಯಪುರ ಜಿಲ್ಲೆಯಲ್ಲಿ ಉತ್ಪಾದನಾ ಕ್ಲಸ್ಟರ್ ಸ್ಥಾಪನೆ
- ದಕ್ಷಿಣ ಕನ್ನಡದಲ್ಲಿ ರಫ್ತು ಆಧಾರಿತ ಕೈಗಾರಿಕಾ ಕ್ಲಸ್ಟರ್
- ದೇವನಹಳ್ಳಿಯಲ್ಲಿ ಏರೋಸ್ಪೇಸ್ ತಂತ್ರಜ್ಞಾನ ಕೇಂದ್ರ
- ಕಲಬುರಗಿ, ಉತ್ತರ ಕನ್ನಡ, ಬೆಳಗಾವಿ, ಚಾಮರಾಜನಗರ, ವಿಜಯಪುರ, ಯಾದಗಿರಿ, ಹುಬ್ಬಳ್ಳಿಯಲ್ಲಿ ಹೊಸ ಕೈಗಾರಿಕಾ ವಸಾಹತು
- ಜವಳಿ ಮತ್ತು ಸಿದ್ಧ ಉಡುಪು ನೀತಿ ಅಡಿ ಉತ್ತರ ಕರ್ನಾಟಕ ಭಾಗದಲ್ಲಿ ಹೆಚ್ಚಿನ ಹೂಡಿಕೆ, ಸ್ಥಳೀಯರಿಗೆ ಉದ್ಯೋಗವಾಕಾಶ
- ವಸತಿ ಸಮಸ್ಯೆಗೆ ತೊಡಕಾಗಿರುವ ಅರಣ್ಯ ಕಾಯ್ದೆ ವಿಧಿಗಳ ತಿದ್ದುಪಡಿ ಮಾಡಲು ಕೇಂದ್ರಕ್ಕೆ ಪ್ರಸ್ತಾವ
- ವೈಜ್ಞಾನಿಕ ಗಣಿಗಾರಿಕೆಗೆ ಉತ್ತೇಜನ ನೀಡುವ ಮೂಲಕ ರಾಜಧನ ಸಂಗ್ರಹ ಹೆಚ್ಚಳ
- ಲಿಥಿಯಂ ಖನಿಜಾನ್ವೇಷಣೆಗೆ ಒತ್ತು ನೀಡಿ, ಹೊಸ ಖನಿಜ ನಿಕ್ಷೇಪ ಪತ್ತೆ ಹಚ್ಚಲು ಕ್ರಮ
- ಹೊಸ ಉದ್ಯಮಿಗಳ ಸೆಳೆಯಲು ಕಾರ್ಯಕ್ರಮ ಆಯೋಜನೆಗೆ ₹ 3 ಕೋಟಿ
- ವಿಶ್ವದರ್ಜೆಯ ಪರಿಘೋಷಣಾ ಕೇಂದ್ರ (ಇನ್ನೋವರ್ಸ್) ಸ್ಥಾಪನೆಗೆ ₹ 50 ಕೋಟಿ
- ₹ 5 ಕೋಟಿ ವೆಚ್ಚದಲ್ಲಿ ಜೈವಿಕ ಬ್ಯಾಂಕ್ ಸ್ಥಾಪನೆ

ಪೊಲೀಸ್ ವಾಹನಕ್ಕೆ ₹100 ಕೋಟಿ

ಬೆಂಗಳೂರು: ಪೊಲೀಸ್ ಇಲಾಖೆಯಲ್ಲಿರುವ ಹಳೇ ವಾಹನಗಳನ್ನು ಬದಲಾಯಿಸುವ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದ್ದು, ಹೊಸ ವಾಹನಗಳ ಖರೀದಿಗಾಗಿ ಹಂತ ಹಂತವಾಗಿ ₹ 100 ಕೋಟಿ ನೀಡುವುದಾಗಿ ಘೋಷಿಸಲಾಗಿದೆ.

ಸೂಪಾ, ಯಲಹಂಕ, ಭಟ್ಕಳ, ಅರಕೇರಾ, ನಾಗರಬಾವಿ, ಎನ್.ಆರ್.ಪುರ, ಶಿರಹಟ್ಟಿ, ಹೊನ್ನಾವರ, ನರಸಾಪುರ, ದೇವನಹಳ್ಳಿಯಲ್ಲಿ 3ಬೇ ಅಗ್ನಿಶಾಮಕ ಠಾಣೆ ಕಟ್ಟಡಗಳ ನಿರ್ಮಾಣ ಹಾಗೂ ವಾಹನ ಖರೀದಿಗೆ ₹100 ಕೋಟಿ ನೀಡಲಾಗಿದೆ.

ಪೊಲೀಸ್ ಗೃಹ–2025 ಯೋಜನೆಯಡಿ 2,125 ವಸತಿಗೃಹ ನಿರ್ಮಾಣ ಪೂರ್ಣಗೊಳಿಸಲು ₹ 450 ಕೋಟಿ ಮೀಸಲಿಡಲಾಗಿದೆ. ಕಾನೂನು ಸುವ್ಯವಸ್ಥೆ ಕರ್ತವ್ಯಕ್ಕೆ ಅನುಕೂಲ ಕಲ್ಪಿಸುವುದಕ್ಕಾಗಿ ಪೊಲೀಸರಿಗೆ ಡ್ರೋನ್ ಕ್ಯಾಮೆರಾ ಹಾಗೂ ಸಿಬ್ಬಂದಿಗೆ ಬಾಡಿವೋರ್ನ್ ಕ್ಯಾಮೆರಾ ನೀಡುವುದಾಗಿ ಘೋಷಿಸಲಾಗಿದೆ.

ಬೆಂಗಳೂರು ನಗರದಲ್ಲಿ ಹೊಸದಾಗಿ ಐದು ಸಂಚಾರ ಠಾಣೆ ಹಾಗೂ ಆರು ಮಹಿಳಾ ಠಾಣೆ ಸ್ಥಾಪನೆ ಬಗ್ಗೆ ಬಜೆಟ್‌ನಲ್ಲಿ ಉಲ್ಲೇಖಿಸಲಾಗಿದ್ದು, ಹೊಸದಾಗಿ 2,454 ಹುದ್ದೆಗಳನ್ನು ಸೃಜಿಸುವ ಬಗ್ಗೆಯೂ ಪ್ರಸ್ತಾಪಿಸಲಾಗಿದೆ.

ಎರಡನೇ ಹಂತದ ನಗರಗಳ ಕಡೆಗಣನೆ

• ಬಾಲಕೃಷ್ಣ ಪಿ.ಎಚ್.


ಬೆಂಗಳೂರು: ಬಿಬಿಎಂಪಿಗೆ ಸಿಕ್ಕಿದ ಮಹತ್ವ ರಾಜ್ಯದ ಉಳಿದ ನಗರಗಳಿಗೆ ಸಿಕ್ಕಿಲ್ಲ. ಇತರ ನಗರಗಳಿಗೆ ಇರುವ ಯೋಜನೆಗಳಿಗೆ ಅನುದಾನ ಒದಗಿಸಲಾಗಿದೆ. ಹಿಂದಿನ ಸರ್ಕಾರದ ಅಪೂರ್ಣ ಕಾಮಗಾರಿಗಳ ಹೊರೆ ನಿರ್ವಹಣೆಗೆ ಮತ್ತು ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿರುವ ‘ಗ್ಯಾರಂಟಿ’ಗಳ ಜಾರಿಗಾಗಿ ಹೆಚ್ಚು ಕಸರತ್ತು ಮಾಡಲಾಗಿದೆ.

ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆ ಮುಂದುವರಿಸಿದೆ. ‘ಅಮೃತ್–2.0’ ಯೋಜನೆಯಡಿ ಆಯ್ದ ನಗರಗಳಲ್ಲಿ ನೀರು ಹಾಗೂ ಒಳಚರಂಡಿ ವ್ಯವಸ್ಥೆಗೆ ಹಣ ಹಂಚಿಕೆ, ಪಾರಂಪರಿಕ ಮತ್ತು ದ್ರವ ತ್ಯಾಜ್ಯದ ಸಮರ್ಪಕ ನಿರ್ವಹಣೆ ಹಾಗೂ ಒಳಚರಂಡಿ ನೀರು ಸಂಸ್ಕರಿಸುವ ಆಧುನಿಕ ಪದ್ಧತಿ ಅಳವಡಿಸಿ ನದಿ ಮತ್ತು ಕೆರೆಗಳಿಗೆ ಹರಿಯುವ ಮಾಲಿನ್ಯ ನಿಯಂತ್ರಿಸುವ ಯೋಜನೆ, ‘ಸ್ವಚ್ಛ ಭಾರತ 2.0’ ಯೋಜನೆಯಡಿ ಬಿಬಿಎಂಪಿ ಸೇರಿ ರಾಜ್ಯದ 314 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸುಸ್ಥಿರ ಘನತ್ಯಾಜ್ಯ ನಿರ್ವಹಣೆ ಮತ್ತು ಬಳಸಿದ ನೀರಿನ ನಿರ್ವಹಣೆ ಕಾಮಗಾರಿಗಳನ್ನು ನಡೆಸಲಾಗುವುದು ಎಂದು ಸರ್ಕಾರ ಹೇಳಿದೆ.

‘ಅಮೃತ್ 2.0’ ಯೋಜನೆಯಡಿ ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇರುವ 287 ಪಟ್ಟಣಗಳಲ್ಲಿ ನೀರು ಸರಬರಾಜು ಮತ್ತು ಜಲಮೂಲಗಳ ಸಂರಕ್ಷಣೆಗೆ ಒತ್ತು ನೀಡುವ ಕಾಮಗಾರಿಗಳೆಲ್ಲ ಚೆನ್ನಾಗಿವೆ. ಆದರೆ, ಇವೆಲ್ಲ ಈಗಾಗಲೇ ಇರುವ ಮತ್ತು ಕೇಂದ್ರ ಸರ್ಕಾರ ಪಾಲು ನೀಡುವ ಯೋಜನೆಗಳು. ಹೊಸ ಯೋಜನೆಗಳು ಘೋಷಣೆಯಾಗಿಲ್ಲ. ಸಿದ್ದರಾಮಯ್ಯ ಅವರೇ ಹಿಂದೆ ಮುಖ್ಯಮಂತ್ರಿ ಆಗಿದ್ದಾಗ ಆರಂಭಿಸಿದ್ದ ಇಂದಿರಾ ಕ್ಯಾಂಟಿನ್‌ಗೆ ಈ ಬಾರಿ ದುರಸ್ತಿ, ನವೀಕರಣ, ನಿರ್ವಹಣೆಗೆ ಎಂದು ಕೇವಲ ₹100 ಕೋಟಿ ಒದಗಿಸಲಾಗಿದೆ.

ಮನೆಗೆ ಮಹತ್ವ: 2013–18ರ ಅವಧಿಯಲ್ಲಿ 14.54 ಲಕ್ಷ ಮನೆ ನಿರ್ಮಿಸಲಾಗಿತ್ತು. ಬಳಿಕದ ಐದು ವರ್ಷಗಳಲ್ಲಿ 12 ಲಕ್ಷ ಮನೆ ನಿರ್ಮಿಸುವ ಬದಲು ಕೇವಲ 5.19 ಮನೆಗಳನ್ನು ನಿರ್ಮಾಣ ಮಾಡಲಾಗಿತ್ತು. ಗುರಿ ತಲುಪಲು ₹ 17,815 ಕೋಟಿ ಬೇಕು ಎಂದು ಸರ್ಕಾರ ಹೇಳಿಕೊಂಡಿದೆ. ಅದಕ್ಕೆ ಅನುದಾನ ಮೀಸಲಿಟ್ಟಿರುವ ಮಾಹಿತಿ ಇಲ್ಲ. ನಿರ್ಮಾಣ ಹಂತದಲ್ಲಿರುವ 3 ಲಕ್ಷ ಮನೆಗಳನ್ನು ಪೂರ್ಣಗೊಳಿಸಲು ಅನುದಾನ ನೀಡಿರುವುದು ಸಕಾರಾತ್ಮಕ ಅಂಶ. ವಸತಿ ಸಮಸ್ಯೆಗೆ ತೊಡಕಾಗಿರುವ ಅರಣ್ಯ ಕಾಯ್ದೆ ವಿಧಿಗಳ ತಿದ್ದುಪಡಿ ಮಾಡಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದಾಗಿ ಬಜೆಟ್‌ನಲ್ಲಿ ತಿಳಿಸಲಾಗಿದೆ. ಈ ಪ್ರಸ್ತಾವನೆ ಅನುಮೋದನೆಗೊಂಡರೆ ಸಾವಿರಾರು ಜನರ ಸೂರು ಹೊಂದುವ ಕನಸು ನನಸಾಗಲಿದೆ.

ಹೆಚ್ಚುವರಿ ₹12 ಸಾವಿರ ಕೋಟಿ ಸಂಗ್ರಹ ಹೇಗೆ...



ಶ್ರೀಸಾಮಾನ್ಯರ ಪ್ರತಿಕ್ರಿಯೆಗಳು



ಕೃಷಿ ಉತ್ಪನ್ನಗಳ ಅವಲಂಬಿತ ದಾಲ್‌ಮಿಲ್ ಉದ್ಯಮ, ಸಕ್ಕರೆ ಕಾರ್ಖಾನೆಗಳನ್ನು ಕೃಷಿ ಆಧಾರಿತ ಕೈಗಾರಿಕೆಯಾಗಿ ಘೋಷಿಸಿದರೆ ಬ್ಯಾಂಕ್‌ಗಳಲ್ಲಿ ಕಡಿಮೆ ಬಡ್ಡಿದರದಲ್ಲಿ ಸಾಲ ಸಿಗುತ್ತದೆ. ಸಂಕಷ್ಟದಲ್ಲಿರುವ ಉದ್ಯಮಗಳೂ ಚೇತರಿಸಿಕೊಳ್ಳುತ್ತಿದ್ದವು

ಪ್ರವೀಣ್ ಪಾಟೀಲ
ಸೂಗುರ್(ಎನ್), ಕಲಬುರಗಿ ಜಿಲ್ಲೆ



ವಿವಿಧ ವಸತಿ ಯೋಜನೆಗಳಡಿ ಕಾಂಗ್ರೆಸ್ ಸರ್ಕಾರದ ಹಿಂದಿನ ಅವಧಿಯಲ್ಲಿ ಒಂದಿಷ್ಟು ಮನೆ ನಿರ್ಮಿಸಿಕೊಡಲಾಯಿತು. ಕಳೆದ ಐದು ವರ್ಷಗಳಲ್ಲಿ ಏನೂ ಕೆಲಸ ನಡೆದಿರಲಿಲ್ಲ. ನಗರ ಪ್ರದೇಶದಲ್ಲಿ ಹತ್ತಾರು ವರ್ಷಗಳಿಂದ ಮನೆ ಹಂಚಿಕೆ ಆಗಿಲ್ಲ

ವಿ.ಗೀತಾ
ಮಹಿಳಾಪರ ಹೋರಾಟಗಾರ್ತಿ, ಕೋಲಾರ



ಅನುದಾನ ಹಾಗೂ ಆದಾಯ ಸಂಗ್ರಹ ಕೊರತೆಯಿಂದ ಕೆಲವು ಮಹಾನಗರ ಪಾಲಿಕೆಗಳು ಮೂಲಸೌಕರ್ಯ ಒದಗಿಸಲು ಏದುಸಿರು ಬಿಡುತ್ತಿವೆ. ಸಾರ್ವಜನಿಕರೂ ಸಕಾಲದಲ್ಲಿ ತೆರಿಗೆ ಕಟ್ಟುತ್ತಿಲ್ಲ. ಹೀಗಾಗಿ, ಪಾಲಿಕೆಗಳಿಗೆ ಹೆಚ್ಚಿನ ಅನುದಾನ ಕೊಡಬೇಕಿತ್ತು

ನವೀನ್ ಕುಮಾರ
ಕಲಬುರಗಿ



ಹೊಸದಾಗಿ ಕೈಗಾರಿಕೆಗಳ ಸ್ಥಾಪನೆಗೆ ಒಂದೇ ವೇದಿಕೆಯಲ್ಲಿ ಅನುಮತಿ ನೀಡಲಾಗುವುದು ಎಂದಿರುವುದು ಸ್ವಾಗತಾರ್ಹ. ಎರಡು ಎಕರೆವರೆಗಿನ ಕೃಷಿ ಭೂಮಿಯನ್ನು ಕೈಗಾರಿಕಾ ಉದ್ದೇಶಕ್ಕಾಗಿ ಪರಿವರ್ತಿಸದೇ ಬಳಸಲು ಅವಕಾಶ ನೀಡಿರುವುದು ಉತ್ತಮ ನಿರ್ಧಾರ

ಮಹ್ಮದ್ ವಜೀದ್, ಕೈಗಾರಿಕೋದ್ಯಮಿ, ತುಮಕೂರು



ಬಜೆಟ್‌ನಲ್ಲಿ ಲೋಕೋಪಯೋಗಿ ಇಲಾಖೆಗೆ ₹ 10 ಸಾವಿರ ಕೋಟಿ ಹಣ ಮೀಸಲಿಡಲಾಗಿದೆ. ಆದರೆ, ಇದು ರಾಷ್ಟ್ರೀಯ, ರಾಜ್ಯ ಹೆದ್ದಾರಿಗಷ್ಟೇ ಬಳಕೆಯಾಗುತ್ತದೆ. ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಬಜೆಟ್‌ನಲ್ಲಿ ಪ್ರತ್ಯೇಕ ಘೋಷಣೆಯಿರಬೇಕಿತ್ತು

ವಸಂತಮ್ಮ
ಭಾರತೀನಗರ, ಮಂಡ್ಯ ಜಿಲ್ಲೆ




ಎಲೆಕ್ಟ್ರಾನಿಕ್ ಉದ್ದಿಮೆಗೆ 100 ಎಕರೆ ಮೀಸಲು, ಮೆಗಾ ಇಂಡಸ್ಟ್ರಿ ಟೌನ್‌ಶಿಪ್, ದಕ್ಷಿಣ ಕನ್ನಡಕ್ಕೆ ಮಾನುಫ್ಯಾಕ್ಚರಿಂಗ್ ಮತ್ತು ಎಕ್ಸ್‌ಪೋರ್ಟ್ ಕ್ಲಸ್ಟರ್ ರಚನೆಯ ಭರವಸೆ ಕೈಗಾರಿಕೆ ಅಭಿವೃದ್ಧಿಗೆ ಉತ್ತೇಜನ ನೀಡಲಿದೆ

ಅಜಿತ್ ಕಾಮತ್
ಉದ್ಯಮಿ

‘ಜನರ ಮೇಲೆ ₹88,000 ಕೋಟಿ ಸಾಲದ ಹೊರೆ’

ಪ್ರಜಾವಾಣಿ ವಾರ್ತೆ



ಬಸವರಾಜ ಬೊಮ್ಮಾಯಿ

ಬೆಂಗಳೂರು: ‘ಸಿದ್ದರಾಮಯ್ಯ ಸರ್ಕಾರ ರಾಜ್ಯದ ಜನತೆಯ ಮೇಲೆ ₹88,000 ಕೋಟಿ ಹೊರೆ ಹೊರಿಸಿದೆ. ಗ್ಯಾರಂಟಿ ಯೋಜನೆ ಜಾರಿಗಾಗಿ ಜನಸಾಮಾನ್ಯರು ಈ ಹೊರೆ ಹೊರಲೇಬೇಕಾಗಿದೆ’ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಕಿಡಿಕಾರಿದ್ದಾರೆ.

‘ನಮ್ಮ ಅವಧಿಯಲ್ಲಿ ₹77,000 ಕೋಟಿ ಸಾಲ ಇತ್ತು. ಕೋವಿಡ್, ಲಾಕ್‌ಡೌನ್ ಕಾರಣಕ್ಕಾಗಿ ಸಾಲ ಮಾಡಬೇಕಾಗಿತ್ತು. ಆ ಬಳಿಕ ರಾಜ್ಯದ ಆರ್ಥಿಕ ಸ್ಥಿತಿ ಉತ್ತಮವಾಗಿತ್ತು. ಆದರೆ, ಇವರು ಗ್ಯಾರಂಟಿಗಾಗಿ ಸಾಲ ಮಾಡಿದ್ದಾರೆ’ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಬಜೆಟ್ ಗಾತ್ರ ₹3.27 ಲಕ್ಷ ಕೋಟಿ ಮಾಡಿದ್ದಾರೆ. ನಮ್ಮ ಕಾಲದಲ್ಲಿ ಮಿಗತೆ ಬಜೆಟ್ ಮಾಡಿದ್ದೆವು. ಇವರು ಕೊರತೆ ಬಜೆಟ್ ಮಂಡಿಸಿದ್ದಾರೆ. ಶಿಕ್ಷಣ, ಆರೋಗ್ಯ,ಕೃಷಿ, ಲೋಕೋಪಯೋಗಿ, ಯೋಜನೆಗಳಿಗೆ ಅನುದಾನ ಪ್ರಮಾಣ ಕಡಿಮೆ ಮಾಡಿದ್ದಾರೆ. ಅನುದಾನ ನೀಡದೆ ಅಭಿವೃದ್ಧಿ ಹೇಗೆ ಆಗುತ್ತದೆ’ ಎಂದು ಪ್ರಶ್ನಿಸಿದರು.

‘ರಾಜ್ಯ ಅಭಿವೃದ್ಧಿಗೆ ಏನು ಮಾಡುತ್ತೇವೆ ಎಂದು ಹೇಳುವುದಕ್ಕಿಂತ ಕೇಂದ್ರ ಮತ್ತು ಹಿಂದಿನ ಬಿಜೆಪಿ ಸರ್ಕಾರದ ವಿರುದ್ಧ ಸುಳ್ಳು ಆರೋಪಗಳನ್ನು ಬಜೆಟ್‌ನಲ್ಲಿ ಮಾಡಿದ್ದಾರೆ. ನಮ್ಮ ಸರ್ಕಾರದ ಅವಧಿಯಲ್ಲಿ ಎಷ್ಟು ಹೆಚ್ಚು ತೆರಿಗೆ ಸಂಗ್ರಹ ಮಾಡಿದ್ದೇವೆ. ಕೇಂದ್ರ ಎಷ್ಟು ಅನುದಾನ ನೀಡಿದೆ ಎನ್ನುವುದಕ್ಕೆ ದಾಖಲೆ ಇದೆ. ಕೇಂದ್ರ ಎರಡು ರೀತಿಯಲ್ಲಿ ಅನುದಾನ ನೀಡುತ್ತದೆ ಕೆಲವು ಯೋಜನೆಗಳಲ್ಲಿ ನೇರವಾಗಿ ಫಲಾನುಭವಿಗಳಿಗೆ ಅನುದಾನ ನೀಡುತ್ತದೆ. ಸಿದ್ದರಾಮಯ್ಯ ವಾಸ್ತವ ಮರೆ ಮಾಚುವ ಕೆಲಸ ಮಾಡಿದ್ದಾರೆ’ ಎಂದು ತಿಳಿಸಿದರು.

‘ಸಿದ್ದರಾಮಯ್ಯ ಅವರು ನಮ್ಮ ಯೋಜನೆಗಳ ಬಗ್ಗೆ ಎಲ್ಲಿಯೂ ಪ್ರಸ್ತಾಪ ಮಾಡಿಲ್ಲ. ನಾವು ಎಲ್ಲರಿಗೂ ಉಚಿತ ಶಿಕ್ಷಣದ ಪ್ರಸ್ತಾಪ ಮಾಡಿದ್ದೆವು. ಸ್ತ್ರೀಸಾಮರ್ಥ್ಯ, ಯುವ ನಿಧಿ ಯೋಜನೆ ಮಾಡಿದ್ದೆವು. ಅವುಗಳ ಬಗ್ಗೆ ಪ್ರಸ್ತಾಪವಿಲ್ಲ. ಇದೊಂದು ಜನ ವಿರೋಧಿ, ಅಭಿವೃದ್ಧಿ ಮಾರಕ ಬಜೆಟ್’ ಎಂದು ಅವರು ಹೇಳಿದರು.

ರಸ್ತೆ ಸುರಕ್ಷತೆಗೆ ₹ 450 ಕೋಟಿ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸುರಕ್ಷತೆಯ ನಿಧಿಯಡಿ ಸಾರಿಗೆ, ಪೊಲೀಸ್, ಲೋಕೋಪಯೋಗಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಇಲಾಖೆಗಳಿಗೆ ರಸ್ತೆ ಸುರಕ್ಷತೆಗೆ ಪ್ರತ್ಯೇಕ ಅನುದಾನ ಒದಗಿಸುವುದಾಗಿ ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿದೆ.

ಆಯಾ ಇಲಾಖೆಯವರೇ ರಸ್ತೆ ಸುರಕ್ಷತೆ ಕಾಮಗಾರಿಗಳನ್ನು ನಿರ್ವಹಿಸಲು ಒಟ್ಟು ₹ 450 ಕೋಟಿ ಅನುದಾನ ನಿಗದಿ ಪಡಿಸಲಾಗಿದೆ.

‘ವಿಶೇಷ ಅನುದಾನ ಕೇಳಬೇಡಿ’


ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಂಟು ತಿಂಗಳು ವಿಶೇಷ ಅನುದಾನ ಕೇಳಬೇಡಿ. ವಿರೋಧ ಪಕ್ಷಗಳ ಬಲೆಗೆ ಬೀಳಬೇಡಿ’ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಶಾಸಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

‘ಚುನಾವಣೆ ಸಂದರ್ಭದಲ್ಲಿ ಘೋಷಿಸಿದ್ದ ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕಿದೆ. ಹೀಗಾಗಿ, ಪ್ರಸಕ್ತ ವರ್ಷ ವಿಶೇಷ ಅನುದಾನ ಕೊಡುವುದು ಕಷ್ಟಸಾಧ್ಯ. ಎಲ್ಲರೂ ಸಹಕರಿಸಬೇಕು’ ಎಂದು ಮನವಿ ಮಾಡಿದ್ದಾರೆ.

‘ವಿರೋಧಿಗಳು ಉದ್ದೇಶಪೂರ್ವಕವಾಗಿ ರಹಸ್ಯ ಕಾರ್ಯಾಚರಣೆ ನಡೆಸುವ ಸಾಧ್ಯತೆಗಳಿರುತ್ತವೆ. ಹೀಗಾಗಿ, ಬಹಳ ಎಚ್ಚರಿಕೆ ವಹಿಸಬೇಕು. ಚುನಾವಣೆ ವೇಳೆ ಪಕ್ಷ ನೀಡಿದ್ದ ಭರವಸೆಗಳನ್ನು ಅಧಿಕಾರಕ್ಕೆ ಬಂದ 45 ದಿನಗಳ ಒಳಗೇ ಜಾರಿ ಮಾಡಿದ್ದೇವೆ. ಇದನ್ನು ಪ್ರತಿಯೊಬ್ಬ ಮತದಾರರಿಗೆ ಅರ್ಥ ಮಾಡಿಸಿ, ಅಧಿವೇಶನದಲ್ಲಿ ಎದೆ ಎತ್ತಿ ಹೆಮ್ಮೆಯಿಂದ ಮಾತನಾಡಿ’ ಎಂದೂ ಹೇಳಿದ್ದಾರೆ.

‘ಎಲ್ಲ ಶಾಸಕರು ಎಐಸಿಸಿಗೆ ಚುನಾವಣಾ ವೆಚ್ಚದ ಮಾಹಿತಿ ನೀಡಬೇಕಿದೆ. ಹೀಗಾಗಿ, 15 ದಿನಗಳ ಒಳಗಾಗಿ ಚುನಾವಣಾ ವೆಚ್ಚದ ಮಾಹಿತಿ ನೀಡುವಂತೆ ಶಾಸಕರಿಗೆ ಸೂಚನೆ ನೀಡಬೇಕು’ ಎಂದಿರುವ ಸಿದ್ದರಾಮಯ್ಯ, ‘ಹಳಬರು ಮತ್ತು ನೂತನ ಶಾಸಕರು ಈ ಅಧಿವೇಶನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು. ವಿಷಯ ತಜ್ಞರಾಗಿ, ಅಧ್ಯಯನಶೀಲರಾಗಿ ಎಲ್ಲ ಸಿದ್ಧತೆಗಳೊಂದಿಗೆ ಬಂದು ಬಿಜೆಪಿಯವರ ಸುಳ್ಳುಗಳಿಗೆ, ಜೆಡಿಎಸ್‌ನವರ ಡ್ರಾಮಾಗಳಿಗೆ ಅರ್ಥಪೂರ್ಣವಾಗಿ ಉತ್ತರಿಸಿ’ ಎಂದೂ ಸಲಹೆ ನೀಡಿದ್ದಾರೆ.



ಗ್ರಾಮೀಣ ಕ್ಷೇತ್ರಗಳ ಅಭಿವೃದ್ಧಿ, ಜಲಜೀವನ್ ಮಿಷನ್ ಯೋಜನೆಗೆ ಬಲ, ಗ್ರಂಥಾಲಯಗಳ ಉನ್ನತೀಕರಣ, ನವೋದ್ಯಮಕ್ಕೆ ಆದ್ಯತೆ ನೀಡಲಾಗಿದೆ


ಶೈಲಜಾ, ವಕೀಲೆ, ಮಂಗಳೂರು



ಅಲೆಮಾರಿಗಳ ವಸತಿಗೆ ಪ್ರತ್ಯೇಕ ಅನುದಾನ ನೀಡದೆ ಕೇವಲ ಆದ್ಯತೆ ಎಂದಿರುವುದು ಮೂಗಿಗೆ ತುಪ್ಪ ಸವರಿದಂತಿದೆ

ಕಿರಣ್ ಕುಮಾರ್ ಕೊತ್ತಗೆರೆ, ಪ್ರಧಾನ ಕಾರ್ಯದರ್ಶಿ, ಎಸ್‌ಸಿ, ಎಸ್‌ಟಿ ಅಲೆಮಾರಿ ವಿಮುಕ್ತ ಬುಡಕಟ್ಟು ಮಹಾಸಭಾ





ಘನತೆ, ದೂರದೃಷ್ಟಿ ಇಲ್ಲದ ಬಜೆಟ್: ಕುಮಾರಸ್ವಾಮಿ ಆರೋಪ

ಬೆಂಗಳೂರು: 'ನೀರಾವರಿ, ಕೃಷಿ, ಜನರು ಸ್ವಾಭಿಮಾನಿಗಳಾಗಿ, ಸ್ವಾವಲಂಬಿಗಳಾಗಿ ಬದುಕು ಕಟ್ಟಿಕೊಳ್ಳಲು ಈ ಬಜೆಟ್‌ನ ಕೊಡುಗೆ ಶೂನ್ಯ. ದೂರದೃಷ್ಟಿ ಇಲ್ಲದ ಮತ್ತು ಅನ್ನ ಭಾಗ್ಯಕ್ಕೆ ಹಣವನ್ನು ಒದಗಿಸಲು ಅಬಕಾರಿ ಮೂಲಕ ಸುಲಿಗೆಗೆ ಇಳಿದ ಬಜೆಟ್" ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಟೀಕಿಸಿದ್ದಾರೆ. 'ಇದು ಕೇಂದ್ರ ಸರ್ಕಾರ ಮತ್ತು ಹಿಂದಿನ ಬಿಜೆಪಿ ಸರ್ಕಾರವನ್ನು ನಿಂದಿಸಲು ಮೀಸಲಾದ ಬಜೆಟ್. ರಾಜಕೀಯ ಹೇಳಿಕೆಗಳಿಗೆ ಮತ್ತು ಅನೇಕ ಎಟಿಎಂಗಳನ್ನು ತುಂಬಿಸಲು ಮಾಡಿದ ಬಜೆಟ್' ಎಂದು ಮಾಧ್ಯಮಗಳಿಗೆ ತಿಳಿಸಿದರು.

ಬಸವರಾಜ ಬೊಮ್ಮಾಯಿ ಅವರ ಕಾಲದಲ್ಲಿ ನೀರಾವರಿ ಇಲಾಖೆಗೆ ₹1 ಲಕ್ಷ ಕೋಟಿ ಯೋಜನೆಗಳಿಗೆ ಅನುಮತಿ ಕೊಟ್ಟಿದ್ದರು. ಅದಕ್ಕೆ ಈಗ ₹40 ಸಾವಿರ ಕೋಟಿ ಹೆಚ್ಚುವರಿ ಸೇರ್ಪಡೆ ಆಗಿದೆ. ₹1.75 ಲಕ್ಷ ಕೋಟಿ ಮೊತ್ತದ ಯೋಜನೆಗಳಿಗೆ ಹಣ ಇಡದೇ ಘೋಷಿಸಿದ್ದಾರೆ ಎಂದರು.

2013–18 ರ ಅವಧಿಯಲ್ಲಿ 15 ಲಕ್ಷ ಮನೆಗಳನ್ನು ಕಟ್ಟಿದ್ದೀವಿ ಎಂದು ಹೇಳಿದ್ದಾರೆ. ಎಲ್ಲಿ ಕಟ್ಟಿದ್ದಾರೆ ಎನ್ನುವುದನ್ನು ತಿಳಿಸಬೇಕು. ಇನ್ನು, 12 ಲಕ್ಷ ಮನೆ ಕಟ್ಟಲು ₹17,815 ಕೋಟಿ ಬೇಕು ಎಂದು ಹೇಳಿದ್ದಾರೆ. ಅದನ್ನು ಎಲ್ಲಿಂದ ತರುತ್ತಾರೆ. ಈಗ ನೋಡಿದರೆ ಆರ್ಥಿಕ ಶಿಸ್ತನ್ನು ಹಾಳು ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ. ಇದು ಅಗತ್ಯವಿತ್ತೇ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು. ಈ ಬಾರಿ ₹3.28 ಲಕ್ಷ ಕೋಟಿ ಬಜೆಟ್‌ನಲ್ಲಿ ₹2 ಲಕ್ಷ ಕೋಟಿ ಕಂದಾಯ ವೆಚ್ಚ, ₹27 ಸಾವಿರ ಕೋಟಿ ಸಾಲ ಮರುಪಾವತಿಗೆ ಇಟ್ಟುಕೊಂಡಿದ್ದಾರೆ. ಅದಾದ ಮೇಲೆ ₹85 ಸಾವಿರ ಕೋಟಿ ಸಾಲ ಎತ್ತುತ್ತಾರೆ. ಈ ಸಾಲಕ್ಕೆ ತಲೆ ಕೊಡುವುದು ಯಾರು ಎಂದು ಅವರು ಪ್ರಶ್ನಿಸಿದರು.

ಕಾಂಗ್ರೆಸ್ ಹುರುಪು: ಬಿಜೆಪಿಗೆ ಕಸಿವಿಸಿ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸುತ್ತಿದ್ದಾಗ ಆಡಳಿತರೂಢ 'ಕೈ' ಪಾಳಯ ಹುರುಪಿನಲ್ಲಿದ್ದರೆ, ಇತ್ತ 'ಡಬಲ್ ಎಂಜಿನ್' ಸರ್ಕಾರದ ವಿರುದ್ಧ ತೂರಿ ಬರುತ್ತಿದ್ದ ವಾಗ್ದಾಳಿಗೆ ವಿರೋಧ ಪಕ್ಷ ಬಿಜೆಪಿಯಲ್ಲಿ ಕಸಿವಿಸಿಯ ವಾತಾವರಣ.

ಗಂಟಲಿನ ಸಮಸ್ಯೆಯಿಂದ ಬಳಲುತ್ತಿರುವ ಮುಖ್ಯಮಂತ್ರಿ, ತುಸು ಆಯಾಸದಿಂದಲೇ ಬಜೆಟ್ ಮಂಡಿಸಿದರು. ಮಧ್ಯಾಹ್ನ 12.05ಕ್ಕೆ ಬಜೆಟ್ ಪುಸ್ತಕ ತೆರೆದು ಓದಲು ಆರಂಭಿಸಿದ ಅವರು, 2.55ಕ್ಕೆ ಪೂರ್ಣಗೊಳಿಸಿದರು. ಕೆಮ್ಮು ಹಲವು ಬಾರಿ ಓದಿಗೆ ಅಡ್ಡಿಪಡಿಸಿತು. ಬಿಸಿ ನೀರು ಕುಡಿದು ಸುಧಾರಿಸಿಕೊಂಡ ಸಿದ್ದರಾಮಯ್ಯ, ಮತ್ತೆ ಓದು ಮುಂದುವರಿಸಿದರು.

ರಾಜ್ಯದ ಹಿಂದಿನ ಬಿಜೆಪಿ ಸರ್ಕಾರ ಮತ್ತು ಕೇಂದ್ರದ ಬಿಜೆಪಿ ಸರ್ಕಾರದ ವಿರುದ್ಧ ಬಜೆಟ್‌ನಲ್ಲಿ ಟೀಕಾಪ್ರಹಾರ ಬಂದಾಗಲೆಲ್ಲ ಬಿಜೆಪಿಯ ಬಸವರಾಜ ಬೊಮ್ಮಾಯಿ, ಆರ್. ಅಶೋಕ, ಎಸ್. ಸುರೇಶ್ ಕುಮಾರ್ ಮತ್ತಿತರರು ಪರಸ್ಪರ ಮುಖ ನೋಡಿಕೊಳ್ಳುತ್ತಿದ್ದರು. ಬೊಮ್ಮಾಯಿ ಒಂದೆರಡು ಬಾರಿ ಸದನದಿಂದ ಹೊರಹೋಗಿ ವಾಪಸಾದರು. ಬಸನಗೌಡ ಪಾಟೀಲ ಯತ್ನಾಳ ಪಕ್ಷದ ಸದಸ್ಯರ ಬಳಿ ಬಂದು ಅಸಮಾಧಾನ ವ್ಯಕ್ತಪಡಿಸುತ್ತಿದ್ದರು. ಅತ್ತ ಕಾಂಗ್ರೆಸ್ ಸದಸ್ಯರು, ಮುಖ್ಯಮಂತ್ರಿ ಪ್ರಮುಖ ಘೋಷಣೆಗಳನ್ನು ಪ್ರಕಟಿಸುತ್ತಿದ್ದಂತೆಯೇ ಮೇಜು ಕುಟ್ಟಿ ಹರ್ಷೋದ್ಗಾರ ಮಾಡುತ್ತಿದ್ದರು.

ಸಿದ್ದರಾಮಯ್ಯ ಬಜೆಟ್ ಮಂಡನೆ ಮುಗಿದ ಬಳಿಕ ಸಂಪುಟ ಸದಸ್ಯರೊಂದಿಗೆ ಜತೆಯಾಗಿ ನಿಂತು ವಿಜಯದ ಸಂಕೇತ ಪ್ರದರ್ಶಿಸಿದರು.

ಗರಿಗರಿ ದಿರಿಸಿನಲ್ಲಿ ಸ್ಪೀಕರ್: ಸ್ಪೀಕರ್ ಯು.ಟಿ. ಖಾದರ್ ಬಜೆಟ್ ಮಂಡನೆಯ ಕಲಾಪಕ್ಕೆ ಕಪ್ಪುಬಣ್ಣದ ಹೊಸ ಸೂಟು ಧರಿಸಿ ಬಂದಿದ್ದರು. ಸ್ಪೀಕರ್ ಆಸೀನರಾಗುತ್ತಿದ್ದಂತೆಯೇ ಬಿಜೆಪಿ ಸದಸ್ಯರು, 'ಆಹಾ, ಓಹೋ.... ಏನು ಮದುವೆ ಗಂಡಿನಂತೆ ಬಂದಿದ್ದೀರಲ್ಲಾ...' ಎಂದು ಕೇಳಿದರು. 'ಜನಪರ ಬಜೆಟ್ ಮಂಡನೆಯಾಗುತ್ತದೆ ಎಂದು ಹೀಗೆ ಬಂದಿದ್ದೇನೆ' ಎಂದು ಖಾದರ್ ಪ್ರತಿಕ್ರಿಯಿಸಿದರು.

'ಅಹಿಂದ'ಕ್ಕೆ ಓಲೈಕೆ ಬಲ

ಅತಿ ಬಲಾಢ್ಯ ಸಮುದಾಯಗಳು ಇಟ್ಟಿರುವ ವಿಶ್ವಾಸ ಗಟ್ಟಿಗೊಳಿಸಲು ಯತ್ನ

• ರಾಜೇಶ್ ರೈ ಚಟ್ಲ

ಮತದಾರರನ್ನು ಮೆಚ್ಚಿಸಲು ಘೋಷಿಸಿದ್ದ 'ಗ್ಯಾರಂಟಿ'ಗಳ ಅನುಷ್ಠಾನಕ್ಕೆ ಸಂಪನ್ಮೂಲ ಕ್ರೋಡೀಕರಿಸುವ ಒತ್ತಡ- ಸವಾಲುಗಳ ಮಧ್ಯೆಯೂ, ರಾಜ್ಯದಲ್ಲಿ ಬಹುಸಂಖ್ಯಾತರಾದ ಪರಿಶಿಷ್ಟರ ಕಡೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಣ್ಣೆತ್ತಿ ನೋಡಿದ್ದಾರೆ. ಹಿಂದುಳಿದ, ಅಲ್ಪಸಂಖ್ಯಾತ ಸಮುದಾಯಗಳ ಅಭ್ಯುದಯ ಬಯಸುವ ಬದ್ಧತೆ ಪ್ರದರ್ಶಿಸಿದ್ದಾರೆ. ಆ ಮೂಲಕ, 'ಅಹಿಂದ' ನಾಯಕನೆಂಬ ತಮ್ಮ 'ಐಡೆಂಟಿಟಿ'ಯ ಮೆರುಗು ಹೆಚ್ಚಿಸಿಕೊಂಡಿದ್ದಾರೆ!

'ಸಾಮಾಜಿಕ ನ್ಯಾಯ ಎನ್ನುವುದು ರಾಜಕೀಯ ಅಸ್ತ್ರ ಅಲ್ಲ. ದಮನಿತರಿಗೆ ಅವಕಾಶ – ಪ್ರಾತಿನಿಧ್ಯಗಳನ್ನು ನೀಡುವ ಜವಾಬ್ದಾರಿ' ಎಂದು ಪ್ರತಿಪಾದಿಸಿರುವ ಸಿದ್ದರಾಮಯ್ಯ, ಕಳೆದ ಮೂರು ವರ್ಷಗಳಿಂದ ಆಡಳಿತ ನಡೆಸಿದ್ದ ಬಿಜೆಪಿ, ಈ ವರ್ಗಗಳನ್ನು ನಿರ್ಲಕ್ಷಿಸಿದೆ ಎಂದು ಟೀಕಿಸಿದ್ದಾರೆ. ಅದರ ಜೊತೆಗೆ, ಅತಿ ಬಲಾಢ್ಯ ಮತಬ್ಯಾಂಕ್ ತಮ್ಮ ಮೇಲಿಟ್ಟಿರುವ ವಿಶ್ವಾಸವನ್ನು ಮತ್ತಷ್ಟು ಗಟ್ಟಿಗೊಳಿಸಲು ಯತ್ನಿಸಿರುವುದು ಸ್ಪಷ್ಟವಾಗುತ್ತದೆ.

ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್‌ಟಿ) ಜನಸಂಖ್ಯೆ ಆಧರಿಸಿ ಅನುದಾನ ಹಂಚಿಕೆ ಮತ್ತು ನಿರ್ದಿಷ್ಟ ಉದ್ದೇಶಗಳಿಗೇ ಬಳಕೆಗೆ ಅವಕಾಶ ಕಲ್ಪಿಸುವ 'ಕರ್ನಾಟಕ ಅನುಸೂಚಿತ ಜಾತಿಗಳ ಉಪ ಹಂಚಿಕೆ ಮತ್ತು ಬುಡಕಟ್ಟು ಉಪ ಹಂಚಿಕೆ (ಎಸ್‌ಸಿಎಸ್‌ಪಿ, ಟಿಎಸ್‌ಪಿ) ಕಾಯ್ದೆ- 2013'ನ್ನು ತಮ್ಮ ಹಿಂದಿನ ಅಧಿಕಾರಾವಧಿಯಲ್ಲಿ (2013–18) ಜಾರಿಗೆ ತಂದ ಶ್ರೇಯ ಸಿದ್ದರಾಮಯ್ಯ ಅವರದ್ದು. ಈ ಕಾಯ್ದೆ ಜಾರಿಗೆ ಬಂದ ನಂತರದ ವರ್ಷಗಳಲ್ಲಿ ಈ ಯೋಜನೆಯಡಿ ಅನುದಾನ ಹಂಚಿಕೆ ಪ್ರಮಾಣವನ್ನು ಸರ್ಕಾರಗಳು ಹೆಚ್ಚಿಸುತ್ತಲೇ ಬಂದಿವೆ.

ಇದೇ ಫೆಬ್ರುವರಿಯಲ್ಲಿ ಬಸವರಾಜ ಬೊಮ್ಮಾಯಿ ಮಂಡಿಸಿದ್ದ ಬಜೆಟ್‌ನಲ್ಲಿ (2023–24) ಈ ಯೋಜನೆಯಡಿ ₹ 30,215 ಕೋಟಿ ಅನುದಾನ ಹಂಚಿಕೆ ಮಾಡಿದ್ದರು. ಇದೀಗ ಸಿದ್ದರಾಮಯ್ಯ ಆ ಮೊತ್ತವನ್ನು ₹ 34,294 ಕೋಟಿಗೆ (ಎಸ್‌ಸಿಎಸ್‌ಪಿ- ₹ 24,333 ಕೋಟಿ, ಟಿಎಸ್‌ಪಿ- ₹ 9,960 ಕೋಟಿ) ಹೆಚ್ಚಿಸಿದ್ದಾರೆ. ಹೆಚ್ಚುವರಿಯಾಗಿ ₹ 4,079 ಕೋಟಿ ಒದಗಿಸುವ ಮೂಲಕ ಈ ಸಮುದಾಯಗಳ ಆರ್ಥಿಕ, ಸಾಮಾಜಿಕ ಅಭಿವೃದ್ಧಿಗೆ ಆದ್ಯತೆಗೆ ನೀಡಿರುವುದು ಕಣ್ಣಿಗೆ ಕಾಣುತ್ತಿದೆ. ಅಷ್ಟೇ ಅಲ್ಲ, ಈ ಯೋಜನೆಯಡಿ ಮೀಸಲಿಟ್ಟ ಅನುದಾನವನ್ನು ಅನ್ಯ ಉದ್ದೇಶಗಳಿಗೆ ಬಳಸಲು ಅವಕಾಶ ನೀಡುವ ಕಾಯ್ದೆಯ ಸೆಕ್ಷನ್ 7 (ಡಿ) ಯನ್ನು ಕೈ ಬಿಡುವುದಾಗಿ ಘೋಷಿಸಿದ್ದಾರೆ. ಇದು ದಲಿತ ಸಂಘಟನೆಗಳು, ಚಿಂತಕರ ಬಹುದಿನಗಳ ಒತ್ತಾಯವೂ ಆಗಿತ್ತು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಉಡುಗೊರೆ ನೀಡಲು 'ಡಾ. ಯತೀಂದ್ರ ಯುವ ಬ್ರಿಗೇಡ್'ನ ಕಂಸಾಳೆ ರವಿ ಅವರು ವಿಧಾನಸೌಧ ಆವರಣಕ್ಕೆ ಕುರಿಯೊಂದಿಗೆ ಬಂದಿದ್ದರು ಪ್ರಜಾವಾಣಿ ಚಿತ್ರ/ ರಂಜು ಪಿ.

ರಾಜ್ಯದ ಎಂಟು ಜಿಲ್ಲೆಗಳಲ್ಲಿ ವಾಸಿಸುತ್ತಿರುವ 11 ಬುಡಕಟ್ಟು ಪಂಗಡಗಳಾದ ಕೊರಗ, ಜೇನುಕುರುಬ, ಸೋಲಿಗ, ಎರವ, ಕಾಡುಕುರುಬ, ಮಲೆಕುಡಿಯ, ಸಿದ್ಧಿ, ಹಸಲರು, ಗೌಡಲು, ಗೊಂಡ ಮತ್ತು ಬೆಟ್ಟಕುರುಬ ಜನಾಂಗದ ಕುಟುಂಬಗಳಿಗೆ ಪೌಷ್ಟಿಕ ಆಹಾರ ಯೋಜನೆಯನ್ನು 12 ತಿಂಗಳಿಗೆ ವಿಸ್ತರಿಸಲು ₹ 50 ಕೋಟಿ, ಸೋಲಿಗ, ಜೇನುಕುರುಬ, ಕಾಡುಕುರುಬ, ಕೊರಗ, ಇರುಳಿಗ, ಬೆಟ್ಟಕುರುಬ ಇತ್ಯಾದಿ ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದವರ ಅಭಿವೃದ್ಧಿಗೆ ₹ 50 ಕೋಟಿ ನೀಡುವುದಾಗಿ ಮುಖ್ಯಮಂತ್ರಿ ಘೋಷಿಸಿದ್ದಾರೆ.

'ಹಿಂದುಳಿದ ವರ್ಗಗಳ ಕಲ್ಯಾಣ ಕಾರ್ಯಕ್ರಮಗಳಿಗೆ ಅವಶ್ಯಕ ಅನುದಾನ ನೀಡದೆ, ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸದೇ ನಿರ್ಲಕ್ಷಿಸಿರುವುದು ವಿಷಾದನೀಯ' ಎಂದಿರುವ ಮುಖ್ಯಮಂತ್ರಿ, ಈ ವರ್ಗದ ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾಗಿ ವಿದ್ಯಾಸಿರಿ, ವಿದ್ಯಾರ್ಥಿ ವೇತನ, ಶುಚಿ ಸಂಭ್ರಮ ಕಿಟ್ ಮುಂದುವರಿಸುವ ಘೋಷಣೆ ಮಾಡಿದ್ದಾರೆ. ಹಿಂದುಳಿದ ವರ್ಗಗಳ ಪ್ರವರ್ಗ-1 ಮತ್ತು ಪ್ರವರ್ಗ-2ಎಯಲ್ಲಿ ಬರುವ ಜಾತಿಗಳಿಗೆ ₹ 1 ಕೋಟಿವರೆಗಿನ ಗುತ್ತಿಗೆ ಕಾಮಗಾರಿಗಳಲ್ಲಿ ಮೀಸಲಾತಿ ನೀಡಲು ನೀಡಲಾಗುವುದು ಎಂದಿದ್ದಾರೆ. ಹಿಂದುಳಿದ ವರ್ಗಗಳಲ್ಲೇ ಅತ್ಯಂತ ಹಿಂದುಳಿದವರಾಗಿರುವ ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯದವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ, ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಯ ಮೂಲಕ ಈ ಜಾತಿಗಳ ಕುಲಶಾಸ್ತ್ರೀಯ ಅಧ್ಯಯನಕ್ಕೆ ₹ 2 ಕೋಟಿ ಅನುದಾನ ನೀಡಲಾಗುವುದು ಎಂದು ಪ್ರಕಟಿಸಿದ್ದಾರೆ.

ಅಲ್ಪಸಂಖ್ಯಾತರ ಪದವಿಪೂರ್ವ ವಸತಿ ಕಾಲೇಜುಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ಪ್ರಥಮ ವರ್ಷದಿಂದಲೇ ನೀಟ್, ಜೆಇಇ, ಸಿಇಟಿ ಹಾಗೂ ಇತರೆ ಪ್ರವೇಶ ಪರೀಕ್ಷೆಗಳ ತಯಾರಿಗಾಗಿ ಪ್ರತಿಷ್ಠಿತ ಸಂಸ್ಥೆಗಳಿಂದ ಎರಡು ವರ್ಷಗಳ ತರಬೇತಿ ನೀಡಲು ₹ 8 ಕೋಟಿ ಅನುದಾನ, ಬೆಂಗಳೂರು ನಗರದಲ್ಲಿ ನಿರ್ಮಿಸಿರುವ ಹಜ್ ಭವನದಲ್ಲಿ ಅಲ್ಪಸಂಖ್ಯಾತರ ಯುವಜನರಿಗೆ 10 ತಿಂಗಳ ವಸತಿಸಹಿತ ಐಎಎಸ್, ಕೆಎಎಸ್ ಮತ್ತು ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ, ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಹೊಸದಾಗಿ 10 ಅಲ್ಪಸಂಖ್ಯಾತ ಮೊರಾರ್ಜಿ ದೇಸಾಯಿ ವಸತಿ ಶಾಲೆ ಆರಂಭ, ಅಲ್ಪಸಂಖ್ಯಾತ ಯುವಜನರಿಗೆ ಕೌಶಲ ತರಬೇತಿ, ಶಾದಿ ಮಹಲ್ ಮತ್ತು ಸಮುದಾಯ ಭವನಗಳ ನಿರ್ಮಾಣ ಕಾರ್ಯಗಳಿಗೆ ₹ 54 ಕೋಟಿ, ಹಿಂದೂಯೇತರ 868 ಧಾರ್ಮಿಕ ಸಂಸ್ಥೆಗಳಿಗೆ ನೀಡುವ ತಸ್ತಿಕ್ ಮೊತ್ತ ₹ 60 ಸಾವಿರಕ್ಕೆ ಹೆಚ್ಚಳ, ಮುಖ್ಯಮಂತ್ರಿಗಳ ವಿಶೇಷ ಅಭಿವೃದ್ಧಿ ಯೋಜನೆ ಮತ್ತು ಅಲ್ಪಸಂಖ್ಯಾತರ ಕಾಲೊನಿ ಅಭಿವೃದ್ಧಿ ಯೋಜನೆಯಡಿ ವಿವಿಧ ಕಾರ್ಯಕ್ರಮಗಳನ್ನು ಕೈಗೊಳ್ಳಲು ಪ್ರಸಕ್ತ ಸಾಲಿನಲ್ಲಿ ₹ 360 ಕೋಟಿ, ಜೈನರ ಪುಣ್ಯಕ್ಷೇತ್ರಗಳ ಅಭಿವೃದ್ಧಿಗಾಗಿ ₹ 25 ಕೋಟಿ, ಕರ್ನಾಟಕ ಕ್ರಿಶ್ಚಿಯನ್ ಅಭಿವೃದ್ಧಿ ನಿಗಮ ಸ್ಥಾಪಿಸಿ ₹ 100 ಕೋಟಿ, ರಾಜ್ಯದಲ್ಲಿರುವ ವಕ್ಫ್ ಆಸ್ತಿಗಳ ಸಂರಕ್ಷಣೆಗೆ ಪ್ರಸಕ್ತ ಸಾಲಿನಲ್ಲಿ ₹ 50 ಕೋಟಿ, ಮೈಸೂರು, ಕಲಬುರಗಿ ಮತ್ತು ಹುಬ್ಬಳ್ಳಿಯಲ್ಲಿರುವ ಗುರುದ್ವಾರಗಳ ಅಭಿವೃದ್ಧಿಗೆ ₹ 5 ಕೋಟಿ ಒದಗಿಸಲಾಗುವುದು ಎಂದೂ ಮುಖ್ಯಮಂತ್ರಿ ಘೋಷಿಸಿದ್ದಾರೆ.

ತಜ್ಞರ ಅಭಿಪ್ರಾಯ

ಕಲ್ಯಾಣ ಕರ್ನಾಟಕಕ್ಕೆ ಆಶಾದಾಯಕ



ನಂಜುಂಡಪ್ಪ ವರದಿಯ ಶಿಫಾರಸಿನಂತೆ ಕಲ್ಯಾಣ ಕರ್ನಾಟಕಕ್ಕೆ ಸಚಿವ ಸ್ಥಾನಗಳು ಲಭಿಸಿದ್ದರಿಂದಾಗಿ ಕೆಲವು ಬೇಡಿಕೆಗಳಿಗೆ ಬಜೆಟ್‌ನಲ್ಲಿ ಸ್ವಲ್ಪ ಪ್ರಾತಿನಿಧ್ಯ ಸಿಕ್ಕಿದೆ. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ₹5,000 ಕೋಟಿ ಖರ್ಚು ಮಾಡಲು ಕ್ರಿಯಾಯೋಜನೆ ರೂಪಿಸುವುದಾಗಿ ಮುಖ್ಯಮಂತ್ರಿ ಹೇಳಿದ್ದು ಆಶಾದಾಯಕವಾಗಿದ್ದು, ಕಾರ್ಯರೂಪಕ್ಕೆ ಬರಬೇಕಿದೆ.

ಎಎಸ್‌ಆರ್ ವರದಿ ಪ್ರಕಾರ ಕಲಬುರಗಿ ವಿಭಾಗದಲ್ಲಿ 6,771 ಪ್ರಮುಖ ಹಾಗೂ 5,565 ಸಣ್ಣ ದುರಸ್ತಿಯ ಶಾಲಾ ಕೊಠಡಿಗಳಿವೆ ಎಂದಿದೆ. ಮಕ್ಕಳ ಕಲಿಕಾ ಹಾಗೂ ಸುರಕ್ಷತೆಯ ದೃಷ್ಟಿಯಿಂದ ಶಿಥಿಲ ಕಟ್ಟಡಗಳ ದುರಸ್ತಿಗಾಗಿ ₹310 ಕೋಟಿ ತೆಗೆದಿರಿಸಿದ್ದು ಹಾಗೂ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶೌಚಾಲಯ ನಿರ್ಮಿಸುವುದು ಒಳ್ಳೆಯ ನಡೆ.

ಚಿತ್ತಾಪುರ ಮತ್ತು ಶಹಾಪುರದಲ್ಲಿ ಹೊಸ ಕೈಗಾರಿಕಾ ವಸಾಹತು ನಿರ್ಮಾಣ ಆಗಲಿದೆ. ಆದರೆ, ಚಿತ್ತಾಪುರಕ್ಕೆ ಬರಬೇಕಾಗಿದ್ದ ರಾಷ್ಟ್ರೀಯ ಹೂಡಿಕೆ ಮತ್ತು ತಯಾರಿಕಾ ವಲಯವು(ನಿಮ್ಝ್) ಕೈತಪ್ಪಿರುವುದು ಈ ಭಾಗಕ್ಕೆ ದೊಡ್ಡ ನಷ್ಟವಾಗಿದೆ. ಈ ಹಿಂದಿನ ಬಜೆಟ್‌ನಲ್ಲಿ ಬೀದರ್– ಬಳ್ಳಾರಿ ನಡುವೆ ನಾಲ್ಕು ಪಥದ ರಸ್ತೆ ಘೋಷಿಸಲಾಗಿತ್ತು. ಈ ಬಾರಿ ಅದರ ಬಗ್ಗೆ ಪ್ರಸ್ತಾಪಿಸಿಲ್ಲ.

ಸಂಗೀತಾ ಕಟ್ಟಿಮನಿ
ಆರ್ಥಿಕ ತಜ್ಞೆ, ಕಲಬುರಗಿ

ಕಿತ್ತೂರು ಕರ್ನಾಟಕಕ್ಕೆ ಬೇಕಿತ್ತು ಆದ್ಯತೆ



ಕಿತ್ತೂರು ಕರ್ನಾಟಕಕ್ಕೆ ಹೋಲಿಸಿದರೆ ಕಲ್ಯಾಣ ಕರ್ನಾಟಕಕ್ಕೆ ಹೆಚ್ಚಿನ ಆದ್ಯತೆ ನೀಡಿರುವುದು ಗೋಚರಿಸುತ್ತದೆ. ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗಾಗಿ ₹ 5 ಸಾವಿರ ಕೋಟಿ ವೆಚ್ಚದ ಕಾಮಗಾರಿ ಕೈಗೊಳ್ಳಲು ಉದ್ದೇಶಿಸಲಾಗಿದೆ. ಕಿತ್ತೂರು ಕರ್ನಾಟಕದ ಬೆಳಗಾವಿ ಸೇರಿದಂತೆ ಕೆಲ ಕಡೆ ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆಗಳ ಕಾರ್ಯಾರಂಭ, ಸುಟ್ಟ ಗಾಯಗಳ ಚಿಕಿತ್ಸಾ ಘಟಕಗಳ ಸ್ಥಾಪನೆ, ಸರ್ಕಾರಿ ಆಸ್ಪತ್ರೆಗಳ ಉನ್ನತೀಕರಣ, ತಾಲ್ಲೂಕು ಆಡಳಿತ ಸೌಧಗಳ ಕಟ್ಟಡ ಕಾಮಗಾರಿ, ಪ್ರವಾಸೋದ್ಯಮ ತಾಣಗಳ ಅಭಿವೃದ್ಧಿಗೆ ಆದ್ಯತೆ ನೀಡಿರುವುದು ಸ್ವಾಗತಾರ್ಹ.

ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಕಾಮಗಾರಿಯಡಿ ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ ನಿರ್ಮಾಣಕ್ಕೆ ಆದ್ಯತೆ ಕೊಡಲಾಗಿದೆ. ಆದರೆ, ಪ್ರದೇಶದ ಹಿತದೃಷ್ಟಿಯಿಂದ ಕಿತ್ತೂರು ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಇನ್ನಷ್ಟು ನೆರವು ಕೊಡಬೇಕಿತ್ತು. ಈ ಭಾಗದ ಜನರ ಆಶೋತ್ತರಗಳನ್ನು ಈಡೇರಿಸುವತ್ತ ಮತ್ತು ಜಿಲ್ಲೆಗಳನ್ನು ಪ್ರಗತಿಪಥದಲ್ಲಿ ಸಾಗಿಸುವತ್ತ ಒತ್ತು ನೀಡಿದ್ದರೆ, ಇನ್ನಷ್ಟು ಅನುಕೂಲವಾಗುತಿತ್ತು.

ಒಟ್ಟಾರೆ ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕಾಗಿ ಮುಖ್ಯಮಂತ್ರಿಯವರು ಸಾಕಷ್ಟು ಹರಸಾಹಸ ಪಟ್ಟಿರುವುದು ಕಾಣಿಸುತ್ತದೆ. ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಮುಖ್ಯಮಂತ್ರಿಯವರು ಭಾರಿ ಪ್ರಮಾಣದಲ್ಲಿ ಸಾಲ ಮಾಡುತ್ತಾರೆ ಎಂಬ ಆತಂಕವಿತ್ತು. ಆದರೆ, ಅವರು ಬಂಡವಾಳ ವೆಚ್ಚದಲ್ಲಿ ಸ್ವಲ್ಪ ಪ್ರಮಾಣ ಕಡಿಮೆ ಮಾಡಿದ್ದಾರೆ. ಅಬಕಾರಿ ತೆರಿಗೆಯನ್ನು ಮಾತ್ರ ಹೆಚ್ಚಿಸಿದ್ದಾರೆ.

ಡಾ. ಬಿ.ಎಚ್.ನಾಗೂರ, ಪ್ರಾಧ್ಯಾಪಕ, ಅರ್ಥಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ


ಘೋಷಣೆ ಜತೆ ಜಾರಿಯೂ ಮುಖ್ಯ



ಪರಿಶಿಷ್ಟ ಜಾತಿ, ಪಂಗಡಕ್ಕೆ ಮೀಸಲಿರಿಸಿದ ಅನುದಾನವನ್ನು ಬೇರೆ ಯೋಜನೆಗಳಿಗೆ ಬಳಸುವುದನ್ನು ತಪ್ಪಿಸಲು 7 (ಡಿ) ಕಲಂ ರದ್ದು ಮಾಡಿರುವುದು ಉತ್ತಮ ಬೆಳವಣಿಗೆ. ಹೆಸರಿಗಷ್ಟೇ ಸಾವಿರಾರು ಕೋಟಿ ರೂಪಾಯಿ ಒದಗಿಸಿ, ಬಳಿಕ 7 (ಡಿ) ತಿದ್ದುಪಡಿಯ ಮೂಲಕ ಸಾಮಾನ್ಯ ಕಾಮಗಾರಿಗಳಿಗಾಗಿ ಬೇರೆ ಇಲಾಖೆಗಳಿಗೆ ವರ್ಗ ಮಾಡಲಾಗುತ್ತಿತ್ತು. ಈ ದುರುಪಯೋಗ ತಪ್ಪಿದೆ. ಯೋಜನೆ, ಅನುದಾನ ಘೋಷಣೆ ಮಾಡಿದರೆ ಸಾಲದು. ಅನುದಾನ ಸಮರ್ಪಕವಾಗಿ ಬಳಕೆಯಾಗಬೇಕು. ಅರ್ಹ ಫಲಾನುಭವಿಗಳಿಗೆ ತಲುಪುವಂತೆ ಜಾರಿಯಾಗಬೇಕು. ಎಸ್‌ಸಿ, ಎಸ್‌ಟಿಗೆ ಇರುವಂತೆ ಹಿಂದುಳಿದ ಪ್ರವರ್ಗ–1 ಮತ್ತು ಪ್ರವರ್ಗ–2ಎ ಯಲ್ಲಿ ಬರುವ ಎಲ್ಲ ಜಾತಿಗಳಿಗೆ ₹1 ಕೋಟಿ ವರೆಗಿನ ನಿರ್ಮಾಣ ಕಾಮಗಾರಿಗಳಲ್ಲಿ ಮೀಸಲಾತಿ ನೀಡಿರುವುದು ಉತ್ತಮ ಬೆಳವಣಿಗೆ. ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯವನ್ನು ದೌರ್ಜನ್ಯ ತಡೆ ಅಧಿನಿಯಮದಡಿ ರಕ್ಷಣಾ ಕೋಶವನ್ನಾಗಿ ಘೋಷಿಸಲಾಗಿದೆ. ದೌರ್ಜನ್ಯ ತಡೆಯಲು ಇನ್ನಾದರೂ ಪರಿಣಾಮಕಾರಿಯಾಗಿ ಕೆಲಸ ಮಾಡಲು ಕ್ರಮ ಕೈಗೊಳ್ಳಬೇಕು.

ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ ತರುವುದಾಗಿ ಹೇಳಿರುವುದು ದಲಿತ ಸಮುದಾಯದಲ್ಲಿ ಸ್ವಾಭಿಮಾನ ತುಂಬುವ ಮಾತು. ಒತ್ತಾಯಪೂರ್ವಕವಾಗಿ ಎಸ್‌ಸಿ, ಎಸ್‌ಟಿ ಸಮುದಾಯದವರ ಭೂಮಿಯನ್ನು ಬೇರೆಯವರು ಖರೀದಿಸುವುದು ಇದರಿಂದ ತಪ್ಪಲಿದೆ.

ಅಶ್ವಿನಿ ಮದನಕರ, ಸಾಮಾಜಿಕ ಕಾರ್ಯಕರ್ತೆ, ಕಲಬುರಗಿ



ಸರ್ವಭಾಗಕ್ಕೆ ಜೈ: ಹೊಸ ಯೋಜನೆಗಳಿಗೆ ಮಣೆ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಕಲ್ಯಾಣ, ಕಿತ್ತೂರು, ಕರಾವಳಿ ಹಾಗೂ ಮೈಸೂರು ಭಾಗಗಳಲ್ಲಿ ಹೊಸ ಯೋಜನೆಗಳಿಗೆ ಬಜೆಟ್‌ನಲ್ಲಿ ಆದ್ಯತೆ ನೀಡಲಾಗಿದ್ದು, ಕೆಲ ಹಳೇ ಯೋಜನೆಗಳನ್ನು ಪೂರ್ಣಗೊಳಿಸುವುದಾಗಿ ಘೋಷಿಸಲಾಗಿದೆ.

ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ₹ 5,000 ಕೋಟಿ ವೆಚ್ಚ ಮಾಡುವುದಾಗಿ ಮುಖ್ಯಮಂತ್ರಿ ಹೇಳಿದ್ದಾರೆ. ಕಲಬುರಗಿಯಲ್ಲಿ ತಾಯಿ-ಮಕ್ಕಳಿಗಾಗಿ ಪ್ರತ್ಯೇಕ ಆಸ್ಪತ್ರೆ ಆರಂಭಿಸುತ್ತಿರುವುದು, ಈ ಭಾಗದ ಜನರಿಗೆ ಖುಷಿ ತಂದಿದೆ.

ರಾಯಚೂರು ಕಲ್ಮಲಾ ಜಂಕ್ಷನ್‌ನಿಂದ ಸಿಂಧನೂರು ಬಳಿಯ ಬಳ್ಳಾರಿ– ಲಿಂಗಸುಗೂರು ರಸ್ತೆ ವೃತ್ತದವರೆಗೆ ಹೈಬ್ರಿಡ್ ಆನ್ಯೂಟಿ (ಎಚ್‌ಎಎಂ) ಮಾದರಿ ರಸ್ತೆಯಾಗುತ್ತಿದ್ದು, ಸ್ಥಳೀಯ ಸಾರಿಗೆ ಮತ್ತಷ್ಟು ಬಲಗೊಳ್ಳಲಿದೆ.

ವಿಜಯಪುರ ವಿಮಾನ ನಿಲ್ದಾಣದ ಕಾಮಗಾರಿ ಪ್ರಸಕ್ತ ವರ್ಷದಲ್ಲೇ ಮುಗಿಯಲಿದೆ. ಚಿತ್ತಾಪುರ, ಇಂಡಿ, ಶಹಪೂರದಲ್ಲಿ ಕೈಗಾರಿಕಾ ವಸಾಹತು ಸ್ಥಾಪಿಸಲಾಗುತ್ತಿದೆ. ಕೊಪ್ಪಳ ಜಿಲ್ಲೆಯಲ್ಲಿ ಜಾನಪದ ಲೋಕ ಸ್ಥಾಪನೆ, ಹಂಪಿ, ಮೈಲಾರ, ಗಾಣಗಾಪುರ, ಸನ್ನತಿ ಮತ್ತು ಮಳಖೇಡ, ಬೀದರ್, ರಾಯಚೂರು ಹಾಗೂ ಕಲಬುರಗಿ ಕೋಟೆಗಳ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಮೈಸೂರು ಭಾಗದ ಕನಕಪುರದಲ್ಲಿ ವೈದ್ಯಕೀಯ ಕಾಲೇಜು ಸ್ಥಾಪನೆಯಾಗಲಿದೆ. ಮೈಸೂರಿನಲ್ಲಿ 'ಕರ್ನಾಟಕ ಪುರಾತತ್ವ ವಸ್ತುಸಂಗ್ರಹಾಲಯ ಮತ್ತು ಕಲಾಗ್ಯಾಲರಿ' ನಿರ್ಮಿಸಲಾಗುತ್ತಿದೆ.

ಧರ್ಮಸ್ಥಳದಲ್ಲಿ ಮಿನಿ ವಿಮಾನ ನಿಲ್ದಾಣ ನಿರ್ಮಾಣ, ಉತ್ತರ ಕನ್ನಡ ಜಿಲ್ಲೆಯ ಮಂಕಿಯಲ್ಲಿ ಬಹುಪಯೋಗಿ ಬಂದರು ಅಭಿವೃದ್ಧಿಗೆ ಆಸಕ್ತಿ ತೋರಲಾಗಿದೆ. ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕರಾವಳಿ ಬೀಚ್ ಪ್ರವಾಸೋದ್ಯಮ ಕಾರ್ಯಪಡೆ ರಚಿಸಲಾಗುತ್ತಿದೆ.

ಕಿತ್ತೂರು ಕರ್ನಾಟಕದ ಬಹುದಿನಗಳ ಬೇಡಿಕೆಯಾದ ಕಳಸಾ ಮತ್ತು ಬಂಡೂರಿ ನಾಲಾ ತಿರುವು ಕುಡಿಯುವ ನೀರಿನ ಯೋಜನೆ ಕಾಮಗಾರಿಗಳಿಗೆ ಚಾಲನೆ ನೀಡಲು ಪ್ರಯತ್ನಿಸಲಾಗುವುದೆಂದು ಬಜೆಟ್‌ನಲ್ಲಿ ಹೇಳಲಾಗಿದೆ.


ಸವದತ್ತಿ ಯಲ್ಲಮ್ಮನ ಗುಡ್ಡ, ದೇವರಗುಡ್ಡ, ಕಪ್ಪತ್ತಗುಡ್ಡ, ಬಾದಾಮಿ ಬನಶಂಕರಿ, ಲಕ್ಕುಂಡಿ ಪ್ರವಾಸಿ ತಾಣಗಳನ್ನು ಮತ್ತು ಗದಗ ಜಿಲ್ಲೆಯ ಮಾಗಡಿ ಪಕ್ಷಿಧಾಮ ಅಭಿವೃದ್ಧಿಪಡಿಸಲಾಗುತ್ತಿದೆ. ಗದಗ, ಕೊಪ್ಪಳ, ಕಾರವಾರ ಮತ್ತು ಕೊಡಗು ಜಿಲ್ಲೆಗಳಲ್ಲಿ 450 ಬೆಡ್ ಆಸ್ಪತ್ರೆಗಳ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ಮೈಸೂರು, ಕಲಬುರಗಿ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ಕಾರ್ಯಾರಂಭ ಮತ್ತು ಸುಟ್ಟ ಗಾಯಗಳ ಘಟಕ ಸ್ಥಾಪನೆಗೆ ₹ 155 ಕೋಟಿ ಒದಗಿಸಲಾಗಿದೆ.

ಜನಸಾಮಾನ್ಯರ ಅಭಿಪ್ರಾಯ



ರೈಲು ಮೇಲ್ಸೇತುವೆ ಹಾಗೂ ಕೆಳಸೇತುವೆ ಕಾಮಗಾರಿಗಳನ್ನು ಆದ್ಯತೆಯ ಮೇಲೆ ಪೂರ್ಣಗೊಳಿಸಲು ಪ್ರಸ್ತಾಪಿಸಿರುವುದು ಉತ್ತಮ. ಪ್ರವಾಸೋದ್ಯಮ ಉತ್ತೇಜನ ಹಾಗೂ ಸಹಕಾರ ಮತ್ತು ವಾಣಿಜ್ಯ ಬ್ಯಾಂಕ್‌ಗಳಿಗೆ ಶೇ 4ರಷ್ಟು ಸಾಲ ನೀಡುತ್ತಿರುವುದು ಖುಷಿಯ ಸಂಗತಿ

ಹರ್ಷವರ್ಧನ್ ಪಿ.
ಹರಿಹರ ನಿವಾಸಿ



ಗುಡ್ಡಗಾಡು ಕೃಷಿಕರಿಗೆ ಪಿಕ್‌ಅಪ್ ವಾಹನ ಖರೀದಿಗೆ ಸಹಾಯಧನ, ಕೃಷಿ ಉಪಕರಣ ಬಾಡಿಗೆಗೆ ಹೈಟೆಕ್ ಹಾರ್ವೆಸ್ಟರ್, ಗೋದಾಮು ಘೋಷಿಸಿದ್ದು ಸ್ವಾಗತಾರ್ಹ. ಕಳಸಾ ಬಂಡೂರಿ ಪ್ರಸ್ತಾಪಿಸದಿರುವುದು ನಿರಾಸೆ ಮೂಡಿಸಿದೆ. ಈ ಭಾಗದ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಬೇಕಿದೆ

ಮಲ್ಲಿಕಾರ್ಜುನ ಚಿಕ್ಕಮಠ
ಧಾರವಾಡ



ರೈತ ಉತ್ಪಾದಕ ಕಂಪನಿಗೆ ಸಾಲದ ವ್ಯವಸ್ಥೆ ಮಾಡಿರುವುದು ಹಾಗೂ ನರೇಗಾಕ್ಕೆ ಉತ್ತೇಜನ ಕೊಟ್ಟಿರುವುದು, ಎಪಿಎಂಸಿ ಕಾಯ್ದೆ ಹಿಂದಕ್ಕೆ ತೆಗೆದುಕೊಂಡಿರುವುದು ಒಳ್ಳೆಯದು. ನೀರಾವರಿಯ ಯೋಜನೆ ಹೆಚ್ಚಿನ ಒತ್ತು ಬೇಕಿತ್ತು. ಆಗಷ್ಟೇ ಅನ್ನದಾತರ ಅಭಿವೃದ್ಧಿ ಸಾಧ್ಯವಾಗಲಿದೆ

ತುಳಸಿರಾಜು
ಕರಿಕ್ಯಾತನಹಳ್ಳಿ, ಹಾಸನ ಜಿಲ್ಲೆ




ಜಿಲ್ಲೆ, ತಾಲ್ಲೂಕು ಆಸ್ಪತ್ರೆಗಳಲ್ಲಿ ಏಕಬಳಕೆಯ ಡಯಾಲೈಸರ್ ನೀಡಲು ಮುಂದಾಗಿದ್ದು ಸ್ವಾಗತಾರ್ಹ. ಜನರ ಜೀವನ ಗುಣಮಟ್ಟ ಹೆಚ್ಚಿಸಲು ಪ್ರತಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸಬೇಕಿತ್ತು. ವೈದ್ಯರ ಕೊರತೆ ನೀಗಿಸಲು ಆದ್ಯತೆ ಸಿಗಬೇಕಿತ್ತು

ಪವನ ಕುಮಾರ್
ಗಂಗಾವತಿ



ರಾಷ್ಟ್ರೀಯ ಶಿಕ್ಷಣ ನೀತಿ–2020 ರದ್ದುಗೊಳಿಸುತ್ತಿರುವುದು ಸ್ವಾಗತಾರ್ಹ. ಶಿಕ್ಷಕ ಸಮುದಾಯಕ್ಕೆ ಕೆಲ ಯೋಜನೆಗಳನ್ನು ಘೋಷಿಸಬೇಕಿತ್ತು. ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು ಹಾಗೂ ಅತಿಥಿ ಉಪನ್ಯಾಸಕರನ್ನು ಕಾಯಂಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಬೇಕು

ಅಶ್ವಿನಿ
ಉಪನ್ಯಾಸಕಿ, ಕಲಬುರಗಿ



ಎತ್ತಿನಹೊಳೆ, ಭದ್ರಾ ಮೇಲ್ದಂಡೆ, ಕೃಷ್ಣಾ ಮೇಲ್ದಂಡೆ, ಮೇಕೆದಾಟು, ಕಳಸ–ಬಂಡೂರಿ ಯೋಜನೆಗಳು ಬಜೆಟ್ ಪ್ರಸ್ತಾವಕ್ಕೆ ಸೀಮಿತವಾಗದೆ ಅನುಷ್ಠಾನವಾದರೆ ಮಾತ್ರ ರೈತರಿಗೆ ಲಾಭ ದೊರಕಲಿದೆ. ತ್ವರಿತವಾಗಿ ಯೋಜನೆಗಳನ್ನು ಪೂರ್ಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು

ಗುರುಶಾಂತಪ್ಪ
ರೈತ ಮುಖಂಡ, ಚಿಕ್ಕಮಗಳೂರು

ಹೊರೆಯಾಗದಂತೆ ಸಂಪನ್ಮೂಲ ಸಂಗ್ರಹ

ಬೆಂಗಳೂರು: ರಾಜ್ಯದ ಶೇ 90ರಷ್ಟು ಫಲಾನುಭವಿಗಳಿಗೆ ನೀಡುತ್ತಿರುವ ಐದು ಗ್ಯಾರಂಟಿಗಳಿಗೆ ₹ 35,410 ಕೋಟಿ ಹೊಂದಿಸಬೇಕಿದ್ದರೂ ಬಡ, ಮಧ್ಯಮ ವರ್ಗದ ಜನರಿಗೆ ಹೊರೆಯಾಗದಂತೆ ಸಂಪನ್ಮೂಲ ಕ್ರೋಡೀಕರಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಗ್ಯಾರಂಟಿ ಯೋಜನೆಗಳಿಗೆ ₹ 13,500 ಕೋಟಿ ರಾಜಸ್ವ ಸಂಗ್ರಹ, ₹ 8 ಸಾವಿರ ಕೋಟಿ ಹೆಚ್ಚುವರಿ ಸಾಲದ ಮೂಲಕ ಹಾಗೂ ಉಳಿದ ಸಂಪನ್ಮೂಲವನ್ನು ಯೋಜನೆಗಳ ಆದ್ಯತೆ ನಿಗದಿಪಡಿಸುವ ಮೂಲಕ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ. ಕೇಂದ್ರ ಸರ್ಕಾರದ ನೀತಿಗಳಿಂದಾಗಿ ಬೆಲೆ ಏರಿಕೆಯಿಂದ ಬಸವಳಿದಿರುವ ಸಾಮಾನ್ಯ ಜನರಿಗೆ ಹೊರೆಯಾಗಬಾರದು ಎಂದು ಪೆಟ್ರೋಲ್, ಡೀಸೆಲ್ ಮೇಲೆ ತೆರಿಗೆ ಹೆಚ್ಚಳ ಮಾಡಿಲ್ಲ. ವಿತ್ತೀಯ ಕೊರತೆ ಶೇ 2.6ರಷ್ಟಿದೆ (ವಿತ್ತೀಯ ಹೊಣೆಗಾರಿಕೆ ನಿಯಮದಂತೆ ಶೇ 3ರಷ್ಟಿರಬೇಕು), ಸಾಲ ಜಿಡಿಪಿ ಶೇ 22.3 ರಷ್ಟಿದೆ(ಶೇ 25ರ ಒಳಗಿರಬೇಕು). ಬಜೆಟ್‌ನಲ್ಲಿ ಎರಡು ವಿತ್ತೀಯ ಶಿಸ್ತನ್ನು ಪಾಲಿಸಲಾಗಿದೆ ಎಂದು ಬಜೆಟ್ ಮಂಡನೆಯ ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ದುರ್ಬಲ ವರ್ಗದ ಜನರ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಪೂರ್ಣ ಪ್ರಮಾಣದ ಬಜೆಟ್ ಮಂಡಿಸಲಾಗಿದೆ. ಗ್ಯಾರಂಟಿ ಯೋಜನೆಗಳ ಜಾರಿಯ ಜತೆಗೆ, ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಹಲವು ಭರವಸೆಗಳನ್ನೂ ಈಡೇರಿಸುವ ಪ್ರಯತ್ನ ಮಾಡಲಾಗಿದೆ. ಸರ್ಕಾರ ಜನರ ಆಶೋತ್ತರಗಳಿಗೆ ಸ್ಪಂದಿಸಿದೆ ಎಂದು ಹೇಳಿದರು.

ಯೋಜನೆಗಳು ಜಾರಿಯಾದರೆ ರಾಜ್ಯದ ಆರ್ಥಿಕವಾಗಿ ದಿವಾಳಿಯಾಗುತ್ತದೆ ಎಂದು ಪ್ರಧಾನಿಯವರೇ ಟೀಕಿಸಿದ್ದರು. ಯೋಜನೆ ಜಾರಿ ಅಸಾಧ್ಯ ಎಂದು ರಾಜ್ಯದ ಬಿಜೆಪಿ ನಾಯಕರು ಅನುಮಾನ ವ್ಯಕ್ತಪಡಿಸಿದ್ದರು. ಗ್ಯಾರಂಟಿ ಯೋಜನೆಗಳಿಗೆ ಅಗತ್ಯವಾದ ಹಣಕಾಸನ್ನು ಹೊಂದಿಸಿದ್ದೇವೆ. ಯೋಜನೆಯನ್ನು ಶೇ 100ರಷ್ಟು ಅನುಷ್ಠಾನ ಮಾಡುವ ಭರವಸೆಯನ್ನು ಬಜೆಟ್‌ನಲ್ಲೇ ನೀಡಿದ್ದೇವೆ ಎಂದರು.

'ಗಂಡಸರು ಮಾತ್ರ ಕುಡಿಯೋದಾ?'

'ಮಹಿಳಾ ಯೋಜನೆಗಳಿಗಾಗಿ ವಿಸ್ಕಿ, ಬಿಯರ್‌ಗಳ ಮೇಲೆ ಅಧಿಕ ತೆರಿಗೆ ಹಾಕಿದ್ದೀರಿ. ಇದು ಪುರುಷ ವಿರೋಧಿ ನೀತಿ ಅಲ್ಲವೇ' ಎಂಬ ಮದ್ಯದ ಮೇಲಿನ ಅಬಕಾರಿ ತೆರಿಗೆ ಹೆಚ್ಚಳ ಕುರಿತು ಕೇಳಿ ಬಂದ ಟೀಕೆಗೆ ಪ್ರತಿಕ್ರಿಯಿಸಿದ ಅವರು, ಗಂಡಸರು ಮಾತ್ರ ಕುಡಿಯೋದಾ ಎಂದು ಹಾಸ್ಯ ಚಟಾಕಿ ಹಾರಿಸಿದರು. ಮತ್ತೆ ಮಾತು ಮುಂದುವರಿಸಿ, ಕುಡಿಯುವ ವರು ರಾಜ್ಯದ ಕಲ್ಯಾಣಕ್ಕಾಗಿ ತಮ್ಮ ಪಾಲನ್ನೂ ನೀಡಲಿ ಬಿಡಿ ಎಂದರು.

'ಹಿಂದಿನ ಸರ್ಕಾರದ ಮೂರ್ಖತನ'

ಬೆಂಗಳೂರು: ಹಿಂದಿನ ಸರ್ಕಾರ ಮೂರ್ಖತನದಿಂದ ರಾಜ್ಯದ ಆರ್ಥಿಕ ಪರಿಸ್ಥಿತಿ ಹಾಳಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ದೂರಿದರು.

ನಮ್ಮ ಸರ್ಕಾರ ಪ್ರಗತಿದಾಯಕ ನಡೆ ಅನುಸರಿಸಿದೆ. ಬಡವರ ಕೈಗೆ ದುಡ್ಡು, ಉದ್ಯೋಗ ನೀಡುವ ದೃಢ ಸಂಕಲ್ಪ ಮಾಡಿದೆ. ರಾಜ್ಯವನ್ನು ಹಸಿವು ಮುಕ್ತ ಮಾಡುವ ಹಾಗೂ ಬಂಡವಾಳ ಆಕರ್ಷಿಸುವಂತಹ ಬಜೆಟ್ ಮಂಡಿಸಲಾಗಿದೆ. ಬಜೆಟ್‌ನಲ್ಲಿ ಮಹಿಳಾ ಕೇಂದ್ರಿತ ಯೋಜನೆಗಳಿಗೆ ₹ 70,427 ಕೋಟಿ ಮೀಸಲಿಡಲಾಗಿದೆ. ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ ಬಜೆಟ್‌ನಲ್ಲಿ ಮಹಿಳೆಯರಿಗೆ ನೀಡಿದ ಪಾಲು ₹ 27,793 ಕೋಟಿಗಳಿಗೆ ಹೆಚ್ಚಿಸಲಾಗಿದೆ. ಪರಿಶಿಷ್ಟ ಜಾತಿ, ಪಂಗಡದ ಜನರ ಕಾರ್ಯಕ್ರಮಗಳಿಗೆ ₹ 34,294 ಕೋಟಿ ನೀಡಿದ್ದೇವೆ. ₹ 6,060 ಕೋಟಿ ಹೆಚ್ಚಿಸುವ ಮೂಲಕ ಪರಿಶಿಷ್ಟ ವರ್ಗಗಳಿಗೆ ನ್ಯಾಯ ಒದಗಿಸುವ ಕೆಲಸ ಮಾಡಲಾಗಿದೆ ಎಂದರು.

ಬಿಜೆಪಿ ಆಡಳಿತದ ಅವಧಿಯಲ್ಲಿ ನಿರ್ಲಕ್ಷಿಸಿದ್ದ ಬಡವರ, ಕೂಲಿ ಕಾರ್ಮಿಕರ ಹಸಿವು ನೀಗಿಸುವ ಇಂದಿರಾ ಕ್ಯಾಂಟೀನ್‌ಗಳನ್ನು ಮರು ಆರಂಭಿಸಲಾಗಿದೆ. ರಾಜ್ಯದ ಇನ್ನೂ ಹಲವು ಸ್ಥಳಗಳಲ್ಲಿ ಹೊಸ ಕ್ಯಾಂಟೀನ್ ಆರಂಭಿಸಲಾಗುವುದು ಎಂದು ಮುಖ್ಯಮಂತ್ರಿ ಹೇಳಿದರು.

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ಸಂಸ್ಕೃತ)	₹1715 (1715)
ಸೋಯಾ (ಸಂಸ್ಕೃತ)	₹960 (965)
ಸೂರ್ಯಕಾಂತಿ (ಸಂಸ್ಕೃತ)	₹950 (955)
ಪಾಮೋಲಿನ್	₹860 (874)

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹154
ಆರ್‌ಎಸ್‌ಎಸ್-5	₹147.50
ರಬ್ಬರ್ ಲಾಟ್	₹131

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಪ್ರ.ಕೆ)	₹255-391
ದ್ವಿತಳಿ (ಪ್ರ.ಕೆ)	₹200-562

ಮುದ್ರೆಮನೆ ಕಾಫಿ


(50 ಕೆಜಿಗೆ)

ಎಪಿ	₹14400
ಎಸಿ	₹7280
ಆರ್‌ಪಿ	₹10000
ಆರ್‌ಸಿ	₹5830

ಷೇರುಪೇಟೆ ವಹಿವಾಟು

506

ಇಂದಿನ ಅಂತ್ಯ 65,280
ಹಿಂದಿನ ಅಂತ್ಯ 65,786



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,497
ಇಂದಿನ ಅಂತ್ಯ	19,332
	165
ದಿನದ ಕನಿಷ್ಠ	19,303

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹7200-8260
ಮಾಲೂರು	₹5800-6500
ತುಮಕೂರು	₹7650-8150
ತುರುವೇಕೆರೆ	₹8000-8000

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹500
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹500

ಶಿವಮೊಗ್ಗ ಮಾರುಕಟ್ಟೆಯಲ್ಲಿ ಜೂನ್‌ನಲ್ಲಿ ಗರಿಷ್ಠ ಬೆಲೆಗೆ ಮಾರಾಟ

ಮತ್ತೆ ₹80 ಸಾವಿರ ದಾಟಿದ ಸರಕು ಅಡಿಕೆ

ಪ್ರಜಾವಾಣಿ ವಾರ್ತೆ



ಶಿವಮೊಗ್ಗ: ಉತ್ಕೃಷ್ಟ ಗುಣಮಟ್ಟಕ್ಕೆ ಹೆಸರಾದ ಸರಕು ಅಡಿಕೆ ಇಲ್ಲಿನ ಮಾರುಕಟ್ಟೆಯಲ್ಲಿ ಶುಕ್ರವಾರ ಕ್ವಿಂಟಲ್‌ಗೆ ಗರಿಷ್ಠ ₹82,496ಕ್ಕೆ ಮಾರಾಟವಾಯಿತು. ಕನಿಷ್ಠ ₹50,599 ದರ ದೊರೆತಿದೆ.

ಜುಲೈ ತಿಂಗಳಲ್ಲಿ ಇದೇ ಮೊದಲ ಬಾರಿಗೆ ಸರಕು ಅಡಿಕೆಯ ಗರಿಷ್ಠ ಬೆಲೆಯು ₹80,000ದ ಗಡಿ ದಾಟಿತು. ಈ ಹಂಗಾಮಿನಲ್ಲಿ ಜೂನ್ 19ರಂದು ಮೊದಲ ಬಾರಿಗೆ ಸರಕು ಅಡಿಕೆಗೆ ಕ್ವಿಂಟಲ್‌ಗೆ ₹82,400 ದರ ದೊರಕಿತ್ತು. ಜೂನ್ 21ರಂದು ಗರಿಷ್ಠ ₹86,400ಕ್ಕೆ ಮಾರಾಟವಾಗುವ ಮೂಲಕ ಈ ಬಾರಿಯ ದಾಖಲೆ ಬರೆದಿತ್ತು. ಜೂನ್ 22ರಂದು ₹86,100, 27ರಂದು ₹83,200 ಬೆಲೆ ಪಡೆದಿದ್ದ ಸರಕು ಅಡಿಕೆ, ಕಳೆದೊಂದು ವಾರದಿಂದ ₹76,600ರ ಆಸುಪಾಸು ಇತ್ತು. ಈಗ ಮತ್ತೊಮ್ಮೆ ಹೆಚ್ಚಿನ ಬೆಲೆಗೆ ಮಾರಾಟವಾಗಿದೆ.

ರಾಶಿ ಅಡಿಕೆ ಕ್ವಿಂಟಲ್‌ಗೆ ಗರಿಷ್ಠ ₹56,299, ಕನಿಷ್ಠ ₹39,201, ಬೆಟ್ಟೆ ಅಡಿಕೆ ಗರಿಷ್ಠ ₹55,382 ಹಾಗೂ ಕನಿಷ್ಠ ₹45,000 ಹಾಗೂ ಗೊರಬಲು ಗರಿಷ್ಠ ₹42,399 ಹಾಗೂ ಕನಿಷ್ಠ ₹18,000ಕ್ಕೆ ಮಾರಾಟವಾಗಿ ದಿನದ ವಹಿವಾಟು ಮುಗಿಸಿತು. ಸಾಗರ ಮಾರುಕಟ್ಟೆಯಲ್ಲಿ ರಾಶಿ ಅಡಿಕೆಗೆ ಗರಿಷ್ಠ ₹55,599, ಕೆಂಪು ಗೋಟಿಗೆ ₹42,899 ಬೆಲೆ ದೊರಕಿತು.

'ಈಶಾನ್ಯ ರಾಜ್ಯಗಳ ಗಡಿಯಿಂದ ದೇಶದೊಳಗೆ ಅಡಿಕೆಯು ಕಳ್ಳಮಾರ್ಗದಲ್ಲಿ ಬರುವುದನ್ನು ತಡೆದರೆ ಹಾಗೂ ಅಂತರರಾಷ್ಟ್ರೀಯ ವ್ಯಾಪಾರ ಒಪ್ಪಂದಗಳ ದುರ್ಬಳಕೆ ತಪ್ಪಿದರೆ ಅಡಿಕೆಗೆ ಇನ್ನೂ ಹೆಚ್ಚು ಬೆಲೆ ದೊರೆಯಲಿದೆ' ಎಂದು ಶಿವಮೊಗ್ಗ ಜಿಲ್ಲಾ ಅಡಿಕೆ ಬೆಳೆಗಾರರ ಸಂಘದ ಅಧ್ಯಕ್ಷ ರಮೇಶ ಹೆಗ್ಡೆ ಅಡಿಕೆ ಧಾರಣೆ ಹೆಚ್ಚಳದ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಬಸವಾಪಟ್ಟಣದಲ್ಲಿ ಶುಕ್ರವಾರ ರಾಶಿ ಅಡಿಕೆ ಕ್ವಿಂಟಲ್‌ಗೆ ಗರಿಷ್ಠ ₹56,399 ಏರಿಕೆಯಾಗಿದೆ. ಇದು ಈ ವರ್ಷದ ರಾಶಿ ಅಡಿಕೆಯ ಗರಿಷ್ಠ ದರ. ಏಪ್ರಿಲ್‌ನಲ್ಲಿ ₹48,000 ಇದ್ದ ರಾಶಿ ಅಡಿಕೆ ದರ ಜೂನ್‌ನಲ್ಲಿ ₹50,000ದ ಗಡಿ ದಾಟಿತ್ತು. ಕೆಲ ದಿನಗಳಿಂದ ₹55,000ದ ಆಸುಪಾಸಿನಲ್ಲಿದ್ದ ದರ ಈಗ ₹56,399ಕ್ಕೆ ಏರಿದೆ.

'ಇದು ವರ್ಷದ ಉತ್ತಮ ದರ. ಕೆಲ ದಿನಗಳಿಂದ ₹55,000 ಇದ್ದ ದರ ಸದ್ಯ ಏರಿಕೆ ಕಂಡಿದ್ದು ಆಶಾದಾಯಕ. ಈ ದರ ಮುಂದುವರಿಯುವ ಸಾಧ್ಯತೆ ಇದೆ' ಎಂದು ತೋಟ ಉತ್ಪನ್ನಗಳ ಮಾರಾಟ ಸಂಘದ ಅಧ್ಯಕ್ಷ ಎಂ.ಆರ್. ರವಿ ಹೇಳಿದರು.

ಟೊಮೆಟೊ ಬಳಸುವುದನ್ನು ನಿಲ್ಲಿಸಿದ ಮೆಕ್‌ಡೊನಾಲ್ಡ್ಸ್!

ನವದೆಹಲಿ/ಮುಂಬೈ (ರಾಯಿಟರ್ಸ್): ಮೆಕ್‌ಡೊನಾಲ್ಡ್ಸ್‌ನ ರೆಸ್ಟೋರೆಂಟ್‌ಗಳು ತಮ್ಮ ಗ್ರಾಹಕರಿಗೆ ನೀಡುವ ಬರ್ಗರ್ ಹಾಗೂ ವ್ರ್ಯಾಪ್‌ಗಳಲ್ಲಿ (ಒಂದು ಬಗೆಯ ತಿನಿಸು) ಟೊಮೆಟೊ ಬಳಸುವುದನ್ನು ನಿಲ್ಲಿಸಿವೆ! ಟೊಮೆಟೊ ಬೆಲೆಯು ದಾಖಲೆಯ ಮಟ್ಟಕ್ಕೆ ಏರಿಕೆ ಕಂಡಿದ್ದು, ಅದರ ಪೂರೈಕೆಯಲ್ಲಿ ಸಮಸ್ಯೆ ಉಂಟಾಗಿದೆ.

'ಬಹಳಷ್ಟು ಪ್ರಯತ್ನ ಮಾಡಿದ್ದರೂ, ನಾವು ಬಯಸುವ ಗುಣಮಟ್ಟಕ್ಕೆ ಸರಿಹೊಂದುವ ಟೊಮೆಟೊ ಅಗತ್ಯ ಪ್ರಮಾಣದಲ್ಲಿ ಸಿಕ್ಕಿಲ್ಲ' ಎಂದು ನವದೆಹಲಿಯಲ್ಲಿರುವ ಮೆಕ್‌ಡೊನಾಲ್ಡ್ಸ್‌ನ ಎರಡು ರೆಸ್ಟೋರೆಂಟ್‌ಗಳ ಎದುರು ಮಾಹಿತಿ ಫಲಕ ಹಾಕಲಾಗಿದೆ.

'ನಾವು ನಿಮಗೆ ಬೇಕಿರುವ ತಿನಿಸುಗಳನ್ನು ಟೊಮೆಟೊ ಇಲ್ಲದೆ ನೀಡುವ ಅನಿವಾರ್ಯ ಪರಿಸ್ಥಿತಿ ಸೃಷ್ಟಿಯಾಗಿದೆ' ಎಂದು ಕೂಡ ಅಲ್ಲಿ ಹೇಳಲಾಗಿದೆ. ಬೆಲೆ ಹೆಚ್ಚಾಗಿರುವುದರಿಂದ ಕೃತಕಲ್ಲ, ಟೊಮೆಟೊ ಗುಣಮಟ್ಟವು ಈ ತೀರ್ಮಾನಕ್ಕೆ ಕಾರಣ ಎಂದು ರೆಸ್ಟೋರೆಂಟ್ ನಿರ್ವಾಹಕರು ಹೇಳಿದ್ದಾರೆ.



ಮೆಕ್‌ಡೊನಾಲ್ಡ್ಸ್ ಹೆಸರಿನಲ್ಲಿ ಉತ್ತರ ಭಾರತ ಹಾಗೂ ಪಶ್ಚಿಮ ಭಾರತದಲ್ಲಿ 150 ಮಳಿಗೆಗಳನ್ನು ನಡೆಸುತ್ತಿರುವ ಕನಾಟ್ ಪ್ಲಾಜಾ ರೆಸ್ಟೋರೆಂಟ್ ಕಂಪನಿಯು 'ತಾತ್ಕಾಲಿಕ' ಕಾರಣಗಳಿಂದಾಗಿ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಹೇಳಿದೆ.

ಆದರೆ ದಕ್ಷಿಣ ಹಾಗೂ ಪೂರ್ವ ಭಾಗಗಳಲ್ಲಿ ಮೆಕ್‌ಡೊನಾಲ್ಡ್ಸ್‌ನ 357 ಮಳಿಗೆಗಳನ್ನು ನಡೆಸುತ್ತಿರುವ ವೆಸ್ಟ್‌ಲೈಫ್ ಫುಡ್‌ವರ್ಲ್ಡ್ ಕಂಪನಿಯು 'ಟೊಮೆಟೊ ವಿಚಾರವಾಗಿ ಗಂಭೀರ ಸಮಸ್ಯೆಗಳೇನೂ ಇಲ್ಲ' ಎಂದು ಹೇಳಿದೆ. ತನ್ನ ಶೇ 10ರಿಂದ ಶೇ 15ರಷ್ಟು ಮಳಿಗೆಗಳಲ್ಲಿ ತಾತ್ಕಾಲಿಕವಾಗಿ ಟೊಮೆಟೊ ನೀಡುವುದನ್ನು ನಿಲ್ಲಿಸಲಾಗಿದೆ ಎಂದು ಅದು ಹೇಳಿದೆ.

ಮೆಕ್‌ಡೊನಾಲ್ಡ್ಸ್‌ನ ದೆಹಲಿಯ ಮಳಿಗೆಗಳಲ್ಲಿ ಟೊಮೆಟೊ ಕೆಚಪ್ ಈಗಲೂ ನೀಡಲಾಗುತ್ತಿದೆ. ದೆಹಲಿಯಲ್ಲಿ ಇರುವ ಸಬ್‌ವೆ ರೆಸ್ಟೋರೆಂಟ್ ತಿನಿಸುಗಳಲ್ಲಿ ಟೊಮೆಟೊ ನೀಡುವುದಕ್ಕೆ ತಮಗೆ ಯಾವ ಸಮಸ್ಯೆಯೂ ಇಲ್ಲ ಎಂದು ಹೇಳಿದೆ.

ರಷ್ಯಾದ ರೊಸ್ನೆಫ್ಟ್ ಆಡಳಿತ ಮಂಡಳಿಗೆ ಭಾರತದ ಸತೀಶ್

ನವದೆಹಲಿ (ಪಿಟಿಐ): ರಷ್ಯಾದ ಅತಿದೊಡ್ಡ ತೈಲ ಕಂಪನಿ ರೊಸ್ನೆಫ್ಟ್‌ನ ಆಡಳಿತ ಮಂಡಳಿಯ ನಿರ್ದೇಶಕರಾಗಿ ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನ (ಐಒಸಿ) ನಿವೃತ್ತ ನಿರ್ದೇಶಕ ಜಿ.ಕೆ. ಸತೀಶ್ ಅವರು ನೇಮಕ ಆಗಿದ್ದಾರೆ. ರೊಸ್ನೆಫ್ಟ್ ಕಂಪನಿಯ ಆಡಳಿತ ಮಂಡಳಿಗೆ ಭಾರತೀಯರೊಬ್ಬರ ನೇಮಕ ಆಗಿರುವುದು ಇದೇ ಮೊದಲು.

62 ವರ್ಷ ವಯಸ್ಸಿನ ಸತೀಶ್ ಅವರು 2021ರಲ್ಲಿ ಐಒಸಿ ನಿರ್ದೇಶಕ ಸ್ಥಾನದಿಂದ ನಿವೃತ್ತಿ ಆಗಿದ್ದಾರೆ. ಹೊಸದಾಗಿ ಒಟ್ಟು 11 ಜನರನ್ನು ನಿರ್ದೇಶಕರನ್ನಾಗಿ ನೇಮಿಸಿಕೊಂಡಿದ್ದು, ಅವರಲ್ಲಿ ಸತೀಶ್ ಕೂಡಾ ಒಬ್ಬರಾಗಿದ್ದಾರೆ ಎಂದು ರೊಸ್ನೆಫ್ಟ್ ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ರೊಸ್ನೆಫ್ಟ್ ಕಂಪನಿಯು ರಷ್ಯಾದಲ್ಲಿನ ತೈಲ ಮತ್ತು ಅನಿಲ ಘಟಕಕ್ಕೆ ಸಂಬಂಧಿಸಿದಂತೆ ಐಒಸಿಯೊಂದಿಗೆ ಪಾಲುದಾರಿಕೆ ಹೊಂದಿದೆ. ಐಒಸಿ ಸೇರಿದಂತೆ ಭಾರತದ ತೈಲ ಕಂಪನಿಗಳಿಗೆ ಅದು ಕಚ್ಚಾ ತೈಲವನ್ನೂ ಮಾರಾಟ ಮಾಡುತ್ತಿದೆ.

ಎಲ್‌ಎನ್‌ಜಿ ಮಾರಾಟ ಮಾಡುವುದು ಸೇರಿದಂತೆ ಭಾರತದ ಕಂಪನಿಗಳೊಂದಿಗೆ ಹೆಚ್ಚಿನ ವಹಿವಾಟು ನಡೆಸಲು ರೊಸ್ನೆಫ್ಟ್ ಮುಂದಾಗಿದೆ. ಈ ನಿಟ್ಟಿನಲ್ಲಿ ಸತೀಶ್ ಅವರ ನೇಮಕವು ಮಹತ್ವ ಪಡೆದುಕೊಂಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ಸಿದ್ದಾಪುರ		ಕೆಂಪುಗೋಟು	
ಕುಮಟಾ		ಬಿಳೇಗೋಟು	30099-35099		22589-37499
ಚಿಪ್ಪು	29999-33099	ಚಾಲಿ	36899-40009	ರಾಶಿ	46699-52499
ಕೋಕ	21509-34509	ಕೋಕ	28099-33899	ಯಲ್ಲಾಪುರ	
ಫ್ಯಾಕ್ಟರಿ	14509-22701	ಕೆಂಪುಗೋಟು		ಬಿಳೇಗೋಟು	24899-36299
ಹಳೆಚಾಲಿ	38899-41009		31099-34699	ಚಾಲಿ	36369-39599
ಹೊಸಚಾಲಿ	35499-39029	ರಾಶಿ	46099-53499	ಕೋಕ	18899-34099
ಶಿವಮೊಗ್ಗ		ತಟ್ಟಿಬೆಟ್ಟೆ	41669-52009	ಕೆಂಪುಗೋಟು	
ಬೆಟ್ಟೆ	45000-55382	ಶಿರಸಿ			29899-35699
ರಾಶಿ	39201-56299	ಬೆಟ್ಟೆ	39099-46669	ರಾಶಿ	46299-54309
ಗೊರಬಲು	18000-42399	ಬಿಳೇಗೋಟು	23799-34309	ತಟ್ಟಿಬೆಟ್ಟೆ	41499-48617
ಸರಕು	50599-82496	ಚಾಲಿ	34009-40338		

ಲಾಭ ಗಳಿಕೆಗೆ ಇಳಿದ ಸೆನ್ಸೆಕ್ಸ್, ನಿಫ್ಟಿ

ಮುಂಬೈ (ಪಿಟಿಐ): ಹೂಡಿಕೆದಾರರು ಲಾಭ ಮಾಡಿಕೊಳ್ಳಲು ಮುಂದಾಗಿದ್ದರಿಂದ ದೇಶದ ಷೇರುಪೇಟೆಗಳಲ್ಲಿ ಶುಕ್ರವಾರ ನಕಾರಾತ್ಮಕ ವಹಿವಾಟು ನಡೆಯಿತು. ಹಣಕಾಸು, ಐ.ಟಿ ಮತ್ತು ತೈಲ ವಲಯದ ಷೇರುಗಳನ್ನು ಹೂಡಿಕೆದಾರರು ಹೆಚ್ಚಾಗಿ ಮಾರಾಟ ಮಾಡಿದರು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 506 ಅಂಶ ಇಳಿಕೆ ಕಂಡರೆ ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 19,330ರ ಮಟ್ಟದಿಂದ ಕೆಳಗಿಳಿಯಿತು. ಇದರಿಂದಾಗಿ ನಿಫ್ಟಿಯು ಎಂಟು ದಿನಗಳ ಏರಿಕೆಯ ಓಟ ಶುಕ್ರವಾರ ಕೊನೆಗೊಂಡಿತು.

ಸೆನ್ಸೆಕ್ಸ್‌ನಲ್ಲಿ ಪವರ್ ಗ್ರಿಡ್ ಷೇರು ಮೌಲ್ಯ ಶೇ 2.76ರಷ್ಟು ಗರಿಷ್ಠ ಕುಸಿತ ಕಂಡಿತು. ಇಂಡಸ್‌ಇಂಡ್ ಬ್ಯಾಂಕ್ ಶೇ 2.34, ಎಚ್‌ಯುಎಲ್ ಶೇ 2.23 ಮತ್ತು ಎಸ್‌ಬಿಐ ಶೇ 2.04ರಷ್ಟು ಇಳಿಕೆ ಕಂಡಿತು.

ಜಾಗತಿಕ ಮಾರುಕಟ್ಟೆಯಲ್ಲಿ ನಡೆದ ಇಳಿಮುಖ ವಹಿವಾಟಿನಿಂದಾಗಿ ದೇಶಿ ಷೇರುಪೇಟೆಯಲ್ಲೂ ಸೂಚ್ಯಂಕಗಳು ಇಳಿಕೆ ಕಂಡವು ಎಂದು ರೆಲಿಗೇರ್ ಬ್ರೋಕಿಂಗ್ ಲಿಮಿಟೆಡ್‌ನ ಹಿರಿಯ ಉಪಾಧ್ಯಕ್ಷ ಅಜಿತ್ ಮಿಶ್ರಾ ಹೇಳಿದ್ದಾರೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಶುಕ್ರವಾರ ₹790 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಬ್ಯಾಂಕ್ ಆಫ್ ಬರೋಡಾ: ದೇವದತ್ತ ಚಂದ್ ಅಧಿಕಾರ ಸ್ವೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್ ಆಫ್ ಬರೋಡಾದ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಆಗಿ ದೇವದತ್ತ ಚಂದ್ ಅವರು ಅಧಿಕಾರ ವಹಿಸಿಕೊಂಡಿದ್ದಾರೆ. ಈ ಹುದ್ದೆಯಲ್ಲಿ ಇದ್ದ ಸಂಜೀವ್ ಛಡ್ಡಾ ಅವರ ಅಧಿಕಾರ ಅವಧಿಯು ಜೂನ್ 30ರಂದು ಕೊನೆಗೊಂಡಿದ್ದರಿಂದ ಜುಲೈ 1ರಿಂದ ಜಾರಿಗೆ ಬರುವಂತೆ ಚಂದ್ ಅವರು ಅಧಿಕಾರ ವಹಿಸಿಕೊಂಡಿದ್ದಾರೆ ಎಂದು ಬ್ಯಾಂಕ್ ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಈ ನೇಮಕಕ್ಕೂ ಮೊದಲು ಚಂದ್ ಅವರು 2021ರ ಮಾರ್ಚ್‌ನಿಂದ ಬ್ಯಾಂಕ್ ಆಫ್ ಬರೋಡಾದ ಕಾರ್ಯನಿರ್ವಾಹಕ ನಿರ್ದೇಶಕರಾಗಿದ್ದರು. ಬ್ಯಾಂಕಿಂಗ್ ಮತ್ತು ಹಣಕಾಸು ಕ್ಷೇತ್ರದಲ್ಲಿ ಚಂದ್ ಅವರು 29 ವರ್ಷಕ್ಕೂ ಹೆಚ್ಚಿನ ಅನುಭವ ಹೊಂದಿದ್ದಾರೆ.

ಬಡ್ಡಿ ಹೆಚ್ಚಿಸಿದ ಎಚ್‌ಡಿಎಫ್‌ಸಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಎಚ್‌ಡಿಎಫ್‌ಸಿ ಬ್ಯಾಂಕ್ ಎಂಸಿಎಲ್‌ಆರ್ ಆಧಾರಿತ ಸಾಲದ ಮೇಲಿನ ಬಡ್ಡಿ ದರವನ್ನು ಶೇಕಡ 0.5ರಿಂದ ಗರಿಷ್ಠ ಶೇಕಡ 0.15ರವರೆಗೆ ಹೆಚ್ಚಿಸಿದೆ. ಇದರ ಪರಿಣಾಮವಾಗಿ ವಾಹನ ಹಾಗೂ ವೈಯಕ್ತಿಕ ಸಾಲಗಳು ತುಸು ದುಬಾರಿ ಆಗಲಿವೆ.

ಅಯ್ದ ಕೆಲವು ಅವಧಿಯ ಸಾಲಗಳ ಮೇಲಿನ ಎಂಸಿಎಲ್‌ಆರ್ ಆಧಾರಿತ ಬಡ್ಡಿ ದರವನ್ನು ಹೆಚ್ಚಿಸಲಾಗಿದೆ. ಠೇವಣಿ ದರಕ್ಕೆ ಹೊಂದಿಕೊಂಡಿರುವ ಸಾಲಗಳ ಮೇಲಿನ ಬಡ್ಡಿ ದರದಲ್ಲಿ ಇದರಿಂದ ವ್ಯತ್ಯಾಸ ಆಗುವುದಿಲ್ಲ.

ಗೃಹ ಸಾಲಗಳು ಎಂಸಿಎಲ್‌ಆರ್‌ಗೆ ಜೋಡಣೆ ಆಗಿರುವುದಿಲ್ಲ. ಹೀಗಾಗಿ, ಬ್ಯಾಂಕ್‌ನ ಈ ತೀರ್ಮಾನದಿಂದಾಗಿ ಗೃಹ ಸಾಲ ಪಡೆದವರ ಮೇಲೆ ಯಾವುದೇ ಪರಿಣಾಮ ಉಂಟಾಗದು.

ಕೆನರಾ ಬ್ಯಾಂಕ್‌ನಲ್ಲಿ ಮಹಿಳಾ ಸಮ್ಮಾನ್ ಉಳಿತಾಯ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ಘೋಷಿಸಿರುವ 'ಮಹಿಳಾ ಸಮ್ಮಾನ್ ಉಳಿತಾಯ ಪತ್ರ 2023' ಯೋಜನೆಯನ್ನು ದೇಶದಾದ್ಯಂತ ಆರಂಭಿಸಲಾಗಿದೆ ಎಂದು ಕೆನರಾ ಬ್ಯಾಂಕ್ ತಿಳಿಸಿದೆ.

ಈ ಯೋಜನೆಯ ಅಡಿಯಲ್ಲಿ ಮಹಿಳೆಯರು ಎಷ್ಟು ಖಾತೆಗಳನ್ನು ಬೇಕಿದ್ದರೂ ತೆರೆಯಬಹುದು. ಆದರೆ ತೊಡಗಿಸುವ ಹಣದ ಮೊತ್ತವು ₹2 ಲಕ್ಷವನ್ನು ಮೀರುವಂತಿಲ್ಲ. ಯೋಜನೆಯ ಅಡಿಯಲ್ಲಿ ಮಾಡುವ ಠೇವಣಿಗೆ ವಾರ್ಷಿಕ ಶೇಕಡ 7.5ರಷ್ಟು ಬಡ್ಡಿ ನೀಡಲಾಗುತ್ತದೆ. ಖಾತೆ ತೆರೆಯುವಾಗ ಕನಿಷ್ಠ ₹1,000 ತೊಡಗಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

7-7-2023

ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12100-12200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತಂಗಿ ಬಿಟ್ಟು)	1725 (1725)
ಎಂಡು ವಾರದ ಡೆಲಿವರಿ	1720 (1720)
ಸೋಯಾ ಕಚ್ಚಾ	892 (907)
ಪಾಮ್ ವಾರದ ಡೆಲಿವರಿ	858 (872)
ಸೂರ್ಯಕಾಂತಿ ಎಣ್ಣೆ ಕಚ್ಚಾ	870 (880)

ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿ)

ಅಪರಂಜಿ ಚಿನ್ನ 10ಗ್ರಾಂ
58,400 (58,500)
ಬೆಳ್ಳಿ ಕೆ.ಜಿ 69,775 (70,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದುಲೀಪ್ ಟ್ರೋಫಿ: ವೈಶಾಖಗೆ ಐದು ವಿಕೆಟ್, ದಕ್ಷಿಣ ವಲಯದ ಗೆಲುವಿಗೆ ಬೇಕು 194 ರನ್

ಕುತೂಹಲ ಘಟ್ಟದಲ್ಲಿ ಸೆಮಿಫೈನಲ್

• ಗಿರೀಶ ದೊಡ್ಡಮನಿ


ಐದು ವಿಕೆಟ್ ಗಳಿಸಿದ ವೈಶಾಖ ವಿಜಯಕುಮಾರ್ ಸಂಭ್ರಮ –ಪ್ರಜಾವಾಣಿ ಚಿತ್ರ/ಪುಷ್ಕರ್ ವಿ


ಚೇತೇಶ್ವರ್ ಪೂಜಾರ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಸೆಮಿಫೈನಲ್ ಪಂದ್ಯ ಈಗ ಕುತೂಹಲ ಘಟ್ಟಕ್ಕೆ ಬಂದು ನಿಂತಿದೆ.

ಈ ಪಂದ್ಯದಲ್ಲಿ ಉತ್ತರ ವಲಯವು ಒಡ್ಡಿರುವ 215 ರನ್‌ಗಳ ಗೆಲುವಿನ ಗುರಿಯು ದಕ್ಷಿಣ ವಲಯಕ್ಕೆ ದೊಡ್ಡ ಸವಾಲೇನಲ್ಲ ಎಂಬುದು ಮೇಲ್ನೋಟಕ್ಕೆ ಕಾಣುತ್ತದೆ. ಪಂದ್ಯದಲ್ಲಿ ಇನ್ನೂ ಎರಡು ದಿನಗಳ ಸಮಯವೂ ಇದೆ. ಆದರೆ ಈ ಅವಧಿಯಲ್ಲಿ ಮಳೆಯ ಆಟವೇ ಹೆಚ್ಚಾಗಿ ನಡೆದರೆ ಮತ್ತು ಮೊದಲ ಇನಿಂಗ್ಸ್‌ನಲ್ಲಿ ಎಡವಿದಂತೆ ಈಗಲೂ ಬ್ಯಾಟರ್‌ಗಳು ಲಯ ತಪ್ಪಿದರೆ ನಿರಾಶೆ ಖಚಿತ.

ಪ್ರಥಮ ಇನಿಂಗ್ಸ್‌ನಲ್ಲಿ ಅನುಭವಿಸಿರುವ ಮೂರು ರನ್‌ಗಳ ಹಿನ್ನಡೆಯು ದಕ್ಷಿಣ ವಲಯಕ್ಕೆ ದುಬಾರಿಯಾಗಬಹುದು. ಉತ್ತರ ವಲಯಕ್ಕೆ ಈ ಪಂದ್ಯ ಡ್ರಾ ಆದರೂ ಫೈನಲ್ ಪ್ರವೇಶ ಲಭಿಸಲಿದೆ.

ಆದರೆ ದಕ್ಷಿಣ ತಂಡದಲ್ಲಿ ಉತ್ತಮ ಬ್ಯಾಟರ್‌ಗಳು ಇದ್ದಾರೆ. ಎದುರಾಳಿ ಬೌಲರ್‌ಗಳನ್ನು ತಾಳ್ಮೆ ಮತ್ತು ಏಕಾಗ್ರತೆಯಿಂದ ಎದುರಿಸಿದರೆ ಮಾತ್ರ ಗುರಿ ಸಾಧನೆ ಮಾಡುವುದು ಸಾಧ್ಯವಾಗಬಹುದು. ಪಂದ್ಯದ 3ನೇ ದಿನದಾಟದ ಸುಮಾರು ಒಂದೂವರೆ ಗಂಟೆಗಳ ಆಟವೂ ಮಳೆಯಿಂದಾಗಿ ನಡೆಯಲಿಲ್ಲ.

ಚಹಾ ವಿರಾಮದ ನಂತರ ದಕ್ಷಿಣ ವಲಯಕ್ಕೆ ಬ್ಯಾಟಿಂಗ್ ಮುಂದುವರಿಸಲು ಸಾಧ್ಯವಾಗಲಿಲ್ಲ. ಇದರಿಂದಾಗಿ ತಂಡವು 6.3 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 21 ರನ್ ಗಳಿಸಿದೆ. ಸಾಯಿ ಸುದರ್ಶನ್ (ಬ್ಯಾಟಿಂಗ್ 5) ಮತ್ತು ಮಯಂಕ್ ಅಗರವಾಲ್ (ಬ್ಯಾಟಿಂಗ್ 15) ಕ್ರೀಸ್‌ನಲ್ಲಿದ್ದಾರೆ.

ವೈಶಾಖಗೆ ಐದು ವಿಕೆಟ್: ಎರಡನೇ ದಿನದಾಟದಲ್ಲಿ ಎರಡು ವಿಕೆಟ್ ಕಳೆದುಕೊಂಡಿದ್ದ ಉತ್ತರ ವಲಯ ತಂಡವನ್ನು ದ್ವಿತಿಯ ಇನಿಂಗ್ಸ್‌ನಲ್ಲಿ 211 ರನ್‌ಗಳಿಗೆ ಕಟ್ಟಿಹಾಕುವಲ್ಲಿ ವೇಗಿ ವೈಶಾಖ ವಿಜಯಕುಮಾರ್ (76ಕ್ಕೆ5) ಯಶಸ್ವಿಯಾದರು. ಮೊದಲ ಇನಿಂಗ್ಸ್‌ನಲ್ಲಿ ಐದು ವಿಕೆಟ್ ಗೊಂಚಲು ಗಳಿಸಿದ್ದ ವಿದ್ವತ್ ಕಾವೇರಪ್ಪ (47ಕ್ಕೆ2) ಮತ್ತು ಎಡಗೈ ಸ್ಪಿನ್ನರ್ ಸಾಯಿಕಿಶೋರ್ (28ಕ್ಕೆ3) ಕೂಡ ವೈಶಾಖಗೆ ಉತ್ತಮ ಜೊತೆ ನೀಡಿದರು.

ಇನಿಂಗ್ಸ್‌ನ ಆರಂಭದಲ್ಲಿಯೇ ಮುಗ್ಗರಿಸಿದ್ದ ಉತ್ತರ ತಂಡಕ್ಕೆ ಪ್ರಭಸಿಮ್ರನ್ ಸಿಂಗ್ (63; 93ಎ) ಮತ್ತು ಹರ್ಷಿತ್ ರಾಣಾ (38; 36ಎ) ಅವರು ತಂಡದ ಮೊತ್ತವು ಇನ್ನೂರರ ಗಡಿ ದಾಟಲು ಕಾರಣರಾದರು.

ಪ್ರಭಸಿಮ್ರನ್ ಸಿಂಗ್, ನಿಶಾಂತ್ ಸಿಂಧು, ಪುಳ್ಕಿತ್ ನಾರಂಗ್ ಮತ್ತು ಜಯಂತ್ ಯಾದವ್ ವಿಕೆಟ್‌ಗಳನ್ನು ವೈಶಾಖ ಕಬಳಿಸಿದರು. ಗುರುವಾರ ಸಂಜೆ ಧ್ರುವ ಶೋರೆ ವಿಕೆಟ್ ಕೂಡ ಅವರ ಪಾಲಾಗಿತ್ತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಉತ್ತರ ವಲಯ: 58.3 ಓವರ್‌ಗಳಲ್ಲಿ198. ದಕ್ಷಿಣ ವಲಯ: 54.4 ಓವರ್‌ಗಳಲ್ಲಿ195. ಎರಡನೇ ಇನಿಂಗ್ಸ್: ಉತ್ತರ ವಲಯ: 56.4 ಓವರ್‌ಗಳಲ್ಲಿ 211(ಅಂಕಿತ್ ಖಲ್ಸಿ 29, ಪ್ರಭಸಿಮ್ರನ್ ಸಿಂಗ್ 63, ಅಂಕಿತ್ ಕುಮಾರ್ 26, ಹರ್ಷಿತ್ ರಾಣಾ 38, ವಿದ್ವತ್ ಕಾವೇರಪ್ಪ 47ಕ್ಕೆ2, ವೈಶಾಖ ವಿಜಯಕುಮಾರ್ 76ಕ್ಕೆ5). ದಕ್ಷಿಣ ವಲಯ: 6.3 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 21 (ಸಾಯಿ ಸುದರ್ಶನ್ ಬ್ಯಾಟಿಂಗ್ 5, ಮಯಂಕ್ ಅಗರವಾಲ್ ಬ್ಯಾಟಿಂಗ್ 5)

ಪೂಜಾರ ಶತಕ: ಪಶ್ಚಿಮಕ್ಕೆ ಬೃಹತ್ ಮುನ್ನಡೆ

ಚೇತೇಶ್ವರ್ ಪೂಜಾರ ಅಮೋಘ ಶತಕದ ಬಲದಿಂದ ಪಶ್ಚಿಮ ವಲಯ ತಂಡವು ದುಲೀಪ್ ಟ್ರೋಫಿ ಎರಡನೇ ಸೆಮಿಫೈನಲ್‌ನಲ್ಲಿ ಬೃಹತ್ ಮುನ್ನಡೆ ಗಳಿಸಿದೆ.

ನಗರ ಹೊರವಲಯದ ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಶುಕ್ರವಾರ ಪಶ್ಚಿಮ ವಲಯವು ಕೇಂದ್ರ ವಲಯದ ಎದುರು 384 ರನ್‌ಗಳ ಮುನ್ನಡೆ ಸಾಧಿಸಿದೆ. ಪೂಜಾರ (133; 278ಎ, 4X14, 6X1) ಶತಕ ದಾಖಲಿಸಿದರು.

ಪಶ್ಚಿಮ ವಲಯವು ದಿನದಾಟದ ಕೊನೆಗೆ 92 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 292 ರನ್ ಗಳಿಸಿದೆ.

ಗುರುವಾರ ಅರ್ಧಶತಕ ಗಳಿಸಿ ಕ್ರೀಸ್‌ನಲ್ಲಿದ್ದ ಪೂಜಾರ ಮೂರನೇ ದಿನದಾಟದಲ್ಲಿ ಬೌಲರ್‌ಗಳಿಗೆ ಕಠಿಣ ಸವಾಲೊಡ್ಡಿದರು.

ಉಳಿದ ಬ್ಯಾಟರ್‌ಗಳು ಹೆಚ್ಚು ರನ್ ಗಳಿಸಲಿಲ್ಲ. ಆದರೆ, ಒಂದು ಬದಿಯಲ್ಲಿ ವಿಕೆಟ್‌ಗಳು ಉರುಳುತ್ತಿದ್ದರೂ ಪೂಜಾರ ಮಾತ್ರ ದಿಟ್ಟವಾಗಿ ಆಡಿ ಶತಕ ಪೂರೈಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಪಶ್ಚಿಮ ವಲಯ: 92.5 ಓವರ್‌ಗಳಲ್ಲಿ 220. ಕೇಂದ್ರ ವಲಯ: 31 ಓವರ್‌ಗಳಲ್ಲಿ 128. ಎರಡನೇ ಇನಿಂಗ್ಸ್: ಪಶ್ಚಿಮವಲಯ: 92 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 292 (ಚೇತೇಶ್ವರ್ ಪೂಜಾರ 133, ಹಿತ್ ಪಟೇಲ್ 27, ಸೌರಭ್ ಕುಮಾರ್ 79ಕ್ಕೆ4, ಸಾರಾಂಶ್ ಜೈನ್ 56ಕ್ಕೆ3)

ಕಮಿನ್ಸ್ ಮಿಂಚಿನ ದಾಳಿ

ಆ್ಯಷಸ್: ಬೆನ್ ಸ್ಟೋಕ್ಸ್ ಅರ್ಧಶತಕ; ಇಂಗ್ಲೆಂಡ್‌ಗೆ ಹಿನ್ನಡೆ


ಆಸ್ಟ್ರೇಲಿಯಾದ ನಾಯಕ ಮತ್ತು ಮಧ್ಯಮವೇಗಿ ಪ್ಯಾಟ್ ಕಮಿನ್ಸ್ ಹಾಗೂ ಸಹ ಆಟಗಾರರು –ಎಎಫ್‌ಪಿ ಚಿತ್ರ

ಲೀಡ್ಸ್ (ಎಎಫ್‌ಪಿ/ಪಿಟಿಐ): ಆಸ್ಟ್ರೇಲಿಯಾ ತಂಡದ ನಾಯಕ ಮತ್ತು ವೇಗಿ ಪ್ಯಾಟ್ ಕಮಿನ್ಸ್ ಪರಿಣಾಮಕಾರಿ ದಾಳಿಯ ಮುಂದೆ ಇಂಗ್ಲೆಂಡ್ ತಂಡವು ಕುಸಿಯಿತು.

ಹೆಡಿಂಗ್ಲೆ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಆ್ಯಷಸ್ ಸರಣಿಯ ಮೂರನೇ ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲಿ ಆಸ್ಟ್ರೇಲಿಯಾ ತಂಡವು 26 ರನ್‌ಗಳ ಅಲ್ಪಮುನ್ನಡೆ ಗಳಿಸಿತು. ಪ್ಯಾಟ್ ಕಮಿನ್ಸ್ (91ಕ್ಕೆ6) ಅವರ ಅಮೋಘ ಬೌಲಿಂಗ್ ಮುಂದೆ ಇಂಗ್ಲೆಂಡ್ ತಂಡವು 52.3 ಓವರ್‌ಗಳಲ್ಲಿ 237 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಆತಿಥೇಯ ತಂಡದ ನಾಯಕ ಬೆನ್ ಸ್ಟೋಕ್ಸ್ (80; 108ಎ, 4X6, 6X5) ಏಕಾಂಗಿ ಹೋರಾಟ ಮಾಡಿದರು.

ಮೊದಲ ಇನಿಂಗ್ಸ್ ಬೌಲಿಂಗ್‌ನಲ್ಲಿ ಮಿಂಚಿದ್ದ ಮಾರ್ಕ್ ವುಡ್ ಕೂಡ ಕೊನೆಯಲ್ಲಿ 24 ರನ್ ಗಳ ಕಾಣಿಕೆ ನೀಡಿದರು. ಆದರೂ ಮುನ್ನಡೆ ಸಾಧಿ ಸಲು ಸಾಧ್ಯವಾಗಲಿಲ್ಲ. ಆಸ್ಟ್ರೇಲಿಯಾ ತಂಡವು ಮೊದಲ ಇನಿಂಗ್ಸ್‌ನಲ್ಲಿ ಗಳಿಸಿದ್ದ 263 ರನ್‌ಗಳನ್ನು ಚುಕ್ತಾ ಮಾಡಲಿಲ್ಲ.

ಈ ಇನಿಂಗ್ಸ್‌ನಲ್ಲಿ ಅಗ್ರ ಕ್ರಮಾಂಕದ ಬ್ಯಾಟರ್‌ಗಳಲ್ಲಿ ಜ್ಯಾಕ್ ಕ್ರಾಲಿ (33 ರನ್) ಬಿಟ್ಟರೆ ಉಳಿದವರಿಂದ ಉತ್ತಮ ಆಟ ಮೂಡಿಬರಲಿಲ್ಲ. ಜೋ ರೂಟ್ ಸೇರಿದಂತೆ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದರು. ಇದರಿಂದಾಗಿ ತಂಡವು 142 ರನ್‌ಗಳಿಗೆ ಏಳು ವಿಕೆಟ್‌ಗಳನ್ನು ಕಳೆದುಕೊಂಡಿತ್ತು.

ಆದರೆ ಬೆನ್ ಸ್ಟೋಕ್ಸ್ ದಿಟ್ಟತನದಿಂದ ಆಡಿದರು. ಅಮೋಘ ಬ್ಯಾಟಿಂಗ್ ಮಾಡಿದರು ಅವರು ಹೊಡೆದ ಐದು ಸಿಕ್ಸರ್‌ಗಳೂ ಆಕರ್ಷಕವಾಗಿದ್ದವು.

ಚಹಾವಿರಾಮದ ಹೊತ್ತಿಗೆ ಇಂಗ್ಲೆಂಡ್ ತಂಡವನ್ನು ಆಲೌಟ್ ಮಾಡುವಲ್ಲಿ ಕಮಿನ್ಸ್ ಬಳಗ ಯಶಸ್ವಿಯಾಯಿತು. ಪಿಚ್ ಸ್ಥಿತಿಯನ್ನು ಸಮರ್ಥವಾಗಿ ಬಳಸಿಕೊಂಡ ಕಮಿನ್ಸ್ ಸ್ವಿಂಗ್ ಮತ್ತು ಶಾರ್ಟ್ ಎಸೆತಗಳ ಮೂಲಕ ಎದುರಾಳಿಗಳನ್ನು ಕಂಗೆಡಿಸಿದರು.

ಎರಡನೇ ಇನಿಂಗ್ಸ್ ಆರಂಭಿಸಿರುವ ಆಸ್ಟ್ರೇಲಿಯಾ ತಂಡವು 47 ಓವರ್‌ಗಳಲ್ಲಿ 4 ವಿಕೆಟ್‌ಗೆ 116 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 60.4 ಓವರ್‌ಗಳಲ್ಲಿ 263. ಇಂಗ್ಲೆಂಡ್: 52.3 ಓವರ್‌ಗಳಲ್ಲಿ 237 (ಬೆನ್ ಸ್ಟೋಕ್ಸ್ 80, ಮಾರ್ಕ್ ವುಡ್ 24, ಮಿಚೆಲ್ ಸ್ಟಾರ್ಕ್ 59ಕ್ಕೆ2, ಪ್ಯಾಟ್ ಕಮಿನ್ಸ್ 91ಕ್ಕೆ6) 2ನೇ ಇನಿಂಗ್ಸ್: ಆಸ್ಟ್ರೇಲಿಯಾ: 47 ಓವರ್‌ಗಳಲ್ಲಿ 4 ವಿಕೆಟ್‌ಗೆ 116 (ಉಸ್ಮಾನ್ ಖ್ವಾಜಾ 43, ಮಾರ್ನಸ್ ಲಾಬುಷೇನ್ 33, ಟ್ರಾವಿಸ್ ಹೆಡ್ ಬ್ಯಾಟಿಂಗ್ 18, ಮಿಚೆಲ್ ಮಾರ್ಷ್ ಬ್ಯಾಟಿಂಗ್ 17, ಮೊಯಿನ್ ಅಲಿ 34ಕ್ಕೆ2)

‘ಏಷ್ಯನ್ ಗೇಮ್ಸ್: ಚಿನ್ನದ ಮೇಲೆ ಕಣ್ಣು’

ಪ್ರಜಾವಾಣಿ ವಾರ್ತೆ


ಕ್ರೇಗ್ ಫುಲ್ಟನ್

ಬೆಂಗಳೂರು: ‘ಮುಂಬರುವ ಏಷ್ಯನ್ ಗೇಮ್ಸ್‌ನಲ್ಲಿ ಚಾಂಪಿಯನ್ ಆಗಿ, 2024ರ ಪ್ಯಾರಿಸ್ ಒಲಿಂಪಿಕ್ಸ್‌ಗೆ ನೇರ ಅರ್ಹತೆ ಪಡೆಯುವ ಗುರಿ ಇಟ್ಟುಕೊಂಡಿದ್ದೇವೆ’ ಎಂದು ಭಾರತ ಹಾಕಿ ತಂಡದ ಕೋಚ್ ಕ್ರೇಗ್ ಫುಲ್ಟನ್ ಹೇಳಿದ್ದಾರೆ.

‘ಏಷ್ಯನ್ ಗೇಮ್ಸ್ ಗೆದ್ದು ಒಲಿಂಪಿಕ್ಸ್‌ಗೆ ನೇರ ಅರ್ಹತೆ ಪಡೆಯುವ ಉತ್ತಮ ಅವಕಾಶ ನಮ್ಮ ಮುಂದಿದೆ. ಒಲಿಂಪಿಕ್ಸ್ ಅರ್ಹತಾ ಟೂರ್ನಿಯಲ್ಲಿ ಆಡಲು ನಾವು ಬಯಸುವುದಿಲ್ಲ. ಏಷ್ಯನ್ ಗೇಮ್ಸ್‌ಗೆ ತಕ್ಕ ಸಿದ್ಧತೆ ನಡೆಸುತ್ತಿದ್ದೇವೆ’ ಎಂದು ಶುಕ್ರವಾರ ವರ್ಚುವಲ್ ಆಗಿ ನಡೆದ ಸಂವಾದದಲ್ಲಿ ತಿಳಿಸಿದರು.

ಭಾರತ ತಂಡವು ಈ ತಿಂಗಳ ಕೊನೆಯಲ್ಲಿ ಸ್ಪೇನ್‌ನಲ್ಲಿ ನಡೆಯಲಿರುವ ನಾಲ್ಕು ರಾಷ್ಟ್ರಗಳ ಟೂರ್ನಿಯಲ್ಲಿ ಪಾಲ್ಗೊಳ್ಳಲಿದೆ. ಇಂಗ್ಲೆಂಡ್, ನೆದರ್ಲೆಂಡ್ಸ್ ಮತ್ತು ಅತಿಥೇಯ ಸ್ಪೇನ್ ಈ ಟೂರ್ನಿಯಲ್ಲಿ ಆಡಲಿದೆ. ಆ ಬಳಿಕ ಚೆನ್ನೈನಲ್ಲಿ ನಡೆಯಲಿರುವ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಪಾಲ್ಗೊಳ್ಳಲಿದೆ.

‘ತಂಡವು ಯಶಸ್ಸಿನ ಹಾದಿಯಲ್ಲಿ ಮುನ್ನಡೆಯಲು ಹೊಸ ಮಾದರಿಯ ಆಟವನ್ನು ಅಳವಡಿಸಿಕೊಳ್ಳುವ ಪ್ರಯತ್ನದಲ್ಲಿದ್ದೇವೆ. ಅದು ಇನ್ನೂ ಆವಿಷ್ಕಾರದ ಹಂತದಲ್ಲಿದೆ’ ಎಂದರು.

‘ಪ್ಯಾಡಿ ಅಪ್ಟನ್ ಅವರನ್ನು ಮೆಂಟಲ್ ಕಂಡಿಷನಿಂಗ್ ಕೋಚ್ ಅಗಿ ನೇಮಕ ಮಾಡಿರುವುದು ನೆರವು ನೀಡಲಿದೆ. ಅವರು ಅಗತ್ಯ ಸಲಹೆ, ಸೂಚನೆ ನೀಡಲಿದ್ದಾರೆ. ಆಟಗಾರರಿಗೆ ಇತರರ ಸಲಹೆಗಳನ್ನು ಕೇಳುವ ಅನಿವಾರ್ಯತೆ ಇರುವುದಿಲ್ಲ’ ಎಂದು ನುಡಿದರು.

‘ಜಿಮ್‌ನಲ್ಲಿ ತಂಡದ ತರಬೇತಿಯನ್ನು ಅವರು ವೀಕ್ಷಿಸುತ್ತಿದ್ದಾರೆ. ವೈಯಕ್ತಿಕವಾಗಿಯೂ ಆಟಗಾರರ ಜತೆ ಮಾತನಾಡಿದ್ದಾರೆ. ಈ ಹಂತದವರೆಗೆ ನಾವು ಮಾಡಿದ್ದಕ್ಕಿಂತ ಉತ್ತಮ ಸಾಧನೆ ಮಾಡಲು ಅವರು ನೆರವಾಗಲಿದ್ದಾರೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸ್ಪೇನ್‌ನಲ್ಲಿ ನಡೆಯುವ ಟೂರ್ನಿಯಲ್ಲಿ ಪಾಲ್ಗೊಳ್ಳಲಿರುವ 24 ಸದಸ್ಯರ ಭಾರತ ತಂಡವನ್ನು ಹರ್ಮನ್‌ಪ್ರೀತ್ ಸಿಂಗ್ ಮುನ್ನಡೆಸಲಿದ್ದಾರೆ.

ಏಷ್ಯನ್ ಗೇಮ್ಸ್‌ಗೆ ಕ್ರಿಕೆಟ್ ತಂಡ: ಬಿಸಿಸಿಐ ಅನುಮೋದನೆ

ಮುಂಬೈ (ಪಿಟಿಐ): ಸೆಪ್ಟೆಂಬರ್- ಅಕ್ಟೋಬರ್‌ನಲ್ಲಿ ಚೀನಾದ ಹ್ಯಾಂಗ್‌ಝೌನಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ಗೆ ಪುರುಷರ ಮತ್ತು ಮಹಿಳಾ ಕ್ರಿಕೆಟ್ ತಂಡಗಳು ಭಾಗವಹಿಸುವುದಕ್ಕೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಶುಕ್ರವಾರ ಅನುಮೋದನೆ ನೀಡಿದೆ.

ಸೆ.28ರಿಂದ ಪ್ರಾರಂಭವಾಗುವ ಪುರುಷರ ಕ್ರಿಕೆಟ್ ಟೂರ್ನಿಗೆ ಎರಡನೇ ದರ್ಜೆಯ ಭಾರತ ತಂಡವು ಭಾಗವಹಿಸಲಿದೆ. ಸೆ.19ರಿಂದ ಶುರುವಾಗುವ ಮಹಿಳೆಯ ಕ್ರಿಕೆಟ್ ಟೂರ್ನಿಗೂ ಬಲಿಷ್ಠವಾದ ತಂಡವನ್ನು ರವಾನಿಸಲಿದೆ.

ಏಷ್ಯನ್ ಗೇಮ್ಸ್ ಇತಿಹಾಸದಲ್ಲಿ ಕೇವಲ ಮೂರು ಬಾರಿ ಕ್ರಿಕೆಟ್ ಆಯೋಜಿಸಲಾಗಿದೆ. ಕೊನೆಯ ಬಾರಿಗೆ 2014ರಲ್ಲಿ ಇಂಚಿಯಾನ್‌ನಲ್ಲಿ ಕ್ರಿಕೆಟ್ ಇತ್ತಾದರೂ ಅದರಲ್ಲಿ ಭಾರತ ತಂಡ ಭಾಗವಹಿಸಿರಲಿಲ್ಲ. ಅ.5ರಿಂದ ಏಕದಿನ ವಿಶ್ವಕಪ್ ಟೂರ್ನಿಯು ಆರಂಭಗೊಳ್ಳಲಿದ್ದು, ಅದೇ ಸಂದರ್ಭದಲ್ಲಿ ಏಷ್ಯನ್ ಗೇಮ್ಸ್ ನಡೆಯಲಿದೆ.

ಇಂಪ್ಯಾಕ್ಟ್ ಪ್ಲೇಯರ್ ನಿಯಮಕ್ಕೂ ಒಪ್ಪಿಗೆ: ಐಪಿಎಲ್ ಟೂರ್ನಿಯ 16ನೇ ಆವೃತ್ತಿಯಲ್ಲಿ ಜಾರಿಗೊಳಿಸಲಾಗಿದ್ದ ಇಂಪ್ಯಾಕ್ಟ್ ಪ್ಲೇಯರ್ ನಿಯಮವನ್ನು ಅ.16ರಿಂದ ಆರಂಭವಾಗುವ ಸೈಯದ್ ಮುಷ್ತಾಕ್ ಅಲಿ ಟಿ20 ಟ್ರೋಫಿ ಟೂರ್ನಿಯಲ್ಲಿ ಬಳಸಲು ಬಿಸಿಸಿಐ ಅಪೆಕ್ಸ್ ಮಂಡಳಿ ಒಪ್ಪಿಗೆ ನೀಡಿದೆ.

ಹಾಕಿ: ಕಸ್ಟಮ್ಸ್ ತಂಡಕ್ಕೆ ಗೆಲುವು

ಬೆಂಗಳೂರು: ಕಸ್ಟಮ್ಸ್ ಅಂಡ್ ಜಿಎಸ್‌ಟಿ ತಂಡದವರು ಏಳನೇ ಆವೃತ್ತಿಯ ಹಾಕಿ ಕರ್ನಾಟಕ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಡಿವೈಇಎಸ್ ತಂಡದವರನ್ನು 6–1ರಿಂದ ಮಣಿಸಿದರು.

ಎಫ್‌ಎಂಕೆಎಂಸಿ ಹಾಕಿ ಅರೆನಾದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಕಸ್ಟಮ್ಸ್ ತಂಡದ ಪರವಾಗಿ ಚೆಲ್ಸಿಯಾ ಮೇದಪ್ಪ (2, 50ನೇ ನಿಮಿಷ), ಅದ್ವೈತ್ ನಾಚಪ್ಪ (24ನೇ ನಿ), ಪಿ.ಎಂ. ಮಂದಣ್ಣ (28ನೇ ನಿ), ಐ.ಆರ್. ನಾಚಪ್ಪ (47ನೇ ನಿ) ಮತ್ತು ಪಿ.ಎಲ್. ತಿಮ್ಮಣ್ಣ (57ನೇ ನಿ) ಗೋಲು ದಾಖಲಿಸಿದರು. ಎದುರಾಳಿ ತಂಡದ ವೃಷಭ್ (13 ನಿ) ಹೊಡೆದರು.

ಪೊಲೀಸ್, ಅರಣ್ಯ ಇಲಾಖೆ: ಶೇ 3 ಕ್ರೀಡಾ ಮೀಸಲಾತಿ

ರಾಜ್ಯ ಬಜೆಟ್: ಬೆಂಗಳೂರಿನಲ್ಲಿ ಬ್ಯಾಸ್ಕೆಟ್‌ಬಾಲ್, ಮೈಸೂರಿನಲ್ಲಿ ವೆಲೊಡ್ರಾಮ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರವು ಶುಕ್ರವಾರ ಮಂಡಿಸಿದ ಬಜೆಟ್‌ನಲ್ಲಿ ಕ್ರೀಡಾ ಕ್ಷೇತ್ರಕ್ಕೂ ಕೆಲವು ಯೋಜನೆಗಳನ್ನು ಪ್ರಕಟಿಸಲಾಗಿದೆ.

ಬಹುದಿನಗಳ ಬೇಡಿಕೆಯಾಗಿದ್ದ ಪೊಲೀಸ್ ಹಾಗೂ ಅರಣ್ಯ ಇಲಾಖೆಗಳ ಉದ್ಯೋಗಗಳಲ್ಲಿ ಕ್ರೀಡಾಪಟುಗಳಿಗೆ ಶೇ 3ರ ಮೀಸಲಾತಿ ನೀಡಲಾಗಿದೆ. ಅಲ್ಲದೇ ಒಲಿಂಪಿಕ್ ಮತ್ತು ಪ್ಯಾರಾಲಿಂಪಿಕ್ ಕೂಟಗಳ ಪದಕವಿಜೇತರಿಗೆ ಎ ಗುಂಪಿನ ಹುದ್ದೆ ಹಾಗೂ ಏಷ್ಯನ್, ಕಾಮನ್‌ವೆಲ್ತ್ ಕ್ರೀಡಾಕೂಟಗಳಲ್ಲಿ ವಿಜಯಿಯಾದವರಿಗೆ ಬಿ ಗುಂಪಿನ ಹುದ್ದೆಗಳಿಗೆ ನೇಮಕ ಮಾಡಲಾಗುವುದು.

ಇದಲ್ಲದೇ ಕ್ರೀಡಾ ಸೌಲಭ್ಯಗಳ ಅಭಿವೃದ್ಧಿಗೂ ಒತ್ತು ನೀಡಲಾಗಿದೆ. ಬೆಂಗಳೂರಿನಲ್ಲಿ ಬ್ಯಾಸ್ಕೆಟ್‌ಬಾಲ್ ಪ್ರಾದೇಶಿಕ ತರಬೇತಿ ಕೇಂದ್ರ ಆರಂಭಿಸಲಾಗುವುದು. ಇಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಿಸಲು ರಾಜ್ಯದ ಕ್ರೀಡಾಪಟುಗಳಿಗೆ ತರಬೇತಿ ನೀಡಲಾಗುವುದು. ಮೈಸೂರಿನಲ್ಲಿ ಸೈಕ್ಲಿಂಗ್ ವೆಲೊಡ್ರಾಮ್ ನಿರ್ಮಿಸಲಾಗುವುದು. ಉಭಯ ಸೌಲಭ್ಯಗಳನ್ನು ತಲಾ ₹ 10 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲಾಗುವುದು.


ಕ್ರೀಡಾ ಚಟುವಟಿಕೆಗಳಲ್ಲಿ ಅಂಗವಿಕಲರು ಮತ್ತು ಮಹಿಳೆ ಯರ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಅಗತ್ಯವಾದ ಮೂಲಭೂತ ಸೌಕರ್ಯಗಳು ಮತ್ತು ನುರಿತ ತರಬೇತುದಾರರ ಸೇವೆಯನ್ನು ಒದಗಿಸಲು ₹ 10 ಕೋಟಿ ಅನುದಾನವನ್ನು ಒದಗಿಸಲಾಗುವುದು.

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಕ್ರೀಡಾ ವಸ್ತು ಸಂಗ್ರಹಾಲಯ ಸ್ಥಾಪಿಸಲು ₹ 5 ಕೋಟಿ ಅನುದಾನ ಒದಗಿಸಲಾಗುವುದು ಮತ್ತು ಕ್ರೀಡಾಪಟುಗಳಿಗೆ ತಂಗಲು ಅನುಕೂಲವಾಗುವಂತೆ ಸುಸಜ್ಜಿತವಾದ ಕ್ರೀಡಾ ವಸತಿ ನಿಲಯವನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಿಸಲಾಗುವುದು. ಇದಕ್ಕಾಗಿ ₹ 10 ಕೋಟಿ ಅನುದಾನ ಒದಗಿಸಲಾಗುವುದು.

ಕರ್ನಾಟಕ ಈಜು ಸಂಸ್ಥೆಯ ಸಹಭಾಗಿತ್ವದಲ್ಲಿ ರಾಜ್ಯದ ಪ್ರತಿಭಾವಂತ ಈಜುಪಟುಗಳಿಗೆ ಅಂತಾ ರಾಷ್ಟ್ರೀಯ ದರ್ಜೆಯ ತರಬೇತಿ ನೀಡಲು, ಪ್ರತಿವರ್ಷ ₹ 2 ಕೋಟಿಯಂತೆ ಐದು ವರ್ಷಗಳವರೆಗೆ ಅನುದಾನ ನೀಡಲಾಗುವುದು ಎಂದು ಉಲ್ಲೇಖಿಸಲಾಗಿದೆ.

ವಿಂಬಲ್ಡನ್ ಟೆನಿಸ್: ಸಬಲೆಂಕಾ, ಕ್ವಿಟೋವಾ ಮುನ್ನಡೆ

ಮೂರನೇ ಸುತ್ತಿಗೆ ಅಲ್ಕರಾಜ್


ಗೆಲುವಿನ ಸಂಭ್ರಮದಲ್ಲಿ ಆರಿನಾ ಸಬಲೆಂಕಾ –ಎಎಫ್‌ಪಿ ಚಿತ್ರ

ಲಂಡನ್ (ಎಎಫ್‌ಪಿ/ ರಾಯಿಟರ್ಸ್): ವಿಶ್ವದ ಅಗ್ರಮಾನ್ಯ ಆಟಗಾರ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಅವರು ವಿಂಬಲ್ಡನ್ ಟೆನಿಸ್ ಟೂರ್ನಿಯಲ್ಲಿ ನೇರ ಸೆಟ್‌ಗಳ ಗೆಲುವಿನೊಂದಿಗೆ ಮೂರನೇ ಸುತ್ತಿಗೆ ಮುನ್ನಡೆದರು.

ಶುಕ್ರವಾರ ನಡೆದ ಪಂದ್ಯದಲ್ಲಿ ವೇಗದ ಸರ್ವ್ ಮತ್ತು ಪರಿಣಾಮಕಾರಿ ರಿಟರ್ನ್‌ಗಳ ಮೂಲಕ ಮಿಂಚಿದ ಅಲ್ಕರಾಜ್ 6–4, 7–6, 6–3 ರಿಂದ ಫ್ರಾನ್ಸ್‌ನ ಅಲೆಕ್ಸಾಂಡರ್ ಮುಲ್ಲರ್ ವಿರುದ್ಧ ಗೆದ್ದರು.

ಮೊದಲ ಸೆಟ್‌ನಲ್ಲಿ ಒಂದು ಸಲ ಎದುರಾಳಿಯ ಸರ್ವ್ ಬ್ರೇಕ್ ಮಾಡಿದ ಅಲ್ಕರಾಜ್ 6–4 ರಲ್ಲಿ ಜಯಿಸಿದರು. ಎರಡನೇ ಸೆಟ್‌ನ್ನು ಟೈಬ್ರೇಕರ್‌ನಲ್ಲಿ ಗೆದ್ದು ಪಂದ್ಯದ ಮೇಲೆ ಹಿಡಿತ ಬಿಗಿಗೊಳಿಸಿದರು. ಮೂರನೇ ಸೆಟ್‌ನ ಎಂಟನೇ ಗೇಮ್‌ನಲ್ಲಿ ಎದುರಾಳಿಯ ಸರ್ವ್ ಬ್ರೇಕ್ ಮಾಡಿ, ಮುಂದಿನ ಗೇಮ್ ಗೆದ್ದು ಪಂದ್ಯ ತಮ್ಮದಾಗಿಸಿಕೊಂಡರು. ಪಂದ್ಯದಲ್ಲಿ 41 ಸ್ವಯಂಕೃತ ತಪ್ಪುಗಳನ್ನು ಮಾಡಿದರೂ ಅಲ್ಕರಾಜ್, ಎದುರಾಳಿಗೆ ಒಂದೂ ಸೆಟ್ ಬಿಟ್ಟುಕೊಡಲಿಲ್ಲ.

ಮೂರನೇ ಶ್ರೇಯಾಂಕದ ಆಟಗಾರ ರಷ್ಯಾದ ಡೇನಿಯಲ್ ಮೆಡ್ವೆಡೇವ್ ಮತ್ತು ಆರನೇ ಶ್ರೇಯಾಂಕದ ಆಟಗಾರ ಡೆನ್ಮಾರ್ಕ್‌ನ ಹೋಲ್ಗರ್ ರೂನ್ ಅವರೂ ಮೂರನೇ ಸುತ್ತಿಗೆ ಲಗ್ಗೆಯಿಟ್ಟರು.

ಮೆಡ್ವೆಡೇವ್ 6-3, 6-3, 7-6 ರಿಂದ ಫ್ರಾನ್ಸ್‌ನ ಅಡ್ರಿಯಾನ್ ಮೊನಾರಿನೊ ವಿರುದ್ಧ ಗೆದ್ದರೆ, ರೂನ್ 6–3, 7–6, 6–4 ರಲ್ಲಿ ಸ್ಪೇನ್‌ನ ಕಾರ್ಬಲೆಸ್ ಬಯೆನಾ ಅವರನ್ನು ಸೋಲಿಸಿದರು.

ಸಬಲೆಂಕಾ, ಕ್ವಿಟೋವಾ ಮುನ್ನಡೆ: ಬೆಲಾರಸ್‌ನ ಅರಿನಾ ಸಬಲೆಂಕಾ ಮತ್ತು ಜೆಕ್ ರಿಪಬ್ಲಿಕ್‌ನ ಪೆಟ್ರಾ ಕ್ವಿಟೊವಾ ಅವರು ಮಹಿಳೆಯರ ಸಿಂಗಲ್ಸ್ ವಿಭಾಗದ ಮೂರನೇ ಸುತ್ತಿಗೆ ಮುನ್ನಡೆದರು.

ಮೊದಲ ಸೆಟ್ ಸೋತರೂ ತಿರುಗೇಟು ನೀಡಿದ ಎರಡನೇ ಶ್ರೇಯಾಂಕದ ಆಟಗಾರ್ತಿ ಸಬಲೆಂಕಾ 2-6, 7-5, 6-2 ರಿಂದ ಫ್ರಾನ್ಸ್‌ನ ವರ್ವರಾ ಗ್ರಶೇವಾ ಅವರನ್ನು ಮಣಿಸಿದರು. ಈ ಹೋರಾಟ ಒಂದು ಗಂಟೆ 58 ನಿಮಿಷ ನಡೆಯಿತು.

ಆಸ್ಟ್ರೇಲಿಯಾ ಓಪನ್ ಚಾಂಪಿಯನ್ ಸಬಲೆಂಕಾ ನಿರ್ಣಾಯಕ ಸೆಟ್‌ನಲ್ಲಿ ಎರಡು ಸಲ ಎದುರಾಳಿಯ ಸರ್ವ್ ಬ್ರೇಕ್ ಮಾಡಿ 5–2 ರಲ್ಲಿ ಮೇಲುಗೈ ಸಾಧಿಸಿದರು. ಆ ಬಳಿಕ ಏಸ್ ಸಿಡಿಸಿ ಪಂದ್ಯ ಗೆದ್ದರು. ಮುಂದಿನ ಸುತ್ತಿನಲ್ಲಿ ಅವರು ರಷ್ಯಾದ ಅನಾ ಬ್ಲಿಂಕೊವಾ ವಿರುದ್ಧ ಪೈಪೋಟಿ ನಡೆಸುವರು.

ಬ್ಲಿಂಕೋವಾ ಅವರು ಎರಡನೇ ಸುತ್ತಿನಲ್ಲಿ 7–5, 6–3 ರಲ್ಲಿ ರೊಮೇನಿಯದ ಐರಿನಾ ಕ್ಯಾಮಿಲಿಯಾ ಬೆಗು ಅವರನ್ನು ಸೋಲಿಸಿದರು. ಇತರ ಪಂದ್ಯಗಳಲ್ಲಿ ಅಮೆರಿಕದ ಮ್ಯಾಡಿಸನ್ ಕೀಸ್ 7–5, 6–3 ರಿಂದ ಸ್ವಿಟ್ಜರ್‌ಲೆಂಡ್‌ನ ವಿಕ್ಟೋರಿಯಾ ಗೊಲುಬಿಚ್ ವಿರುದ್ಧ; ಏಕ್ತರೀನಾ ಅಲೆಕ್ಸಾಂಡ್ರೊವಾ 6–7, 7–6, 7–6 ರಿಂದ ಅಮೆರಿಕದ ಮ್ಯಾಡಿಸನ್ ಬ್ರೆಂಗ್ಲ್ ವಿರುದ್ಧ; ಉಕ್ರೇನ್‌ನ ಮಾರ್ಟಾ ಕೊತ್ಸುಕ್ 6–2, 1–0 ರಿಂದ ಪೌಲಾ ಬಡೊಸಾ ವಿರುದ್ಧ ಗೆದ್ದರು.

ಪ್ರಧಾನ ಸುತ್ತಿಗೆ ಮಾನಸ್

ಭಾರತದ ಮಾನಸ್ ಧಾಮನೆ ಅವರು ಬಾಲಕರ ಸಿಂಗಲ್ಸ್ ವಿಭಾಗದ ಪ್ರಧಾನ ಸುತ್ತು ಪ್ರವೇಶಿಸಿದರು. ಅರ್ಹತಾ ಹಂತದ ಎರಡನೇ ಸುತ್ತಿನಲ್ಲಿ ಅವರು 6–2, 6–7, 10–8 ರಲ್ಲಿ ಟರ್ಕಿಯ ಅತಾಕನ್ ಕರಹಾನ್ ಅವರನ್ನು ಮಣಿಸಿದರು. ಭಾರತದ ಇನ್ನೊಬ್ಬ ಆಟಗಾರ ಆರ್ಯನ್ ಶಾ ಎರಡನೇ ಸುತ್ತಿನಲ್ಲಿ ಸೋತು ಪ್ರಧಾನ ಹಂತಕ್ಕೇರಲು ವಿಫಲರಾದರು.

ಮಹಿ ಜನ್ಮದಿನಕ್ಕೆ ಸಪ್ತ ಗೌರವ


ಮಹೇಂದ್ರ ಸಿಂಗ್ ಧೋನಿ

ನವದೆಹಲಿ (ಪಿಟಿಐ): ‘ನಿಮ್ಮ ಹೆಲಿಕಾಪ್ಟರ್ ಶಾಟ್‌ಗಳಂತೆಯೇ ನೀವು ಕೂಡ ಸದಾ ಉತ್ತುಂಗದಲ್ಲಿ ವಿಹರಿಸಿ’–

ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಶುಕ್ರವಾರ 42ನೇ ಜನ್ಮದಿನ ಆಚರಿಸಿಕೊಂಡ ಮಹೇಂದ್ರಸಿಂಗ್ ಧೋನಿಯವರಿಗೆ ಶುಭಾಶಯ ಕೋರಿದ್ದು ಹೀಗೆ. ಸಚಿನ್ ತಮ್ಮ ಸಾಮಾಜಿಕ ಜಾಲತಾಣದಲ್ಲಿ ಧೋನಿಯೊಂದಿಗೆ ಇರುವ ಸೆಲ್ಫಿಯೊಂದಿಗೆ ಈ ಒಕ್ಕಣೆಯನ್ನು ಬರೆದಿದ್ದಾರೆ.

ಭಾರತ ಕ್ರಿಕೆಟ್ ಕಂಡ ಯಶಸ್ವಿ ನಾಯಕರಲ್ಲಿ ಒಬ್ಬರಾಗಿರುವ ಧೋನಿ ಅವರಿಗೆ ತೆಂಡೂಲ್ಕರ್, ಹರಭಜನ್ ಸಿಂಗ್ ಮತ್ತು ವೀರೇಂದ್ರ ಸೆಹ್ವಾಗ್ ಸೇರಿದಂತೆ ದೇಶ, ವಿದೇಶಗಳ ಹಲವು ಖ್ಯಾತನಾಮ ಕ್ರಿಕೆಟಿಗರು ಶುಭಾಶಯ ಕೋರಿದ್ದಾರೆ. ಧೋನಿ ಕ್ರಿಕೆಟ್‌ನಲ್ಲಿ ಧರಿಸುವ ಪೋಷಾಕಿನ ಮೇಲಿರುವ ಏಳು ಅಂಕಿಯನ್ನೇ ಕೇಂದ್ರವಾಗಿಟ್ಟುಕೊಂಡ ಸಂದೇಶವನ್ನು ಸೆಹ್ವಾಗ್ ಟ್ವೀಟ್ ಮಾಡಿದ್ದಾರೆ.

‘ಸೂರ್ಯದೇವನ ಭವ್ಯ ರಥವನ್ನು ಎಳೆಯಲು ಏಳು ಕುದುರೆಗಳು ಇರುತ್ತವೆ. ಋಗ್ವೇದದಲ್ಲಿ ವಿಶ್ವದ ಏಳು ಭಾಗಗಳು, ಏಳು ಋತುಗಳು, ಸಪ್ತ ಕೋಟೆಗಳು, ಸಪ್ತ ಸ್ವರಗಳು, ಸಪ್ತಪದಿ ಮತ್ತು ವಿಶ್ವದ ಏಳು ಅದ್ಭುತಗಳು ಇವೆ. ಇದೀಗ 7ನೇ ಮಾಸದ ಏಳನೇ ದಿನ ಅಗ್ರಗಣ್ಯ ಎಂ.ಎಸ್. ಧೋನಿ ಜನ್ಮದಿನವಿದೆ’ ಎಂದು ಸೆಹ್ವಾಗ್ ಬರೆದಿದ್ದಾರೆ. ಈ ಸಂದೇಶಕ್ಕೆ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ.

ಚೆಸ್: ಕಾರ್ಲ್‌ಸನ್‌ಗೆ ಮಣಿದ ಆನಂದ್


ಮ್ಯಾಗ್ನಸ್ ಕಾರ್ಲ್‌ಸನ್

ಜಗ್ರೆಬ್ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ವಿಶ್ವನಾಥನ್ ಆನಂದ್ ಅವರಿಗೆ ಸೂಪರ್ ಯುನೈಟೆಡ್ ರ‍್ಯಾಪಿಡ್ ಮತ್ತು ಬ್ಲಿಟ್ಜ್ ಚೆಸ್ ಟೂರ್ನಿಯ ಎರಡನೇ ದಿನ ಮಿಶ್ರ ಫಲ ದೊರೆಯಿತು. ಮೂರು ಪಂದ್ಯಗಳಲ್ಲಿ ಕ್ರಮವಾಗಿ ಗೆಲುವು, ಡ್ರಾ ಮತ್ತು ಸೋಲು ಎದುರಾಯಿತು.

ಮೊದಲ ಪಂದ್ಯದಲ್ಲಿ ಇವಾನ್ ಶಾರಿಚ್ ಅವರನ್ನು ಮಣಿಸಿದ ಆನಂದ್, ಫ್ಯಾಬಿಯಾನೊ ಕರುವಾನ ಜತೆ ಡ್ರಾ ಮಾಡಿಕೊಂಡರು. ಆದರೆ ಮೂರನೇ ಪಂದ್ಯದಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಎದುರು ಸೋತರು.

ಡಿ.ಗುಕೇಶ್ ಅವರು ಎರಡು ಗೆಲುವು ಮತ್ತು ಒಂದು ಡ್ರಾದೊಂದಿಗೆ ಜಂಟಿ ಎರಡನೇ ಸ್ಥಾನಕ್ಕೇರಿದರು. ಕಾನ್‌ಸ್ಟಾಂಟಿನ್ ಲುಪುಲೆಸ್ಕು ಮತ್ತು ಶಾರಿಚ್ ಅವರನ್ನು ಮಣಿಸಿದ ಗುಕೇಶ್, ರಿಚರ್ಡ್ ರಾಪೋರ್ಟ್ ಅವರೊಂದಿಗೆ ಪಾಯಿಂಟ್ ಹಂಚಿಕೊಂಡರು.

ಸ್ಪರ್ಧೆಯ ಎರಡನೇ ದಿನದ ಅಂತ್ಯಕ್ಕೆ (ಆರು ಪಂದ್ಯಗಳು) ಆನಂದ್, ಇಯಾನ್ ನೆಪೊಮ್‌ನಿಷಿ ಮತ್ತು ಕರುವಾನ ಅವರು ತಲಾ ಎಂಟು ಪಾಯಿಂಟ್ಸ್‌ಗಳೊಂದಿಗೆ ಜಂಟಿ ಅಗ್ರಸ್ಥಾನದಲ್ಲಿದ್ದಾರೆ. ಗುಕೇಶ್ ಮತ್ತು ಪೋಲೆಂಡ್‌ನ ಯಾನ್ ಕ್ರಿಸ್ಟೋಫ್ ದೂಡಾ ಅವರು ಏಳು ಪಾಯಿಂಟ್ಸ್‌ಗಳೊಂದಿಗೆ ಜಂಟಿ 2ನೇ ಸ್ಥಾನದಲ್ಲಿದ್ದಾರೆ.

ಆನಂದ್ ಅವರು ಮೊದಲ ದಿನ ಎರಡು ಪಂದ್ಯಗಳನ್ನು ಗೆದ್ದು ಒಂದನ್ನು ಡ್ರಾ ಮಾಡಿಕೊಂಡಿದ್ದರು.

ಬೆಂಗಳೂರು ರೇಸ್

ಸಿಲ್ವರ್ ಕ್ಯಾನನ್ ಗೆಲ್ಲುವ ನಿರೀಕ್ಷೆ

ಡಿ.ಎಂ.ಕುಮಾರಸ್ವಾಮಿ ಮೆಮೋರಿಯಲ್ ಕಪ್ ಶನಿವಾರದ ಪ್ರಧಾನ ಆಕರ್ಷಣೆಯಾಗಿದ್ದು, ಸಿಲ್ವರ್ ಕ್ಯಾನನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಕೇಪ್ರಿಯಾಟಿ 2, ಪೆರಿಡಾಟ್ 3, ಮಸ್ಟೀರಿಯನ್ 4
2ನೇ ರೇಸ್: ಐ ವಾಂಟ್ ಇಟ್ ಆಲ್ 7, ರೈವಲ್ 1, ವಾರ್ ಟ್ರಯಲ್ 10
3ನೇ ರೇಸ್: ಸ್ಟಾರ್ ಕಾನ್ಸೆಪ್ಟ್ 4, ಸೂಪರ್ ಸ್ಟ್ರೈಡ್ 5, ಅಲೈಸ್ ಬ್ಲೂ 7
4ನೇ ರೇಸ್: ಎಟೋಷ 1, ಅಮ್ರೆಲಿ 6, ಅಶ್ವ ಯುದ್ವೀರ್ 2
5ನೇ ರೇಸ್: ಫಾರಜಾನ್ 4, ಎಬೊಟ್ಸೆ 2, ಗ್ರೇಸ್ 9
6ನೇ ರೇಸ್: ಸಿಲ್ವರ್ ಕ್ಯಾನನ್ 6, ವೈಲ್ಡ್ ಎಂಪರರ್ 4, ಸದರ್ನ್ ಫೋರ್ಸ್ 8
7ನೇ ರೇಸ್: ಡಿವೊ 4, ಸ್ಪೆಂಡರ್ ಆನ್ ಗ್ರಾಸ್ 1, ಬ್ರಿಲಿಯಂಟ್ ಸ್ಟಾರ್ 3

ಉತ್ತಮ ಬೆಟ್: ಕೇಪ್ರಿಯಾಟಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5.6,7

ರೇಸ್: ಮುನ್ನಡೆಯಲ್ಲಿ ವಿಘ್ನೇಷ್ ಗೌಡ

ಚೆನ್ನೈ (ಪಿಟಿಐ): ರಾಜೀವ್ ಸೇತು ಮತ್ತು ವಿಘ್ನೇಷ್ ಗೌಡ ಅವರು ಇಲ್ಲಿ ನಡೆದ ಎಂಆರ್‌ಎಫ್ ಎಫ್‌ಎಂಎಸ್‌ಸಿಐ ರಾಷ್ಟ್ರೀಯ ಮೋಟಾರ್‌ಸೈಕಲ್ ರೇಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ತಮ್ಮ ಪಾರಮ್ಯ ಮುಂದುವರಿಸಿದ್ದಾರೆ.

ಶುಕ್ರವಾರ ಮದ್ರಾಸ್ ಇಂಟರ್‌ನ್ಯಾಷನಲ್ ಸರ್ಕಿಟ್‌ನಲ್ಲಿ ನಡೆದ ರೇಸ್ ಮುನ್ನಡೆ ಸಾಧಿಸಿದರು. ಚೆನ್ನೈ ರಾಜೀವ್ ಸೇತು (ಆರ್‌ಎಸಿಆರ್ ಕ್ಯಾಸ್ಟ್ರಾಲ್ ಪವರ್ 2 ಅಲ್ಟಿಮೇಟ್) ತಮ್ಮ ಪ್ರೀಮಿಯಮ್ ಪ್ರೊ ಸ್ಟಾಕ್ 301–400 ಸಿಸಿ ವಿಭಾಗದ ಮೊದಲ ಸುತ್ತಿನಲ್ಲಿ ಸತತ ಎರಡನೇ ಬಾರಿ ಪೋಲ್ ಪೊಸಿಷನ್ ಸಾಧಿಸಿದರು. ಅವರು 1ನಿಮಿಷ, 50.708 ಸೆಕೆಂಡುಗಳಲ್ಲಿ ಲ್ಯಾಪ್‌ನಲ್ಲಿ ಉತ್ತಮ ಸಾಧನೆ ಮಾಡಿದರು.

ಕ್ರಿಕೆಟ್: ಶ್ರೀಲಂಕಾ ಅಜೇಯ ಸಾಧನೆ

ಹರಾರೆ (ಪಿಟಿಐ): ಶ್ರೀಲಂಕಾ ತಂಡ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ‘ಸೂಪರ್ ಸಿಕ್ಸ್’ ಹಂತದ ಕೊನೆಯ ಪಂದ್ಯದಲ್ಲಿ 8 ವಿಕೆಟ್‌ಗಳಿಂದ ವೆಸ್ಟ್ ಇಂಡೀಸ್ ತಂಡವನ್ನು ಮಣಿಸಿತು.

ಹರಾರೆಯಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ವಿಂಡೀಸ್ 48.1 ಓವರ್‌ಗಳಲ್ಲಿ 243 ರನ್‌ಗಳಿಗೆ ಆಲೌಟ್ ಆಯಿತು. ಲಂಕಾ ತಂಡ 44.2 ಓವರ್‌ಗಳಲ್ಲಿ ಎರಡು ವಿಕೆಟ್ ನಷ್ಟಕ್ಕೆ ಗೆಲುವಿನ ಗುರಿ ತಲುಪಿತು. ಆರಂಭಿಕ ಆಟಗಾರರಾದ ಪಥುಮ್ ನಿಸಾಂಕ (104) ಮತ್ತು ದಿಮುತ್ ಕರುಣರತ್ನೆ (83) ಅವರು ಗಮನ ಸೆಳೆದರು.

ಅರ್ಹತಾ ಟೂರ್ನಿಯಲ್ಲಿ ಮೊದಲ ಎರಡು ಸ್ಥಾನಗಳನ್ನು ಪಡೆದಿದ್ದ ಶ್ರೀಲಂಕಾ (10 ಪಾಯಿಂಟ್ಸ್) ಮತ್ತು ನೆದರ್ಲೆಂಡ್ಸ್ (6 ಪಾಯಿಂಟ್ಸ್) ಈಗಾಗಲೇ ವಿಶ್ವಕಪ್‌ಗೆ ಅರ್ಹತೆ ಪಡೆದುಕೊಂಡಿದ್ದವು. ಅರ್ಹತಾ ಹಂತದ ಚಾಂಪಿಯನ್ನರನ್ನು ನಿರ್ಧರಿಸಲು ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಇವೆರಡು ತಂಡಗಳು ಎದುರಾಗಲಿವೆ.

ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್

ಉಭಯ ದೇಶಗಳ ಅಭಿವೃದ್ಧಿಗೆ ಒತ್ತು


ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ತಾಂಜಾನಿಯಾದ ದಾರ್–ಎಸ್–ಸಲಾಂನಲ್ಲಿಯ ಕಾಮನ್‌ವೆಲ್ತ್ ಯುದ್ಧ ಸ್ಮಾರಕಕ್ಕೆ ಶುಕ್ರವಾರ ಭೇಟಿ ನೀಡಿ, ಮೊದಲ ವಿಶ್ವಯುದ್ಧದಲ್ಲಿ ಮಡಿದ ಭಾರತೀಯ ಯೋಧರಿಗೆ ಗೌರವ ಸಲ್ಲಿಸಿದರು –ಪಿಟಿಐ ಚಿತ್ರ

ದಾರ್ ಎಸ್ ಸಲಾಮ್ (ತಾಂಜಾನಿಯಾ) (ಪಿಟಿಐ): ‘ಬೇರೆ ದೇಶಗಳಂತೆ ಭಾರತವು ಸಂಪನ್ಮೂಲಭರಿತ ಆಫ್ರಿಕಾ ಖಂಡದಲ್ಲಿ ಸುಲಿಗೆ ಆಧರಿತ ಆರ್ಥಿಕ ಚಟುವಟಿಕೆ ಕೈಗೊಂಡಿಲ್ಲ’ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಚೀನಾ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದರು.

ತಾಂಜಾನಿಯಾ ಪ್ರವಾಸದಲ್ಲಿರುವ ಅವರು ಝಿಂಝಿಬಾರ್ ಭೇಟಿ ಬಳಿಕ ಗುರುವಾರ ದರ್–ಎಸ್–ಸಲಾಂ ನಗರದಲ್ಲಿ ಭಾರತೀಯ ಸಮುದಾಯ ವನ್ನು ಉದ್ದೇಶಿಸಿ ಮಾತನಾಡಿದರು.

‘ಭಾರತೀಯ ಸಮುದಾಯದ ಸದಸ್ಯರ ಜೊತೆ ಮಾತುಕತೆ ನಡೆಸಿದೆ. ಐಟಿ (ಇಂಡಿಯಾ ಮತ್ತು ತಾಂಜಾನಿಯಾ) ಯೋಜನೆಯ ಮಹತ್ವವನ್ನು ಅವರಿಗೆ ವಿವರಿಸಿದ್ದೇನೆ. ಭಾರತ ಮತ್ತು ಆಫ್ರಿಕಾದ ನಿಕಟ ಸಂಬಂಧದ ಕುರಿತು ಒತ್ತಿ ಹೇಳಿದೆ. ಭಾರತೀಯ ಸಮುದಾಯವು ಈ ದ್ವಿಪಕ್ಷೀಯ ಸಂಬಂಧದ ಅಭಿವ್ಯಕ್ತಿ, ಕೊಡುಗೆದಾರ ಮತ್ತು ಶಕ್ತಿಯಾಗಿದೆ. ಭಾರತ ಮತ್ತು ತಾಂಜಾನಿಯಾದ ದ್ವಿಪಕ್ಷೀಯ ಸ್ನೇಹವು ಇಲ್ಲಿಯ ಜನಜೀವನದಲ್ಲಿ ಹೇಗೆ ಬದಲಾವಣೆ ತರುತ್ತಿದೆ ಎಂಬುದನ್ನು ವಿವರಿಸಿದೆ’ ಎಂದು ಟ್ವೀಟ್ ಮಾಡಿದ್ದಾರೆ.

‘ಇಂದು ನಾವು ಆಫ್ರಿಕಾ ಅಭಿವೃದ್ಧಿ ಹೊಂದುವುದನ್ನು ನೋಡಲು ಬಯಸುತ್ತೇವೆ. ಆಫ್ರಿಕಾದೊಂದಿಗೆ ಹೆಚ್ಚು ವ್ಯಾಪಾರ ಮಾಡುವುದು, ಹೂಡಿಕೆ ಮಾಡುವುದು, ಸಾಮರ್ಥ್ಯಗಳನ್ನು ಸೃಷ್ಟಿಸುವುದು ಆಗಿದೆ. ಇದರಿಂದಾಗಿ ಏಷ್ಯಾದಲ್ಲಿ ಭಾರತದಂತಹ ದೇಶ ಅಭಿವೃದ್ಧಿ ಹೊಂದುತ್ತಿರುವಂತೆ ಆಫ್ರಿಕ ಸಹ ಪ್ರಗತಿ ಹೊಂದಬೇಕು’ ಎಂದು ಹೇಳಿದ್ದಾರೆ.

ಯುದ್ಧ ಸ್ಮಾರಕಕ್ಕೆ ಭೇಟಿ: ಜೈಶಂಕರ್ ಅವರು ದಾರ್–ಎಸ್–ಸಲಾಂನಲ್ಲಿಯ ಕಾಮನ್‌ವೆಲ್ತ್ ಯುದ್ಧ ಸ್ಮಾರಕಕ್ಕೆ ಭೇಟಿ ನೀಡಿ, ಮೊದಲ ವಿಶ್ವಯುದ್ಧದಲ್ಲಿ ಮಡಿದ ಭಾರತೀಯ ಯೋಧರಿಗೆ ಗೌರವ ಸಲ್ಲಿಸಿದರು.

‘ಕಾಮನ್‌ವೆಲ್ತ್ ಯುದ್ಧ ಸ್ಮಾರಕಕ್ಕೆ ಭೇಟಿ ನೀಡಿ ಭಾರತೀಯ ಯೋಧರಿಗೆ ಗೌರವ ಸಲ್ಲಿಸಿದೆ. ಹಲವಾರು ಯುದ್ಧಭೂಮಿಗಳಲ್ಲಿ ನಮ್ಮವರ ಬಲಿದಾನವು ನಮ್ಮ ಇತಿಹಾಸದ ಪ್ರಮುಖ ಅಂಶವಾಗಿದೆ. ಜಾಗತಿಕವಾಗಿ ಭಾರತ ಬೀರಿರುವ ಪರಿಣಾಮವನ್ನು ಇದು ತೋರುತ್ತದೆ’ ಎಂದು ಅವರು ಟ್ವೀಟ್ ಮಾಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಅಗ್ನಿ ದುರಂತ: 6 ಮಂದಿ ದುರ್ಮರಣ

ಮಿಲಾನ್, ಇಟಲಿ (ಎಎಫ್‌ಪಿ): ಇಲ್ಲಿನ ವೃದ್ಧಾಶ್ರಮವೊಂದರಲ್ಲಿ ಅಗ್ನಿ ದುರಂತ ಸಂಭವಿಸಿ ಆರು ಮಂದಿ ಮೃತಪಟ್ಟಿದ್ದಾರೆ. ಇದೇ ವೇಳೆ ವಿಷಾನಿಲ ಸೇವಿಸಿ ಸುಮಾರು 80 ಜನರು ಅಸ್ವಸ್ಥರಾಗಿದ್ದು, ಅವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಇಟಲಿಯ ಮಾಧ್ಯಮವೊಂದು ವರದಿ ಮಾಡಿದೆ.

ವೃದ್ಧಾಶ್ರಮವು ಮೂರು ಅಂತಸ್ತಿನ ಕಟ್ಟಡವಾಗಿದ್ದು, ದುರಂತ ಸಂಭವಿಸಿದ ವೇಳೆ ಅದರಲ್ಲಿ 167 ಜನರಿದ್ದರು. ಹತ್ತಾರು ಜನರನ್ನು ಅಗ್ನಿಶಾಮಕ ದಳದ ಸಿಬ್ಬಂದಿ ರಕ್ಷಿಸಿದ್ದಾರೆ. ಬೆಂಕಿ ಹೊತ್ತಿಕೊಂಡ ಕಾರಣ ಇನ್ನೂ ತಿಳಿದುಬಂದಿಲ್ಲ ಎಂದು ಅಗ್ನಿಶಾಮಕ ದಳ ಟ್ವೀಟ್ ಮಾಡಿದೆ. ಆಸ್ಪತ್ರೆಗೆ ದಾಖಲಾದವರಲ್ಲಿ 14 ಜನರ ಪರಿಸ್ಥಿತಿ ಗಂಭೀರವಾಗಿದೆ ಎಂದು ವರದಿಯಲ್ಲಿ ಮಾಹಿತಿ ನೀಡಲಾಗಿದೆ. ಮೃತರಲ್ಲಿ 69 ರಿಂದ 87 ವರ್ಷ ವಯಸ್ಸಿನ ಐವರು ಮಹಿಳೆಯರು ಮತ್ತು 73 ವರ್ಷ ವಯಸ್ಸಿನ ಪುರುಷರೊಬ್ಬರಿದ್ದಾರೆ ಎನ್ನಲಾಗಿದೆ.

ಸ್ಫೋಟ: ಆರು ಕಾರ್ಮಿಕರ ಸಾವು

ಮಾಸ್ಕೊ (ಎಎಫ್‌ಪಿ): ರಷ್ಯಾದ ಸಮಾರ ಪ್ರದೇಶದ ಪ್ರಾಮ್ಸಿಂಟೆಜ್ ಘಟಕದಲ್ಲಿ ಸ್ಫೋಟ ಸಂಭವಿಸಿ ಆರು ಮಂದಿ ಮೃತಪಟ್ಟು, ಎಂಟು ಮಂದಿ ಗಾಯಗೊಂಡಿದ್ದಾರೆ ಎಂದು ರಷ್ಯಾದ ಆರ್‌ಐಎ ನೊವೊಸ್ತಿ ಸುದ್ದಿಸಂಸ್ಥೆ ಶುಕ್ರವಾರ ವರದಿ ಮಾಡಿದೆ.

ಚಪಾಯೆವ್ಸ್ಕ್ ನಗರದ ಸ್ಫೋಟಕ ಘಟಕದಲ್ಲಿ ದುರಸ್ತಿ ಕಾರ್ಯದ ವೇಳೆ ಉಪಕರಣಗಳನ್ನು ಕಳಚಿದ ಸಂದರ್ಭದಲ್ಲಿ ಸ್ಫೋಟ ಸಂಭವಿಸಿದೆ ಎಂದು ತುರ್ತು ಸೇವೆ ಉಲ್ಲೇಖಿಸಿ ಸುದ್ದಿಸಂಸ್ಥೆ ತಿಳಿಸಿದೆ.

ಕಂಪನಿ ವೆಬ್‌ಸೈಟ್ ಪ್ರಕಾರ ಗಣಿಗಾರಿಕೆ, ತೈಲ ಮತ್ತು ಅನಿಲ ಕ್ಷೇತ್ರಕ್ಕೆ 1,300 ಜನರನ್ನು ನೇಮಿಸಿಕೊಂಡಿದೆ.

ಕ್ರಿಕೆಟ್ ಆಡುವ ವೇಳೆ ಭೂಕುಸಿತ: ಎಂಟು ಮಕ್ಕಳು ಸಾವು

ಪೇಶಾವರ, ಪಾಕಿಸ್ತಾನ (ರಾಯಿಟರ್ಸ್): ಕ್ರಿಕೆಟ್ ಆಡುತ್ತಿದ್ದ ವೇಳೆ ಉತ್ತರ ಪಾಕಿಸ್ತಾನದಲ್ಲಿ ಸಂಭವಿಸಿದ ಭೂಕುಸಿತದಲ್ಲಿ ಎಂಟು ಮಕ್ಕಳು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಶಾಂಗ್ಲಾ ಜಿಲ್ಲೆಯಲ್ಲಿ ಗುರುವಾರ ಸಂಜೆ ಈ ಘಟನೆ ನಡೆದಿದ್ದು, ಮಕ್ಕಳೆಲ್ಲರೂ 12 ರಿಂದ 15 ವರ್ಷದೊಳಗಿನವರು. ಸೇನೆ ಹಾಗೂ ರಕ್ಷಣಾ ತಂಡಗಳು ಕಾರ್ಯಾಚರಣೆ ನಡೆಸಿ, ಎಂಟು ಶವಗಳನ್ನು ಹೊರತೆಗೆದಿವೆ. ಸುಮಾರು 15 ಮಂದಿ ಪಿಚ್ ನಿರ್ಮಿಸಿಕೊಂಡು ಕ್ರಿಕೆಟ್ ಆಟವಾಡುತ್ತಿದ್ದರು. ಮಳೆ ನಿಂತ ಬಳಿಕ ಅದು ಕುಸಿದ ಪರಿಣಾಮ, ಮಣ್ಣಿನಲ್ಲಿ ಅವರೆಲ್ಲರೂ ಸಿಲುಕಿಕೊಂಡರು. ಈ ಪೈಕಿ ಎಂಟು ಮಂದಿ ಮೃತಪಟ್ಟರು. ಒಬ್ಬ ಗಂಭೀರವಾಗಿ ಗಾಯಗೊಂಡಿದ್ದು, ಉಳಿದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಜಿಲ್ಲಾ ತುರ್ತು ಘಟಕದ ಅಧಿಕಾರಿ ಸನಾವುಲ್ಲಾ ಖಾನ್ ತಿಳಿಸಿದ್ದಾರೆ. ರಕ್ಷಣಾ ತಂಡಗಳು ಆಗಮನಕ್ಕೂ ಮುನ್ನ ಸ್ಥಳಕ್ಕೆ ಧಾವಿಸಿದ ಗ್ರಾಮಸ್ಥರು ಮಕ್ಕಳ ರಕ್ಷಣೆಗೆ ಸಹಾಯ ಮಾಡಿದರು ಎಂದು ಮತ್ತೊಬ್ಬ ಅಧಿಕಾರಿ ಬಿಲಾಲ್ ಖಾನ್ ಹೇಳಿದ್ದಾರೆ.

ಕೆನಡಾ ಓಪನ್ ಬ್ಯಾಡ್ಮಿಂಟನ್ ಸೂಪರ್ 500 ಟೂರ್ನಿ

ಎಂಟರ ಘಟ್ಟಕ್ಕೆ ಸಿಂಧು, ಸೇನ್

ಕ್ಯಾಲ್ಗರಿ (ಪಿಟಿಐ): ಭಾರತದ ಪಿ.ವಿ. ಸಿಂಧು ಮತ್ತು ಲಕ್ಷ್ಯ ಸೇನ್ ಇಲ್ಲಿ ನಡೆಯುತ್ತಿರುವ ಕೆನಡಾ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಮಹಿಳೆಯರ ಮತ್ತು ಪುರುಷರ ಸಿಂಗಲ್ಸ್ ವಿಭಾಗಗಳಲ್ಲಿ ಕ್ವಾರ್ಟರ್ ಫೈನಲ್‌ಗೆ ಪ್ರವೇಶಿಸಿದ್ದಾರೆ.

ಸಿಂಧು ಅವರಿಗೆ ಜಪಾನ್‌ನ ನಟ್ಸುಕಿ ನಿಡ್ಸೈರಾ ಅವರಿಂದ ವಾಕ್‌ಓವರ್ ದೊರೆತು, ಎಂಟರ ಘಟ್ಟಕ್ಕೆ ಮುನ್ನಡೆದರು. ಸೇನ್, ಬ್ರೆಜಿಲ್‌ನ ಇಗೊರ್ ಕೊಯೆಲೊ ಅವರನ್ನು 21-15, 21-11 ರಿಂದ ಮಣಿಸಿದರು.

ಸಿಂಧು ಮುಂದಿನ ಸುತ್ತಿನಲ್ಲಿ 2022ರ ಇಂಡೊನೇಷ್ಯಾ ಮಾಸ್ಟರ್ಸ್ ಚಾಂಪಿಯನ್, ಚೀನಾದ ಗಾವೊ ಫಾಂಗ್ ಜೀ ಅವರ ಸವಾಲನ್ನು ಎದುರಿಸಲಿದ್ದಾರೆ.


ಪಿ.ವಿ. ಸಿಂಧು


ಲಕ್ಷ್ಯ ಸೇನ್

ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಚಿನ್ನದ ಪದಕ ವಿಜೇತರಾಗಿರುವ ಸೇನ್, ಬೆಲ್ಜಿಯಂನ ಜೂಲಿಯನ್ ಕರಾಜಿ ಅವರಿಗೆ ಸವಾಲೊಡ್ಡಲಿದ್ದಾರೆ.

ಪುರುಷರ ಡಬಲ್ಸ್‌ನ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಭಾರತದ ಕೃಷ್ಣ ಪ್ರಸಾದ್ ಗರಗ ಮತ್ತು ವಿಷ್ಣುವರ್ಧನ್ ಗೌಡ್ ಪಂಜಾಲ ಜೋಡಿಯು ವಿಶ್ವದ 7ನೇ ರ‍್ಯಾಂಕ್‌ನ ಮೊಹಮ್ಮದ್ ಅಹ್ಸಾನ್ ಮತ್ತು ಹೆಂಡ್ರಾ ಸೆಟಿಯಾವಾನ್ ಜೋಡಿಯ ಎದುರು 9-21 11-21ರಿಂದ ಸೋಲೊಪ್ಪಿಕೊಂಡಿತು.

ಗಾಲ್ಫ್: ಜಂಟಿ 39ನೇ ಸ್ಥಾನದಲ್ಲಿ ಅದಿತಿ

ಪೆಬಲ್ ಬೀಚ್, ಅಮೆರಿಕ (ಪಿಟಿಐ): ಭಾರತದ ಅದಿತಿ ಅಶೋಕ್ ಇಲ್ಲಿನ ಪೆಬಲ್ ಬೀಚ್ ಗಾಲ್ಫ್ ಲಿಂಕ್ಸ್‌ನಲ್ಲಿ ನಡೆಯುತ್ತಿರುವ ಯುಎಸ್ ಮಹಿಳಾ ಓಪನ್ ಟೂರ್ನಿಯ ಮೊದಲ ಸುತ್ತಿನ ಬಳಿಕ ಜಂಟಿ 39ನೇ ಸ್ಥಾನದಲ್ಲಿದ್ದಾರೆ.

ಬೆಂಗಳೂರಿನ ಅದಿತಿ ಗುರುವಾರ 74 ಸ್ಟ್ರೋಕ್‌ಗಳೊಂದಿಗೆ (2 ಓವರ್) ಸ್ಪರ್ಧೆ ಕೊನೆಗೊಳಿಸಿದರು. ಎಲ್‌ಪಿಜಿಎ ಟೂರ್‌ನಲ್ಲಿ ಅವರಿಗೆ ಇದು 25ನೇ ಮೇಜರ್ ಟೂರ್ನಿ ಎನಿಸಿದೆ.

ಚೀನಾದ ಕ್ಸಿಯು ಲಿನ್ ಮತ್ತು ಕೊರಿಯಾದ ಹ್ಯೊ ಜೂ ಕಿಮ್ ಅವರು ತಲಾ 68 (4 ಅಂಡರ್) ಸ್ಕೋರ್‌ಗಳೊಂದಿಗೆ ಜಂಟಿ ಅಗ್ರಸ್ಥಾನದಲ್ಲಿದ್ದಾರೆ.

25 ವರ್ಷದ ಅದಿತಿ ಈ ಟೂರ್ನಿಯಲ್ಲಿ ಮೂರನೇ ಬಾರಿ ಪಾಲ್ಗೊಳ್ಳುತ್ತಿದ್ದಾರೆ. 2019 ರಲ್ಲಿ ಅವರು ಜಂಟಿ 39ನೇ ಸ್ಥಾನ ಪಡೆದಿದ್ದರೆ, 2017 ರಲ್ಲಿ ಅಂತಿಮ ಸುತ್ತು ಪ್ರವೇಶಿಸಲು ವಿಫಲರಾಗಿದ್ದರು.


ಅದಿತಿ ಅಶೋಕ್

37ನೇ ಸ್ಥಾನದಲ್ಲಿ ಪ್ರಣವಿ ಅರಸ್

(ಸಿಂಗಪುರ ವರದಿ): ಭಾರತದ ಪ್ರಣವಿ ಅರಸ್ ಅವರು ಟ್ರಸ್ಟ್ ಸಿಂಗಪುರ ಲೇಡಿಸ್ ಮಾಸ್ಟರ್ಸ್ ಗಾಲ್ಫ್ ಟೂರ್ನಿಯ ಎರಡನೇ ಸುತ್ತಿನ ಬಳಿಕ ಜಂಟಿ 37ನೇ ಸ್ಥಾನದಲ್ಲಿದ್ದಾರೆ.

ಶುಕ್ರವಾರ ಮಳೆ ಸುರಿದ ಕಾರಣ ಭಾರತದ ಅವನಿ ಪ್ರಶಾಂತ್ ಮತ್ತು ಸೆಹರ್ ಅತ್ವಾಲ್ ಸೇರಿದಂತೆ ಕೆಲವು ಸ್ಪರ್ಧಿಗಳಿಗೆ ಎರಡನೇ ಸುತ್ತು ಪೂರೈಸಲು ಸಾಧ್ಯವಾಗಿಲ್ಲ.

ಪ್ರಧಾನಿ ಸೂಚನೆ: ನಿವೃತ್ತಿ ನಿರ್ಧಾರ ಹಿಂಪಡೆದ ತಮೀಮ್ ಇಕ್ಬಾಲ್

ಢಾಕಾ (ಎಎಫ್‌ಪಿ): ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ದಿಢೀರ್ ನಿವೃತ್ತಿ ಪ್ರಕಟಿಸಿ ಅಚ್ಚರಿ ಮೂಡಿಸಿದ್ದ ಬಾಂಗ್ಲಾದೇಶದ ಕ್ರಿಕೆಟಿಗ ತಮೀಮ್ ಇಕ್ಬಾಲ್ ಅವರು, ಒಂದೇ ದಿನದಲ್ಲಿ ತಮ್ಮ ನಿರ್ಧಾರ ವಾಪಸ್ ಪಡೆದಿದ್ದಾರೆ. ಬಾಂಗ್ಲಾ ಪ್ರಧಾನಿ ಶೇಖ್ ಹಸೀನಾ ಅವರ ಸೂಚನೆ ಇದಕ್ಕೆ ಕಾರಣ.

‘ತಮೀಮ್ ಅವರು ನಿವೃತ್ತಿ ನಿರ್ಧಾರ ಹಿಂಪಡೆದಿದ್ದಾರೆ. ಪ್ರಧಾನಿ ಶೇಖ್ ಹಸೀನಾ ಅವರ ಭೇಟಿಯ ಬಳಿಕ ತೀರ್ಮಾನ ಬದಲಿಸಿದ್ದಾರೆ’ ಎಂದು ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ (ಬಿಸಿಬಿ) ನಿರ್ದೇಶಕ ಜಲಾಲ್ ಯೂನುಸ್ ಶುಕ್ರವಾರ ಹೇಳಿದ್ದಾರೆ.

ತಮೀಮ್ ಅವರು ಢಾಕಾದ ನಿವಾಸದಲ್ಲಿ ಪ್ರಧಾನಿ ಅವರನ್ನು ಭೇಟಿಯಾದರು. ಬಿಸಿಬಿ ಅಧ್ಯಕ್ಷ ನಜ್ಮುಲ್ ಹಸನ್ ಅವರು ಈ ವೇಳೆ ಜತೆಗಿದ್ದರು.

‘ಪ್ರಧಾನಿ ಅವರೊಂದಿಗೆ ಸುದೀರ್ಘ ಸಮಾಲೋಚನೆ ನಡೆಯಿತು. ನಿವೃತ್ತಿ ವಾಪಸ್ ಪಡೆದು ಕ್ರಿಕೆಟ್‌ಗೆ ಮರಳುವಂತೆ ಅವರು ಸೂಚಿಸಿದರು. ನನಗೆ ಇಲ್ಲ ಎನ್ನಲು ಆಗಲಿಲ್ಲ’ ಎಂದು ಪ್ರಧಾನಿ ಭೇಟಿಯ ಬಳಿಕ ತಮೀಮ್ ತಿಳಿಸಿದರು.

‘ಗಾಯದಿಂದ ಚೇತರಿಸಿಕೊಳ್ಳಲು ತಮೀಮ್, ಆರು ವಾರ ವಿಶ್ರಾಂತಿ ಪಡೆಯಲಿದ್ದಾರೆ. ಸೆಪ್ಟೆಂಬರ್‌ನಲ್ಲಿ ನಡೆಯಲಿರುವ


ತಮೀಮ್ ಇಕ್ಬಾಲ್

ಏಷ್ಯಾ ಕಪ್ ಟೂರ್ನಿಯ ವೇಳೆಗೆ ಅವರು ಪೂರ್ಣ ದೈಹಿಕ ಸಾಮರ್ಥ್ಯ ಹೊಂದುವುದು ಅಗತ್ಯ’ ಎಂದು ನಜ್ಮುಲ್ ಹಸನ್ ಮಾಹಿತಿ ನೀಡಿದರು.

ಅಫ್ಗಾನಿಸ್ತಾನ ವಿರುದ್ಧದ ಏಕದಿನ ಕ್ರಿಕೆಟ್ ಸರಣಿಯ ಇನ್ನುಳಿದ ಎರಡು ಪಂದ್ಯಗಳಲ್ಲಿ ಬಾಂಗ್ಲಾದೇಶ ತಂಡವನ್ನು ಲಿಟನ್ ದಾಸ್ ಮುನ್ನಡೆಸುವರು ಎಂದು ಬಿಸಿಬಿ ಶುಕ್ರವಾರ ಬೆಳಿಗ್ಗೆ ಪ್ರಕಟಿಸಿತ್ತು. ಇದಾದ ಕೆಲವೇ ಗಂಟೆಗಳಲ್ಲಿ ತಮೀಮ್, ಪ್ರಧಾನಿ ಅವರನ್ನು ಭೇಟಿಯಾಗಿದ್ದಾರೆ.

ತಮೀಮ್ ಕೈಗೊಂಡ ನಿರ್ಧಾರ ಅಚ್ಚರಿ ಉಂಟು ಮಾಡಿದೆ ಎಂದು ಲಿಟನ್ ಹೇಳಿದ್ದರು. ‘ಅವರಿಂದ ಅಂತಹ ನಿರ್ಧಾರ ಬರಬಹುದು ಎಂದು ಯಾರೂ ಊಹಿಸಿರಲಿಲ್ಲ. ಹಲವು ವರ್ಷಗಳಿಂದ ಅವರು ತಂಡಕ್ಕಾಗಿ ಆಡಿದ್ದಾರೆ. ನಾನು ಹಾಗೂ ಸಹ ಆಟಗಾರರು ಅವರ ನಿರ್ಧಾರವನ್ನು ಗೌರವಿಸುತ್ತೇವೆ’ ಎಂದಿದ್ದರು.

ಸಂಕ್ಷಿಪ್ತ ಸುದ್ದಿ

ಟಿಟಿ: ಏಷ್ಯನ್ ಗೇಮ್ಸ್‌ನಲ್ಲಿ ಶರತ್, ಮಣಿಕಾ ಸಾರಥ್ಯ

ನವದೆಹಲಿ (ಪಿಟಿಐ): ಅಚಂತಾ ಶರತ್ ಕಮಲ್ ಮತ್ತು ಮಣಿಕಾ ಬಾತ್ರಾ ಅವರು ಸೆಪ್ಟೆಂಬರ್- ಅಕ್ಟೋಬರ್‌ನಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ನಲ್ಲಿ ಪಾಲ್ಗೊಳ್ಳುವ ಭಾರತದ 10 ಸದಸ್ಯರ ಟೇಬಲ್ ಟೆನಿಸ್ ತಂಡವನ್ನು ಮುನ್ನಡೆಸಲಿದ್ದಾರೆ.

ಐದು ವರ್ಷಗಳ ಹಿಂದೆ ಜಕಾರ್ತದಲ್ಲಿ ನಡೆದಿದ್ದ ಏಷ್ಯನ್ ಗೇಮ್ಸ್‌ನ ಟಿಟಿಯಲ್ಲಿ ಪುರುಷರ ತಂಡ ಮತ್ತು ಮಿಶ್ರ ಡಬಲ್ಸ್ ತಂಡ ಕಂಚಿನ ಪದಕ ಗೆದ್ದಿದ್ದವು. ಆ ಮೂಲಕ 60 ವರ್ಷಗಳ ಪದಕದ ದಾಹ ನೀಗಿತ್ತು.

ಕರ್ನಾಟಕದ ಅರ್ಚನಾ ಕಾಮತ್ ಹೆಚ್ಚುವರಿ ಆಟಗಾರ್ತಿಯಾಗಿ ಸ್ಥಾನ ಪಡೆದಿದ್ದಾರೆ.

ತಂಡಗಳು: ಪುರುಷರು: ಎ. ಶರತ್ ಕಮಲ್, ಜಿ. ಸತ್ಯನ್, ಹರ್ಮೀತ್ ದೇಸಾಯಿ, ಮಾನವ್ ಠಕ್ಕರ್ ಮತ್ತು ಮಾನುಷ್ ಶಾ

ಹೆಚ್ಚುವರಿ ಆಟಗಾರರು: ಎಸ್‌ಎಫ್‌ಆರ್ ಸ್ನೇಹಿತ್, ಸನಿಲ್ ಶೆಟ್ಟಿ

ಮಹಿಳೆಯರು: ಮಣಿಕಾ ಬಾತ್ರಾ, ಶ್ರೀಜಾ ಅಕುಲಾ, ಸುತೀರ್ಥ ಮುಖರ್ಜಿ, ಐಹಿಕಾ ಮುಖರ್ಜಿ, ದಿಯಾ ಚಿತಲೆ

ಹೆಚ್ಚುವರಿ ಆಟಗಾರ್ತಿಯರು: ಅರ್ಚನಾ ಕಾಮತ್, ರೀತ್ ರಿಷ್ಯ

ಪುರುಷರ ಡಬಲ್ಸ್: ಎ. ಶರತ್ ಕಮಲ್/ ಜಿ. ಸತ್ಯನ್ ಮತ್ತು ಮಾನವ್ ಠಕ್ಕರ್/ ಮಾನುಷ್ ಶಾ

ಮಹಿಳೆಯರ ಡಬಲ್ಸ್: ಸುತೀರ್ಥ ಮುಖರ್ಜಿ/ ಐಹಿಕಾ ಮುಖರ್ಜಿ ಮತ್ತು ಶ್ರೀಜಾ ಅಕುಲಾ/ ದಿಯಾ ಚಿತಲೆ

ಮಿಶ್ರ ಡಬಲ್ಸ್: ಮಣಿಕಾ ಬಾತ್ರಾ/ ಜಿ. ಸತ್ಯನ್ ಮತ್ತು ಶ್ರೀಜಾ ಅಕುಲಾ/ ಹರ್ಮೀತ್ ದೇಸಾಯಿ


ಚಿನ್ನರಾಜ

ಶೂಟಿಂಗ್: ಚಿನ್ನರಾಜಗೆ ಕಂಚು

ಬೆಂಗಳೂರು: ಬಳ್ಳಾರಿಯ ಸಿ.ಡಿ. ಚಿನ್ನರಾಜ ಅವರು ಕರ್ನಾಟಕ ರಾಜ್ಯ ರೈಫಲ್ ಸಂಸ್ಥೆ ಆಶ್ರಯದಲ್ಲಿ ಬೆಂಗಳೂರಿನಲ್ಲಿ ನಡೆದ 11ನೇ ರಾಜ್ಯಮಟ್ಟದ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಗೆದ್ದುಕೊಂಡರು. ಶುಕ್ರವಾರ ನಡೆದ ಪುರುಷರ ವಿಭಾಗದ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಅವರು ಈ ಸಾಧನೆ ಮಾಡಿದರು.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PROPERTY CORNER
ಕ್ಲಾಸಿಫೈಡ್ಸ್

FOR SALE
FOR SALE 2 BHK (1392 sq. ft.) & 3 BHK (1680 sq. ft.) Flats at PNB Layout, Konankunte, Doddakallasandra, Bangalore. Bore-well, Lift, Car Parking available.
Ready-to-occupy
Contact: 9972335974 9740089974 9482088499

ಕನಕಪುರ ರಸ್ತೆಯಲ್ಲಿ ಮನೆ ನಿರ್ಮಾಣಕ್ಕೆ ಅತ್ಯುತ್ತಮ ನಿವೇಶನಗಳು
BBMP 'A' KHATA SITES
@Thalaghattapura
Close to Metro Station
Kanakapura Road
Ready for Registration & Construction
Bank Loan Available
Call for Site Visit : 7406 219 219

REAL ESTATE SELLING

'BANASHANKARI' 6TH Stage, 40x60, 60" Road 20x30, 30x40, 50x80, Residential /Commercial Sites Sale : 9916817739

Agricultural Land Converted

SALE- 30X50 BDA Site at Banashankari 6th Stage, 4th 'T' Block, West facing. Contact: 9945427003

Out-Station

HUBLI AGRICULTURAL LAND FOR SALE
Measuring 23 acres
Located at 11km on Hubli-Karwar Road with mango plantation, well, 2 borewell.
Also suitable for any Industry, Education centre, Resort or Convert to NA.
Brokers excuse.
Genuine Party Contact
9108133206

Sites

Banashankari

SALE BDA 30x40 Banasankari 6th 9th Block East Facing 65 lakh also 20x30 south Facing 30 Feet Road 48 lakh. 9620041313, 9945373839

"BANASHANKARI 2ND, 3rd, 6th Stage Residential/ Commercial 50x80, 40x60, 45x50, 30x50, Genuine buyers Call: 9845286505"

PLOT FOR sale Banashankari 6th StageBDA 30x40 on 40Feet Road, Allottee site, Direct Buyers Contact: 9880021493.

Arkavathi Layout

ARKAVATHI LAYOUT BDA Site For Sale Near Manyatha tech park Commercial 40×60, West Facing: 9035151657

ARKAVATHI LAYOUT 30x30 North West Corner 2nd Block 30x42, 20x30 3rd Block. USR- 7019770736/ 8951614989.

Airport Road

BETTAHALASUR AIRPORT Road Telecom Layout Green 3 Site For sale 30×35: 9916064583

J P Nagar

SALE 40X60 WF, Royal County JP Nagar 8th Stage, Opposite Godavari Cafe, 15000/-Sft, Negotiable. 9845227242

JPNAGAR 2ND Phase, BDA, 40X60, West Facing Near Woody,s Hotel 21000/-3rd Phase 40x60, 24000/- :9845600007

JPNAGAR 8TH Phase, Royal County BDA Site Sale, 30x50, S/F, 9800/- Negotioble : 9538680364/9513004587

Kanakapura Road

KANAKAPURA ROAD Kaggalipura BMRDA Approved 'E'Khata 30x40 E/F, 30X50 W/F, 3000/- Negotioble : 9740150364/9986146147

KANAKPURA ROAD Kaglipur Bustop Opp. Near Art of Living 30X40 Residential. Converted Site Sale 4000/- Psft: 9342552428

SALE BDA 30x40 East Facing JP Nagar 9th Phase 4th "A" Block Near Kanakapura Road. 9945373839, 9620041313

SALE 30X50 NF, BDA Approved Vajarahalli, Kanakapura Road Near Metro, Under Electric Line. Contact: 7483585591

Kempegowda Layout

NADAPRABHU KEMPEGOWDA Layout 20x30 BDA allottee North facing site, 9th Block, Sector-C for Sale 28,00,000/- negotiable -9448457267

KEMPEGOWDA Layout BDA Sites for Sale Commercial 40x60, 100ft Road Near BDA Complex Mysore Road Metro: 7899570235

KEMPEGOWDA LAYOUT Commercial and Residential Site for Sale 20x30, 30x40, 40x60 and 50x80. Kumar 9945112279

Out-Station

KHB ALLOTTED 20x30 SITE IN HEBRI UDUPI BEAUTIFUL TOWN @ FOOT OF THE WESTERN GHATS PRICE 5.5L RAGHAVENDRA: 9606866368

CNRInfocity
READY TO BUILD PLOTS FOR EVERY DREAM HOME

BMRDA APPROVED SITES
AVAILABLE @ NELAMANGALA
CONTACT FOR MORE INFORMATION
87222 27780, 87222 27711

MANGALORE
MUDA approved 3 adjacent plots (7.5+7.5+5 = 20 cents) at HOSABETTU. Just 500 mtrs from NH-17 and surathkal BEACH. Both 7.5 plots are CORNER plots, with 24 ft road on two sides. Price 5.3 lakhs/cent (negotiable)
Dr. Gautham
9449031176 / 8310613925

SALE- RESIDENTIAL Site in Chikamagalur Town near Mountain View School. Located on Road from Mountain View School to Balehalli. Area approximately 15000 Sft (14.5 Guntas) @ Rs. 1200 per Sft. Contact: 9880459141.

Rajarajeshwari Nagar

R.R.NAGARA BEML Layout 30X40 House Sale 1.60Cr. Javaregowdana Doddi 30x40 Site Sale 66L. 9148914809, 9740075563.

'A' KHATA Property for Sale in RajarajeshwariNagar 30x40 and 40x60, East facing. Call: 9448288522

Yelahanka

30x40 Converted Plot @ 1,65,000/-
138/- per sq.ft, 90 minutes Journey from Yelahanka
Ready for Registration
9343510635, 9010559539

Kumaraswamy Layout

25X30 EAST Facing BDA Site Sale Kumaraswamy Layout Near Police Station. Clear Titles. Contact:- 9342197377

Vishweshwariah Layout

AVAILABLE VISHWESHWARAIAH Layout 2nd Block 30X40 Site WF Ready to Construction Near Shirke Apartment: 8553908699

BHARATHNAGAR 40X60 Site For Sale on 60ft Road and Commercial Corner 40x60 Site Sale: 9964971895

40X60 1ST Block Vishveshwaraiah Layout Opp KHB Platinam Apartment, 40X60 Site Sale 6th KLE Opp Direct Owner: 9844845864

Magadi Road

SITE FOR SALE: 20x30 (W) "D"Group layout, Lingadheeranahalli, Andhrahalli Main Road. 8792607638, 7090351127

Flat

Bannerghatta Road

3 BHK FLAT SALE

Duplex Semi Furnished 1725 sqft, @ Gottigere, Damden Zephyr, Big Car Park, Amenities, Rs. 90 Lac, Negotiable. CALL : 98452 06422

Kumaraswamy Layout

3-BHK E/F Flat 2250Sqft Fully Teak Wood Italian Marbles 2-Carparking 1.6Cr Kumaraswamy Layout 15F Bustand- 9611144096

Malleshwaram

MALLESWARAM FIRST floor 1 bedroom apartment for sale. 621sft. South facing door. Basement carparking. 87 lakhs. 4th main 17th cross. Contact 6363161063

2BHK FOR SALE at Malleshwaram. No agents/brokers. Please Call 08042150539.

Commercial Building

Indiranagar

COMMERCIAL PROPERTY, 100 Feet Road, Indiranagar Bangalore is a treasure for Serious Investor' Whatsapp 84311 33959

Commerical

J P Nagar

SALE MINI 15 Flats Apartment near Bommanahalli, Expecting 2,75,00,000/- for total Building, suitable PG -9036706304.

J.P.NAGAR 100' Ring Road, Commercial 60x90 & 40x60 North facing, 30x40 Residential (South) Murali- 9845232711

Farm House/ Land/ Resorts

Mysore

FOR BUYING & Selling any Mysore Properties Contact: Mysore Estates, Vishwanath Gowda 9590911111. *Refer genuine Buyers & Sellers, get attractive gifts. 0% Brokerage

General

Multiple Locations

SALE COMMERCIAL, industrial, residential, farmland and office space for rent in Bangalore. Contact. 9380586105

ನಿಮ್ಮ ಕನಸಿನ ನಿವೇಶನವನ್ನು ನಿಮ್ಮದಾಗಿಸಿಕೊಳ್ಳಿ..!!
Man ENCLAVE


ಪ್ರಾರಂಭಿಕ ಬೆಲೆ ₹ 1499/-
ಕನಕಪುರ ರಸ್ತೆ ಇಂದ ಕೇವಲ 5 kms
ಕುಂಬಳಗೋಡುನಿಂದ ಕೇವಲ 7 kms
ಅಳತೆ 20×30, 20×40, 30×30, 30×40
ಸಂಪರ್ಕಕ್ಕಾಗಿ ಕೇಂದ್ರೀಕೃತವಾಗಿದೆ
ವಿವೇಕಾನಂದ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ ಇಂದ 5 ನಿಮಿಷ
ಬಿಜಿಎಸ್ ರೆಸಿಡೆನಿಯಲ್ ಶಾಲೆ ಮತ್ತು ಡಿಪಿಎಸ್ ಕೆ ಗೊಲ್ಲಹಳ್ಳಿ ಇಂದ 10 ನಿಮಿಷ
ದಯಾನಂದ ಸಾಗರ್ ಕಾಲೇಜು ಅಫ್ ಇಂಜಿನಿಯರಿಂಗ್ ನಿಂದ 10 ನಿಮಿಷ
ಸಿಲ್ಕ್ ಇನ್ಸಿಟ್ಯೂಟ್ ಮೆಟ್ರೋ ನಿಂದ 15 ನಿಮಿಷ
ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡಿದೆ.
ಬ್ಯಾಂಕ್ ಗಳಿಂದ ಸಾಲ ಲಭ್ಯವಿದೆ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ 63601 92136

House

Banashankari

HOUSE SALE (G+3) 2BHK Per Floor @Banashankari 5th Stage BDA 30x40 Plot Attached, Poornapragna Layout, Rs 3.20 Crores Bheeresh 9900471143, 9844888847 Shivakumar 9845875555

Industrial & Factory

General

PEENYA 2ND stage 10,000 to 25,000 sqft Industrial land for sale. Clear titles. Call. 9380586105.

Mysore Road

SALE- 50000 Sqft KIADB Industrial Land in BIDADI Industrial Area- Mysore Road- 100 ft Road. 9844071666/ 9886673223

RENTAL PROPERTIES

Accommodation Available

Flats

R.T.NAGAR HMT 2BHK, 1100 sft, Ground Floor, Vasthu, carparking,3 years possession mortgage. 7259293212/ 8710883055.

Industrial And Factory

MODULAR FURNITURE Factory 4000 sft, 40 HP, with 80 lakh worth Imported Machinery for rent at Peenya 2nd stage. Contact: 9845309926

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

PROPERTY CORNER

ಕ್ಲಾಸಿಫೈಡ್ಸ್





RENTAL PROPERTIES

Accommodation Available

Commercial

RENT: BROOKFIELD, KUNDALAHALLI 1600 Sqft commercial place suitable for hotel or shops. Next to brigade tech-park 8310818291

REAL ESTATE BUYING

General

General

DC CONVERSION/ Change of land use, Phodi Durasti, NOC,Approvals, Khata, RERA Work,Para Legal Services.Barton Centre MG Road. 9916310226/ 9353128035. vernadevelopers.com

Sites

Anjanapura

WANTED SITES. Any Measurement. Anjanapura, Banashankari 6th Stage, JP.Nagar 8th/ 9th Phase, Narayana Nagar, BCC, BCMC Layout, Kanakapura Road. Contact: 9845298419

Banashankari

WANTED BDASITES Banashankari 6th_Stg Vishweswaraiah Layout, Anjanapura,JPNagar8th,9th, Phase_20x30 30x40,40x60,50x80,Call GenuineSellers:9845812635

Nagarabhavi

WANTED NAGARABHAVI Residential Site in 40x60 West, East and North: 9035151657

Multiple Locations

WANTED 4000-20000SFT Land Jayanagar, Basavangudi, Chamrajpet, J.P.Nagar, CBD Surrounding area. Purchase & JV, Verna Developers, MG Road, Bangalore. 9353128035/ 9620253180

ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout. Any BDA Sites Wanted Contact: SAPTHAGIRI. 9900268073, 9448068073.

Vishweshwariah Layout

BDA-SITES WANTED Kempegowda Layout Vishweshwaraiah Layout Other BDA Approved Layouts 30x40, 40x60, 50x80 Immediate Settlement Call:8660220048 7676900174

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact:9844533371/ 9341733480

BUILDERS ESSENTIAL

Building Contractors

WE WILL undertake building constructions & renovations M/s Samruddhi infrastructures Engineers & contractors 9980632771/ 9900434127

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

'WE FIX' LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

JOB OPPORTUNITIES

Teachers/ Professors

PANCHAJANYA VIDYAPEETHA WELFARE TRUST®
1st "N" Block Rajajinagar, Bengaluru-10,
Dr. Ambedkar Institute of Technology, Mallathahalli, BDA,
Outer Ring Road, Near Jnanabharathi, Bengaluru-56.

PVPWT/38/2023- 24 Date 06.07.2023

APPOINTMENT FOR UNAIDED POSTS

Applications are invited for the following posts in the Institutions coming under PVP Welfare Trust.

Sl. No	Schools/ Colleges	Lecturers/Teachers	No of Posts
01	PVP Degree / PU College	Commerce (Full Time – 02, Part Time –02)	04
		Kannada	01
		English (Full Time – 01 Part Time – 01)	02
		Sociology (Part Time)	01
		Librarian	01
02	PVP High Schools	Kannada	01
		Hindi	01
		Science CBZ	01
		Mathematics	01
		Computer Science	01
		Physical Education	02
03	PVP Primary Schools	Social Science	02
		Mathematics	03
		English	03
		Science CBZ	01
		"D" Group Employee	01

Qualification, Experience & Age-As per C & R rules of Government of Karnataka. Salary-Negotiable.
Interested candidates may apply by collecting the application form from the Trust office and submit the same along with Xerox copies of the all documents to "The Managing Trustee/Secretary, PVP Welfare Trust, Dr. AIT Campus, BDA Outer Ring Road, Mallathahally, Bengaluru-56. On or before 17.07.2023.
* The application charges for SC/ST Candidates Rs. 50/= & Others Rs 100/=

Sd/-
Secretary, PVP Welfare Trust

General

US BASED Company Agile 367 bring Work from home opportunity upto to Rs.40,000 per month For Junior Tester /dev no experience Training provided Email: sales@agile367.com ,Cont No: 9901204433

Manager

A REPUTED F&B Company requires 1) HR Manager/ HR executive- 2-5yrs of experience 2) Sales and Marketing manager - with 5+ years of experience in food industry 3) Account Manager - hands on experience in tally, GST and accounting knowledge Right candidates will be offered attractive salary. Send resume with your latest photograph to: hr@ponpon.co.in

Security & Detectives

SECURITY SUPERVISOR Guards required location Jakkur manayata Sarjapur Attractive Salary with weekly off. Call 9980510033

BUSINESS

Business Offers

Finance

NRI'S Investment And Finance Available On Low Interest Against Properties,Land & Building,Sites,Flats,Converted & Agriculture Lands Call:7204995189

General

SUKHAM Senior Living Home for joyful retirement living. Contact: Shrinidhi Hemmige 9945112586 www.sukhamseniorliving.com

PERSONAL

Announcements

ANNOUNCEMENT
I, **KALAVATHI,** R/at. # 80/81, 6th Main, 13th D Cross, Teachers Colony, Venkatapura, Opp. Subramanya Temple, Koramangala, Bengaluru- 34, declare that in my daughter Kamala G school record & other few documents my name is mentioned as **ARUNA,** my correct name is **KALAVATHI** vide affidavit dated 16/12/2022 Notary B.M.Chandrashekar, Bangalore.

Change of Name

CHANGE OF NAME
I, **ANAND KUMAR. M** S/o K.T. Munireddy R/at. No.234, 19th cross, Near Anjaneya Temple, Kaggadasapura, Blr-93. My name as per Aadhar card and 10th marks card is ANAND KUMAR.M. In passport my name is mentioned as has ANANDA KUMAR ,So my correct name is **ANAND KUMAR M** vide affidavit dated 04/11/2022 before Notary Hareesh.R, Ramanagara

I, NOBISWARAN KOTHANDARAMAN NOTHANDARAMAN have changed my name from K. NOBISHWARAN vide affidavit dated 06.07.2023 sworn before Notary Thippeswamy T, Bengaluru

I, ROOPA.H.M. have changed my name from ROOPA.M vide affidavit dated 06.07.2023 sworn before Notary Thippeswamy T, Bengaluru

WEEKEND CORNER

I, PUTTAMMA, #334, Thantoor Beedi, Near Patalamma Temple, Attibele, Bengaluru- 562107, have changed my name to PUTTAMMA PAPAREDDY vide affidavit dated-07/07/2023, before notary K.V. Mani

I, ANANDAN. K, R/o. #19, 5th Cross, Ganapathipura, Konanakunte Post, Kanakapura Road, Bengaluru-62, have changed my name to B. SATHISH BABU affidavit dated 06/07/2023, notary B.Prasanna, Bangalore.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331